


# 53ನೇ ವಾರ್ಷಿಕ ವರದಿ

## 2018-19

MSIL

**ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್**

(ಕರ್ನಾಟಕ ಸರ್ಕಾರದ ಒಂದು ಅಧೀನ ಸಂಸ್ಥೆ)

MSIL

# ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್
## ಬೆಂಗಳೂರು

## ಪರಿವಿಡಿ


| | ಪುಟ ಸಂಖ್ಯೆ |
|---|---|
| ಸೂಚನೆ | 3 |
| ನಿರ್ದೇಶಕರ ವರದಿ | 8 |
| ನಿರ್ದೇಶಕರುಗಳ ವರದಿಗೆ ಅನುಬಂಧ | 17 |
| ಸಹಾಯಕ ಕಂಪನಿಗಳ ಹಣಕಾಸಿನ ಹೇಳಿಕೆ (ಫಾರಂ ಎಓಸಿ-1) | 29 |
| ಹತ್ತು ವರ್ಷಗಳ ಸಾಧನೆ | 31 |
| 31ನೇ ಮಾರ್ಚ್ 2019ಕ್ಕೆ ಮುಕ್ತಾಯಗೊಂಡ ವರ್ಷದ ಕ್ರೋಡೀಕೃತ ಲೆಕ್ಕಪತ್ರಗಳು | 34 |
| 31ನೇ ಮಾರ್ಚ್ 2019ಕ್ಕೆ ಮುಕ್ತಾಯಗೊಂಡ ವರ್ಷದ ಭಾರತೀಯ ಲೆಕ್ಕ ನಿರ್ವಹಣೆ | 134 |

## ನಿರ್ದೇಶಕರ ಮಂಡಳಿ

| | |
|---|---|
| ಶ್ರೀ ಗೌರವ್ ಗುಪ್ತ , ಐಎಎಸ್ | ಅಧ್ಯಕ್ಷರು |
| ಶ್ರೀ ಹೆಚ್.ಪಿ. ಪ್ರಕಾಶ್, ಐಎಫ್ಎಸ್ | ವ್ಯವಸ್ಥಾಪಕ ನಿರ್ದೇಶಕರು |
| ಶ್ರೀ ಗಂಗಾರಾಮ್ ಬದಾರಿಯಾ, ಐಎಎಸ್ | ನಿರ್ದೇಶಕರು |
| ಶ್ರೀಮತಿ ಗುಂಜನ್ ಕೃಷ್ಣ, ಐಎಎಸ್ | ನಿರ್ದೇಶಕರು |
| ಶ್ರೀ ಯಶವಂತ, ಐಎಎಸ್ | ನಿರ್ದೇಶಕರು |
| ಶ್ರೀ ಪವನ್‌ಕುಮಾರ್ ಮಲಪತಿ, ಐಎಎಸ್ | ನಿರ್ದೇಶಕರು |
| ಶ್ರೀ ಆರ್.ರಮೇಶ್ | ನಿರ್ದೇಶಕರು |

| | |
|---|---|
| ಶ್ರೀ ಸುಬ್ರಮಣ್ಯ | ಮುಖ್ಯ ಹಣಕಾಸು ಅಧಿಕಾರಿ |
| ಶ್ರೀಮತಿ ಶ್ರೀದೇವಿ ಬಿ.ಎನ್. | ಕಂಪನಿ ಕಾರ್ಯದರ್ಶಿ |

ನೋಂದಾಯಿತ ಕಛೇರಿ : ಎಂಎಸ್ಐಎಲ್ ಹೌಸ್, 36, ಕನ್ನಿಂಗ್‌ಹ್ಯಾಮ್ ರಸ್ತೆ , ಬೆಂಗಳೂರು – 560 052.

ಶಾಖಾ ಕಛೇರಿಗಳು : ಬೆಂಗಳೂರು, ಮೈಸೂರು, ದಾವಣಗೆರೆ, ಹುಬ್ಬಳ್ಳಿ, ಕಲಬುರಗಿ, ಮಂಗಳೂರು, ಬೆಳಗಾವಿ, ಮುಂಬಯಿ, ನವದೆಹಲಿ

ಮಾರಾಟ ಕಛೇರಿಗಳು / ಘಟಕಗಳು :

● ವಿಜಯಪುರ ● ದಾವಣಗೆರೆ ● ಕಲಬುರಗಿ ● ಹಾಸನ ● ಹುಬ್ಬಳ್ಳಿ ● ಮಂಗಳೂರು ● ಮೈಸೂರು
● ಭಿವಂಡಿ ● ಕಾನ್ಪುರ ● ಘಜಿಯಾಬಾದ್ ● ಜೈಪುರ್

ಬ್ಯಾಂಕರ್‌ಗಳು : ವಿಜಯಾ ಬ್ಯಾಂಕ್, ಸಿಂಡಿಕೇಟ್ ಬ್ಯಾಂಕ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಹೆಚ್‌ಡಿಎಫ್‌ಸಿ ಬ್ಯಾಂಕ್

ಲೆಕ್ಕಪರಿಶೋಧಕರು : ಮೆ|| ಆಭರ್ಣ ಅಂಡ್ ಅನಂತನ್, ಚಾರ್ಟರ್ಡ್ ಅಕೌಂಟೆಂಟ್ಸ್

# ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್

**ಎಂಎಸ್‌ಐಎಲ್ ಹೌಸ್, 36, ಕನ್ನಿಂಗ್‌ಹ್ಯಾಮ್ ರಸ್ತೆ,**
**ಬೆಂಗಳೂರು – 560 052.**

**CIN: U85110KA1966SGC001612**

## ಸೂಚನೆ

ಈ ಮೂಲಕ ಸೂಚಿಸುವುದೇನೆಂದರೆ ಅಲ್ಪಕಾಲಿಕ ಸೂಚನೆ ಮೇರೆಗೆ ಈ ಕೆಳಕಂಡ ಕಲಾಪಗಳನ್ನು ನಡೆಸಲು ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನ ಸದಸ್ಯರುಗಳ ಐವತ್ತ ಮೂರನೇ ವಾರ್ಷಿಕ ಮಹಾಸಭೆಯು ದಿನಾಂಕ: 15ನೇ ಅಕ್ಟೋಬರ್ 2019ರ ಮಂಗಳವಾರ ಬೆಳಿಗ್ಗೆ 10.00 ಗಂಟೆಗೆ ಎಂಎಸ್‌ಐಎಲ್ ಹೌಸ್, ನಂ.6, ಕನ್ನಿಂಗ್‌ಹ್ಯಾಂ ರಸ್ತೆ, ಬೆಂಗಳೂರು-560 052 ಇಲ್ಲಿ ಜರುಗಲಿರುವುದು.

### ಸಾಮಾನ್ಯ ಕಲಾಪ:

**ಐಟಂ ನಂ.1 – ಹಣಕಾಸಿನ ವಿವರಗಳ ಅಳವಡಿಕೆ:**

ದಿನಾಂಕ:31ನೇ ಮಾರ್ಚ್ 2019ಕ್ಕೆ ಕೊನೆಗೊಂಡ ವರ್ಷದ ಕಂಪನಿಯ ಹಣಕಾಸಿನ ವಿವರಗಳನ್ನು (ಕ್ರೋಡೀಕೃತ ಹಣಕಾಸಿನ ವಿವರಗಳು ಸೇರಿದಂತೆ) ಮತ್ತು ನಿರ್ದೇಶಕರುಗಳ ಮಂಡಳಿಯ (ಮಂಡಳಿ) ವರದಿಗಳು ಮತ್ತು ಕಂಪನಿಗಳ ಕಾಯ್ದೆ, 2013ರ ಪ್ರಕರಣ 143 (6)ರ ಅನ್ವಯ ಈ ಬಗ್ಗೆ ಲೆಕ್ಕಪರಿಶೋಧಕರ ವರದಿ ಜೊತೆಗೆ ಭಾರತದ ಮಹಾ ಲೆಕ್ಕಪರಿಶೋಧಕರಿಂದ ಬಂದಿರುವ ಟೀಕೆ ಟಿಪ್ಪಣಿಗಳನ್ನು ಪರಿಗಣಿಸುವುದು ಮತ್ತು ಅಳವಡಿಸಿಕೊಳ್ಳುವುದು.

**ಐಟಂ ನಂ.2: ಈಕ್ವಿಟಿ ಷೇರುಗಳ ಮೇಲೆ ಲಾಭಾಂಶ ಘೋಷಣೆ:**

31ನೇ ಮಾರ್ಚ್ 2019ಕ್ಕೆ ಮುಕ್ತಾಯಗೊಂಡ ಆರ್ಥಿಕ ವರ್ಷಕ್ಕೆ ಸಂಬಂಧಿಸಿದಂತೆ ಪ್ರತಿ ಈಕ್ವಿಟಿ ಷೇರಿಗೆ ರೂ.5/-ಗಳ ಲಾಭಾಂಶ ಘೋಷಿಸುವುದು.

**ಐಟಂ ನಂ.3:** ಭಾರತದ ಕಂಪ್ಟ್ರೋಲರ್ ಮತ್ತು ಮಹಾ ಲೆಕ್ಕಪರಿಶೋಧಕರು (ಸಿ ಅಂಡ್ ಎಜಿ) ನೇಮಕ ಮಾಡಿರುವ ಶಾಸನಬದ್ಧ ಲೆಕ್ಕಪರಿಶೋಧಕರಿಗೆ ಸಂಭಾವನೆ ನಿಗದಿಪಡಿಸುವುದನ್ನು ಪರಿಗಣಿಸುವುದು ಮತ್ತು ಸೂಕ್ತವೆಂದು ಭಾವಿಸಿದ್ದೇ ಆದಲ್ಲಿ ಕೆಳಕಂಡ ನಿರ್ಣಯಗಳನ್ನು ಸಾಮಾನ್ಯ ನಿರ್ಣಯವನ್ನಾಗಿ ಮಾರ್ಪಾಡುಗಳೊಡನೆ ಅಥವಾ ಮಾರ್ಪಾಡು (ಗಳು) ಇಲ್ಲದೆ ಅಂಗೀಕರಿಸುವುದು:-

''ನಿರ್ಣಯಿಸುವುದೇನೆಂದರೆ, ಕಂಪನಿಗಳ ಕಾಯ್ದೆ, 2013ರ ಪ್ರಕರಣ 139(5)ರ ಉಪಬಂಧಗಳ ಅನುಸಾರ, ಭಾರತದ ಕಂಪ್ಟ್ರೋಲರ್ ಮತ್ತು ಮಹಾ ಲೆಕ್ಕಪರಿಶೋಧಕರು ಮೆ॥ ಆಭರ್ಣ ಅಂಡ್ ಅನಂತನ್ (ಬಿಎ 0245), ಚಾರ್ಟರ್ಡ್ ಅಕೌಂಟೆಂಟ್ಸ್, ಬೆಂಗಳೂರು ಇವರನ್ನು ಹಣಕಾಸಿನ ವರ್ಷ 2018-19ಕ್ಕೆ ಕಂಪನಿಯ ಶಾಸನಬದ್ಧ ಲೆಕ್ಕಪರಿಶೋಧಕರನ್ನಾಗಿ ನೇಮಕ ಮಾಡಿದ್ದು, ಕಂಪನಿಯ ಶಾಸನಬದ್ಧ ಲೆಕ್ಕಪರಿಶೋಧಕರು ವಾರ್ಷಿಕ ಮಹಾಸಭೆ (ಎಜಿಎಂ) ಮುಕ್ತಾಯದ ಸಮಯದಿಂದ ಮುಂದಿನ ಎಜಿಎಂ ಮುಕ್ತಾಯವಾಗುವವರೆಗೆ ಸದರಿ ಹುದ್ದೆಯನ್ನು ಹೊಂದಿರುವಂತೆ ನೇಮಕ ಮಾಡಿರುವುದನ್ನು ಈ ಮೂಲಕ ಗಮನಿಸಲಾಗಿದೆ ಮತ್ತು ಕಂಪನಿಯ ಶಾಸನಬದ್ಧ ಲೆಕ್ಕಪರಿಶೋಧಕರಿಗೆ ಸಂಭಾವನೆ ನಿಗದಿಪಡಿಸಲು ಕಂಪನಿಯ ನಿರ್ದೇಶಕರ ಮಂಡಳಿಗೆ ಅಧಿಕಾರ ನೀಡಲಾಗಿದೆ''.

### ವಿಶೇಷ ಕಲಾಪ

**ಐಟಂ ನಂ.4: ಕಂಪನಿಯ ಸಂಸ್ಥಾಪನಾ ಉಪಬಂಧಗಳಿಗೆ ತಿದ್ದುಪಡಿ:**

ಕಂಪನಿ ಕಾಯ್ದೆ-2013 ಮತ್ತು ಷೆಡ್ಯೂಲ್-1ರ ಕೋಷ್ಟಕ ಎಫ್ ಸೇರಿದಂತೆ ನಿಯಮಗಳಿಗೆ ಹೊಂದಾಣಿಕೆಯಾಗುವಂತೆ ಅಸೋಷಿಯನ್ ಆಫ್ ಕಂಪನಿ ಉಪಬಂಧಗಳಿಗೆ ತಿದ್ದುಪಡಿ ತರಲು ಮತ್ತು ಅದನ್ನು ಪರಿಗಣಿಸಲು ಹಾಗೂ ಅದರ ಮಾರ್ಪಾಡು ಮಾಡುವುದು ಅಥವಾ ಮಾಡದೇ ಇರುವುದು ಸೂಕ್ತವೆಂದೆನಿಸಿದಲ್ಲಿ ಕೆಳಕಂಡ ನಿರ್ಣಯವನ್ನು ವಿಶೇಷ ನಿರ್ಣಯವೆಂದು ಅಂಗೀಕರಿಸುವುದು.

**ನಿರ್ಣಯ:** ಕಂಪನಿಗಳ ಕಾಯ್ದೆ-2013ರ ಸೆಕ್ಷನ್ 14ರ ಉಪನಿಯಮಗಳು ಮತ್ತು ಇತರ ಅನ್ವಯವಾಗುವ ಉಪನಿಯಮಗಳನ್ನು ಕಂಪನಿಗಳ (ಒಳಪಡಿಸಿರುವುದು) ನಿಯಮಗಳು-2014 (ಯಾವುದೇ ಶಾಸನಬದ್ಧ ಮಾರ್ಪಾಟು) ಅಥವಾ ಹಾಲಿಯಲ್ಲಿರುವುದು. ಅದರ ಮರು ರೂಪಿತವು ಸೇರಿದ ಅನುಸಾರ ಈ ಸಭೆಗೆ ಸಲ್ಲಿಸಿರುವ ಉಪಬಂಧಗಳಲ್ಲಿರುವ ಕರಡು ಉಪಬಂಧಗಳನ್ನು ಅನುಮೋದಿಸುವುದು ಮತ್ತು ಆ ಮೂಲಕ ಕಂಪನಿ ಸಂಸ್ಥಾಪನಾ ಹಾಲಿ ಇರುವ ಉಪನಿಯಮಾವಳಿಗಳ ಉಪಬಂಧಗಳಿಗೆ ಪರ್ಯಾಯವಾಗಿ ಅಳವಡಿಸಿಕೊಳ್ಳುವುದು ಎಂದು ನಿರ್ಣಯಿಸಲಾಯಿತು.

ನಿರ್ಣಯಿಸುವುದೇನೆಂದರೆ ಕಂಪನಿಯ ವ್ಯವಸ್ಥಾಪಕ ನಿರ್ದೇಶಕರು ಅಥವಾ ಕಂಪನಿ ಕಾರ್ಯದರ್ಶಿ ಇದ್ದಲ್ಲಿ ಅವರುಗಳಿಗೆ ಈ ಮೂಲಕ ಪ್ರತ್ಯೇಕವಾಗಿ ಈ ನಿರ್ಣಯ ಜಾರಿಗೊಳಿಸುವ ಉದ್ದೇಶಕ್ಕಾಗಿ ಮತ್ತು ಅದಕ್ಕೆ ಸಂಬಂಧಪಟ್ಟ ವಿಷಯಗಳು ಅಥವಾ ಸನ್ನಿವೇಶಕ್ಕನುಗುಣವಾಗಿ ಸೂಕ್ತವೆನಿಸುವ, ಅಗತ್ಯವಿರುವ ಅಥವಾ ತ್ವರಿತವಾಗಿ ಕೈಗೊಳ್ಳಬೇಕಾದ ಕ್ರಮಗಳು, ಕೆಲಸಗಳು ಅಥವಾ ವಿಷಯಗಳು ಹಾಗೂ ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯಕ್ಕೆ ಅಗತ್ಯವಿರುವ ನಮೂನೆಗಳನ್ನು ಸಲ್ಲಿಸುವುದು

ಅಥವಾ ಇತರ ಯಾವುದೇ ಪ್ರಾಧಿಕಾರಕ್ಕೆ ದಾಖಲಾತಿಗಳನ್ನು ಸಲ್ಲಿಸುವುದು ಸೇರಿದಂತೆ ಎಲ್ಲಾ ಜವಾಬ್ದಾರಿಗಳನ್ನು ನಿರ್ವಹಿಸಲು ಅಧಿಕಾರ ಪ್ರದತ್ತಗೊಳಿಸಲಾಗಿದೆ.

**ಐಟಂ ನಂ.5: ಗದಗಿನಲ್ಲಿ ವಸ್ತುಪ್ರದರ್ಶನ ಮತ್ತು ಸಮ್ಮೇಳನ ಕೇಂದ್ರ ಸ್ಥಾಪಿಸಲು ರೂ.50.00 ಲಕ್ಷ ಸಹಾಯಾನುದಾನ ಕೊಡುಗೆ:**

ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ :ಸಿ1:54 ಸಿಎಸ್‌ಸಿ 2015 ಬೆಂಗಳೂರು, ದಿನಾಂಕ:13.05.2016ರ ಸೂಚನೆಯನುಸಾರ ದಿ ಗದಗ ಸಹಕಾರಿ ಕೈಗಾರಿಕಾ ಎಸ್ಟೇಟ್ ನಿಯಮಿತ ಇವರ ಪರವಾಗಿ ರೂ.50.00 ಲಕ್ಷ ಮೊತ್ತದ ಸಹಾಯನುದಾನ ಬಿಡುಗಡೆ ಮಾಡುವುದನ್ನು ಹಾಗೂ ಈ ಸಂಬಂಧ ಅದನ್ನು ಪರಿಗಣಿಸಲು ಮತ್ತು ಕೆಳಕಂಡ ನಿರ್ಣಯವನ್ನು ವಿಶೇಷ ನಿರ್ಣಯವೆಂದು ಸೂಕ್ತವೆನಿಸಿದಲ್ಲಿ ಮಾರ್ಪಾಡು ಸಮೇತ ಅಥವಾ ಯಾವುದೇ ಮಾರ್ಪಾಟು(ಗಳು) ಇಲ್ಲದೆ ಅಂಗೀಕರಿಸುವುದು.

ನಿರ್ಣಯಿಸಲಾಯಿತೇನೆಂದರೆ ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ :ಸಿ1:54 ಸಿಎಸ್‌ಸಿ 2015, ಬೆಂಗಳೂರು ದಿನಾಂಕ: 13.05.2016ರ ಅನುಸಾರ ಮತ್ತು ಕಂಪನಿ ಕಾಯ್ದೆ–2013ರ ಎಲ್ಲಾ ಇತರ ಅನ್ವಯವಾಗುವ ಉಪಬಂಧಗಳು ಯಾವುದಾದರೂ ಇದ್ದಲ್ಲಿ ಮತ್ತು ಒಡಂಬಡಿಕೆಯ ಸಾಧ್ಯಗೊಳಿಸುವ ಉಪಬಂಧಗಳು ಹಾಗೂ ಕಂಪನಿಯ ಸಂಸ್ಥಾಪನಾ ಉಪನಿಯಮನುಸಾರ ಮೇಲ್ಕಂಡ ಕರ್ನಾಟಕ ಸರ್ಕಾರದ ಆದೇಶದಂತೆ ಗದಗ ಸಹಕಾರಿ ಕೈಗಾರಿಕಾ ಎಸ್ಟೇಟ್ ನಿಯಮಿತ ಸಂಸ್ಥೆಗೆ ರೂ.50/- ಲಕ್ಷಗಳನ್ನು (ರೂಪಾಯಿ ಐವತ್ತು ಲಕ್ಷ ಮಾತ್ರ) ಸಹಾಯಾನುದಾನವಾಗಿ ಬಿಡುಗಡೆ ಮಾಡಲು ಕಂಪನಿಯ ಒಪ್ಪಿಗೆ, ಅಧಿಕಾರ ಮತ್ತು ಅನುಮೋದನೆ ನೀಡಲಾಗಿದೆ.

ಇನ್ನೂ ಒಂದು ನಿರ್ಣಯ ತೆಗೆದುಕೊಂಡಿರುವಂತೆ ಕಂಪನಿಯ ವ್ಯವಸ್ಥಾಪಕ ನಿರ್ದೇಶಕರು ಇರುವಂತೆ ಮತ್ತು ಈ ಮೂಲಕ ಸದರಿ ನಿರ್ಣಯವನ್ನು ಜಾರಿಗೊಳಿಸಲು ಸೂಕ್ತ ಕ್ರಮವಹಿಸುವುದು ಮತ್ತು ಅಗತ್ಯವೆಂದೆನಿಸುವ ಎಲ್ಲ ಇತರ ಕ್ರಮಗಳು, ಕಾರ್ಯಗಳು ಮತ್ತು ಸರಂಜಾಮುಗಳನ್ನು ನಿರ್ವಹಿಸಲು ಅಧಿಕಾರ ಪ್ರದತ್ತಗೊಳಿಸಿದೆ.

**ಮಂಡಳಿಯ ಆದೇಶದಂತೆ**
**ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ ಪರವಾಗಿ**
**ಸಹಿ/-**
**ಶ್ರೀದೇವಿ. ಬಿ.ಎನ್.**
**ಕಂಪನಿ ಕಾರ್ಯದರ್ಶಿ**

ಸ್ಥಳ : ಬೆಂಗಳೂರು
ದಿನಾಂಕ :11ನೇ ಅಕ್ಟೋಬರ್ 2019

## ಟಿಪ್ಪಣಿಗಳು / ಸೂಚನೆಗಳು:

1. ವಾರ್ಷಿಕ ಮಹಾಸಭೆಗೆ ಹಾಜರಾಗಲು ಮತ್ತು ಮತ ಹಾಕಲು ಅರ್ಹರಾದ ಸದಸ್ಯನು, ತನ್ನ ಬದಲಾಗಿ ಸಭೆಗೆ ಹಾಜರಾಗಲು ಮತ್ತು ಮತ ಹಾಕಲು ಪ್ರಾಕ್ಸಿ (ಪ್ರತಿನಿಧಿ) ಒಬ್ಬರನ್ನು ನೇಮಕ ಮಾಡಲು ಅರ್ಹರಾಗಿರುವರು. ಪ್ರಾಕ್ಸಿಯು ಕಂಪನಿಯ ಸದಸ್ಯರಾಗಿರಬೇಕಿಲ್ಲ. ಇದರೊಡನೆ ಲಗತ್ತಿಸಿರುವ ಪ್ರಾಕ್ಸಿ ಫಾರಂ ಅನ್ನು ಎಜಿಎಂ ಪ್ರಾರಂಭವಾಗುವುದಕ್ಕೆ 48 ಗಂಟೆಗಳ ಮುಂಚೆ ಕಂಪನಿಯ ನೋಂದಾಯಿತ ಕಚೇರಿಗೆ ಸಲ್ಲಿಸಬೇಕು.

2. ಕಂಪನಿಗಳ ಕಾಯ್ದೆ-2013ರ ಸೆಕ್ಷನ್ 102ರ ಅನುಸಾರ ಸೂಚನೆಯಲ್ಲಿ ತಿಳಿಸಿರುವಂತೆ ವಿಶೇಷ ಕಲಾಪಕ್ಕೆ ಸಂಬಂಧಪಟ್ಟ ವಿವರಣಾತ್ಮಕ ಹೇಳಿಕೆಯನ್ನು ಇದಕ್ಕೆ ಅನುಬಂಧಗೊಳಿಸಿದೆ.

3. ಕಾರ್ಪೋರೇಟ್ ಸದಸ್ಯರು ಸಭೆಗೆ ಹಾಜರಾಗುವಂತೆ ತಮ್ಮ ಅಧಿಕೃತ ಪ್ರತಿನಿಧಿಯನ್ನು ಕಳುಹಿಸಲಿಚ್ಛಿಸಿದಲ್ಲಿ ದಯವಿಟ್ಟು ಅಂತಹ ಸದಸ್ಯರು ಕಂಪನಿಯ ನಿರ್ದೇಶಕರ ಮಂಡಳಿಯ ದೃಢೀಕೃತ ನಿರ್ಣಯದ ಪ್ರತಿಯೊಂದಿಗೆ ಕಳುಹಿಸಿ ಸಭೆಗೆ ಹಾಜರಾಗಲು ಮತ್ತು ಅವರ ಪರವಾಗಿ ಮತ ಹಾಕಲು ತಮ್ಮ ಪ್ರತಿನಿಧಿಗೆ ಅಧಿಕಾರ ನೀಡಬೇಕಾಗಿ ಕೋರಿದೆ.

4. ಕಂಪನಿಯು ಸರ್ಕಾರದ ಕಂಪನಿಯಾಗಿರುವುದರಿಂದ, ಭಾರತದ ನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರು 2019-20ರ ಸಾಲಿಗೆ, ಕಂಪನಿಗಳ ಕಾಯ್ದೆ, 2013ರ ಪ್ರಕರಣ 139(5) ರ ಅನ್ವಯ ಕಂಪನಿಯ ಶಾಸನಬದ್ಧ ಲೆಕ್ಕ ಪರಿಶೋಧಕರನ್ನು ನೇಮಕ ಮಾಡಿದ್ದಾರೆ.

5. ಕಂಪನಿಗಳ ಕಾಯ್ದೆ-2013ರ ಸೆಕ್ಷನ್ 170ರಡಿ ನಿರ್ವಹಿಸಲಾಗಿರುವ ನಿರ್ದೇಶಕರುಗಳ ಮತ್ತು ಪ್ರಮುಖ ವ್ಯವಸ್ಥಾಪಕ ಸಿಬ್ಬಂದಿಯೊಂದಿಗೆ ಹಾಗೂ ಅವರ ಷೇರುಗಳ ರಿಜಿಸ್ಟರ್ ಅನ್ನು ಮಂಡಳಿಯ ವಾರ್ಷಿಕ ಸರ್ವ ಸದಸ್ಯರ ಸಭೆಯಲ್ಲಿ ಸದಸ್ಯರ ಪರಿಶೀಲನೆಗಾಗಿ ಲಭ್ಯಗೊಳಿಸಿದೆ.

6. ಕಂಪನಿಯ ಸಂಸ್ಥಾಪನೆಯ ಹೊಸ / ಕರಡು ಉಪನಿಯಮಗಳನ್ನು ಸದಸ್ಯರ ಪರಿವೀಕ್ಷಣೆಗಾಗಿ ಕಂಪನಿಯ ನೋಂದಾಯಿತ ಕಛೇರಿಯಲ್ಲಿ ಕೆಲಸದ ಅವಧಿಯಲ್ಲಿ ಅಂದರೆ ಬೆಳಿಗ್ಗೆ 10.00 ಗಂಟೆಯಿಂದ ಸಂಜೆ 5.30 ಗಂಟೆಯವರೆಗೆ ಭಾನುವಾರ ಮತ್ತು 2ನೇ ಶನಿವಾರ ಹೊರತುಪಡಿಸಿ ವಾರ್ಷಿಕ ಸರ್ವ ಸದಸ್ಯರ ಸಭೆ ಮುಗಿಯುವ ತನಕ ಲಭ್ಯಗೊಳಿಸಲಾಗಿದೆ.

7. ಅಲ್ಪಕಾಲಿಕ ಸೂಚನೆಗೆ ಎಲ್ಲಾ ಷೇರುದಾರರುಗಳ ಒಪ್ಪಿಗೆ ಪಡೆಯಲಾಗಿದೆ.

**ಮಂಡಳಿಯ ಆದೇಶದಂತೆ**
**ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ ಪರವಾಗಿ**
**ಸಹಿ/-**
**ಶ್ರೀದೇವಿ. ಬಿ.ಎನ್.**
**ಕಂಪನಿ ಕಾರ್ಯದರ್ಶಿ**

ಸ್ಥಳ : ಬೆಂಗಳೂರು
ದಿನಾಂಕ :11ನೇ ಅಕ್ಟೋಬರ್ 2019

### ವಿವರಣಾತ್ಮಕ ಹೇಳಿಕೆ
### (ಕಂಪನಿಗಳ ಕಾಯ್ದೆ-2013ರ ಸೆಕ್ಷನ್ 102ರ ಅನುಸಾರ)

**ಐಟಂ ಸಂಖ್ಯೆ 4:** ಕಂಪನಿಯ ಸಂಸ್ಥಾಪನಾ ಉಪನಿಯಮಗಳು (ಎಓಎ) ಕಂಪನಿಗಳ ಕಾಯ್ದೆ-1956ರ ಆಧಾರಿತವಾಗಿವೆ ಮತ್ತು ಹಾಲಿ ಅಸ್ತಿತ್ವದಲ್ಲಿರುವ ಕಂಪನಿಯ ಸಂಸ್ಥಾಪನ ಉಪನಿಯಮಗಳ ಹಲವಾರು ಉಪಬಂಧಗಳು ಕಂಪನಿಗಳ ಕಾಯ್ದೆ-1956ರ ನಿರ್ದಿಷ್ಟ ಸೆಕ್ಷನ್‌ಗಳ ಉಲ್ಲೇಖಗಳನ್ನು ಒಳಗೊಂಡಿವೆ. ಕಂಪನಿ ಸಂಸ್ಥಾಪನಾ ಉಪನಿಯಮಗಳನ್ನು ಅವುಗಳ ಹಾಲಿ ಅಸ್ತಿತ್ವದಲ್ಲಿರುವುದನ್ನು ಕಂಪನಿಗಳ ಕಾಯ್ದೆ-2013ಕ್ಕೆ ಅನುಗುಣವಾಗಿ ತಿದ್ದುಪಡಿ ಮಾಡಲಾಗುವುದು. ಹಾಲಿ ಅಸ್ತಿತ್ವದಲ್ಲಿರುವ ಎಓಎ ಗಳಿಗೆ ಬದಲಾಗಿ ಹೊಸ ಎಓಎಗಳನ್ನು ಕಂಪನಿಗಳ ಕಾಯ್ದೆ-2013ರ ಉಪಬಂಧಗಳಿಗೆ ಷೆಡ್ಯೂಲ್-1ರ ಕೋಷ್ಟಕ ಎಫ್ ಸೇರಿದಂತೆ ಹೊಂದಾಣಿಕೆಯಾಗುವಂತೆ ಜಾರಿಗೊಳಿಸಲು ಉದ್ದೇಶಿಸಿದೆ.

ಮುಂದುವರಿದು ದಿನಾಂಕ:28ನೇ ಫೆಬ್ರವರಿ 2018ರಂದು ಕರ್ನಾಟಕ ಸರ್ಕಾರಕ್ಕೆ ಹಂಚಿಕೆ ಮಾಡಲಾದ 22,55,817 ಈಕ್ವಿಟಿ ಷೇರುಗಳ ಪರಿಣಾಮವಾಗಿ ಎಂಎಸ್‌ಐಎಲ್ ಹೊಂದಿದ್ದ ಶೇಕಡ 53 ರಷ್ಟು ಪ್ರಮಾಣದ ಷೇರು ಪಾಲು ಕರ್ನಾಟಕ ಸರ್ಕಾರ ಪಡೆದುಕೊಂಡಿದೆ ಮತ್ತು ಶೇಕಡ 47ರಷ್ಟು ಪ್ರಮಾಣದ ಎಂಎಸ್‌ಐಎಲ್ ಸಂಸ್ಥೆಯ ಷೇರುಗಳನ್ನು ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಕರ್ಯ ಅಭಿವೃದ್ಧಿ ನಿಗಮ ನಿಯಮಿತ ಸಂಸ್ಥೆಯು ಪಡೆದುಕೊಂಡಿದೆ ಮತ್ತು ಇದರಿಂದ ಇನ್ನುಮುಂದೆ ಎಂ.ಎಸ್.ಐ.ಎಲ್. ಸಂಸ್ಥೆಯು ಕರ್ನಾಟಕ ರಾಜ್ಯ ಕೈಗಾರಿಕಾ ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ ಸಂಸ್ಥೆಯ ಪೂರ್ಣ ಸ್ವಾಮ್ಯದ ಉಪ ಸಂಸ್ಥೆಯಾಗಲಾರದು.

ಈ ಮೊದಲು ಗಣನೀಯವಾದ ಅನುಮೋದನೆ ಅಧಿಕಾರಗಳನ್ನು ಎಂ.ಎಸ್.ಐ.ಎಲ್. ಸಂಸ್ಥಾಪನಾ ಉಪನಿಯಮಗಳಲ್ಲಿ ಕೆ.ಎಸ್.ಐ.ಐ.ಡಿ.ಸಿ. (ಕರಾಕೈಮೂಸೌಅನಿನಿ) ಗೆ ನೀಡಲಾಗಿತ್ತು. ಕಂಪನಿಯ ಸ್ಥಾನಮಾನದಲ್ಲುಂಟಾದ ಬದಲಾವಣೆಯಿಂದಾಗಿ ಕೆಎಸ್ ಐಐಡಿಸಿ ಸಂಸ್ಥೆಗೆ ನಿರ್ದಿಷ್ಟವಾಗಿ ಪ್ರದತ್ತವಾಗಿದ್ದ ಮಿತಿಗಳನ್ನು, ಸಂಸ್ಥಾಪನಾ ಉಪನಿಯಮಗಳಲ್ಲಿನ ಗಣನೀಯ ಅನುಮೋದನಾ ಅಧಿಕಾರಗಳನ್ನು ಎಂಎಸ್‌ಐಎಲ್ ಸಂಸ್ಥೆಯ ಸಂಸ್ಥಾಪನಾ ಉಪನಿಯಮಗಳಿಗೆ ತಿದ್ದುಪಡಿ ಮಾಡುವುದರ ಮೂಲಕ ಕರ್ನಾಟಕ ಸರ್ಕಾರಕ್ಕೆ ಪ್ರದತ್ತಗೊಳ್ಳುವುವು.

ನಿರ್ದೇಶಕರ ಮಂಡಳಿಯ ದಿನಾಂಕ:20.08.2018ರಂದು ನಡೆಸಿದ ತನ್ನ 315ನೇ ಸಭೆಯಲ್ಲಿ ಕರಡು ಸಂಸ್ಥಾಪನಾ ಉಪನಿಯಮಗಳನ್ನು (ಎಓಎ) ಪರಿಗಣಿಸಿತ್ತು ಮತ್ತು ಅವುಗಳನ್ನು ಕರ್ನಾಟಕ ಸರ್ಕಾರಕ್ಕೆ ಅನುಮೋದನೆಗಾಗಿ ಸಲ್ಲಿಸಿತು. ಕಂಪನಿಯು ಸರ್ಕಾರದ ಅನುಮೋದನಾ ಮಾಹಿತಿಯನ್ನು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಪತ್ರ ಸಂಖ್ಯೆ:ಸಿ1/104/ ಸಿಎಂಐ/2018 ದಿನಾಂಕ:25.07.2019ರ ಮೂಲಕ ಪಡೆದುಕೊಂಡಿದೆ.

ಈ ನಿರ್ಣಯವು ಕಂಪನಿಯ ಸಂಸ್ಥಾಪನಾ ಉಪನಿಯಮಗಳ ತಿದ್ದುಪಡಿಗಾಗಿ ಕಂಪನಿಗಳ ಕಾಯ್ದೆ-2013ರ ಉಪಬಂಧಗಳನುಸಾರ ಮತ್ತು ಅದರಡಿ ರೂಪಿಸಲಾದ ನಿಯಮಗಳಿಗೆ ಷೇರುದಾರರ ಅನುಮೋದನೆಯನ್ನು ಅಪೇಕ್ಷಿಸುತ್ತದೆ.

ಪ್ರಸ್ತಾಪಿತ ಹೊಸ ಕರಡು ಎಓಎ ಗಳು ಪರಿವೀಕ್ಷಣೆಗಾಗಿ ಕಂಪನಿಯ ನೋಂದಾಯಿತ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಅಂದರೆ ಬೆಳಿಗ್ಗೆ 10.00 ಗಂಟೆಯಿಂದ ಸಂಜೆ 5.30ಗಂಟೆಯವರೆಗೆ ಭಾನುವಾರ ಮತ್ತು 2ನೇ ಹಾಗೂ 4ನೇ ಶನಿವಾರಗಳನ್ನು ಹೊರತುಪಡಿಸಿ ಸಾಮಾನ್ಯ ಸಭೆಯು ಮುಗಿಯುವವರೆಗೆ ಮತ್ತು ಸಭೆಯಲ್ಲಿ ಲಭ್ಯಗೊಳಿಸಲಾಗುವುದು.

ವಿಶೇಷ ನಿರ್ಣಯದಲ್ಲಿ ಕಂಪನಿಯ ನಿರ್ದೇಶಕರ ಮಂಡಳಿಯಾಗಲಿ ಪ್ರಮುಖ ವ್ಯವಸ್ಥಾಪಕ ಸಿಬ್ಬಂದಿ ಅಥವಾ ಅವರ ಸಂಬಂಧಿಕರಾಗಲಿ ಯಾವುದೇ ವಿಧದಲ್ಲಿ ಸಂಬಂಧ ಅಥವಾ ಹಣಕಾಸಿನ ಆಸಕ್ತಿ ಅಥವಾ ಇತರ ಯಾವುದೇ ರೀತಿಯಲ್ಲಿ ಭಾಗಿಯಾಗಿರುವುದಿಲ್ಲ.

ಕಂಪನಿಯ ನಿರ್ದೇಶಕರ ಮಂಡಳಿಯ ಐಟಂ ಸಂಖ್ಯೆ :4ರಲ್ಲಿ ಪ್ರಸ್ತಾಪಿತ ನಿರ್ಣಯವನ್ನು ವಿಶೇಷ ನಿರ್ಣಯವೆಂದು ಅಂಗೀಕರಿಸಲು ಶಿಫಾರಸ್ಸು ಮಾಡುತ್ತಿದೆ.

**ಐಟಂ ಸಂಖ್ಯೆ :5**

ಕರ್ನಾಟಕ ಸರ್ಕಾರವು ಆದೇಶ ಸಂಖ್ಯೆ :ಸಿ1:54:ಸಿಎಸ್‌ಸಿ 2015 ಬೆಂಗಳೂರು ದಿ:13.05.2016ರಲ್ಲಿ ''ನಗರ ಹ್ಯಾಥ್ ಯೋಜನೆ ಆರಂಭ'' ದಡಿ ಗದಗಿನಲ್ಲಿ ವಸ್ತು ಪ್ರದರ್ಶನ ಮತ್ತು ಸಮ್ಮೇಳನ ಕೇಂದ್ರ ಸ್ಥಾಪಿಸಲು ತಾತ್ವಿಕವಾಗಿ ಅನುಮೋದನೆ ನೀಡಿದೆ. ಲೆಕ್ಕ ಶೀರ್ಷಿಕೆ 2852-80-102-0-01(059)ರಡಿ ರೂ.1100-00 ಲಕ್ಷಗಳು ಅನುದಾನ ಒದಗಿಸಿದೆ.

**ವಿವರಗಳು ಕೆಳಕಂಡಂತಿವೆ.**

| ಕ್ರ. ಸಂ. | ಇಲಾಖೆ/ನಿಗಮ/ಮಂಡಳಿಯ ಹೆಸರು | ಅನುದಾನದ ಮೊತ್ತ ರೂ.ಲಕ್ಷಗಳಲ್ಲಿ |
|---|---|---|
| 1 | ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ | 300.00 |
| 2 | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು | 200.00 |
| 3 | ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ನಿ (ಕೆಐಎಡಿಬಿ) ಬೆಂಗಳೂರು | 100.00 |
| 4 | ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ (ಕೆಎಸ್‌ಎಸ್‌ಐಡಿಸಿ) ಬೆಂಗಳೂರು | 100.00 |
| 5 | ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಂಡ್ ಆಡ್ವಟೈಸಿಂಗ್ ಏಜೆನ್ಸಿಸ್ ಲಿ. (ಎಂಸಿ ಅಂಡ್‌ಎ), ಬೆಂಗಳೂರು | 50.00 |
| 6 | ಮೈಸೂರು ಸೇಲ್ಸ್ ಇಂಟರ್ ನ್ಯಾಷನಲ್ ಲಿ. (ಎಂಎಸ್‌ಐಎಲ್) | 50.00 |
| 7 | ಗದಗ ಸಹಕಾರಿ ಕೈಗಾರಿಕಾ ಪ್ರದೇಶ ನಿ.ಗದಗ 3 ಎಕರೆ ಜಮೀನಿನ ವೆಚ್ಚ | 300.00 |
| | **ಒಟ್ಟು** | **1100.00** |

ಈ ದಿಶೆಯಲ್ಲಿ ಸಂಬಂಧಪಟ್ಟ ಇಲಾಖೆ/ನಿಗಮ/ಮಂಡಳಿಗಳು ಮೇಲೆ ತಿಳಿಸಲಾದ ಅನುದಾನವನ್ನು ದಿ ಗದಗ ಕೋ-ಆಪರೇಟಿವ್ ಇಂಡಸ್ಟ್ರೀಯಲ್

ಎಸ್ಟೇಟ್ ಲಿ (ಗದಗ ಸಹಕಾರಿ ಕೈಗಾರಿಕಾ ಪ್ರದೇಶ ನಿಗಮ) ಇವರಿಗೆ ಬಿಡುಗಡೆ ಮಾಡಲು ಅಗತ್ಯ ಕ್ರಮ ತೆಗೆದುಕೊಳ್ಳುವಂತೆ ತಿಳಿಸಲಾಗಿದೆ. ಈ ಸಂಸ್ಥೆಯು ವಸ್ತು ಪ್ರದರ್ಶನ ಮತ್ತು ಸಮ್ಮೇಳನ ಕೇಂದ್ರದ ಅಧಿಕೃತವಾಗಿ ಅನುಮೋದನೆಯಾದ ''ವಿವರವಾದ ಯೋಜನಾ ಮತ್ತು ತಾಂತ್ರಿಕ ವರದಿ'' ಯನ್ನು ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಗೆ ಸಲ್ಲಿಸಬೇಕು.

ಈ ಕೇಂದ್ರದ ಸ್ಥಾಪನೆಗಾಗಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಮತ್ತು ಸಂಬಂಧಪಟ್ಟ ಮಂಡಳಿ/ನಿಗಮ ಅಗತ್ಯ ಅನುದಾನ ಪಡೆದುಕೊಳ್ಳಲು ಕ್ರಮ ವಹಿಸಬೇಕು.

ನಿರ್ಣಯವು ಕಂಪನಿಗಳ ಕಾಯ್ದೆ-2013ರ ಉಪಬಂಧಗಳ ಷರತ್ತುಗಳನ್ವಯ ಹಾಗೂ ಒಡಂಬಡಿಕೆಯ ಮತ್ತು ಕಂಪನಿಯ ಸಂಸ್ಥಾಪನಾ ಉಪನಿಯಮಗಳು ದಿ ಗದಗ ಕೋ-ಆಪರೇಟಿವ್ ಇಂಡಸ್ಟ್ರೀಯಲ್ ಎಸ್ಟೇಟ್ ಲಿ. ಗದಗ ಇವರಿಗೆ ರೂ.50.00 ಲಕ್ಷಗಳು ಅನುದಾನ ಬಿಡುಗಡೆ ಮಾಡಲು ಅವಕಾಶವಾಗಲು ಷೇರುದಾರರ ಅನುಮೋದನೆ ಕೋರುತ್ತದೆ.

ಕಂಪನಿಯ ನಿರ್ದೇಶಕರ ಮಂಡಳಿ/ಪ್ರಮುಖ ವ್ಯವಸ್ಥಾಪಕ ಸಿಬ್ಬಂದಿ ಅಥವಾ ಸಂಬಂಧಿಕರು ಯಾವುದೇ ರೀತಿಯೆಂದು, ಈ ವಿಶೇಷ ನಿರ್ಣಯದಲ್ಲಿ ಸಂಬಂಧ ಹೊಂದಿರುವುದಾಗಲಿ ಅಥವಾ ಹಣಕಾಸು ಅಥವಾ ಇನ್ನಿತರ ವಿಧದಲ್ಲೂ ಭಾಗಿಯಾಗಿರುವುದಿಲ್ಲ.

ನಿರ್ದೇಶಕರ ಮಂಡಳಿಯು ಐಟಂ ಸಂಖ್ಯೆ5ರಲ್ಲಿ ಪ್ರಸ್ತಾಪಿಸಿರುವ ನಿರ್ಣಯವನ್ನು ಅಂಗೀಕರಿಸಲು ಶಿಫಾರಸ್ಸು ಮಾಡುತ್ತದೆ.

**ಮಂಡಳಿಯ ಆದೇಶದಂತೆ**
**ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ ಪರವಾಗಿ**
**ಸಹಿ/-**
**ಶ್ರೀದೇವಿ. ಬಿ.ಎನ್.**
**ಕಂಪನಿ ಕಾರ್ಯದರ್ಶಿ**

ಸ್ಥಳ : ಬೆಂಗಳೂರು
ದಿನಾಂಕ :11ನೇ ಅಕ್ಟೋಬರ್ 2019

## ನಿರ್ದೇಶಕರ ವರದಿ

ಸದಸ್ಯರಿಗೆ,

31ನೇ ಮಾರ್ಚ್ 2019ಕ್ಕೆ ಕೊನೆಗೊಂಡ ವರ್ಷದ ನಮ್ಮ ವ್ಯವಹಾರ ಮತ್ತು ಕಾರ್ಯಾಚರಣೆಗಳ ಬಗ್ಗೆ ವರದಿ ಮಂಡಿಸಲು ನಾವು ಹರ್ಷಪಡುತ್ತೇವೆ.

**1.ಹಣಕಾಸಿನ ಮುಖ್ಯಾಂಶಗಳು:**

ಪರಾಮರ್ಶೆಯಲ್ಲಿರುವ ವರ್ಷದ ಅವಧಿಯಲ್ಲಿನ ನಿಮ್ಮ ಕಂಪನಿಯ ಕಾರ್ಯ ಸಾಧನೆ ಕೆಳಕಂಡಂತಿರುವುದು:

(ರೂ. ಲಕ್ಷಗಳಲ್ಲಿ)

| ವಿವರಗಳು | 2018-19 | 2017-18 |
|---|---|---|
| ವಹಿವಾಟು | 204763.86 | 178875.90 |
| ಬಡ್ಡಿ, ಸವಕಳಿ ಹಾಗೂ ತೆರಿಗೆಗಳು ಮತ್ತು ಹಿಂದಿನ ವರ್ಷದ ಹೊಂದಾಣಿಕೆಗಳಿಗೆ ಮುಂಚಿನ ಲಾಭ/ನಷ್ಟ | 4238.30 | 2485.55 |
| ಬಡ್ಡಿ | 33.52 | 0.90 |
| ಸವಕಳಿ | 721.80 | 341.85 |
| ತೆರಿಗೆಗೆ ಮುಂಚಿನ ಲಾಭ/(ನಷ್ಟ) | 3482.98 | 2142.80 |
| ತೆರಿಗೆಗೆ ಏರ್ಪಾಡು<br>– ಚಾಲ್ತಿ<br>– ಮುಂದೂಡಲಾದುದು<br>ಹಿಂದಿನ ವರ್ಷದ ಹೊಂದಾಣಿಕೆಗಳು | <br>1100.00<br>53.69<br>105.33 | <br>939.77<br><br>5.22 |
| ತೆರಿಗೆ ನಂತರದ ಲಾಭ/(ನಷ್ಟ) | 2223.96 | 1197.91 |
| ಲಾಭಾಂಶ ಮತ್ತು ಲಾಭಾಂಶದ ಮೇಲಿನ ತೆರಿಗೆ | 245.16 | 655.96 |
| ಲಾಭ ಮತ್ತು ನಷ್ಟದ ಖಾತೆಯಲ್ಲಿನ | 1978.80 | 541.85 |
| ಹಿಂದಿನ ವರ್ಷದ ಶಿಲ್ಕು | 14422.57 | 13880.72 |
| ಸ್ಥಿತಿ ವಿವರಣಾ ಪಟ್ಟಿಗೆ ಮುಂದುವರಿಸಿದ ಶಿಲ್ಕು | 16401.37 | 14422.57 |

**ಕಂಪನಿಯ ವಿವಿಧ ವಿಭಾಗಗಳ ಮಾರಾಟ ಸಾಧನೆಯನ್ನು ಈ ಕೆಳಗೆ ನಿರೂಪಿಸಿದೆ:**

(ರೂ. ಲಕ್ಷಗಳಲ್ಲಿ)

| ವಿಭಾಗ | 2018-19 | 2017-18 |
|---|---|---|
| 1. ಪಾನೀಯಗಳ ವಿಭಾಗ | 168943.03 | 140914.32 |
| 2. ಚಿಟ್ ಫಂಡ್‌ಗಳು | 23556.77 | 23001.15 |
| 3. ಕಾಗದ | 8392.58 | 12671.82 |
| 4.ಗ್ರಾಹಕರ ಉತ್ಪನ್ನಗಳು | 408.74 | 458.05 |
| 5. ಕೈಗಾರಿಕಾ ಉತ್ಪನ್ನಗಳು | 1890.45 | 1090.03 |
| 6. ಪ್ರವಾಸ ಮತ್ತು ಪ್ರಯಾಣ | 642.38 | 547.47 |
| 7. ಆಮದಾದ ಮರಳು | 124.52 | 35.62 |
| 8. ಫಾರ್ಮಸಿ | 805.39 | 157.44 |
| **ಒಟ್ಟು** | **204763.86** | **178875.90** |

ಕಂಪನಿಯು ಕರ್ನಾಟಕ ಸರ್ಕಾರದ ಉದ್ದಿಮೆಯಾಗಿದ್ದು, ಇದರ 53% ಈಕ್ವಿಟಿ ಷೇರುಗಳನ್ನು ಕರ್ನಾಟಕದ ರಾಜ್ಯಪಾಲರು ಹೊಂದಿರುವರು ಮತ್ತು 47% ಈಕ್ವಿಟಿ ಷೇರುಗಳನ್ನು ಕೆಎಸ್‌ಐಐಡಿಸಿ ಮತ್ತು ಇದರ ನಾಮ ನಿರ್ದೇಶಕರು ಹೊಂದಿರುವರು. ನಿಮ್ಮ ಕಂಪನಿಯ ಕ್ರೋಢೀಕೃತ ಕಾರ್ಯ ಸಾಧನೆಯು ಈ ಕೆಳಕಂಡಂತಿರುವುದು:

(ರೂ. ಲಕ್ಷಗಳಲ್ಲಿ)

| ವಿವರಗಳು | 2018-19 | 2017-18 |
|---|---|---|
| ವಹಿವಾಟು | 204763.86 | 178875.90 |
| ಬಡ್ಡಿ, ಸವಕಳಿ ಹಾಗೂ ತೆರಿಗೆಗಳು ಮತ್ತು ಹಿಂದಿನ ವರ್ಷದ ಹೊಂದಾಣಿಕೆಗಳಿಗೆ ಮುಂಚಿನ ಲಾಭ/ನಷ್ಟ | 4238.30 | 2485.55 |
| ಬಡ್ಡಿ | 33.52 | 0.90 |
| ಸವಕಳಿ | 721.80 | 341.85 |
| ತೆರಿಗೆಗೆ ಮುಂಚಿನ ಲಾಭ/(ನಷ್ಟ) | 3482.98 | 2142.80 |
| ತೆರಿಗೆಗೆ ಏರ್ಪಾಡು<br>ಚಾಲ್ತಿ<br>ಹಿಂದಿನದು<br>ಮುಂದೂಡಲಾದುದು | <br>1100.00<br>53.69<br>91105.33 | <br>939.77<br><br>5.22 |
| ಹಿಂದಿನ ವರ್ಷದ ಹೊಂದಾಣಿಕೆಗಳು | 2223.96 | 1197.81 |
| ತೆರಿಗೆ ನಂತರದ ಲಾಭ/(ನಷ್ಟ) | 245.16 | 655.96 |
| ಲಾಭಾಂಶ ಮತ್ತು ಲಾಭಾಂಶದ ಮೇಲಿನ ತೆರಿಗೆ | 1978.80 | 541.85 |
| ಲಾಭ ಮತ್ತು ನಷ್ಟದ ಖಾತೆಯಲ್ಲಿನ<br>ಹಿಂದಿನ ವರ್ಷದ ಶಿಲ್ಕು | 14422.57 | 13880.72 |
| ಸ್ಥಿತಿ ವಿವರಣಾ ಪಟ್ಟಿಗೆ ಮುಂದುವರಿಸಿದ ಶಿಲ್ಕು | 16401.37 | 14422.57 |

### 2. ಕಂಪನಿಯ ವ್ಯವಹಾರಗಳು ಮತ್ತು ಭವಿಷ್ಯದ ಹೊರನೋಟದ ವಿವರ:

(i) **ಪಾನೀಯ ವಿಭಾಗ :** ಕರ್ನಾಟಕ ಸರ್ಕಾರ ಇತ್ತೀಚೆಗೆ ಕರ್ನಾಟಕದ ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲಿ ಮದ್ಯದ ಚಿಲ್ಲರೆ ಮಾರಾಟ ಮಳಿಗೆಗಳನ್ನು ತೆರೆಯಲು, ಸಿಎಲ್ 11ಸಿ ಪರವಾನಗಿ ಅಡಿಯಲ್ಲಿ ಎಂಎಸ್‌ಐಎಲ್‌ಗೆ 463 ಮದ್ಯದ ಮಾರಾಟ ಮಳಿಗೆಗಳನ್ನು ಮಂಜೂರು ಮಾಡಿರುವುದರ ಜೊತೆಗೆ ಇನ್ನೂ ಹೆಚ್ಚುವರಿಯಾಗಿ 900 ಮದ್ಯದ ಚಿಲ್ಲರೆ ಮಾರಾಟ ಮಳಿಗೆಗಳನ್ನು ಮಂಜೂರು ಮಾಡಿದೆ. ಈ ದಿಸೆಯಲ್ಲಿ ವಿಭಾಗವು ತ್ವರಿತಗತಿಯಲ್ಲಿ ಸದರಿ ಮದ್ಯದ ಚಿಲ್ಲರೆ ಮಾರಟ ಮಳಿಗೆಗಳನ್ನು ತೆರೆಯಲು ಅಬಕಾರಿ ಇಲಾಖೆ ಜೊತೆ ಮತ್ತು ಸ್ಥಳೀಯ ಚುನಾಯಿತ ಪ್ರತಿನಿಗಳ ಜೊತೆ ಉತ್ತಮ ಸಮನ್ವಯ ಸಾಸುವ ಮೂಲಕ ಅಗತ್ಯವಾದ ಎಲ್ಲಾ ಕ್ರಮಗಳನ್ನು ಕೈಗೊಂಡಿದೆ.

MSIL

ಸದರಿ ವಿಭಾಗವು ದಿನಾಂಕ 31ನೇ ಮಾರ್ಚ್ 2019ರಂದು ಇದ್ದಂತೆ 463 ಕೋಟಾದ ಅಡಿಯಲ್ಲಿ 425 ಮತ್ತು 900 ಕೋಟಾದಡಿ 365 ಪರವಾನಗಿಗಳನ್ನು ಪಡೆಯಲಾಗಿದೆ. ಕರ್ನಾಟಕದಾದ್ಯಂತ ಒಟ್ಟಾರೆ 769 ಮಾರಾಟ ಮಳಿಗೆಗಳು ಕಾರ್ಯಾಚರಣೆಯಾಗುತ್ತಿವೆ. ಎಂಎಸ್‌ಐಎಲ್ ತೆರೆದಿರುವ ಚಿಲ್ಲರೆ ದರದಲ್ಲಿ ಗುಣಮಟ್ಟದ ಮದ್ಯ ಮಾರಾಟ ಮಳಿಗೆಗಳಿಗೆ ಸಾರ್ವಜನಿಕರಿಂದ ಅಭೂತಪೂರ್ವ ಸ್ಪಂದನೆ ದೊರಕಿದೆ.

ಪಾನೀಯ ವಿಭಾಗವು 2017-18ನೇ ವರ್ಷದಲ್ಲಿ ರೂ.140914.32 ಲಕ್ಷಗಳ ವಹಿವಾಟು ನಡೆಸಿರುವುದಕ್ಕೆ ಬದಲಾಗಿ 2018-19ನೇ ವರ್ಷದಲ್ಲಿ ರೂ.168943.03 ಲಕ್ಷಗಳ ವಹಿವಾಟನ್ನು ಸಾಧಿಸಿದೆ. ವಿಭಾಗವು ಮುಂದಿನ ದಿನಗಳಲ್ಲಿ 463 ಮತ್ತು 900 ಹಂಚಿಕೆಯಾಗಿರುವ ಕೋಟಾದ ಅಡಿಯಲ್ಲಿ ಉಳಿಕೆ ಮಾರಾಟ ಮಳಿಗೆಗಳನ್ನು ತೆರೆಯಲು ಒಳ್ಳೆಯ ವ್ಯಾಪಾರ ಅವಕಾಶವಿರುವ ಸ್ಥಳಗಳನ್ನು ಗುರುತಿಸುವ ಮೂಲಕ ಸತತ ಪರಿಶ್ರಮ ಮತ್ತು ಪ್ರಯತ್ನ ನಡೆಸುತ್ತಿದೆ.

(ii) **ಚಿಟ್ ಫಂಡ್ಸ್ ವಿಭಾಗ:** ಈ ವಿಭಾಗವು ಪ್ರಸಕ್ತ ವರ್ಷ ರೂ.23556.77 ಲಕ್ಷಗಳ ವಹಿವಾಟು ನಡೆಸಿದ್ದರೆ, ಹಿಂದಿನ ವರ್ಷದಲ್ಲಿ ರೂ.23001.15 ಲಕ್ಷಗಳ ವಹಿವಾಟನ್ನು ನಡೆಸಿದೆ. ಇದು ಹಿಂದಿನ ವರ್ಷದ ವಹಿವಾಟುಗಿಂತಲೂ ಅಲ್ಪಪ್ರಮಾಣ ಹೆಚ್ಚಾಗಿದೆ. ಇದು ಚಿಟ್ ಫಂಡ್ ವ್ಯವಹಾರವನ್ನು ವಿಸ್ತರಿಸಲು ಉತ್ತಮ ಚಿಹ್ನೆಯಾಗಿದೆ.

ವ್ಯವಹಾರವನ್ನು ವಿಸ್ತರಣೆ ಮಾಡಲು ಶಿವಮೊಗ್ಗದಲ್ಲಿ ಹೊಸ ಚಿಟ್‌ಫಂಡ್ ಶಾಖೆ ಒಂದನ್ನು ಪ್ರಾರಂಭಿಸಲಾಗಿದೆ. ಹಾಸನ ಮತ್ತು ಮಂಡ್ಯದಲ್ಲೂ ಶಾಖೆಯನ್ನು ಪ್ರಾರಂಭಿಸಲು ಯೋಜಿಸಲಾಗಿದೆ.

ವಿಭಾಗದ ಸಾಮರ್ಥ್ಯವನ್ನು ಸುಧಾರಿಸಲು ಮತ್ತು ಚಂದಾದಾರರುಗಳ ನಿರೀಕ್ಷೆಗಳನ್ನು ಈಡೇರಿಸಲು ಹೊಸ ಚಿಟ್‌ಫಂಡ್ ನಿರ್ವಹಣೆ ವ್ಯವಸ್ಥೆಯನ್ನು (ಸಿಎಫ್‌ಎಂಎಸ್) ಪರಿಚಯಿಸಲಾಗುತ್ತಿದೆ.

ಇದಲ್ಲದೆ ಸುಗಮ ಮತ್ತು ಅಡಚಣೆ ರಹಿತ ಕಾರ್ಯಾಚರಣೆಗಾಗಿ ಕ್ಲೌಡ್‌ನಲ್ಲಿ ಸಿಎಫ್‌ಎಂಎಸ್ ಪ್ರಾರಂಭಿಸಲಾಗುತ್ತಿದೆ. ವ್ಯವಹಾರವನ್ನು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ವಿಸ್ತರಣೆ ಮಾಡಲು, ಮಾರುಕಟ್ಟೆಯನ್ನು ಕೇಂದ್ರೀಕರಿಸಲು ಬೆಂಗಳೂರಿನಲ್ಲಿ ಇನ್ನೂ ಹೆಚ್ಚಿನ ಚಿಟ್‌ಫಂಡ್ ಶಾಖೆಗಳನ್ನು ಪ್ರರಂಭಿಸಲಾಗುತ್ತಿದೆ.

ವಿಭಾಗದಲ್ಲಿ ಗ್ರಾಹಕ ಸ್ನೇಹಿ ಸಿಎಫ್‌ಎಂಎಸ್ ಪರಿಚಯಿಸುವುದರ ಜೊತೆಗೆ, ಪರಿಣಾಮಕಾರಿ ಜಾಹೀರಾತು ಪ್ರಚಾರದ ಮುಖೇನ ಮುಂಬರುವ ವರ್ಷಗಳಲ್ಲಿ ಚಿಟ್‌ಫಂಡ್ ವ್ಯವಹಾರವು ಶ್ಲಾಘನಾರ್ಹವಾಗಿ ವೃದ್ಧಿಯಾಗುವ ನಿರೀಕ್ಷೆ ಹೊಂದಲಾಗಿದೆ.

(iii) **ಕಾಗದ ವಿಭಾಗ :** ಪರಾಮರ್ಶನೆಯಲ್ಲಿರುವ ವರ್ಷದಲ್ಲಿ ಈ ವಿಭಾಗವು ಕಾಗದ ಮತ್ತು ಲೇಖನ ಸಾಮಗ್ರಿ ವ್ಯವಹಾರದಲ್ಲಿ ರೂ.8392.58 ಲಕ್ಷಗಳ ವಹಿವಾಟನ್ನು ಮಾಡಿದೆ. ಇದು ಆಯವ್ಯಯದಲ್ಲಿ ಅಂದಾಜಿಸಿದ್ದ ವಹಿವಾಟು ರೂ.8820.00 ಲಕ್ಷಗಳಿಗೆ ಪ್ರತಿಯಾಗಿ ಉಂಟಾಗಿದ್ದು, ಅಂದಾಜಿಸಿದ್ದ ಪ್ರಮಾಣದ ಶೇ.95.15ರಷ್ಟು ಪ್ರಮಾಣ ಸಾಧಿಸಿದೆ. ನೋಟ್ ಪುಸ್ತಕಗಳ (ವಿದ್ಯಾ/ಲೇಖಕ್) ವಹಿವಾಟಿನಿಂದ ಪ್ರಸಕ್ತ ಆರ್ಥಿಕ ವರ್ಷ 2018-19ನೇ ಸಾಲಿನಲ್ಲಿ ರೂ.2893.29 ಲಕ್ಷ (ರೂ.2405.10 ಎಂಟಿ). ಇದು ಆಯವ್ಯಯ ಅಂದಾಜಿದ್ದ ರೂ. 3,320 ಲಕ್ಷ (2750 ಎಂಟಿ) ಗಳಿಗೆ ಪ್ರತಿಯಾಗಿ ಶೇ.87.15ರಷ್ಟು ಸಾಧನೆಯಾಗಿದೆ.

ಹಲವಾರು ಖಾಸಗಿ ಸಣ್ಣ ವ್ಯಾಪಾರಿಗಳು ನೋಟ್ ಪುಸ್ತಕಗಳ ವ್ಯವಹಾರಕ್ಕೆ ಪ್ರವೇಶಿಸಿರುವುದರಿಂದ ನೋಟ್ ಪುಸ್ತಕಗಳ ಮಾರುಕಟ್ಟೆಯು ಅತ್ಯಧಿಕವಾಗಿ ಹಂಚಿಹೋಗಿದೆ. ಸದರಿ ವ್ಯಾಪಾರಿಗಳು ಮಾರುಕಟ್ಟೆಯನ್ನು ಹಿಡಿಯಲು ಕಳಪೆ ಗುಣಮಟ್ಟದ ಉತ್ಪನ್ನಗಳನ್ನು ಅತಿಕಡಿಮೆ ಬೆಲೆಗೆ ನೀಡುವ ಮೂಲಕ ಆರೋಗ್ಯಕರ/ಅನಾರೋಗ್ಯಕರ ಮಾರುಕಟ್ಟೆ ಪರಿಪಾಠವನ್ನು ಅನುಸರಿಸುತ್ತಿದ್ದಾರೆ.

ಮಾನವಶಕ್ತಿಯ ತೀವ್ರತರನಾದ ಕೊರತೆಯ ಪ್ರಯುಕ್ತ ಮಾರುಕಟ್ಟೆಯಲ್ಲಿ ಉತ್ಪನ್ನವನ್ನು ಪ್ರತಿನಿಧಿಸಲಾಗುತ್ತಿಲ್ಲದ ಕಾರಣ ನಾವು ಕಠಿಣವಾದ ಪರಿಸ್ಥಿತಿ ಎದುರಿಸಬೇಕಾಗಿದೆ. ಅನೇಕ ಶಿಕ್ಷಣ ಸಂಸ್ಥೆಗಳು ನೋಟ್ ಪುಸ್ತಕಗಳನ್ನು ತಯಾರಕರುಗಳಿಂದಲೇ ನೇರವಾಗಿ ಖರೀದಿಸಲು ಆದ್ಯತೆ ನೀಡುತ್ತಿರುವುದರಿಂದ, ಪ್ರಸ್ತುತದಲ್ಲಿ ಗ್ರಾಹಕರ ಅಪೇಕ್ಷೆಯ ನೋಟ್ ಪುಸ್ತಕಗಳ ಉತ್ಪಾದನೆಯು ಒಂದು ಪ್ರವೃತ್ತಿಯಾಗಿ ರೂಪುಗೊಂಡಿದೆ.

ಈ ವಿಭಾಗವು ನೋಟ್ ಪುಸ್ತಕಗಳು ಮತ್ತು ಲೇಖನ ಸಾಮಗ್ರಿ ಬಗ್ಗೆ ಗಮನ ಕೇಂದ್ರೀಕರಿಸುವುದರ ಜೊತೆಗೆ, ಲೇಖಕ್ ಬ್ರಾಂಡ್ ಹೆಸರಿನಲ್ಲಿ ಟೂಲ್‌ಕಿಟ್‌ಗಳು, ಗ್ಯಾಸ್ ಸ್ಟೌ ಹಾಗೂ ಭದ್ರತಾ ವೈಶಿಷ್ಟ್ಯತೆಗಳನ್ನು ಒಳಗೊಂಡ ಕಂಪ್ಯೂಟರ್ ಲೇಖನ ಸಾಮಗ್ರಿಗಳನ್ನು 2017-18ರ ಆರ್ಥಿಕ ವರ್ಷದಲ್ಲಿ ಪರಿಚಯಿಸಿದೆ. ಹೊಸ ಗ್ರಾಹಕರನ್ನು ಸೆಳೆಯಲು ಈ ಕ್ರಮ ನಡೆಸಲಾಗಿದೆ. ಇವು ವಿಭಾಗದ ವಹಿವಾಟಿಗೆ ಪ್ರಮುಖ ಪಾಲಿನ ಕೊಡುಗೆ ನೀಡುವಲ್ಲಿ ಯಶಸ್ವಿಯಾಗಿವೆ.

ಗುರಿಯನ್ನು ಸಾಧಿಸಲು ಸದರಿ ವಿಭಾಗಕ್ಕೆ 'ವಿದ್ಯಾ ಮತ್ತು ಲೇಖಕ್' ಗಳಿಗೆ ಮಾರುಕಟ್ಟೆಯನ್ನು ಮರಳಿ ಪಡೆಯಲು ಮತ್ತು ಬಲವರ್ಧನೆಗೊಳಿಸಲು ಯುವ ಮತ್ತು ಕ್ರಿಯಾಶೀಲ ಕ್ಷೇತ್ರಪಡೆ ಅವಶ್ಯವಾಗಿ ಬೇಕಾಗಿದೆ. ವಿಭಾಗವು ವಹಿವಾಟಿನ ಪ್ರಮುಖ ಪಾಲಿಗೆ ಸರ್ಕಾರದ ಕಾರ್ಯಾದೇಶಗಳ ಮೇಲೆ ಅವಲಂಬಿನೆಯಾಗುವ ಪರಿಸ್ಥಿತಿ ಮುಂದುವರೆದಿದೆ. ಮುಂಬರುವ ವರ್ಷಗಳಲ್ಲಿ ಮಾರಾಟದ ಮಾರ್ಗೋಪಾಯಗಳನ್ನು ಪುನರ್‌ರೂಪಿಸುವ ಮೂಲಕ ಈ ಅವಲಂಬನೆಯನ್ನು ನಿವಾರಿಸುವ ಅವಶ್ಯಕತೆಯಿದೆ.

(iv) **ಗ್ರಾಹಕ ಉತ್ಪನ್ನಗಳ ವಿಭಾಗ:** ಈ ವಿಭಾಗವು ಹಿಂದಿನ ವರ್ಷ ರೂ.458.05ಲಕ್ಷಗಳ ವಹಿವಾಟನ್ನು ನಡೆಸಿದ್ದರೆ, ಪರಾಮರ್ಶನೆಯಲ್ಲಿರುವ ಈ ವರ್ಷದಲ್ಲಿ ರೂ.408.74 ಲಕ್ಷದ (17.96 ದೆಹಲಿ+372.65 ಮುಂಬಯಿ+ಸಿಪಿಡಿ18.13 ಲಕ್ಷ) ವಹಿವಾಟನ್ನು ಸಾಧಿಸಿದೆ. ಪ್ರಸಿದ್ಧ ಎಣ್ಣೆ ತಯಾರಕರುಗಳ ಜೊತೆ ಸಹಭಾಗಿತ್ವ ಮಾಡಿಕೊಳ್ಳಲು ತನ್ನ ಉತ್ಪನ್ನ ಶ್ರೇಣಿಯನ್ನು ಬಲವರ್ಧನೆ ಮಾಡುವ ಮತ್ತು ಹಾಲಿಯಿರುವ ಉತ್ಪನ್ನಗಳನ್ನು ಬೇರೆ ಲಾಭದಾಯಕ ಪ್ರದೇಶಗಳಲ್ಲಿ ಮಾರಾಟ ಮಾಡುವ ಬಗ್ಗೆ ಅನ್ವೇಷಣೆ ಮಾಡುವ ಪ್ರಕ್ರಿಯೆಯಲ್ಲಿ ತೊಡಗಿವೆ.

ಕಳೆದ 2017ರಲ್ಲಿ ಪರೀಕ್ಷಾರ್ಥ ಮಾರುಕಟ್ಟೆಗೆ ಬಿಡುಗಡೆ ಮಾಡಲಾಗಿದ್ದು, ಸೌಂದರ್ಯ ಉತ್ಪನ್ನಗಳ ಮಾರಾಟವನ್ನು ಎಂಎಸ್ಐಎಲ್ ಸ್ಥಗಿತಗೊಳಿಸಿದೆ. ಸಮೀಕ್ಷಾ ವರದಿಯ ಪ್ರಕಾರ ಈ ಉತ್ಪನ್ನಗಳಿಗೆ ಇಟ್ಟಿರುವ ದುಬಾರಿ ಬೆಲೆಗಳು ಮತ್ತು ಅವುಗಳ ಗುಣಮಟ್ಟವು ಗ್ರಾಹಕರ ನಿರೀಕ್ಷೆಗನುಗುಣವಾಗಿಲ್ಲದಿರುವುದೇ ಇದಕ್ಕೆ ಕಾರಣ. ಈ ಉತ್ಪನ್ನಗಳು ವಿಲೇ ಮಾಡಿದ್ದು, ಮುಂದೆ ಅವುಗಳ ಮಾರಾಟ ಮಾಡುವುದಿಲ್ಲ.

ಈ ವಿಭಾಗವು ತಮಿಳುನಾಡಿನಲ್ಲಿ ಮಾರ್ಜಕ ಬಿಲ್ಲೆಗಳ (ಡಿಟರ್ಜಂಟ್ ಬಾರ್) ಮರು ಬಿಡುಗಡೆಗೆ ಕ್ರಮ ತೆಗೆದುಕೊಂಡಿದೆ. ವಿಭಾಗವು ಮುಂಬರುವ ದಿನಗಳಲ್ಲಿ ಇನ್ನೂ ಹೆಚ್ಚಿನ ಉತ್ಪನ್ನಗಳನ್ನು ಸೇರಿಸುವ ಮೂಲಕ ಮುಂದಿನ ವರ್ಷಗಳಲ್ಲಿ ಕರ್ನಾಟಕದಲ್ಲಿ ಹೆಚ್ಚಿನ ವಹಿವಾಟು ಸಾಧನೆಯನ್ನು ಮಾಡಲು ಯೋಜಿಸಿದೆ.

(v) **ಕೈಗಾರಿಕಾ ಉತ್ಪನ್ನಗಳ ವಿಭಾಗ :** ಈ ವಿಭಾಗವು ಆರ್ಥಿಕ ವರ್ಷ 2018-19ರ ಅವಧಿಯಲ್ಲಿ ರೂ.1890.45 ಲಕ್ಷಗಳ ವಹಿವಾಟನ್ನು ಪೀಠೋಪಕರಣ ಉತ್ಪನ್ನ ಬಾಬ್ತುಗಳ ಕೊಡುಗೆಯಡಿ ಸಾಧಿಸಿದೆ. ವಿಭಾಗವು ವಿವಿಧ ಮಾದರಿಯ ಪೀಠೋಪಕರಣ ಮತ್ತು ಪ್ಯಾಕೇಜ್ ಮಾಡಿದ ಪ್ರಥಮ ದರ್ಜೆ ಕುಡಿಯುವ ನೀರು ಸೇರ್ಪಡೆ ಮಾಡುವ ಮೂಲಕ ವಹಿವಾಟನ್ನು ಹೆಚ್ಚು ಮಾಡುವ ಉದ್ದೇಶದಿಂದ ಸರ್ಕಾರದ ವಿವಿಧ ಇಲಾಖೆಗಳಿಂದ ಸರ್ಕಾರದ ಕಾರ್ಯಾದೇಶಗಳನ್ನು ಪಡೆಯುವ ಪ್ರಕ್ರಿಯೆಯಲ್ಲಿ ತೊಡಗಿದೆ.

(vi) **ಟೂರ್ಸ್ ಮತ್ತು ಟ್ರಾವೆಲ್ಸ್ ವಿಭಾಗ:** ಇದು ಐಎಟಿಎ ಮಾನ್ಯತೆ ಪಡೆದ ಟ್ರಾವೆಲ್ ಏಜೆನ್ಸಿಯಾಗಿರುವುದು. (ಐಎಟಿಎ ನಂ.1435229). 2018-19ರ ಸಾಲಿನಲ್ಲೂ ಸರ್ಕಾರದ ನೌಕರರಿಗೆ ವಿಮಾನ ಪ್ರಯಾಣದ ಟಿಕೆಟ್ ಬುಕ್ ಮಾಡುವುದು ಮತ್ತು ಪ್ಯಾಕೇಜ್ ಪ್ರವಾಸಗಳನ್ನು ಏರ್ಪಡಿಸುವುದು ವಿಭಾಗದ ಮುಖ್ಯ ಚಟುವಟಿಕೆಯನ್ನು ಮುಂದುವರೆಸಿದೆ. ಈ ವಿಭಾಗವು ಹಿಂದಿನ ವರ್ಷ ರೂ.547.47 ಲಕ್ಷಗಳ ವಹಿವಾಟು ಸಾಧಿಸಿದ್ದರೆ, ದಿನಾಂಕ 31ನೇ ಮಾರ್ಚ್ 2019ರವರೆಗೆ ರೂ.642.38ಲಕ್ಷಗಳ ವಹಿವಾಟು ಸಾಧಿಸಿದೆ. ವಿಭಾಗವು ಉತ್ತರ ಭಾರತದ ಧಾರ್ಮಿಕ ಪುಣ್ಯಸ್ಥಳಗಳಿಗೆ ಪ್ಯಾಕೇಜ್ ಪ್ರವಾಸಗಳನ್ನು ಯಶಸ್ವಿಯಾಗಿ ಏರ್ಪಡಿಸಿದೆ. ಯಾತ್ರಾ ಸ್ಥಳಗಳಿಗೂ ಪ್ಯಾಕೇಜ್ ಪ್ರವಾಸಗಳನ್ನು ಆಯೋಜಿಸಿದೆ. ಸರ್ಕಾರದ ಸಂಸ್ಥೆಗಳಾದ:

- ಪೌರಾಡಳಿತ ನಿರ್ದೇಶನಾಲಯ, ಸಿಂಗಪುರ ಪ್ಯಾಕೇಜ್-15 ತಂಡಗಳು-ಪ್ರತಿ ಗುಂಪಿನಲ್ಲಿ 45 ಭಕ್ತರು;
- ರಕ್ಷಣಾ ಸಚಿವಾಲಯ ಮತ್ತು ಐಎಸ್‌ಟಿಎಂ ಅಧ್ಯಯನ ಪ್ರವಾಸ ಪ್ಯಾಕೇಜ್‌ಗಳು ನವದೆಹಲಿಯಿಂದ;
- ಕರ್ನಾಟಕ-ಬೆಂಗಳೂರಿನಲ್ಲಿನ ಪುರಸಭೆಗಳಿಗೆ ವಿವಿಧ ಅಧ್ಯಯನ ಪ್ರವಾಸಗಳು;
- ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ-ಬೆಂಗಳೂರು;
- ತೋಟಗಾರಿಕೆ ಇಲಾಖೆ-ಬೆಂಗಳೂರು;
- ಕರ್ನಾಟಕದ ನಗರ ವ್ಯವಸ್ಥಾಪಕರ ಸಂಘ, ಬೆಂಗಳೂರು;
- ಆಡಳಿತ ತರಬೇತಿ ಸಂಸ್ಥೆ, ಮೈಸೂರು;
- ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯ
- ಕೆಎಸ್‌ಟಿಡಿಸಿ ಮತ್ತು ಜಂಗಲ್ ಲಾಡ್ಜ್ ಅಂಡ್ ರೆಸಾರ್ಟ್ಸ್

ಇವರಿಗೆ ಭಾರತದಾದ್ಯಂತ ಮತ್ತು ಏಷ್ಯನ್ ದೇಶಗಳ ವಿವಿಧ ಪ್ರವಾಸಿ ಸ್ಥಳಗಳಿಗೆ ಸೇವಾ ಪೂರೈಕೆದಾರರ ಮೂಲಕ ಪ್ಯಾಕೇಜ್ ಪ್ರವಾಸಗಳನ್ನು ಏರ್ಪಡಿಸಿದೆ.

(vii) **ಬಾಡಿಗೆ ಖರೀದಿ ವಿಭಾಗ :** ಈ ವಿಭಾಗವನ್ನು ಜುಲೈ 2008 ರಲ್ಲಿ ಸಮಾಪ್ತಿಗೊಳಿಸಲಾಗಿದ್ದು, ಬಾಡಿಗೆದಾರರಿಂದ ಬರಬೇಕಾಗಿರುವ ಬಾಕಿಗಳ ವಸೂಲಿಗೆ ಈ ವಿಭಾಗ ಗಮನ ಕೇಂದ್ರೀಕರಿಸಿದೆ. ಪ್ರಸಕ್ತ ಹಣಕಾಸಿನ ವರ್ಷದಲ್ಲಿ ರೂ.25.18 ಲಕ್ಷವನ್ನು ವಸೂಲಿ ಮಾಡಿದೆ. ಹಿಂದಿನ ವರ್ಷದಲ್ಲಿ ರೂ.350.43 ಲಕ್ಷ ಮೊತ್ತದ ಬಾಕಿ ವಸೂಲಿ ಮಾಡಿದ್ದರೆ, 31ನೇ ಮಾರ್ಚ್ 2019ರಂದು ಇದ್ದಂತೆ ರೂ.325.25 ಲಕ್ಷಗಳ ಮೊತ್ತದ ಬಾಕಿ ಉಳಿದಿದೆ.

(viii) **ಔಷಧ ವಿಭಾಗ:** ಈ ವಿಭಾಗವು 2018-19ನೇ ಸಾಲಿನಲ್ಲಿ ರೂ.805.39 ಲಕ್ಷಗಳ ವಹಿವಾಟನ್ನು ನಡೆಸಿದ್ದು, ಕಳೆದ ಸಾಲಿನಲ್ಲಿ ವಹಿವಾಟು ಮಾಡಲಾಗಿದ್ದ, ರೂ.157.44 ಲಕ್ಷಗಳಿಗೆ ಪ್ರತಿಯಾಗಿ ಈ ಸಾಧನೆ ಮಾಡಲಾಗಿದೆ. ಔಷಧ ವಿಭಾಗವು ಒಟ್ಟು 72 ಪ್ರಧಾನ ಮಂತ್ರಿ ಭಾರತೀಯ ಜನೌಷಧಿ ಕೇಂದ್ರಗಳನ್ನು ತಾಲ್ಲೂಕು, ಜಿಲ್ಲಾ ಆಸ್ಪತ್ರೆಗಳಲ್ಲಿ ಮಾರ್ಚ್ 31,2019ರವರೆಗೆ ತೆರೆದಿರುವುದು. ಇನ್ನು 15 ಜನೌಷಧಿ ಕೇಂದ್ರಗಳನ್ನು ಶೀಘ್ರದಲ್ಲಿ ಆರಂಭಿಸಲಾಗುವುದು. ಕಂಪನಿಯು ಹುಬ್ಬಳ್ಳಿಯಲ್ಲಿ ಪ್ರಧಾನ ಮಂತ್ರಿ ಭಾರತೀಯ ಜನೌಷಧಿ ಕೇಂದ್ರದ ಸಗಟು ಮಾರಾಟ ಕೇಂದ್ರವನ್ನು ತೆರೆಯುವ ಪ್ರಕ್ರಿಯೆಯಲ್ಲಿದೆ.

(ix) **ಆಮದಾದ ಮರಳು:** ಆಮದು ವಿಭಾಗವು 2018-19ರ ಹಣಕಾಸಿನ ಅವಧಿಯಲ್ಲಿ ರೂ.124.52 ಲಕ್ಷಗಳ ವಹಿವಾಟನ್ನು ಸಾಧಿಸಿದೆ.

**3. ವ್ಯವಹಾರದ ಸ್ವರೂಪದಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ:**

ಕಂಪನಿಯ ವ್ಯವಹಾರದ ಸ್ವರೂಪದಲ್ಲಿ ಯಾವುದೇ ಬದಲಾವಣೆಯಿರುವುದಿಲ್ಲ.

**4. ಲಾಭಾಂಶ**

ನಿಧಿ ಸಂರಕ್ಷಣೆ ಮಾಡಲು ಮತ್ತು ದುಡಿಮೆ ಬಂಡವಾಳ ಪೂರೈಸುವ ಸಲುವಾಗಿ ಹಾಗೂ 900 ಕೋಟಾದ ಅಡಿಯಲ್ಲಿ ತೆರೆಯಬೇಕಾಗಿರುವ ಹೊಸ ಚಿಲ್ಲರೆ ಮದ್ಯ ಮಾರಾಟ ಮಳಿಗೆಗಳನ್ನು ಪ್ರಾರಂಭಿಸಲು ಅಗತ್ಯವಾದ ಸ್ಥಿರಾಸ್ತಿಗಳಿಗೆ ಹಣ ಹೂಡಿಕೆ ಹಿನ್ನೆಲೆಯಲ್ಲಿ ಮಂಡಳಿಯು 2018-19ರ ಹಣಕಾಸಿನ ವರ್ಷದಲ್ಲಿ ಯಾವುದೇ ಲಾಭಾಂಶ ಪಾವತಿಗೆ ಶಿಫಾರಸ್ಸು ಮಾಡಿರುವುದಿಲ್ಲ.

**5. ಮೀಸಲು ನಿಧಿ**

ಹಣಕಾಸಿನ ವರ್ಷ 2018-19ಕ್ಕೆ ಮತ್ತು ಹಿಂದಿನ ವರ್ಷದಲ್ಲಿ ಕಂಪನಿಯು ಇರಿಸಿರುವ ಮೀಸಲು ನಿಯು ಕೆಳಕಂಡಂತಿರುವುದು:

**(ರೂ. ಲಕ್ಷಗಳಲ್ಲಿ)**

| ವಿವರಗಳು | ಹಣಕಾಸಿನ ವರ್ಷ 2018-19 | ಹಣಕಾಸಿನ ವರ್ಷ 2017-18 |
|---|---|---|
| ಸಾಮಾನ್ಯ ಮೀಸಲು ನಿಧಿ | 17765.57 | 17205.91 |
| ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿನ ಹೆಚ್ಚುವರಿ ನಿಧಿ | 1978.80 | 541.85 |

**6. ಷೇರು ಬಂಡವಾಳ**

ಕಂಪನಿಯ ಷೇರು ಬಂಡವಾಳದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

**7. ನಿರ್ದೇಶಕರು ಮತ್ತು ಪ್ರಮುಖ ವ್ಯವಸ್ಥಾಪನಾ ಸಿಬ್ಬಂದಿ:**

ಕರ್ನಾಟಕ ಸರ್ಕಾರ ಮತ್ತು ಧಾರಕ ಕಂಪನಿ, ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತದ (ಕೆಎಸ್‌ಐಐಡಿಸಿ) ನಿರ್ದೇಶನಗಳ ಅನ್ವಯ 2018-19ರ ಹಣಕಾಸಿನ ವರ್ಷದ ಅವಧಿಯಲ್ಲಿ ಕಂಪನಿಯ ನಿರ್ದೇಶಕರ ಮಂಡಳಿಯ ಸಂಯೋಜನೆಯಲ್ಲಿ ಕೆಳಕಂಡ ಬದಲಾವಣೆಗಳನ್ನು ಮಾಡಲಾಗಿದೆ.

**ನಿರ್ದೇಶಕರ ಮಂಡಳಿಯ ವಿವರಗಳು**

| ಕ್ರ. ಸಂ. | ಹೆಸರು | ನೇಮಕಾತಿ ದಿನಾಂಕ | ಸಮಾಪ್ತಿ ದಿನಾಂಕ |
|---|---|---|---|
| 1. | ಶ್ರೀ ಕೆ.ಜೆ. ಜಾರ್ಜ್ | 05.07.2018 | 27.02.2019 |
| 2. | ಶ್ರಿ ಡಿ.ಸಿ.ಗೌರಿಶಂಕರ | 27.02.2019 | 30.07.2019 |
| 3. | ಡಾ|| ಜಿ.ಸಿ.ಪ್ರಕಾಶ್, ಭಾ.ಆ.ಸೇ. | 07.10.2016 | 20.07.2019 |
| 4. | ಶ್ರೀಮತಿ ರೇಣುಕಾ ಚಿದಂಬರಂ, ಭಾ.ಆ.ಸೇ. | 26.07.2017 | 28.08.2018 |
| 5. | ಡಾ|| ಏಕ್‌ರೂಪ್ ಕೌರ್, ಭಾ.ಆ.ಸೇ. | 13.07.2017 | 15.12.2018 |
| 6. | ಶ್ರೀ ಕಪಿಲ್ ಮೋಹನ್, ಭಾ.ಆ.ಸೇ. | 28.08.2018 | 29.08.2019 |
| 7. | ಶ್ರೀ ಎನ್.ಜಯರಾಂ, ಭಾ.ಆ.ಸೇ. | 27.09.2017 | 28.08.2019 |
| 8. | ಶ್ರೀ ಪವನ್‌ಕುಮಾರ್ ಮಾಲಾಪತಿ, ಭಾ.ಆ.ಸೇ. | 15.12.2018 | - |
| 9. | ಶ್ರೀ ಯಶವಂತ, ಭಾ.ಆ.ಸೇ. | 26.03.2019 | - |
| 10. | ಶ್ರೀಮತಿ ಗುಂಜನ್ ಕೃಷ್ಣ, ಭಾ.ಆ.ಸೇ. | 28.08.2018 | - |
| 11. | ಶ್ರೀ ಆರ್.ರಮೇಶ್ | 06.03.2018 | |

ಶ್ರೀ ಕೆ.ಜೆ. ಜಾರ್ಜ್, ಅಧ್ಯಕ್ಷರು, ಶ್ರೀ ಡಿ.ಸಿ.ಗೌರಿಶಂಕರ್,ಅಧ್ಯಕ್ಷರು, ಡಾ|| ಜಿ.ಸಿ.ಪ್ರಕಾಶ್, ಭಾ.ಆ.ಸೇ. ವ್ಯವಸ್ಥಾಪಕ ನಿರ್ದೇಶಕರು, ಶ್ರೀಮತಿ ರೇಣುಕಾ ಚಿದಂಬರಂ, ಭಾ.ಆ.ಸೇ. ಡಾ|| ಏಕ್‌ರೂಪ್ ಕೌರ್, ಭಾ.ಆ.ಸೇ. ಮತ್ತು ಎನ್.ಜಯರಾಂ, ಭಾ.ಆ.ಸೇ. ಇವರುಗಳು ಕಂಪನಿಯ ನಿರ್ದೇಶಕರ ಮಂಡಳಿಯಲ್ಲಿ ಅಧ್ಯಕ್ಷರಾಗಿ, ವ್ಯವಸ್ಥಾಪಕ ನಿರ್ದೇಶಕರಾಗಿ ಮತ್ತು ನಿರ್ದೇಶಕರುಗಳಾಗಿ ಕಾರ್ಯನಿರ್ವಹಿಸಿದ ತಮ್ಮ ಸೇವಾ ಅವಧಿಯಲ್ಲಿ ಸಲ್ಲಿಸಿದ ವಿಶೇಷ ಸೇವೆ ಮತ್ತು ನೀಡಿದ ಅನುಪಮ ಕೊಡುಗೆಯನ್ನು ಮಂಡಳಿಯು ವಿನಮ್ರವಾಗಿ ಸ್ಮರಿಸಿ ಅವರುಗಳಿಗೆ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

ವರದಿಯ ದಿನಾಂಕದಂದು ಇರುವ ನಿರ್ದೇಶಕರ ಮಂಡಳಿಯ ವಿವರ ಕೆಳಕಂಡಂತಿರುವುದು:

| ನಿರ್ದೇಶಕರ ಹೆಸರು | |
|---|---|
| 1. ಶ್ರೀ ಗೌರವ್‌ಗುಪ್ತ, ಭಾ.ಆ.ಸೇ | ಅಧ್ಯಕ್ಷರು |
| 2. ಶ್ರೀ ಹೆಚ್.ಪಿ. ಪ್ರಕಾಶ್, ಭಾ.ಆ.ಸೇ | ವ್ಯವಸ್ಥಾಪಕ ನಿರ್ದೇಶಕರು |
| 3. ಶ್ರೀ ಗಂಗಾರಾಮ್ ಬದೇರಿಯಾ, ಭಾ.ಆ.ಸೇ. | ನಿರ್ದೇಶಕರು |
| 4. ಶ್ರೀಮತಿ ಗುಂಜನ್‌ಕೃಷ್ಣ, ಭಾ.ಆ.ಸೇ. | ನಿರ್ದೇಶಕರು |
| 5. ಶ್ರೀ ಯಶವಂತ, ಭಾ.ಆ.ಸೇ. | ನಿರ್ದೇಶಕರು |
| 6. ಶ್ರೀ ಪವನ್‌ಕುಮಾರ್ ಮಾಲಾಪತಿ, ಭಾ.ಆ.ಸೇ. | ನಿರ್ದೇಶಕರು |
| 7. ಶ್ರೀ ಆರ್.ರಮೇಶ್ | ನಿರ್ದೇಶಕರು |

2018-19ನೇ ಆರ್ಥಿಕ ವರ್ಷದಲ್ಲಿ ಕಂಪನಿಗಳ ಕಾಯ್ದೆ 2013ರ ಉಪಬಂಧಗಳ ಅನುಸಾರ ಕೆಳಕಂಡವರು ಕಂಪನಿಯ ಪ್ರಮುಖ ಆಡಳಿತ ಅಧಿಕಾರಿಗಳಾಗಿ ಕಾರ್ಯನಿರ್ವಹಿಸಿರುವರು:

| ಕ್ರ. ಸಂ. | ಪ್ರಮುಖ ಆಡಳಿತ ಅಧಿಕಾರಿಗಳ ಹೆಸರು | ನೇಮಕವಾದ ದಿನಾಂಕ | ಸಮಾಪ್ತಿ ದಿನಾಂಕ |
|---|---|---|---|
| 1. | ಡಾ.ಜಿ.ಸಿ.ಪ್ರಕಾಶ್, ಭಾ.ಆ.ಸೇ. -ವ್ಯವಸ್ಥಾಪಕ ನಿರ್ದೇಶಕರು | 11.08.2014 | 20.07.2019 |

| | | | |
|---|---|---|---|
| 2. | ಶ್ರೀ ಎ.ಎಂ. ಚಂದ್ರಪ್ಪ, –ಮುಖ್ಯ ಹಣಕಾಸು ಅಧಿಕಾರಿ | 15.05.2017 | 20.08.2018 |
| 3. | ಶ್ರೀ ಸುಬ್ರಮಣ್ಯ –ಮುಖ್ಯ ಹಣಕಾಸು ಅಧಿಕಾರಿ | 20.08.2018 | – |
| 4. | ಶ್ರೀಮತಿ ಶ್ರೀದೇವಿ ಬಿ.ಎನ್ –ಕಂಪನಿ ಕಾರ್ಯದರ್ಶಿ | 18.09.2013 | – |

**ಮಂಡಳಿಯ ಲೆಕ್ಕ ಪರಿಶೋಧನ ಸಮಿತಿಯ ಸಂರಚನೆ**

| | | |
|---|---|---|
| 1. | ಶ್ರೀ ಗಂಗಾರಾಮ್ ಬದೇರಿಯಾ, ಭಾ.ಆ.ಸೇ. | ಅಧ್ಯಕ್ಷರು |
| 2. | ಶ್ರೀ ಯಶವಂತ, ಭಾ.ಆ.ಸೇ. | ಸದಸ್ಯರು |
| 3. | ಶ್ರೀ ಪವನ್‌ಕುಮಾರ್ ಮಾಲಾಪತಿ, ಭಾ.ಆ.ಸೇ. | ಸದಸ್ಯರು |
| 4. | ಶ್ರೀ ಆರ್.ರಮೇಶ್ | ಸದಸ್ಯರು |

**ಮಂಡಳಿಯ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಸಮಿತಿಯ ಸಂರಚನೆ**

| | | |
|---|---|---|
| 1. | ಶ್ರೀ ಕಪಿಲ್ ಮೋಹನ್, ಭಾ.ಆ.ಸೇ. | ಅಧ್ಯಕ್ಷರು |
| 2. | ಶ್ರೀಮತಿ ಗುಂಜನ್ ಕೃಷ್ಣ, ಭಾ.ಆ.ಸೇ. | ಸದಸ್ಯರು |
| 3. | ಶ್ರೀ ಆರ್.ರಮೇಶ್ | ಸದಸ್ಯರು |

**8. ಸಭೆಗಳು :**

ವಿಭಾಗೀಯ ಮುಖ್ಯಸ್ಥರುಗಳಿಂದ ಬಂದ ಮನವಿಯ ಆಧಾರದ ಮೇಲೆ, ವ್ಯವಸ್ಥಾಪಕ ನಿರ್ದೇಶಕರ ಅನುಮೋದನೆಗೆ ಒಳಪಟ್ಟು ಮತ್ತು ಶಾಸನಬದ್ಧವಾಗಿ ಅಗತ್ಯವಾಗಿರುವಂತೆ ಕಾರ್ಯಸೂಚಿ ವಿಷಯಗಳ ಆಧಾರದ ಮೇಲೆ ಕಂಪನಿ ಕಾರ್ಯದರ್ಶಿಯು ವ್ಯವಸ್ಥಾಪಕ ನಿರ್ದೇಶಕರೊಡನೆ ಸಮಾಲೋಚಿಸಿ/ಅವರ ಒಪ್ಪಿಗೆ ಪಡೆದು ವಿವರಣಾತ್ಮಕ ಟಿಪ್ಪಣಿಗಳ ಜೊತೆಗೆ ಪ್ರತಿ ಸಭೆಯ ಕಾರ್ಯಸೂಚಿಯನ್ನು ತಯಾರಿಸುವರು, ಮತ್ತು ಅದನ್ನು ಮಂಡಳಿಯ ನಿರ್ದೇಶಕರುಗಳಿಗೆ ಮುಂಚಿತವಾಗಿ ವಿತರಿಸುವರು. 31ನೇ ಮಾರ್ಚ್ 2019ಕ್ಕೆ ಕೊನೆಗೊಂಡ ವರ್ಷದ ಅವಧಿಯಲ್ಲಿ ಈ ಕೆಳಕಂಡ ದಿನಾಂಕಗಳಂದು ನಾಲ್ಕು ಮಂಡಳಿ ಸಭೆಗಳು, ಮೂರು ಲೆಕ್ಕ ಪರಿಶೋಧನಾ ಉಪ-ಸಮಿತಿ ಸಭೆಗಳು ಮತ್ತು ಒಂದು ಕಾರ್ಪೋರೇಟ್ ಸಾಮಾಜಿಕ ಹೊಣೆಗಾರಿಕೆ ಸಮಿತಿ ಸಭೆಯನ್ನು ನಡೆಸಲಾಗಿದೆ.

| ಕ್ರ. ಸಂ. | ಮಂಡಳಿ ಸಭೆ ನಡೆದ ದಿನಾಂಕಗಳು | ಕ್ರ. ಸಂ. | ಲೆಕ್ಕ ಪರಿಶೋಧನಾ ಉಪಸಮಿತಿ ಸಭೆ ನಡೆದ ದಿನಾಂಕ |
|---|---|---|---|
| 1. | 8ನೇ ಜೂನ್ 2018 | 1. | |
| 2. | 20ನೇ ಆಗಸ್ಟ್ 2018 | 14ನೇ ನವೆಂಬರ್ 2018 | |
| 3. | 16ನೇ ನವೆಂಬರ್, 2018 | | |
| 4. | 08ನೇ ಮಾರ್ಚ್ 2018 | | |

| ಕ್ರ ಸಂ. | ಕಾರ್ಪೋರೇಟ್ ಸಾಮಾಜಿಕ ಹೊಣೆಗಾರಿಕೆ ಸಮಿತಿ ಸಭೆ ದಿನಾಂಕ |
|---|---|
| 1 | ಇಲ್ಲ |

ಮಂಡಳಿಯ ಸಭೆಗಳ ನಡುವಿನ ಅಂತರವು ಕಂಪನಿಗಳ ಕಾಯ್ದೆ, 2013ರ ಅನ್ವಯ ನಿಗದಿಪಡಿಸಿರುವ ಅವಧಿಯ ಒಳಗಿರುವುದು.

**2018-2019ನೇ ಆರ್ಥಿಕ ವರ್ಷದಲ್ಲಿ ನಡೆದ ಮಂಡಳಿಯ ಸಭೆಗಳಿಗೆ ನಿರ್ದೇಶಕರುಗಳ ಹಾಜರಾತಿ ವಿವರ**

| ಕ್ರ ಸಂ. | ನಿರ್ದೇಶಕರ ಹೆಸರು | ನಡೆದ ಮಂಡಳಿ ಸಭೆಗಳ ಸಂಖ್ಯೆ | |
|---|---|---|---|
| | | ನಡೆದದ್ದು | ಹಾಜರಾತಿ |
| 1. | ಶ್ರೀ ಕೆ.ಜೆ.ಜಾರ್ಜ್ | 2 | 2 |
| 2. | ಶ್ರೀ ಡಿ.ಸಿ.ಗೌರಿಶಂಕರ್ | 1 | 1 |
| 3. | ಡಾ.ಜಿ.ಸಿ. ಪ್ರಕಾಶ್, ಭಾ.ಆ.ಸೇ. | 4 | 4 |
| 4. | ಶ್ರೀಮತಿ ರೇಣುಕಾ ಚಿದಂಬರಂ, ಭಾ.ಆ.ಸೇ. | 2 | 0 |
| 5. | ಡಾ. ಏಕ್‌ರೂಪ್ ಕೌರ್, ಭಾ.ಆ.ಸೇ. | 3 | 1 |
| 6. | ಶ್ರೀ ಕಪಿಲ್ ಮೋಹನ್, ಭಾ.ಆ.ಸೇ. | 2 | 2 |
| 7. | ಶ್ರೀ ಎನ್.ಜಯರಾಂ, ಭಾ.ಆ.ಸೇ. | 1 | 0 |
| 8. | ಶ್ರೀ ಪವನ್‌ಕುಮಾರ್ ಮಾಲಾಪತಿ | 1 | 0 |
| 9. | ಶ್ರೀ ಯಶವಂತ, ಭಾ.ಆ.ಸೇ. | 1 | 0 |
| 10. | ಶ್ರೀಮತಿ ಗುಂಜನ್ ಕೃಷ್ಣ, ಭಾ.ಆ.ಸೇ. | 3 | 2 |
| 11. | ಶ್ರೀ ಆರ್. ರಮೇಶ್ | 4 | 4 |

1. ಶ್ರೀ ಕೆ.ಜೆ.ಜಾರ್ಜ್ ಅವರು 27ನೇ ಫೆಬ್ರವರಿ 2019ರಿಂದ ಅನ್ವಯವಾಗುವಂತೆ ಕಂಪನಿಯ ಅಧ್ಯಕ್ಷ ಸ್ಥಾನ ತೆರವುಗೊಳಿಸಿದ್ದಾರೆ.
2. ಶ್ರೀ ಡಿ.ಸಿ.ಗೌರಿಶಂಕರ್ ಅವರು ಫೆಬ್ರವರಿ 27, 2019ರಿಂದ ಕಂಪನಿಯ ಅಧ್ಯಕ್ಷರಾಗಿ ನೇಮಕಗೊಂಡಿದ್ದು, ಜುಲೈ-30, 2019ರಿಂದ ಅನ್ವಯವಾಗುವಂತೆ ಅಧ್ಯಕ್ಷ ಸ್ಥಾನ ತೆರವುಗೊಳಿಸಿದ್ದಾರೆ.
3. ಡಾ|| ಜಿ.ಸಿ. ಪ್ರಕಾಶ್, ಭಾ.ಆ.ಸೇ. ಇವರು ಜುಲೈ 20, 2019ರಿಂದ ಅನ್ವಯವಾಗುವಂತೆ ವ್ಯವಸ್ಥಾಪಕ ನಿರ್ದೇಶಕರ ಸ್ಥಾನ ತೆರವುಗೊಳಿಸಿದ್ದಾರೆ.
4. ಶ್ರೀಮತಿ ರೇಣುಕಾ ಚಿದಂಬರಂ, ಭಾ.ಆ.ಸೇ. ಇವರು ಆಗಸ್ಟ್ 28, 2018ರಿಂದ ಅನ್ವಯವಾಗುವಂತೆ ನಿರ್ದೇಶಕರ ಸ್ಥಾನ ತೆರವುಗೊಳಿಸಿದ್ದಾರೆ.
5. ಡಾ|| ಏಕ್‌ರೂಪ್ ಕೌರ್, ಭಾ.ಆ.ಸೇ. ಇವರು ಡಿಸೆಂಬರ್ 15, 2018 ರಿಂದ ಅನ್ವಯವಾಗುವಂತೆ ನಿರ್ದೇಶಕರ ಸ್ಥಾನ ತೆರವುಗೊಳಿಸಿದ್ದಾರೆ.
6. ಶ್ರೀ ಕಪಿಲ್ ಮೋಹನ್, ಭಾ.ಆ.ಸೇ. ಇವರು ಆಗಸ್ಟ್ 28, 2018ರಂದು ನಿರ್ದೇಶಕರಾಗಿ ನೇಮಕಗೊಂಡಿದ್ದು, ಆಗಸ್ಟ 29, 2019ರಿಂದ ಅನ್ವಯವಾಗುವಂತೆ ನಿರ್ದೇಶಕರ ಸ್ಥಾನ ತೆರವುಗೊಳಿಸಿದ್ದಾರೆ.
7. ಶ್ರೀ ಎನ್. ಜಯರಾಂ, ಭಾ.ಆ.ಸೇ. ಇವರು ಆಗಸ್ಟ್ 28, 2018ರಿಂದ ಅನ್ವಯವಾಗುವಂತೆ ನಿರ್ದೇಶಕರ ಸ್ಥಾನ ತೆರವುಗೊಳಿಸಿದ್ದಾರೆ.

8. ಶ್ರೀ ಪವನ್‌ಕುಮಾರ್ ಮಾಲಾಪತಿ ಇವರು ಡಿಸೆಂಬರ್ 15, 2018 ರಿಂದ ಅನ್ವಯವಾಗುವಂತೆ ನಿರ್ದೇಶಕರ ಸ್ಥಾನಕ್ಕೆ ನೇಮಕಗೊಂಡಿದ್ದಾರೆ.

9. ಶ್ರೀ ಯಶವಂತ, ಭಾ.ಆ.ಸೇ. ಇವರು ಮಾರ್ಚ್ 26, 2019 ರಿಂದ ಅನ್ವಯವಾಗುವಂತೆ ನಿರ್ದೇಶಕರ ಸ್ಥಾನಕ್ಕೆ ನೇಮಕಗೊಂಡಿರುತ್ತಾರೆ.

10. ಶ್ರೀಮತಿ ಗುಂಜನ್ ಕೃಷ್ಣ, ಭಾ.ಆ.ಸೇ. ಇವರು ಆಗಸ್ಟ್ 28, 2018ರಿಂದ ಅನ್ವಯವಾಗುವಂತೆ ನಿರ್ದೇಶಕರ ಸ್ಥಾನಕ್ಕೆ ನೇಮಕಗೊಂಡಿದ್ದಾರೆ.

### 9. ಸಹಾಯಕ ಕಂಪನಿಗಳ ವಿವರ

ದಿನಾಂಕ 31ನೇ ಮಾರ್ಚ್ 2019ರಂದು ಇದ್ದಂತೆ ಕಂಪನಿಯು ಎರಡು ಸಹಾಯಕ ಕಂಪನಿಗಳನ್ನು ಹೊಂದಿರುವುದು.

ಪ್ರಕರಣ 129(3)ರ ಉಪಬಂಧಗಳ ಅನುಸಾರ ಒಂದು ಅಥವಾ ಹೆಚ್ಚು ಸಹಾಯಕ ಕಂಪನಿಗಳನ್ನು ಹೊಂದಿರುವ ಕಂಪನಿಯು ಸ್ವತಂತ್ರ ಹಣಕಾಸಿನ ವಿವರಗಳನ್ನು ಹೊಂದಿರುವುದರ ಜೊತೆಗೆ ಕಂಪನಿಯ ಕ್ರೋಡೀಕೃತ ಹಣಕಾಸಿನ ವಿವರಗಳನ್ನು ಸಿದ್ಧಪಡಿಸಬೇಕು ಮತ್ತು ಎಲ್ಲಾ ಸಹಾಯಕ, ಸಹವರ್ತಿ ಕಂಪನಿಗಳು, ಜಂಟಿ ಉದ್ಯಮಗಳೂ ಸೇರಿದಂತೆ ಇದೇ ರೂಪದಲ್ಲಿ ಮತ್ತು ನಮೂನೆಯಲ್ಲಿ ತನ್ನದೇ ಸ್ವಂತ ಎಂಬುದಾಗಿರುವಂತೆ ಹಣಕಾಸಿನ ವಿವರಗಳನ್ನು ಹೊಂದಿರಬೇಕು ಮತ್ತು ಅದನ್ನು ಸ್ವತಂತ್ರ ಹಣಕಾಸು ಹೇಳಿಕೆಗಳ ಜೊತೆಗೆ ಕಂಪನಿಯ ವಾರ್ಷಿಕ ಮಹಾಸಭೆಯ ಮುಂದಿಡಬೇಕು. ಕಂಪನಿಯು 31ನೇ ಮಾರ್ಚ್ 2019ಕ್ಕೆ ಕೊನೆಗೊಂಡ ಆರ್ಥಿಕ ವರ್ಷಕ್ಕೆ ಕ್ರೋಡೀಕೃತ ಹಣಕಾಸಿನ ವಿವರಗಳನ್ನು ಸಿದ್ಧಪಡಿಸಿದೆ.

ಕಾಯ್ದೆಯ ಪ್ರಕರಣ 129ರ ಉಪ-ಪ್ರಕರಣ (3)ರ ಅನುಸಾರ ಕಂಪನಿಯ ಸಹಾಯಕ ಸಂಸ್ಥೆಗಳ ಹಣಕಾಸಿನ ವಿವರಗಳ ವೈಶಿಷ್ಟ್ಯತೆಗಳನ್ನು ಒಳಗೊಂಡ ವಿವರವನ್ನು ಅನುಬಂಧ-IIರಲ್ಲಿ ನಮೂನೆ ಎಒಸಿ-1ರಲ್ಲಿ ತಿಳಿಸಿದೆ.

### 10. ಲೆಕ್ಕ ಪರಿಶೋಧಕರು:

ಕಂಪನಿಯು, ಕಂಪನಿಗಳ ಕಾಯ್ದೆ, 2013ರ ಪ್ರಕರಣ 2(45) ರ ಅನ್ವಯ ಸರ್ಕಾರದ ಕಂಪನಿಯಾಗಿದ್ದು, ಭಾರತದ ಕಂಪ್ಟ್ರೋಲರ್ ಮತ್ತು ಮಹಾಲೆಕ್ಕಪರಿಶೋಧಕರು ಕಂಪನಿಗಳ ಕಾಯ್ದೆ 2013ರ ಪ್ರಕರಣ 139(5) ರ ಅನ್ವಯ ಕಂಪನಿಯ ವಾರ್ಷಿಕ ಲೆಕ್ಕ ಪತ್ರಗಳ ಪರಿಶೋಧನೆ ಮಾಡಲು ಶಾಸನಬದ್ಧ ಲೆಕ್ಕ ಪರಿಶೋಧಕರನ್ನು ನೇಮಕ ಮಾಡುವರು. ಸಿ ಅಂಡ್ ಎಜಿಐ ಇವರು ಮೆ|| ಆಭರ್ಣ ಅಂಡ್ ಅನಂತನ್ (ಬಿಎ0245) ಬೆಂಗಳೂರು ಇವರನ್ನು 2018-19ರ ಸಾಲಿಗೆ ಶಾಸನಬದ್ಧ ಲೆಕ್ಕಪರಿಶೋಧಕರನ್ನಾಗಿ ನೇಮಕ ಮಾಡಿದ್ದಾರೆ. ಸಿ ಅಂಡ್ ಎಜಿಐ ಇವರು ನೇಮಕ ಮಾಡಿರುವ ಶಾಸನಬದ್ಧ ಲೆಕ್ಕ ಪರಿಶೋಧಕರು, ಮುಂಬರುವ ವಾರ್ಷಿಕ ಮಹಾಸಭೆಯವರೆಗೆ ಲೆಕ್ಕಪರೀಶೋಧಕರಾಗಿರುವರು.

ಭಾರತದ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಕಚೇರಿ, ನವದೆಹಲಿ ಇವರು ಮೆ|| ಆಭರ್ಣ ಅಂಡ್ ಅನಂತನ್ (ಬಿಎ0245), ಚಾರ್ಟರ್ಡ್ ಅಕೌಂಟೆಂಟ್ಸ್, ಇವರನ್ನು 2018-19ರ ಸಾಲಿಗೆ ಕಂಪನಿಯ ಶಾಸನಬದ್ಧ ಲೆಕ್ಕಪರಿಶೋಧಕರನ್ನಾಗಿ ನೇಮಕ ಮಾಡಿರುವುದಾಗಿ ತಿಳಿಸಿದ್ದಾರೆ.

### 11. ಲೆಕ್ಕಪರಿಶೋಧಕರ ವರದಿ:

ಲೆಕ್ಕಪರಿಶೋಧಕರ ವರದಿಯು ಆಕ್ಷೇಪಣೆಗಳನ್ನು ಒಳಗೊಂಡಿರುವುದೇ ಎಂಬುದನ್ನು ಪರಿಶೀಲಿಸಬೇಕಾಗಿರುತ್ತದೆ. ಶಾಸನಬದ್ಧ ಲೆಕ್ಕಪರಿಶೋಧಕರ ಆಕ್ಷೇಪಣೆಗಳ ಸಂಬಂಧದ ಉತ್ತರಗಳನ್ನು ಲಗತ್ತಿಸಲಾಗಿದೆ.

### 12. ಸೆಕ್ರೆಟೇರಿಯಲ್ ಲೆಕ್ಕಪರಿಶೋಧನಾ ವರದಿ:

ಕಾಯ್ದೆಯ ಪ್ರಕರಣ 204 ಮತ್ತು ಇದರಡಿಯಲ್ಲಿ ರೂಪಿಸಿರುವ ನಿಯಮಗಳ ಅನ್ವಯ ಶ್ರೀ ಎಸ್.ಕೇದಾರ್‌ನಾಥ್, ಕಾರ್ಯನಿರತ ಕಂಪನಿ ಕಾರ್ಯದರ್ಶಿ ಇವರು ಸೆಕ್ರೆಟೇರಿಯಲ್ ಲೆಕ್ಕ ಪರಿಶೋಧಕರಾಗಿ 31ನೇ ಮಾರ್ಚ್ 2019ಕ್ಕೆ ಕೊನೆಗೊಂಡ ವರ್ಷದ ಬಗ್ಗೆ ತಮ್ಮ ವರದಿಯನ್ನು ಸಲ್ಲಿಸಿದ್ದಾರೆ.

ಸೆಕ್ರೆಟೇರಿಯಲ್ ಲೆಕ್ಕಪರಿಶೋಧಕರ ವರದಿಯನ್ನು ಸದರಿ ವರದಿಗೆ ಅನುಬಂಧ-IV ಆಗಿ ಲಗತ್ತಿಸಲಾಗಿದೆ. ವರದಿಯು ಸ್ವಯಂ ವಿವರಣಾತ್ಮಕ ವಾಗಿದ್ದು, ಮುಂದಿನ ಯಾವುದೇ ಟೀಕೆಗಳಿಗೆ ಅವಕಾಶವಿರುವುದಿಲ್ಲ.

### 13. ಆಂತರಿಕ ಲೆಕ್ಕಪರಿಶೋಧನೆ ಮತ್ತು ನಿಯಂತ್ರಣಗಳು:

ಕಂಪನಿಯು ಆಂತರಿಕ ಲೆಕ್ಕಪರಿಶೋಧಕರನ್ನು ನೇಮಕ ಮಾಡುವ ಪ್ರಕ್ರಿಯೆಯನ್ನು ಮುಂದುವರಿಸುವುದು. ಆಂತರಿಕ ಲೆಕ್ಕಪರಿಶೋಧಕರ ಕಾರ್ಯವ್ಯಾಪ್ತಿ ಮತ್ತು ಉದ್ದೇಶವು ವ್ಯವಹಾರಗಳ ಲೆಕ್ಕಪರಿಶೋಧನೆ ಮತ್ತು ಪುನರ್ ಅವಲೋಕನವನ್ನು ಒಳಗೊಂಡಿರುವುದು. ಆಂತರಿಕ ಲೆಕ್ಕಪರಿಶೋಧಕರು ತಮ್ಮ ವರದಿಯನ್ನು ಕಂಪನಿಯ ಟಿಪ್ಪಣಿಗಳ ಜೊತೆಗೆ ಕಂಪನಿಗೆ ಸಲ್ಲಿಸುವರು. ಸದರಿ ವರದಿಯನ್ನು ಕಾರ್ಯಾಚರಣೆಗಳ ಸಾಮರ್ಥ್ಯಗಳನ್ನು ಸುಧಾರಿಸಲು ಚಲನಾತ್ಮಕ ಆಧಾರದ ಮೇಲೆ ಲೆಕ್ಕಪರಿಶೋಧನಾ ಸಮಿತಿ ಮುಂದೆ ಇರಿಸಲಾಗುವುದು.

### 14. ಆಪತ್ತು / ಅಪಾಯ ನಿರ್ವಹಣಾ ನೀತಿ

ಕಂಪನಿಯು ಎಲ್ಲಾ ಕಾರ್ಯಾಚರಣೆ ವಿಭಾಗಗಳ ಆಪತ್ತಿನ ಅಂಶಗಳನ್ನು ಗುರುತಿಸಿದೆ ಮತ್ತು ಪ್ರತಿಯೊಂದು ಆಪತ್ತಿನ ಉಪಶಮನ ಉಪಾಯವನ್ನು ಕಂಡುಕೊಂಡಿದೆ.

### 15. ವಾರ್ಷಿಕ ರಿಟರ್ನ್‌ನ ಸಾರಾಂಶ:

ಕಂಪನಿಗಳ ಕಾಯ್ದೆ, 2013ರ ಪ್ರಕರಣ 92(3) ಮತ್ತು ಕಂಪನಿಗಳ (ಆಡಳಿತ ವರ್ಗ ಮತ್ತು ಆಡಳಿತ) ನಿಯಮಗಳು 2014ರ ನಿಯಮ 12(1)ರ ಅನುಸಾರ ಅಗತ್ಯವಾದಂತೆ, ಸದರಿ ವಾರ್ಷಿಕ ವರದಿಯ ಒಂದು ಭಾಗವಾಗಿ ಎಂಜಿಟಿ 9 ರಲ್ಲಿ ವಾರ್ಷಿಕ ರಿಟರ್ನ್‌ನ ಸಾರಾಂಶವನ್ನು ಅನುಬಂಧ-1 ಆಗಿ ಲಗತ್ತಿಸಿದೆ.

### 16. ಹಣಕಾಸಿನ ವಿವರಗಳು ಸಂಬಂಧಪಟ್ಟಿರುವ ಕಂಪನಿಯ ಹಣಕಾಸಿನ ವರ್ಷದ ಕೊನೆ ಮತ್ತು ವರದಿಯ ದಿನಾಂಕದ ನಡುವೆ ಉಂಟಾಗಿರುವ, ಕಂಪನಿಯ ಹಣಕಾಸಿನ ಪರಿಸ್ಥಿತಿಯ ಮೇಲೆ ಪರಿಣಾಮ ಉಂಟು ಮಾಡಬಹುದಾದ ಭೌತಿಕ ಬದಲಾವಣೆಗಳು ಮತ್ತು ಬದ್ಧತೆಗಳು

ಬಾಕಿ ಸ್ಥಿತಿ ವಿವರಣಾ ಪಟ್ಟಿಗಳು ಸಂಬಂಧಪಟ್ಟಿರುವ ಕಂಪನಿಯ ಹಣಕಾಸಿನ ವರ್ಷ ಮುಕ್ತಾಯದ ತರುವಾಯ ಮತ್ತು ತೆರಿಗೆ ಹೊಣೆಗಾರಿಕೆ ಇತ್ಯರ್ಥ,

ಪೇಟೆಂಟ್ ಹಕ್ಕುಗಳ ಕಾರ್ಯಾಚರಣೆ, ಹೂಡಿಕೆಗಳ ಮಾರುಕಟ್ಟೆ ಮೌಲ್ಯದಲ್ಲಿ ಕುಸಿತ, ಕಂಪನಿಯಿಂದ ಅಥವಾ ಕಂಪನಿಯ ಮೇಲೆ ಹೂಡಿರುವ ದಾವೆಗಳು, ಬಂಡವಾಳ ಸ್ವತ್ತುಗಳ ಮಾರಾಟ ಅಥವಾ ಖರೀದಿ ಅಥವಾ ಯಾವುದೇ ಆಸ್ತಿಗಳ ನಾಶ ಇತ್ಯಾದಿ ವರದಿಯ ದಿನಾಂಕದಲ್ಲಿ ಯಾವುದೇ ಅಂತಹ ಭೌತಿಕ ಬದಲಾವಣೆಗಳಿರುವುದಿಲ್ಲ.

**17. ಕಂಪನಿಯ ಹಾಲಿ ಪ್ರಗತಿಯ ಸ್ಥಿತಿಗತಿ ಮೇಲೆ ಮತ್ತು ಕಂಪನಿಯ ಭವಿಷ್ಯದ ಕಾರ್ಯಾಚರಣೆಗಳ ಮೇಲೆ ಪರಿಣಾಮವನ್ನುಂಟು ಮಾಡುವ ದಿಸೆಯಲ್ಲಿ ನಿಯಂತ್ರಕರು ಅಥವಾ ನ್ಯಾಯಾಲಯಗಳು ಅಥವಾ ನ್ಯಾಯಾಧೀಕರಣ ಗಳಿಂದ ಹೊರಡಿಸಿರುವ ಮಹತ್ವಪೂರ್ಣವಾದ ಮತ್ತು ಭೌತಿಕ ಆದೇಶಗಳ ವಿವರಗಳು:**

ಚಾಲ್ತಿ ಸಂಸ್ಥೆಯ ಸ್ಥಿತಿಗತಿಗಳ ಮೇಲೆ ಮತ್ತು ಕಂಪನಿಯ ಭವಿಷ್ಯದ ಕಾರ್ಯಾಚರಣೆಗಳ ಮೇಲೆ ಪರಿಣಾಮ ಉಂಟು ಮಾಡುವ ಯಾವುದೇ ಅಂತಹ ಆದೇಶಗಳನ್ನು ಹೊರಡಿಸಿರುವುದಿಲ್ಲ.

**18. ಠೇವಣಿಗಳು**

ಪರಾಮರ್ಶನೆಯಲ್ಲಿರುವ ವರ್ಷದಲ್ಲಿ ಕಂಪನಿಯು ಕಂಪನಿಗಳ ಕಾಯ್ದೆ, 2013ರ ಪರಿಚ್ಛೇದ-v ರಡಿ ಸಾರ್ವಜನಿಕರಿಂದ ಯಾವುದೇ ಠೇವಣಿಗಳನ್ನು ಅಂಗೀಕರಿಸಿರುವುದಿಲ್ಲ.

**19. ಸಂಬಂಧಪಟ್ಟ ವ್ಯಕ್ತಿ/ಸಂಸ್ಥೆ ವ್ಯವಹಾರಗಳು:**

ಪರಾಮರ್ಶನೆಯಲ್ಲಿರುವ ವರ್ಷದ ಅವಧಿಯಲ್ಲಿ ಕಂಪನಿಗಳ ಕಾಯ್ದೆ, 2013ರ ಪ್ರಕರಣ 188ರ ಉಪಬಂಧಗಳ ಅನುಸಾರ ಕಂಪನಿಯು ಯಾವುದೇ ಗುತ್ತಿಗೆ ಅಥವಾ ವ್ಯವಸ್ಥೆಗಳನ್ನು ಮಾಡಿಕೊಂಡಿರುವುದಿಲ್ಲ.

**20. ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ (ನಿಯಂತ್ರಣ, ನಿಷೇಧ ಮತ್ತು ಪರಿಹಾರ) ಕಾಯ್ದೆ-2013ರ ಅನ್ವಯ ಕಂಪನಿಯ ಬಾಧ್ಯತೆಗಳು**

ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ನಿಯಂತ್ರಿಸಲು, ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ (ನಿಯಂತ್ರಣ, ನಿಷೇಧ ಮತ್ತು ಪರಿಹಾರ) 2013ರ ಹೊಸ ಕಾಯ್ದೆಯನ್ನು 09.12.2013 ರಂದು ಸೂಚಿಸಲಾಗಿದೆ. ಈ ಕಾಯ್ದೆಯ ಪ್ರಕಾರ ಯಾವುದೇ ಮಹಿಳಾ ಉದ್ಯೋಗಿಗಳು ಕೆಲಸದ ಸಂದರ್ಭದಲ್ಲಿ ತಮ್ಮ ಮೇಲೆ ಆದ ದೌರ್ಜನ್ಯಗಳ ಕುರಿತಂತೆ ಸಲ್ಲಿಸಿದ ದೂರುಗಳನ್ನು ವಿಚಾರಿಸಲು ಪ್ರತಿಯೊಂದು ಕಂಪನಿಯು ಆಂತರಿಕ ದೂರುಗಳ ವಿಚಾರಣೆ ಸಮಿತಿಯನ್ನು ಸ್ಥಾಪಿಸಬೇಕಾಗುವುದು.

ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲೆ ನಡೆಯುವ ಲೈಂಗಿಕ ದೌರ್ಜನ್ಯ ತಡೆಯುವ ನೀತಿಯನ್ನು ಕಂಪನಿ ಅಳವಡಿಸಿಕೊಂಡಿದೆ. ಸದರಿ ವರ್ಷದಲ್ಲಿ ಕಂಪನಿಗೆ ಲೈಂಗಿಕ ದೌರ್ಜನ್ಯದ ಬಗ್ಗೆ ಯಾವುದೇ ದೂರುಗಳು ಬಂದಿರುವುದಿಲ್ಲ.

**21. ಇಂಧನ ಸಂರಕ್ಷಣೆ, ತಂತ್ರಜ್ಞಾನ ಅಳವಡಿಕೆ ಮತ್ತು ವಿದೇಶಿ ವಿನಿಮಯ ಗಳಿಕೆ ಮತ್ತು ಹೊರ ಹರಿವು:**

ಇಂಧನ ಸಂರಕ್ಷಣೆ, ತಂತ್ರಜ್ಞಾನ ಅಳವಡಿಕೆ ಮತ್ತು ವಿದೇಶಿ ವಿನಿಮಯ ಗಳಿಕೆ ಮತ್ತು ಹೊರ ಹರಿವಿನ ವಿವರಗಳು ಕೆಳಕಂಡಂತಿರುವುದು:

**(ಎ) ಇಂಧನ ಸಂರಕ್ಷಣೆ**

ಕಂಪನಿಯು ಪ್ರಮುಖವಾಗಿ ವ್ಯಾಪಾರ ಸಂಸ್ಥೆಯಾಗಿರುವುದು. ಇದು ಕಚೇರಿ ಉಪಯೋಗಕ್ಕೆ ಮಾತ್ರ ವಿದ್ಯುತ್ ಬಳಕೆ ಮಾಡುವುದು. ವಿದ್ಯುತ್ ಸಂರಕ್ಷಿಸಲು ಮತ್ತು ವಿದ್ಯುತ್ ಬಳಕೆಯನ್ನು ಕನಿಷ್ಠಗೊಳಿಸಲು ಕಂಪನಿಯ ನೋಂದಾಯಿತ ಕಚೇರಿಯಲ್ಲಿ 15 ಕೆಡಬ್ಲ್ಯೂಪಿ ಆನ್ ಗ್ರಿಡ್ ರೂಫ್ ಟಾಪ್ ಸೋಲಾರ್ ಪವರ್ ಪ್ಲಾಂಟ್ (ಸೌರಶಕ್ತಿ ವಿದ್ಯುತ್ ಸ್ಥಾವರ) ಅಳವಡಿಸಿದೆ.

**(ಬಿ) ತಂತ್ರಜ್ಞಾನ ಅಳವಡಿಕೆ:**

ಕಂಪನಿಯು ವ್ಯಾಪಾರ ನಡೆಸುವ ಕಂಪನಿಯಾಗಿರುವುದರಿಂದ ಯಾವುದೇ ಸಮಯದಲ್ಲೂ ಯಾರಿಂದಲೂ ಯಾವುದೇ ತಂತ್ರಜ್ಞಾನ ಪಡೆದು ಕೊಂಡಿರುವುದಿಲ್ಲ.

**(ಸಿ) ವಿದೇಶಿ ವಿನಿಮಯ ಗಳಿಕೆ ಮತ್ತು ಹೊರ ಹರಿವು:**

ವಿದೇಶಿ ವಿನಿಮಯ ಗಳಿಕೆ:ರೂ.20,19,017/-(ಹಿಂದಿನ ವರ್ಷ ರೂ.3,15,631/-)

ವಿದೇಶಿ ವಿನಿಮಯ ಹೊರ ಹರಿವು: ಇಲ್ಲ (ಹಿಂದಿನ ವರ್ಷ-ಇಲ್ಲ)

**22. ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ (ಸಿಎಸ್ಆರ್)**

ಕಂಪನಿಗಳ ಕಾಯ್ದೆ, 2013ರ ಪ್ರಕರಣ 135ರ ಅನ್ವಯ ಅನ್ವಯವಾಗುವ ಮಾನದಂಡಗಳನ್ನು ಪರಿಪಾಲಿಸುವ ಒಂದು ಕಂಪನಿಯು, ತಕ್ಷಣದ ಹಿಂದಿನ ಮೂರು ಹಣಕಾಸಿನ ವರ್ಷಗಳ ಸರಾಸರಿ ನಿವ್ವಳ ಲಾಭದ ಕನಿಷ್ಠ 2% ಹಣವನ್ನು ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ (ಸಿಎಸ್ಆರ್) ಚಟುವಟಿಕೆಗಳಿಗೆ ಖರ್ಚು ಮಾಡಬೇಕಾಗುತ್ತದೆ. ಸಿಎಸ್ಆರ್ ಚಟುವಟಿಕೆಗಳ ಕ್ಷೇತ್ರಗಳು-ಶಿಕ್ಷಣ ಪ್ರವರ್ಧನೆ ಮತ್ತು ಆರೋಗ್ಯ ರಕ್ಷಣೆ. ಕಂಪನಿಯು ಕಾಯ್ದೆಯ ಪ್ರಕಾರ ಸಿಎಸ್‌ಟಿ ಸಮಿತಿಯನ್ನು ರಚಿಸಿದೆ. ಇದಕ್ಕೆ ಮೀಸಲಿರಿಸಿರುವ ಹಣವನ್ನು ಕಂಪನಿಗಳ ಕಾಯ್ದೆ 2013ರ ಷೆಡ್ಯೂಲ್-VIIರಲ್ಲಿ ವಿವರಿಸಿರುವ ಚಟುವಟಿಕೆಗಳಿಗೆ ಬಳಸಲಾಗಿದೆ. ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಕುರಿತಂತೆ ಪ್ರಕರಣ 135(4)ರ ಪ್ರಕಾರ ಪ್ರಸಕ್ತ ಸಾಲಿನಲ್ಲಿ ಕೈಗೊಂಡ ಚಟುವಟಿಕೆಗಳ ವಿವರಗಳನ್ನು ಅನುಬಂಧ-2ರಲ್ಲಿ ನಮೂದಿಸಿ ಲಗತ್ತಿಸಿದೆ.

**23. ಮಾನವ ಸಂಪನ್ಮೂಲಗಳು:**

ನಿಮ್ಮ ಕಂಪನಿಯು ತನ್ನ ''ಮಾನವ ಸಂಪನ್ಮೂಲಗಳನ್ನು'' ಅತ್ಯಮೂಲ್ಯವಾದ ಆಸ್ತಿಗಳಲ್ಲಿ ಒಂದು ಎಂಬುದಾಗಿ ಪರಿಗಣಿಸಿದೆ.

ನಿಮ್ಮ ಕಂಪನಿಯು ನೌಕರರುಗಳಿಗೆ ತರಬೇತಿ ನೀಡುವ ಮತ್ತು ಅವರನ್ನು ವಿಕಾಸಗೊಳಿಸುವುದಕ್ಕೆ ಒತ್ತು ನೀಡುವ ಕ್ರಮವನ್ನು ಮುಂದುವರಿಸುತ್ತಿದೆ. 2018-19ರ ಸಾಲಿನಲ್ಲಿ ನೌಕರರ ಕಾರ್ಯದಕ್ಷತೆಯನ್ನು ಹೆಚ್ಚಿಸಲು 42

MSIL

ಜನ ನೌಕರರಿಗೆ (ಎಕ್ಸಿಕ್ಯುಟಿವ್‌ಗಳು/ಅಧಿಕಾರಿಗಳು ಮತ್ತು ಸಿಬ್ಬಂದಿ) ತರಬೇತಿ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಮುಂದಿನ ದಿನಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ತರಬೇತಿ ಕಾರ್ಯಕ್ರಮ ನಡೆಸಲು ಕಂಪನಿ ಯೋಜಿಸಿದೆ.

2018-19ರ ಅವಧಿಯಲ್ಲಿ (31ನೇ ಮಾರ್ಚ್ 2019ರವರೆಗೆ) ನಿಮ್ಮ ಕಂಪನಿಯಲ್ಲಿ 166 ನೌಕರರಿದ್ದರು. (ಎಕ್ಸಿಕ್ಯುಟಿವ್‌ಗಳು/ಅಧಿಕಾರಿಗಳು 28ಮತ್ತು ಸಿಬ್ಬಂದಿಗಳು 138). ಇವರಲ್ಲಿ 08 ನೌಕರರುಗಳನ್ನು (02 ಅಧಿಕಾರಿಗಳು ಮತ್ತು 06 ನೌಕರರು) ಕರ್ನಾಟಕ ಪಾನೀಯ ನಿಗಮ ನಿಯಮಿತಕ್ಕೆ ನಿಯೋಜನೆ ಮಾಡಿರುವುದನ್ನು ಮುಂದುವರಿಸಲಾಗಿದೆ ಮತ್ತು ಒಬ್ಬ ಅಧಿಕಾರಿಯನ್ನು ಪಿಡಬ್ಲ್ಯೂಡಿಗೆ ನಿಯೋಜಿಸಲಾಗಿದೆ.

### 24. ಯೋಜನೆ/ಎಸ್ಟೇಟ್ ಇಲಾಖೆ:

ಕಂಪನಿಯು ಈಗಾಗಲೇ ಕಚೇರಿ ಹಾಗೂ ಉಗ್ರಾಣ ಮೂಲ ಸೌಲಭ್ಯ ವಲಯಕ್ಕೆ ಅಡಿಯಿಟ್ಟಿದೆ. ಮೈಸೂರಿನಲ್ಲಿನ ಉಗ್ರಾಣ ಸಂಕೀರ್ಣ ಮತ್ತು ಕಚೇರಿ ಸ್ಥಳಾವಕಾಶದಿಂದ ಆದಾಯ ಗಳಿಕೆಯಾಗುತ್ತಿದೆ. ಮಂಗಳೂರಿನ ಬೈಕಂಪಾಡಿಯಲ್ಲಿನ ಉಗ್ರಾಣ ಸಂಕೀರ್ಣವನ್ನು ಬಾಡಿಗೆಗೆ ನೀಡಿದ್ದು, ಅದರಿಂದ ಆದಾಯ ಬರುತ್ತಿದೆ. ಕಂಪನಿಯು ಕಲಬುರಗಿಯ ಕಪನೂರಿನಲ್ಲಿ ಕೆಐಎಡಿಬಿ ಹಂಚಿಕೆ ಮಾಡಿರುವ 1 ಎಕರೆ ಜಮೀನಿನಲ್ಲಿ ಉಗ್ರಾಣ ನಿರ್ಮಿಸುವುದನ್ನು ಕೈಗೆತ್ತಿಕೊಂಡಿದೆ. ಈ ದಿಶೆಯಲ್ಲಿ ಗುತ್ತಿಗೆದಾರರನ್ನು ಇ-ಟೆಂಡರ್ ಮೂಲಕ ಅಂತಿಮಗೊಳಿಸಿದೆ. ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡಿದ ದಿನಾಂಕದಿಂದ 14 ತಿಂಗಳಲ್ಲಿ ಯೋಜನೆ ಪೂರ್ಣಗೊಳ್ಳಲಿದೆ. ಈ ಎಲ್ಲಾ ಯೋಜನೆಗಳಿಂದ ಮುಂಬರುವ ವರ್ಷಗಳಲ್ಲಿ ಕಂಪನಿಗೆ ಹೆಚ್ಚುವರಿ ಆದಾಯ ಉಂಟಾಗಲಿರುವುದು.

ನವಿ ಮುಂಬಯಿಯ ವಷಿಯಲ್ಲಿ ಕರ್ನಾಟಕ ಭವನ ನಿರ್ಮಾಣ ಪೂರ್ಣಗೊಂಡಿದೆ. ಈ ಕಟ್ಟಡವನ್ನು ಡಿಸೆಂಬರ್, 2017 ರಲ್ಲಿ ಉದ್ಘಾಟನೆ ಮಾಡಲಾಗಿದೆ. ಅತಿಥಿಗೃಹದ ಕಾರ್ಯಾಚರಣೆ ಮತ್ತು ನಿರ್ವಹಣೆಗಾಗಿ ಸ್ಥಾಪಿತ ವಿಧಾನದ ಮೂಲಕ ಏಜೆನ್ಸಿ ಆಯ್ಕೆ ಪ್ರಕ್ರಿಯೆಯಲ್ಲಿ ಕಂಪನಿ ತೊಡಗಿದೆ. ಏಜೆನ್ಸಿಗೆ ಅತಿಥಿಗೃಹವನ್ನು ಬಾಡಿಗೆಗೆ ನೀಡಿದ ತರುವಾಯ ಸದರಿ ಭವನದಿಂದ ಕಂಪನಿಗೆ ಇನ್ನೂ ಹೆಚ್ಚು ಆದಾಯ ಬರುವುದು.

### 25. ನಿರ್ದೇಶಕರ ಹೊಣೆಗಾರಿಕೆ ವಿವರ:

ತಮ್ಮ ತಿಳುವಳಿಕೆ ಮತ್ತು ನಂಬಿಕೆಯಂತೆ ಮತ್ತು ಅವರು ಪಡೆದುಕೊಂಡಿರುವ ಮಾಹಿತಿ ಮತ್ತು ವಿವರಣೆಯ ಅನುಸಾರ ಕಂಪನಿಗಳ ಕಾಯ್ದೆ, 2013ರ ಪ್ರಕರಣ 134ರ ಉಪ-ಪ್ರಕರಣ (3)ರ ಕಲಂ (ಸಿ) ಅನ್ವಯ ನಿಮ್ಮ ನಿರ್ದೇಶಕರು ಈ ಕೆಳಕಂಡ ವಿವರಗಳನ್ನು ನೀಡುವರು, ಅವುಗಳೆಂದರೆ:-

(ಎ) 31ನೇ ಮಾರ್ಚ್ 2019ಕ್ಕೆ ಕೊನೆಗೊಂಡ ಹಣಕಾಸಿನ ವರ್ಷದ ವಾರ್ಷಿಕ ಲೆಕ್ಕಪತ್ರಗಳನ್ನು ಸಿದ್ಧಪಡಿಸುವುದರಲ್ಲಿ ಸಾಮಗ್ರಿ ನಿರ್ಗಮನಕ್ಕೆ ಸಂಬಂಧಿಸಿದಂತೆ ಸೂಕ್ತ ವಿವರಣೆಗಳ ಜೊತೆಗೆ ಅನ್ವಯವಾಗುವ ಲೆಕ್ಕಪತ್ರಗಳ ಮಾನದಂಡಗಳನ್ನು ಅನುಸರಿಸಲಾಗಿದೆ;

(ಬಿ) ನಿರ್ದೇಶಕರು ಅಂತಹ ಲೆಕ್ಕ ನಿರ್ವಹಣೆ ನೀತಿಗಳನ್ನು ಆಯ್ಕೆ ಮಾಡಿದ್ದು, ಅವುಗಳನ್ನು ನಿರಂತರವಾಗಿ ಅನ್ವಯಿಸಿದ್ದಾರೆ ಮತ್ತು 31ನೇ ಮಾರ್ಚ್ 2019ರಂದು ಇದ್ದಂತೆ ಕಂಪನಿಯ ವ್ಯವಹಾರಗಳ ಸ್ಥಿತಿಗತಿಯ ಬಗ್ಗೆ ಮತ್ತು ಸದರಿ ಅವಧಿಯಲ್ಲಿನ ಕಂಪನಿಯ ಲಾಭ ಮತ್ತು ನಷ್ಟದ ನೈಜ ಮತ್ತು ನ್ಯಾಯೋಚಿತ ಚಿತ್ರಣ ನೀಡಲು ಸೂಕ್ತವಾದ ಹಾಗೂ ಯುಕ್ತವಾದ ತೀರ್ಮಾನಗಳು ಮತ್ತು ಅಂದಾಜುಗಳನ್ನು ಮಾಡಿರುವರು;

(ಸಿ) ಕಂಪನಿಯ ಆಸ್ತಿಗಳನ್ನು ಸಂರಕ್ಷಿಸಲು ಮತ್ತು ವಂಚನೆ ಮತ್ತು ಇತರೆ ಅಕ್ರಮಗಳನ್ನು ತಡೆಯಲು ಮತ್ತು ಪತ್ತೆ ಹಚ್ಚಲು ಸದರಿ ಕಾಯ್ದೆಯ ಉಪಬಂಧಗಳ ಅನುಸಾರ ಸಾಕಷ್ಟು ಲೆಕ್ಕಪತ್ರಗಳ ದಾಖಲೆಗಳ ನಿರ್ವಹಣೆಗೆ ನಿರ್ದೇಶಕರು ಸೂಕ್ತವಾದ ಮತ್ತು ಸಮಗ್ರವಾದ ಮುತುವರ್ಜಿ ವಹಿಸಿದ್ದಾರೆ;

(ಡಿ) ನಿರ್ದೇಶಕರು 31ನೇ ಮಾರ್ಚ್ 2019ಕ್ಕೆ ಕೊನೆಗೊಂಡ ಹಣಕಾಸಿನ ವರ್ಷದ ವಾರ್ಷಿಕ ಲೆಕ್ಕಪತ್ರವನ್ನು ಪ್ರಗತಿಯಲ್ಲಿರುವ ಸಂಸ್ಥೆಯ ಆಧಾರದ ಮೇಲೆ ಸಿದ್ದಪಡಿಸಿದ್ದಾರೆ; ಮತ್ತು

(ಇ) ಅನ್ವಯವಾಗುವ ಎಲ್ಲಾ ಕಾನೂನುಗಳ ಉಪಬಂಧಗಳನ್ನು ಅನುಸರಿಸಿರುವುದನ್ನು ಖಾತರಿಪಡಿಸಲು ನಿರ್ದೇಶಕರು ಸೂಕ್ತವಾದ ವ್ಯವಸ್ಥೆಯನ್ನು ರೂಪಿಸಿರುವರು ಮತ್ತು ಆ ವ್ಯವಸ್ಥೆಗಳು ಸಾಕಷ್ಟು ಪ್ರಮಾಣದಲ್ಲಿದ್ದು, ಸಮರ್ಥವಾಗಿ ಕಾರ್ಯಾಚರಣೆಯಾಗುತ್ತಿವೆ.

### 26. ಹೂಡಿಕೆದಾರರ ಶಿಕ್ಷಣ ಮತ್ತು ರಕ್ಷಣಾ ನಿಧಿಗೆ ಹಣದ ವರ್ಗಾವಣೆ:

ನಿಮ್ಮ ಕಂಪನಿಯು ಕಳೆದ ಏಳು ವರ್ಷಗಳ ಅವಧಿಯಲ್ಲಿ ಪಾವತಿಯಾಗದೆ ಅಥವಾ ಕೇಳುವುವವರಿಲ್ಲದೆ ಹಾಗೆಯೇ ಉಳಿದಿರುವ ಯಾವುದೇ ಹಣವನ್ನು ಹೊಂದಿರುವುದಿಲ್ಲ. ಆದ್ದರಿಂದಾಗಿ, ಹೂಡಿಕೆದಾರರ ಶಿಕ್ಷಣಕ್ಕೆ ಮತ್ತು ರಕ್ಷಣೆ ನಿಧಿಗೆ (ಐಇಪಿಎಫ್) ವರ್ಗಾಯಿಸಬೇಕಾದ ಯಾವುದೇ ನಿಧಿ ಇರುವುದಿಲ್ಲ.

### 27. ಕೃತಜ್ಞತೆಗಳು

ಕಂಪನಿಗೆ ಆಭರ್ಣ ಅಂಡ್ ಅನಂತನ್ ಅಮೂಲ್ಯವಾದ ನೆರವು ಮತ್ತು ಬೆಂಬಲ ನೀಡಿದ್ದಕ್ಕಾಗಿ ಕರ್ನಾಟಕ ಸರ್ಕಾರಕ್ಕೆ, ಅದರಲ್ಲೂ ವಿಶೇಷವಾಗಿ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ಹಣಕಾಸು ಇಲಾಖೆ, ಮೆ॥ ಕರ್ನಾಟಕ ರಾಜ್ಯ ಕೈಗಾರಿಕಾ ಮೂಲಸೌಲಭ್ಯ ಮತ್ತು ಅಭಿವೃದ್ಧಿ ನಿಗಮ ನಿಯಮಿತ, ಮುಖ್ಯಸ್ಥರುಗಳು, ಸರಬರಾಜುದಾರರು, ಬ್ಯಾಂಕರುಗಳು, ಗ್ರಾಹಕರುಗಳಿಗೆ ಹಾಗೂ ವಿಸ್ತೃತವಾಗಿ ಸಮಾಜಕ್ಕೆ ಈ ಸಂದರ್ಭದಲ್ಲಿ ನಿಮ್ಮ ನಿರ್ದೇಶಕರು ಹೃತ್ಪೂರ್ವಕ ಕೃತಜ್ಞತೆಗಳು ಮತ್ತು ಧನ್ಯವಾದಗಳನ್ನು ಸಲ್ಲಿಸುವರು. ಕಂಪನಿಯ ಗುಣಮಟ್ಟ ನೀತಿಯ ಬಗ್ಗೆ ಗ್ರಾಹಕರುಗಳ ಸಂಪೂರ್ಣ ತೃಪ್ತಿ ಸಾಧಿಸಲು ಸಮಸ್ತ ಸಾರ್ವಜನಿಕರಿಗೆ ತಿಳುವಳಿಕೆ ಮೂಡಿಸಿದ ಸ್ತುತ್ಯಾರ್ಹ ಕಾರ್ಯಕ್ಕಾಗಿ ನಿರ್ದೇಶಕರು ಮಾಧ್ಯಮಗಳಿಗೂ ಕೃತಜ್ಞತೆ ಸಲ್ಲಿಸುವರು.

ಕಂಪನಿಗೆ ನೆರವು ಮತ್ತು ಸಹಕಾರ ನೀಡಿದಕ್ಕಾಗಿ ಭಾರತದ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು, ಪ್ರಧಾನ ಮಹಾಲೇಖಪಾಲರು (ಸಿವಿಲ್ ಮತ್ತು ವಾಣಿಜ್ಯ ಲೆಕ್ಕಪರಿಶೋಧನೆ), ಕರ್ನಾಟಕ ಇವರಿಗೆ ಮತ್ತು

ಆಭರ್ಣ ಅಂಡ್ ಅನಂತನ್ ಶಾಸನಬದ್ಧ ಲೆಕ್ಕಪರಿಶೋಧಕರು ಮತ್ತು ಚಾರ್ಟರ್ಡ್ ಅಕೌಂಟೆಂಟ್ಸ್, ಸೆಕ್ರೆಟೇರಿಯಲ್ ಲೆಕ್ಕಪರಿಶೋಧಕರು, ಆಂತರಿಕ ಲೆಕ್ಕಪರಿಶೋಧಕರಿಗೂ ನಿಮ್ಮ ನಿರ್ದೇಶಕರು ಕೃತಜ್ಞತಾ ಪೂರ್ವಕ ವಂದನೆಗಳನ್ನು ಸಲ್ಲಿಸುವರು.

ಕಂಪನಿಯ ಎಲ್ಲಾ ಮಟ್ಟದ ನೌಕರರು ಕಂಪನಿಯ ಪ್ರಗತಿಗೆ ಸಲ್ಲಿಸಿರುವ ಕೊಡುಗೆಯನ್ನು ನಿಮ್ಮ ನಿರ್ದೇಶಕರು ಸ್ಮರಿಸುವರು.

**ನಿರ್ದೇಶಕರ ಮಂಡಳಿಯ**
**ಪರವಾಗಿ ಮತ್ತು ಹೆಸರಿನಲ್ಲಿ**
**ಸಹಿ/-**
**(ಗೌರವ್‌ಗುಪ್ತ , ಭಾ.ಆ.ಸೇ)**
**ಅಧ್ಯಕ್ಷರು**

ಸ್ಥಳ : ಬೆಂಗಳೂರು
ದಿನಾಂಕ:16ನೇ ಸೆಪ್ಟೆಂಬರ್ 2019

MSIL

## ಅನುಬಂಧ-1

## ಫಾರಂ ನಂ. ಎಂಜಿಟಿ 9

## ವಾರ್ಷಿಕ ರಿಟರ್ನ್‌ನ ಸಾರಾಂಶ

## 31.03.2019ಕ್ಕೆ ಕೊನೆಗೊಂಡ ಹಣಕಾಸಿನ ವರ್ಷದಲ್ಲಿದ್ದಂತೆ

## ಕಂಪನಿಗಳ ಕಾಯ್ದೆ, 2013ರ ಪ್ರಕರಣ 92(3) ಮತ್ತು ಕಂಪನಿ (ಆಡಳಿತ ವರ್ಗ ಮತ್ತು ಆಡಳಿತ) ನಿಯಮಗಳು, 2014ರ ನಿಯಮ 12(1)ರ ಅನ್ವಯ

### I. ನೋಂದಣಿ ಮತ್ತು ಇತರೆ ವಿವರಗಳು :

| | | |
|---|---|---|
| 1. | ಸಿಐಎನ್ | U85110KA1966SGC001612 |
| 2. | ನೋಂದಣಿ ದಿನಾಂಕ | 17.3.1966 |
| 3. | ಕಂಪನಿಯ ಹೆಸರು | ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ |
| 4. | ಕಂಪನಿಯ ಪ್ರವರ್ಗ/ಉಪ ಪ್ರವರ್ಗ | ಷೇರುಗಳಿಂದ ಕಂಪನಿ ನಿಯಮಿತವಾಗಿದೆ/ರಾಜ್ಯ ಸರ್ಕಾರದ ಕಂಪನಿ |
| 5. | ನೋಂದಾಯಿತ ಕಚೇರಿ ವಿಳಾಸ ಮತ್ತು ಸಂಪರ್ಕ ವಿವರಗಳು | ''ಎಂಎಸ್‌ಐಎಲ್ ಹೌಸ್'', ನಂ.36, ಕನ್ನಿಂಗ್‌ಹ್ಯಾಮ್ ರಸ್ತೆ , ಬೆಂಗಳೂರು - 560 052. ದೂ. ಸಂಖ್ಯೆ : 080-22264021-26 |
| 6. | ಪಟ್ಟಿಯಲ್ಲಿ ಸೇರ್ಪಡೆಯಾಗಿರುವ ಕಂಪನಿಯೇ? | ಪಟ್ಟಿಯಲ್ಲಿ ಹೆಸರು ಸೇರ್ಪಡೆಯಾಗಿಲ್ಲ |
| 7. | ಇದ್ದಲ್ಲಿ ರಿಜಿಸ್ಟ್ರಾರ್ ಮತ್ತು ಟ್ರಾನ್ಸ್‌ಫರ್ ಏಜೆಂಟ್‌ರ ಹೆಸರು, ವಿಳಾಸ ಮತ್ತು ಸಂಪರ್ಕ ವಿವರಗಳು | ಅನ್ವಯಿಸುವುದಿಲ್ಲ |

### II. ಕಂಪನಿಯ ಪ್ರಮುಖ ವ್ಯವಹಾರದ ಚಟುವಟಿಕೆಗಳು (ಕಂಪನಿಯ ಒಟ್ಟು ವಹಿವಾಟಿನ ಶೇ.10 ಅಥವಾ ಅದಕ್ಕೂ ಅಧಿಕ ಕೊಡುಗೆ ನೀಡುತ್ತಿರುವ ಎಲ್ಲಾ ವ್ಯವಹಾರಗಳನ್ನು ತಿಳಿಸತಕ್ಕದ್ದು)

| ಕ್ರ. ಸಂ. | ಪ್ರಮುಖ ಉತ್ಪನ್ನಗಳು / ಸೇವೆಗಳ ಹೆಸರು ಮತ್ತು ವಿವರಣೆ | ಉತ್ಪನ್ನ / ಸೇವೆಯ ಎನ್‌ಐಸಿ ಕೋಡ್ | ಕಂಪನಿಯ ಒಟ್ಟು ವಹಿವಾಟಿನ % |
|---|---|---|---|
| 1 | ಪಾನೀಯಗಳು | 47221 | 82.51 |
| 2 | ಚಿಟ್ ಫಂಡ್‌ಗಳು | 64990 | 12.86 |

| ಅನುಬಂಧ ಪರಿವಿಡಿ | |
|---|---|
| ಅನುಬಂಧ | ವಿವರಗಳು |
| I | ಎಂಜಿಟಿ 9ರಲ್ಲಿ ವಾರ್ಷಿಕ ರಿಟರ್ನ್‌ನ ಆಯ್ದ ಭಾಗಗಳು |
| II | ಸಹಾಯಕ ಸಂಸ್ಥೆಗಳ ವಿವರಗಳು-ಎಓಸಿ-1 |
| III | ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಗಳ ಚಟುವಟಿಕೆಗಳ ವಾರ್ಷಿಕ ವರದಿ |
| IV | ಎಂ.ಆರ್-2 ಸೆಕ್ರೆಟ್ರಿಯೇಟ್ ಲೆಕ್ಕಪರಿಶೋಧಕರ ವರದಿ |

### III. ಧಾರಕ, ಸಹಾಯಕ ಮತ್ತು ಸಹವರ್ತಿ ಕಂಪನಿಗಳ ವಿವರ :

| | ಹೆಸರು | ಕಂಪನಿ ವಿಳಾಸ | ಸಿಐಎನ್/ ಜಿಎಲ್‌ಎನ್ | ಧಾರಕ/ ಸಹಾಯಕ/ ಸಹವರ್ತಿ ಸಂಸ್ಥೆ | ಹೊಂದಿರುವ ಶೇಕಡವಾರು ಷೇರು | ಅನ್ವಯಿತ ಸೆಕ್ಷನ್ |
|---|---|---|---|---|---|---|
| 1. | ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿ. | ಖನಿಜ ಭವನ, 49, 4ನೇ ಮಹಡಿ, ರೇಸ್‌ಕೋರ್ಸ್ ರಸ್ತೆ , ಬೆಂಗಳೂರು-01 | U93000KA1964ULL001532 | ಸಹವರ್ತಿಸಂಸ್ಥೆ | 47% | ಪ್ರಕರಣ 2(6) |

| | | | | | | |
|---|---|---|---|---|---|---|
| 2. | ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ | ನಂ.42, ಎಂಸಿ ಅಂಡ್ ಎ ಹೌಸ್,ಮಿಲ್ಲರ್ಸ್ ರಸ್ತೆ , ಬೆಂಗಳೂರು – 52 | U51101KA1972PLC002242 | ಸಹಾಯಕ | 100% | ಪ್ರಕರಣ 2(87) |
| 3. | ಮೈಸೂರ್ ಕ್ರೋಮ್ ಟ್ಯಾನಿಂಗ್ ಕಂಪನಿ ಲಿಮಿಟೆಡ್ | ಕೇರಾಫ್ ಎಂಎಸ್‌ಐಎಲ್, ನಂ.36, ಕನ್ನಿಂಗ್‌ಹ್ಯಾಮ್ ರಸ್ತೆ , ಬೆಂಗಳೂರು – 52 | U85110KA1940SGC000261 | ಸಹಾಯಕ | 95.10% | ಪ್ರಕರಣ 2(87) |
| 4. | ಫುಡ್ ಕರ್ನಾಟಕ ಲಿಮಿಟೆಡ್ | ನಂ.17, ರಿಚ್‌ಮಂಡ್ ರಸ್ತೆ , ಬೆಂಗಳೂರು – 25 | U01513KA2003PLC031873 | ಸಹವರ್ತಿ ಸಂಸ್ಥೆ | 50% | ಪ್ರಕರಣ 2(6) |

**VI. ಷೇರು ಹೊಂದಿರುವಿಕೆ ಸ್ವರೂಪ** (ಒಟ್ಟು ಈಕ್ವಿಟಿ ಶೇಕಡವಾರು ಆಗಿ ಈಕ್ವಿಟಿ ಷೇರು ಬಂಡವಾಳದ ವಿಭಜನೆ)

**ಪ್ರವರ್ಗವಾರು ಷೇರು ಹೊಂದಿರುವಿಕೆ**

| ಷೇರುದಾರರ ಪ್ರವರ್ಗ | ವರ್ಷಾರಂಭದಲ್ಲಿ (1ನೇ ಏಪ್ರಿಲ್ 2018ರಂದು) ವರ್ಷಾಂತ್ಯದಲ್ಲಿ (31ನೇ ಮಾರ್ಚ್ 2019ರಂದು) ಹೊಂದಿದ್ದ ಷೇರುಗಳ ಸಂಖ್ಯೆ | | | | ವರ್ಷಾಂತ್ಯದಲ್ಲಿ (31ನೇ ಮಾರ್ಚ್ 2019ರಂದು) ಹೊಂದಿದ್ದ ಷೇರುಗಳ ಸಂಖ್ಯೆ | | | | ವರ್ಷದಲ್ಲಿ ಬದಲಾವಣೆ ಶೇ. |
|---|---|---|---|---|---|---|---|---|---|
| | ಡಿಮ್ಯಾಟ್ | ಭೌತಿಕ | ಒಟ್ಟು | ಒಟ್ಟು ಷೇರುಗಳ ಶೇ. | ಡಿಮ್ಯಾಟ್ | ಭೌತಿಕ | ಒಟ್ಟು | ಒಟ್ಟು ಷೇರುಗಳ ಶೇ. | |
| ಎ. ಪ್ರವರ್ತಕರು | | | | | | | | | |
| (1) ಭಾರತೀಯ | | | | | | | | | |
| ಎ) ವೈಯಕ್ತಿಕ/ಹೆಚ್ ಯುಎಫ್ | | | | | | | | | |
| ಬಿ) ಕೇಂದ್ರ ಸರ್ಕಾರ | | | | | | | | | |
| ಸಿ) ರಾಜ್ಯ ಸರ್ಕಾರ (ಗಳು) | | 2255817 | 2255817 | 53% | N.A. | 2255817 | 2255817 | 53% | |
| ಡಿ) ಬಾಡೀಸ್ ಕಾರ್ಪೋರೇಟ್ | | 2017660 | 2017660 | 47% | N.A. | 2017660 | 2017660 | 47% | 53% ಕಡಿಮೆ ಯಾಗಿದೆ |
| ಇ) ಬ್ಯಾಂಕ್‌ಗಳು/ಎಫ್‌ಐ | | | | | | | | | |
| ಎಫ್) ಇತರೆ ಯಾವುದೇ | | | | | | | | | |
| **ಪ್ರವರ್ತಕರ (ಎ) ಒಟ್ಟು ಷೇರುದಾರಿಕೆ** | | 2017660 | 2017660 | 100% | N.A. | 4273477 | 4273477 | 100% | |
| **ಬಿ. ಸಾರ್ವಜನಿಕ ಷೇರುದಾರಿಕೆ** | | | | | | | | | |
| 1. ಸಂಸ್ಥೆಗಳು | | | | | | | | | |
| ಎ) ಮ್ಯೂಚುವಲ್ ಫಂಡ್ಸ್ | | | | | | | | | |
| ಬಿ) ಬ್ಯಾಂಕ್‌ಗಳು/ಎಫ್‌ಐ | | | | | | | | | |
| ಸಿ) ಕೇಂದ್ರ ಸರ್ಕಾರ | | | | | | | | | |
| ಡಿ) ರಾಜ್ಯ ಸರ್ಕಾರ(ಗಳು) | | | | | | | | | |
| ಇ) ವೆಂಚರ್ ಕ್ಯಾಪಿಟಲ್ ಫಂಡ್ಸ್ | | | | | | | | | |
| ಎಫ್) ವಿಮಾ ಕಂಪನಿಗಳು | | | | | | | | | |
| ಜಿ) ಎಫ್‌ಐಐಎಸ್ | | | | | | | | | |
| ಹೆಚ್) ವಿದೇಶಿ ವೆಂಚರ್ ಕ್ಯಾಪಿಟಲ್ ಫಂಡ್ಸ್ | | | | | | | | | |

| | | | | | | | | | |
|---|---|---|---|---|---|---|---|---|---|
| ಜಿ) ಇತರೆ (ವಿವರಿಸಿ) | | | | | | | | | |
| ಉಪ ಒಟ್ಟು (ಬಿ)(1): | | | | | | | | | |
| 2. ಸಂಸ್ಥೆಯೇತರ | | | | | | | | | |
| ಎ) ಬಾಡೀಸ್ ಕಾರ್ಪೋರೇಟ್ | | | | | | | | | |
| ಜಿ) ಭಾರತೀಯ | | | | | | | | | |
| ಜಿಜಿ) ಸಾಗರೋತ್ತರ | | | | | | | | | |
| ಬಿ) ವೈಯಕ್ತಿಕ | | | | | | | | | |
| ಜಿ) ರೂ.1 ಲಕ್ಷದವರೆಗಿನ ಸಾಧಾರಣ ಷೇರು ಬಂಡವಾಳ ಹೊಂದಿರುವ ವ್ಯಕ್ತಿ ಷೇರುದಾರರು | | | | | | | | | |
| ಜಿಜಿ) ರೂ.1 ಲಕ್ಷಕ್ಕೂ ಹೆಚ್ಚಿನ ಸಾಧಾರಣ ಷೇರು ಬಂಡವಾಳ ಹೊಂದಿರುವ ವ್ಯಕ್ತಿ ಷೇರುದಾರರು | | | | | | | | | |
| ಸಿ) ಇತರೆ (ವಿವರಿಸಿ) | | | | | | | | | |
| ಅನಿವಾಸಿ ಭಾರತೀಯರು | | | | | | | | | |
| ಸಾಗರೋತ್ತರ ಕಾರ್ಪೋರೇಟ್ ಸಂಸ್ಥೆಗಳು | | | | | | | | | |
| | | | | | | | | | |
| ವಿದೇಶಿ ಪ್ರಜೆಗಳು | | | | | | | | | |
| ಕ್ಲಿಯರಿಂಗ್ ಮೆಂಬರ್ಸ್ | | | | | | | | | |
| ಟ್ರಸ್ಟ್ | | | | | | | | | |
| ವಿದೇಶಿ ಸಂಸ್ಥೆಗಳು – ಡಿ ಆರ್ | | | | | | | | | |
| ಉಪ ಒಟ್ಟು (ಬಿ)(2): | | | | | | | | | |
| ಒಟ್ಟು ಸಾರ್ವಜನಿಕ ಷೇರುದಾರಿಕೆ (ಬಿ)=(ಬಿ)(1)+ (ಬಿ)(2) | | | | | | | | | |
| ಸಿ. ಜಿಡಿಆರ್ ಮತ್ತು ಎಡಿಆರ್ ಗಳ ಮೇಲ್ವಿಚಾರಕರು ಹೊಂದಿರುವ ಷೇರು | | | | | | | | | |
| ಒಟ್ಟು (ಎ+ಬಿ+ಸಿ) | | 2017660 | 2017660 | 100% | ಅನ್ವಯ ವಾಗದು | 4273477 | 4273477 | 100% | ಇಲ್ಲ |

### ಬಿ) ಪ್ರವರ್ತಕರು ಹೊಂದಿರುವ ಷೇರುದಾರಿಕೆ

| ಕ್ರ. ಸಂ. | ಷೇರುದಾರರ ಹೆಸರು | ವರ್ಷಾರಂಭದಲ್ಲಿ ಹೊಂದಿದ್ದ ಷೇರುಗಳು | | | ವರ್ಷಾಂತ್ಯದಲ್ಲಿ ಹೊಂದಿದ್ದ ಷೇರುಗಳು | | | ವರ್ಷದಲ್ಲಿನ ಷೇರು ದಾರಿಕೆಯ ಬದಲಾವಣೆ ಶೇ. |
|---|---|---|---|---|---|---|---|---|
| | | ಷೇರುಗಳ ಸಂಖ್ಯೆ | ಕಂಪನಿಯ ಒಟ್ಟು ಷೇರಿನ ಶೇ. | ಒಟ್ಟು ಷೇರುಗಳ ಅಡಮಾನ / ಹೊರೆ | ಷೇರುಗಳ ಸಂಖ್ಯೆ | ಕಂಪನಿಯ ಒಟ್ಟು ಷೇರುಗಳ ಶೇ. | ಒಟ್ಟು ಷೇರುಗಳ ಅಡಮಾನ / ಹೊರೆಯ/ ಶೇ. | |
| 1 | ಕರ್ನಾಟಕ ಸರ್ಕಾರ | 2255817 | 53% | | 2255817 | 53% | | |
| 2 | ಕೆಎಸ್ಐಐಡಿಸಿ ಕೆಳಕಂಡ 6 ವ್ಯಕ್ತಿಗಳು ಕೆಎಸ್ಐಐಡಿಸಿಯ ಪರವಾಗಿ ಷೇರು ಹೊಂದಿರುವವರು | 2017570 | 47% | | 2017570 | 47% | | |
| | 1) ಎಂಡಿ, ಕೆಎಸ್ಐಐಡಿಸಿ | 30 | | | 40 | | | |
| | 2) ಎಂಡಿ, ಎಂಎಸ್ಐಎಲ್ | 10 | | | 10 | | | |
| | 3) ಎನ್.ಆರ್.ಎನ್. ಸಿಂಹ | 20 | | | 20 | | | |
| | 4) ವೈ.ಶ್ರೀನಿವಾಸಪ್ಪ | 10 | | | 10 | | | |
| | 5) ಎನ್.ಕೆ. ಪರಶುರಾಮ್ | 10 | | | 10 | | | |
| | 6) ಡಿ.ವಿಶ್ವನಾಥ್ | 10 | | | ಇಲ್ಲ | | | |

### ಸಿ) ಪ್ರವರ್ತಕರ ಷೇರುದಾರಿಕೆಯಲ್ಲಿ ಬದಲಾವಣೆ (ಬದಲಾವಣೆ ಇಲ್ಲದಿದ್ದರೆ ವಿವರಿಸಿ)

| ಕ್ರ. ಸಂ. | ವಿವರಗಳು | ವರ್ಷಾರಂಭದಲ್ಲಿ ಹೊಂದಿದ್ದ ಷೇರುದಾರಿಕೆ | | ವರ್ಷಾವಧಿಯಲ್ಲಿ ಹೊಂದಿದ್ದ ಸಂಚಿತ ಷೇರುದಾರಿಕೆ | |
|---|---|---|---|---|---|
| | | ಷೇರುಗಳ ಸಂಖ್ಯೆ | ಕಂಪನಿಯ ಒಟ್ಟು ಷೇರುಗಳ ಶೇ. | ಷೇರುಗಳ ಸಂಖ್ಯೆ | ಕಂಪನಿಯ ಒಟ್ಟು ಷೇರುಗಳ ಶೇ. |
| | ವರ್ಷಾರಂಭದಲ್ಲಿ | 2017660 | 100% | 2017660 | 47% |
| | ವರ್ಷದಲ್ಲಿ ಪ್ರವರ್ತಕರ ಷೇರುದಾರಿಕೆಯಲ್ಲಿ ದಿನಾಂಕವಾರು ಏರಿಕೆ/ಇಳಿಕೆ ಏರಿಕೆ / ಇಳಿಕೆ ಬಗ್ಗೆ ಕಾರಣ ತಿಳಿಸಿ (ಉದಾ: ಹಂಚಿಕೆ/ವರ್ಗಾವಣೆ/ ಬೋನಸ್/ಸ್ವೆಟ್ ಈಕ್ವಿಟಿ ಇತ್ಯಾದಿ): | ಕರ್ನಾಟಕ ರಾಜ್ಯಪಾಲರಿಗೆ 28ನೇ ಫೆಬ್ರುವರಿ 2018 ರಂದು 2255817 ಈಕ್ವಿಟಿ ಷೇರುಗಳ ನೂತನ ನೀಡಿಕೆ ಯಿಂದ ಪ್ರವರ್ತಕರ (ಮಾತೃ ಕಂಪನಿ) ಷೇರುದಾರಿಕೆಯು 100% ನಿಂದ 47%ಗೆ ಕಡಿಮೆಯಾಗಿದೆ. | | | |
| | ವರ್ಷಾಂತ್ಯದಲ್ಲಿ | | | 2017660 | 47% |

### ಡಿ) ಪ್ರಮುಖ 10 ಷೇರುದಾರರ ಷೇರುದಾರಿಕೆ ಮಾದರಿ :

(ನಿರ್ದೇಶಕರು, ಪ್ರವರ್ತಕರು ಮತ್ತು ಜಿಡಿಆರ್‌ಗಳು ಮತ್ತು ಎಡಿಆರ್‌ಗಳ ಧಾರಕರು ಹೊರತಾಗಿ): ಇಲ್ಲ

### ಇ) ನಿರ್ದೇಶಕರು ಮತ್ತು ಪ್ರಮುಖ ಆಡಳಿತ ಸಿಬ್ಬಂದಿ ಹೊಂದಿರುವ ಷೇರುಗಳು:

| ಕ್ರ. ಸಂ. | ಪ್ರತಿ ನಿರ್ದೇಶಕರು ಮತ್ತು ಪ್ರಮುಖ ಆಡಳಿತ ಸಿಬ್ಬಂದಿ ಹೊಂದಿರುವ ಷೇರುಗಳು | ವರ್ಷಾರಂಭದಲ್ಲಿ ಹೊಂದಿದ್ದ ಷೇರುದಾರಿಕೆ | | ವರ್ಷಾವಧಿಯಲ್ಲಿ ಹೊಂದಿದ್ದ ಸಂಚಿತ ಷೇರುದಾರಿಕೆ | |
|---|---|---|---|---|---|
| | | ಷೇರುಗಳ ಸಂಖ್ಯೆ | ಕಂಪನಿಯ ಒಟ್ಟು ಷೇರುಗಳ ಶೇ. | ಷೇರುಗಳ ಸಂಖ್ಯೆ | ಕಂಪನಿಯ ಒಟ್ಟು ಷೇರುಗಳ ಶೇ. |
| | ವರ್ಷಾರಂಭದಲ್ಲಿ– | | | | |
| 1. | ವ್ಯವಸ್ಥಾಪಕ ನಿರ್ದೇಶಕರು, ಕೆಎಸ್ಐಐಡಿಸಿ | 40 | 0.001% | 40 | 0.001% |
| 2 | ವ್ಯವಸ್ಥಾಪಕ ನಿರ್ದೇಶಕರು, ಎಂಎಸ್ಐಎಲ್/ಪ್ರಮುಖ ಆಡಳಿತ ಸಿಬ್ಬಂದಿ | 10 | 0.0005% | 10 | 0.0005% |

MSIL

| | | | | | |
|---|---|---|---|---|---|
| | ವರ್ಷದಲ್ಲಿ ಪ್ರವರ್ತಕರ ಷೇರುದಾರಿಕೆಯಲ್ಲಿ ದಿನಾಂಕವಾರು ಏರಿಕೆ/ಇಳಿಕೆ. ಈ ಏರಿಕೆ / ಇಳಿಕೆಗೆ ಕಾರಣ ವಿವರಿಸಿ (ಉದಾ: ಹಂಚಿಕೆ/ ವರ್ಗಾವಣೆ/ಬೋನಸ್/ಸ್ವೆಟ್ ಈಕ್ವಿಟಿ ಇತ್ಯಾದಿ) : | | | | |
| | ವರ್ಷಾಂತ್ಯದಲ್ಲಿ – ಷೇರುದಾರಿಕೆಯಲ್ಲಿ ಯಾವುದೇ ಬದಲಾವಣೆ ಇಲ್ಲ | ಬದಲಾವಣೆ ಇಲ್ಲ | | | |

## V. ಋಣಗಾರಿಕೆ- ಕಂಪನಿಯ ಋಣಗಾರಿಕೆಯಲ್ಲಿ ಬಾಕಿಯಿರುವ/ಸಂಚಯನವಾದ ಆದರೆ ಪಾವತಿ ಮಾಡಬೇಕಿಲ್ಲದ ಬಡ್ಡಿ ಸೇರಿರುವುದು

(ರೂ. ಲಕ್ಷಗಳಲ್ಲಿ)

| | ಠೇವಣಿ ಹೊರತಾದ | ಅಭದ್ರತಾ ಸಾಲಗಳು | ಠೇವಣಿಗಳು | ಒಟ್ಟು ಋಣಬದ್ಧತೆ |
|---|---|---|---|---|
| ಹಣಕಾಸು ವರ್ಷಾರಂಭದಲ್ಲಿದ್ದ ಋಣಬದ್ಧತೆ | | | | |
| i) ಅಸಲು ಮೊತ್ತ | - | - | - | - |
| ii) ಪಾವತಿಸಬೇಕಾಗಿರುವ ಆದರೆ ಪಾವತಿಸದಿರುವ ಬಡ್ಡಿ | - | 53.88 | - | 53.88 |
| iii) ಸಂಚಯನವಾದ ಆದರೆ ಪಾವತಿ ಮಾಡಬೇಕಿಲ್ಲದ ಬಡ್ಡಿ | - | - | - | - |
| ಒಟ್ಟು (i+ii+iii) | | 53.88 | - | 53.88 |
| ಹಣಕಾಸು ವರ್ಷದ ಅವಧಿಯಲ್ಲಿ ಋಣಬದ್ಧತೆಯಲ್ಲಿನ ಬದಲಾವಣೆ | | | | |
| ★ ಸೇರ್ಪಡೆ | | | | |
| ★ ಕ್ಷೀಣತೆ | | | | |
| ನಿವ್ವಳ ಬದಲಾವಣೆ | | | | |
| ಹಣಕಾಸು ವರ್ಷಾಂತ್ಯದಲ್ಲಿದ್ದ ಋಣಬದ್ಧತೆ | | | | |
| i) ಅಸಲು ಮೊತ್ತ | | | | |
| ii) ಪಾವತಿಸಬೇಕಾದ ಆದರೆ ಪಾವತಿಸಿಲ್ಲದ ಬಡ್ಡಿ | - | 53.88 | - | 53.88 |
| iii) ಪಾವತಿಸಬೇಕಾದ ಆದರೆ ಪಾವತಿಸಿಲ್ಲದ ಬಡ್ಡಿ | | | | |
| ಒಟ್ಟು (i+ii+iii) | **-** | **53.88** | **-** | **53.88** |

## VI. ನಿರ್ದೇಶಕರು ಮತ್ತು ಪ್ರಮುಖ ಆಡಳಿತ ಸಿಬ್ಬಂದಿಯ ಸಂಭಾವನೆ :

ಎ. ವ್ಯವಸ್ಥಾಪಕ ನಿರ್ದೇಶಕರು, ಪೂರ್ಣಾವಧಿಯ ನಿರ್ದೇಶಕರು ಮತ್ತು/ಅಥವಾ ವ್ಯವಸ್ಥಾಪಕರ ಸಂಭಾವನೆ : (ರೂ. ಲಕ್ಷಗಳಲ್ಲಿ)

| ಕ್ರ. ಸಂ. | ಸಂಭಾವನೆಯ ವಿವರ | ಎಂಡಿ/ಡಬ್ಲ್ಯೂಟಿಡಿ/ವ್ಯವಸ್ಥಾಪಕರ ಹೆಸರು | | | | ಒಟ್ಟು ಮೊತ್ತ |
|---|---|---|---|---|---|---|
| | | ಎಂಡಿ★ | ..... | ..... | ..... | |
| 1 | ಒಟ್ಟು ವೇತನ | | | | | |
| | (ಎ) ಆದಾಯ ತೆರಿಗೆ ಕಾಯ್ದೆ 1961ರ ಸೆಕ್ಷನ್ 17(1)ರಲ್ಲಿ ಒಳಗೊಂಡಿರುವ ಮುನ್ನೇರ್ಪಾಡುಗಳಂತೆ ವೇತನ | 18.53 | – | – | – | 18.53 |
| | (ಬಿ) ಆದಾಯ ತೆರಿಗೆ ಕಾಯ್ದೆ 1961ರ ಸೆಕ್ಷನ್ 17(2)ರನ್ವಯ ಅನುಷಂಗಿಕ ಸವಲತ್ತುಗಳ ಮೌಲ್ಯ | 7.81 | – | | | 7.81 |
| | (ಸಿ) ಆದಾಯ ತೆರಿಗೆ ಕಾಯ್ದೆ 1961ರ ಸೆ. 17(3)ರನ್ವಯ ವೇತನದ ಬದಲಾಗಿ ಲಾಭ | | | | | |
| 2 | ಸ್ಟಾಕ್ ಆಪ್ಷನ್ | | | | | |
| 3 | ಸ್ವೆಟ್ ಈಕ್ವಿಟಿ | | | | | |

| | | | | | | |
|---|---|---|---|---|---|---|
| 4 | ಕಮಿಷನ್–ಲಾಭದ ಶೇಕಡವಾರು ಆಗಿ – ಇತರೆ, ವಿವರಿಸಿ ... | | | | | |
| 5 | ಇತರೆ, ವಿವರಿಸಿ ... | – | – | – | – | – |
| | ಒಟ್ಟು (ಎ) | 26.34 | | | | 26.24 |
| | ಕಾಯ್ದೆಯಂತೆ ಮಿತಿ | | | | | |

(ರೂ.ಲಕ್ಷಗಳಲ್ಲಿ)

**ಬಿ. ಇತರೆ ನಿರ್ದೇಶಕರಿಗೆ ಸಂಭಾವನೆ :**

| ಕ್ರ.ಸಂ. | ಸಂಭಾವನೆಯ ವಿವರ | | ನಿರ್ದೇಶಕರ ಹೆಸರು | | | ಒಟ್ಟು ಮೊತ್ತ |
|---|---|---|---|---|---|---|
| 1 | **ಸ್ವತಂತ್ರ ನಿರ್ದೇಶಕರು:** | | | | | |
| 2 | ಇತರೆ ಕಾರ್ಯನಿರ್ವಹಣೇತರ ನಿರ್ದೇಶಕರು<br>ಮಂಡಳಿ ಸಮಿತಿ ಸಭೆಗಳಿಗೆ ಹಾಜರಾಗಿದ್ದಕ್ಕೆ ಶುಲ್ಕ:<br>ಪ್ರತಿ ಸಭೆಗೆ ರೂ.1,000/– | | ಶ್ರೀ ಕೆ.ಜೆ.ಜಾರ್ಜ್<br>ಶ್ರೀ ಡಿ.ಸಿ.ಗೌರಿಶಂಕರ್<br>ಡಾ.ಜಿ.ಸಿ. ಪ್ರಕಾಶ್, ಭಾ.ಆ.ಸೇ.<br>ಶ್ರೀಮತಿ ರೇಣುಕಾ ಚಿದಂಬರಂ, ಭಾ.ಆ.ಸೇ.<br>ಡಾ. ಏಕ್‌ರೂಪ್ ಕೌರ್, ಭಾ.ಆ.ಸೇ.<br>ಶ್ರೀ ಕಪಿಲ್ ಮೋಹನ್, ಭಾ.ಆ.ಸೇ.<br>ಶ್ರೀ ಎನ್.ಜಯರಾಂ, ಭಾ.ಆ.ಸೇ.<br>ಶ್ರೀ ಪವನ್‌ಕುಮಾರ್ ಮಾಲಾಪತಿಇಲ್ಲ<br>ಶ್ರೀ ಯಶವಂತ, ಭಾ.ಆ.ಸೇ. ಇಲ್ಲ<br>ಶ್ರೀಮತಿ ಗುಂಜನ್ ಕೃಷ್ಣ, ಭಾ.ಆ.ಸೇ.<br>ಶ್ರೀ ಆರ್. ರಮೇಶ್ | | | ಇಲ್ಲ<br>ಇಲ್ಲ<br>ಇಲ್ಲ<br>ಇಲ್ಲ<br>3000<br>1000<br>ಇಲ್ಲ<br>ಇಲ್ಲ<br>ಇಲ್ಲ<br>5000<br>6000 |
| | ಕಮಿಷನ್ | | | | | |
| | ಇತರೆ, ದಯಮಾಡಿ ವಿವರಿಸಿ | | | | | |
| | ಒಟ್ಟು (1) | | | | | |
| 2 | ಮಂಡಳಿ ಸಮಿತಿ ಸಭೆಗಳಿಗೆ ಹಾಜರಾಗಿದ್ದಕ್ಕೆ ಶುಲ್ಕ | | | | | |
| | ಕಮಿಷನ್ | | | | | |
| | ಇತರೆ, ದಯಮಾಡಿ ವಿವರಿಸಿ | | | | | |
| | ಒಟ್ಟು (2) | | | | | 15000 |
| | ಒಟ್ಟು (ಬಿ)=(1+2) | | | | | |
| | ವ್ಯವಸ್ಥಾಪಕರ ಒಟ್ಟು ಸಂಭಾವನೆ | | | | | 15000 |
| | ಕಾಯ್ದೆಯಂತೆ ಒಟ್ಟಾರೆ ಮಿತಿ | | | | | |

**ಸಿ. ಎಂಡಿ/ವ್ಯವಸ್ಥಾಪಕರು/ಡಬ್ಲ್ಯೂಟಿಡಿ ಹೊರತಾಗಿ ಪ್ರಮುಖ ಆಡಳಿತ ಸಿಬ್ಬಂದಿ ಸಂಭಾವನೆ**

(ರೂ. ಲಕ್ಷಗಳಲ್ಲಿ)

| ಕ್ರ. ಸಂ. | ಸಂಭಾವನೆಯ ವಿವರಗಳು | ಪ್ರಮುಖ ಆಡಳಿತ ಸಿಬ್ಬಂದಿ | | | |
|---|---|---|---|---|---|
| | | ಸಿಇಒ | ಸಿಎಸ್ | ಸಿಎಫ್‌ಒ | ಒಟ್ಟು |

| | | | | | |
|---|---|---|---|---|---|
| 1 | ಒಟ್ಟು ವೇತನ | | | | |
| | (ಎ) ಆದಾಯ ತೆರಿಗೆ ಕಾಯ್ದೆ 1961ರ ಸೆ. 17(1)ರಲ್ಲಿ ಇರುವ ಮುನ್ನೇರ್ಪಾಡುಗಳಂತೆ ವೇತನ | | 19.92 | 20.96 | 40.88 |
| | (ಬಿ) ಆದಾಯ ತೆರಿಗೆ ಕಾಯ್ದೆ 1961ರ ಸೆ. 17(2)ರನ್ವಯ ಅನುಷಂಗಿಕ ಸವಲತ್ತುಗಳ ಮೌಲ್ಯ | | 0.61 | 0.61 | 1.22 |
| | (ಸಿ) ಆದಾಯ ತೆರಿಗೆ ಕಾಯ್ದೆ 1961ರ ಸೆ. 17(3)ರನ್ವಯ ವೇತನಕ್ಕೆ ಬದಲಾಗಿ ಲಾಭ | | | | |
| 2 | ಸ್ಟಾಕ್ ಆಪ್ಷನ್ | | | | |
| 3 | ಸ್ವೆಟ್ ಈಕ್ವಿಟಿ | | | | |
| 4 | ಕಮಿಷನ್ | | | | |
| | ಲಾಭ ಶೇ, ಆಗಿ | | | | |
| | ಇತರೆ, ವಿವರಿಸಿ | | | | |
| 5 | ಇತರೆ, ದಯಮಾಡಿ ವಿವರಿಸಿ | | | | |
| | **ಒಟ್ಟು** | | **20.53** | **21.57** | **42.10** |

## VII. ದಂಡಗಳು/ಶಿಕ್ಷೆ/ಅಪರಾಧಗಳ ಸಂಯೋಜನೆ :

| ಮಾದರಿ | ಕಂಪನಿಗಳ ಕಾಯ್ದೆಯ ಸೆಕ್ಷನ್ | ಸಂಕ್ಷಿಪ್ತ ವಿವರ | ವಿಧಿಸಿದ ದಂಡ /ಶಿಕ್ಷೆ ಸಂಯೋಜಿತ ಶುಲ್ಕದ ವಿವರ | ಪ್ರಾಧಿಕಾರ [RD / NCLT/ ಕೋರ್ಟ್] | ಸಲ್ಲಿಸಿರುವ ಮೇಲ್ಮನವಿ ಯಾವುದೇ ಇದ್ದಲ್ಲಿ (ವಿವರ ನೀಡಿ) |
|---|---|---|---|---|---|
| **ಎ. ಕಂಪನಿ** | ಇಲ್ಲ | | | | |
| ದಂಡ | | | | | |
| ಶಿಕ್ಷೆ | | | | | |
| ಸಂಯೋಜಿತ | | | | | |
| **ಬಿ. ನಿರ್ದೇಶಕರು** | ಇಲ್ಲ | | | | |
| ದಂಡ | | | | | |
| ಶಿಕ್ಷೆ | | | | | |
| ಸಂಯೋಜಿತ | | | | | |
| **ಸಿ. ತಪ್ಪಿತಸ್ಥ ಇತರೆ ಅಧಿಕಾರಿಗಳು** | ಇಲ್ಲ | | | | |
| ದಂಡ | | | | | |
| ಶಿಕ್ಷೆ | | | | | |
| ಸಂಯೋಜಿತ | | | | | |

## ಅನುಬಂಧ-2

**ಸಹಾಯಕ ಕಂಪನಿ ಸಂಬಂಧ ಕಂಪನಿಗಳ ಕಾಯ್ದೆ 1956ರ ಸೆಕ್ಷನ್ 212(8)ರ ಅನ್ವಯ ಹೇಳಿಕೆ**

ಭಾರತ ಸರ್ಕಾರದ ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯ ಹೊರಡಿಸಿರುವ 2011ರ ಫೆಬ್ರವರಿ 8ರ ಸಾಮಾನ್ಯ ಸುತ್ತೋಲೆ ಸಂಖ್ಯೆ 2/2011ರ ಅನುಸಾರ ಸಹಾಯಕ ಕಂಪನಿಯ ಸ್ಥಿತಿ ವಿವರಣಾ ಪಟ್ಟಿ , ಲಾಭ ಮತ್ತು ನಷ್ಟದ ತಃಖ್ತೆ ಹಾಗೂ ಇತರೆ ದಾಖಲಾತಿಗಳನ್ನು ಕಂಪನಿಯ ವಾರ್ಷಿಕ ಲೆಕ್ಕಪತ್ರಗಳೊಂದಿಗೆ ಲಗತ್ತಿಸಿಲ್ಲ . ಸಹಾಯಕ ಕಂಪನಿಯ ವಾರ್ಷಿಕ ಲೆಕ್ಕಪತ್ರಗಳು ಮತ್ತು ಸಂಬಂಧಿತ ಮಾಹಿತಿಯನ್ನು ಕೋರಿಕೆ ಮೇರೆಗೆ ಕಂಪನಿಯ ಮತ್ತು ಇದರ ಸಹಾಯಕ ಕಂಪನಿಯ ಷೇರುದಾರರಿಗೆ ಒದಗಿಸಲಾಗುವುದು ಹಾಗೂ ಇವುಗಳನ್ನು ಕಂಪನಿಯ ನೋಂದಾಯಿತ ಕಚೇರಿಯಲ್ಲಿ ಮತ್ತು ಸಹಾಯಕ ಕಂಪನಿಯಲ್ಲಿ ಷೇರುದಾರರ ಪರಿಶೀಲನೆಗೆ ತೆರೆದಿಡಲಾಗುವುದು.

**(ರೂ.ಲಕ್ಷಗಳಲ್ಲಿ)**

| | |
|---|---|
| **ಸಹಾಯಕ ಕಂಪನಿಯ ಹೆಸರು** | **ಮೆ॥ ಮೈಸೂರ್ ಕ್ರೋಮ್ ಟ್ಯಾನಿಂಗ್ ಕಂಪನಿ ಲಿ.** |

| | |
|---|---|
| ವಿತರಿಸಿದ ಮತ್ತು ಚಂದಾದಾರಿತ ಬಂಡವಾಳ | ರೂ.75,74 |
| ಮೀಸಲುಗಳು | ರೂ.(848.11) |
| ಒಟ್ಟು ಆಸ್ತಿಗಳು | ರೂ.133.89 |
| ಒಟ್ಟು ಹೊಣೆಗಾರಿಕೆಗಳು | ರೂ.906.26 |
| ಹೂಡಿಕೆಗಳು | – |
| ವಹಿವಾಟು | – |
| ತೆರಿಗೆಗೆ ಮುಂಚಿನ ಲಾಭ/(ನಷ್ಟ) | ರೂ. 3.80 |
| ತೆರಿಗೆಗಾಗಿ ಮುನ್ನೇರ್ಪಾಡು | ರೂ. 1.01 |
| ತೆರಿಗೆ ನಂತರದ ಲಾಭ/(ನಷ್ಟ) | ರೂ. 2.79 |
| ಉದ್ದೇಶಿತ ಲಾಭಾಂಶ | ಇಲ್ಲ |
| **ಸಹಾಯಕ ಕಂಪನಿಯ ಹೆಸರು** | **ಮೆ॥ ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್** |
| ವಿತರಿಸಿದ ಮತ್ತು ಚಂದಾದಾರಿತ ಬಂಡವಾಳ | ರೂ.357.25 |
| ಮೀಸಲುಗಳು | ರೂ. 13807.43 |
| ಒಟ್ಟು ಆಸ್ತಿಗಳು | ರೂ. 23453.91 |

MSIL

| | |
|---|---|
| ಒಟ್ಟು ಹೊಣೆಗಾರಿಕೆಗಳು | ರೂ. 9289.23 |
| ಹೂಡಿಕೆಗಳು | – |
| ವಹಿವಾಟು | ರೂ.26233.84 |
| ತೆರಿಗೆಗೆ ಮುಂಚಿನ ಲಾಭ/(ನಷ್ಟ) | ರೂ. 2717.43 |
| ತೆರಿಗೆಗಾಗಿ ಮುನ್ನೇರ್ಪಾಡು | ರೂ.962.50 |
| ತೆರಿಗೆ ನಂತರದ ಲಾಭ/(ನಷ್ಟ) | ರೂ.1754.93 |
| ಉದ್ದೇಶಿತ ಲಾಭಾಂಶ | |

**ಅನುಬಂಧ-3**

**ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಚಟುವಟಿಕೆಗಳ ವಾರ್ಷಿಕ ವರದಿ**

**(ಕಂಪನಿಗಳ ಕಾಯ್ದೆ-2013ರ ಸೆಕ್ಷನ್ 135ರನುಸಾರ)**

ಎಂಎಸ್‌ಐಎಲ್ ಕಂಪನಿಯು ಕಂಪನಿಗಳ ಕಾಯ್ದೆ–2013ರ ಸೆಷನ್ 135 ಅನ್ನು ಕಂಪನಿಗಳ (ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ನೀತಿ) ನಿಯಮಗಳು–2014ರೊಂದಿಗೆ ಓದಿಕೊಂಡು ಸಿಎಸ್‌ಆರ್ ಪಾಲಿಸಿ (ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಸಮಿತಿಯನ್ನು ರಚಿಸಿದೆ) ಸಿಎಸ್‌ಆರ್ (ಸಾಂ.ಸಾ.ಜ) ನೀಡಿ/ನಿಯಮಗಳಡಿ ಅನುಸರಿಸಬೇಕಿರುವಂತೆ ಕೆಳಕಂಡ ಮಾಹಿತಿಯನ್ನು ಅಭಿವ್ಯಕ್ತಪಡಿಸಿದೆ.

ಕಂಪನಿಯ ಸಿಎಸ್‌ಆರ್ (ಸಾಂಸಾ.ಜ) ನೀತಿಯು ಜಾಲ ತಾಣ **http://www.msilonline.com/CSRPOLICY OF MSIL.pdf**

ಕಂಪನಿಯ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಚಟುವಟಿಕೆಗಳ ಕ್ಷೇತ್ರಗಳು ಶಿಕ್ಷಣ ಮತ್ತು ಆರೋಗ್ಯ ರಕ್ಷಣೆ ವೃದ್ಧಿಸುವುದಾಗಿದೆ. ಈ ಕಾರ್ಯ ಚಟುವಟಿಕೆಗಳಿಗಾಗಿ ಕಂಪನಿಗಳ ಕಾಯ್ದೆ–2013ರ ಷೆಡ್ಯೂಲ್–VII ರಲ್ಲಿ ನಿರ್ದಿಷ್ಟಪಡಿಸಿರುವಂತೆ ಅನುದಾನವನ್ನು ವೆಚ್ಚ ಮಾಡಲಾಗಿದೆ.

**2. ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ (ಸಿಎಸ್‌ಆರ್) ಸಮಿತಿಯ ಸಂರಚನೆ**

| | | |
|---|---|---|
| 1 | ಶ್ರೀ ಕಪಿಲ್ ಮೋಹನ್, ಭಾ.ಆ.ಸೇ. | ಅಧ್ಯಕ್ಷರು |
| 2 | ಶ್ರೀಮತಿ ಗುಂಜನ್ ಕೃಷ್ಣ, ಭಾ.ಆ.ಸೇ. | ಸದಸ್ಯರು |
| 3 | ಶ್ರೀ ಆರ್.ರಮೇಶ್ | ಸದಸ್ಯರು |

**3. ಹಿಂದಿನ 3 ಹಣಕಾಸು ವರ್ಷಗಳಲ್ಲಿ ಕಂಪನಿಯ ಸರಾಸರಿ ನಿವ್ವಳ ಲಾಭ**

ರೂ.ಲಕ್ಷಗಳಲ್ಲಿ

| ವಿವರಗಳು | ಆರ್ಥಿಕ ವರ್ಷಗಳು 2017-18 | ಆರ್ಥಿಕ ವರ್ಷಗಳು 2016-17 | ಆರ್ಥಿಕ ವರ್ಷಗಳು 2015-16 |
|---|---|---|---|

| | | | |
|---|---|---|---|
| ಕಂಪನಿಗಳ ಕಾಯ್ದೆ 2013ರ ಸೆಕ್ಷನ್ 1980ರನ್ವಯ | 16627.31 | 15683.13 | 13985.82 |
| ಸರಾಸರಿ ನಿವ್ವಳ ಲಾಭ | 4174.28 | | |

4. ಗೊತ್ತುಪಡಿಸಲಾದ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ (ಸಿಎಸ್‌ಆರ್) ವೆಚ್ಚ (ಮೇಲಿನ ಕ್ರ.ಸಂ.3ರಲ್ಲಿ ನಮೂದಿಸಿರದ ಮೊತ್ತ ಶೇಕಡಾ 2 ರಷ್ಟು)

5. ಪ್ರಸಕ್ತ ಆರ್ಥಿಕ ವರ್ಷದಲ್ಲಿ ಸಿಎಸ್‌ಆರ್‌ಗಾಗಿ ಮಾಡಲಾದ ವೆಚ್ಚದ ವಿವರಗಳು

(ಎ) ಆರ್ಥಿಕ ವರ್ಷದಲ್ಲಿ ವೆಚ್ಚ ಮಾಡಬೇಕಾದ ಸಿಎಸ್‌ಆರ್ ಮೊತ್ತ : ರೂ.83.49 ಲಕ್ಷಗಳು

(ಬಿ) ವೆಚ್ಚವಾಗದೆ ಉಳಿದಿರುವ ಮೊತ್ತ (ಯಾವುದಾದರೂ ಇದ್ದಲ್ಲಿ): ಇಲ್ಲ

(ಸಿ) ಆರ್ಥಿಕ ವರ್ಷದಲ್ಲಿ ಸಾಂ.ಸಾ.ಜ. (ಸಿಎಸ್‌ಆರ್) ಚಟುವಟಿಕೆಗಳಿಗಾಗಿ

ವೆಚ್ಚ ಮಾಡಲಾದ ವಿವಿಧ ರೀತಿಯ ವಿವರಗಳು ಕೆಳಕಂಡಂತಿವೆ:

| 1 | 2 | 3 | 4 | 5 | 6 | 7 | 8 |
|---|---|---|---|---|---|---|---|
| **ಕ್ರ. ಸಂ.** | **ಗುರುತಿಸಲಾದ ಸಾಂ.ಸಾ.ಜ. ಯೋಜನೆ ಅಥವಾ ಚಟುವಟಿಕೆ** | **ಯೋಜನೆಯು ಒಳ ಗೊಂಡಿರುವ ವಿಭಾಗ** | **ಯೋಜನೆಗಳು ಅಥವಾ ಕಾರ್ಯಕ್ರಮಗಳು (1) ಸ್ಥಳೀಯ ಪ್ರದೇಶ ಅಥವಾ ಇತರೆ (2) ಯೋಜನೆ/ ಕಾರ್ಯಕ್ರಮ ಹಮ್ಮಿಕೊಂಡಿರುವ ನಿರ್ದಿಷ್ಟ ರಾಜ್ಯ ಮತ್ತು ಜಿಲ್ಲೆಯ ಹೆಸರು** | **ಯೋಜನೆ ಅಥವಾ ಕಾರ್ಯಕ್ರಮ ವಾರು ಒದಗಿಸಲಾದ ಅನುದಾನ (ಆಯ-ವ್ಯಯ)** | **ಯೋಜನೆ ಅಥವಾ ಕಾರ್ಯಕ್ರಮಗಳ ಉಪ ಲೆಕ್ಕಶೀರ್ಷಿಕೆಗಳು (1) ಯೋಜನೆ ಅಥವಾ ಕಾರ್ಯಕ್ರಮಗಳ ಮೇಲೆ ನೇರ ವೆಚ್ಚ (2) ಲೆಕ್ಕ ಶೀರ್ಷಿಕೆಗಳ ಮೇಲೆ** | **ವರದಿಯ ಅವಧಿಯವರೆಗೆ ಮಾಡಲಾದ ಒಟ್ಟು ವೆಚ್ಚ** | **ನೇರ ಅಥವಾ ಅನುಷ್ಠಾನದ ಬಗ್ಗೆ ಸಂಸ್ಥೆಯ ಮೂಲಕ ಮಾಡಲಾದ ವೆಚ್ಚದ ಮೊತ್ತ** |
| 1 | ಮುಖ್ಯಮಂತ್ರಿಗಳ ಪರಿಹಾರ ನಿಧಿ | ಬಡತನ ಮತ್ತು ಅಪೌಷ್ಠಿಕತೆ ನಿವಾರಣೆ, ಆರೋಗ್ಯ ರಕ್ಷಣೆಗೆ ಮುನ್ನೆಚ್ಚರಿಕೆ ಕ್ರಮಗಳಿಗೆ ಪ್ರೋತ್ಸಾಹ ಮತ್ತು ಸುರಕ್ಷಿತ ಕುಡಿಯುವ ನೀರು ಲಭ್ಯಗೊಳಿಸುವುದು. | ಕರ್ನಾಟಕ | ರೂ.2.00 ಕೋಟಿ | ರೂ.2.00 ಕೋಟಿ | ರೂ.2.00 ಕೋಟಿ | ಮುಖ್ಯಮಂತ್ರಿಗಳ ಪರಿಹಾರ ನಿಧಿ ಮೂಲಕ |

# ಅನುಬಂಧ-4
## ಫಾರಂ ಸಂಖ್ಯೆ ಎಂಆರ್-3
## ಸೆಕ್ರೆಟೇರಿಯಲ್ ಲೆಕ್ಕಪರಿಶೋಧನಾ ವರದಿ
## 2019ರ ಮಾರ್ಚ್ 31ಕ್ಕೆ ಕೊನೆಗೊಂಡ ಹಣಕಾಸು ವರ್ಷಕ್ಕೆ
## ಕಂಪನಿಗಳ ಕಾಯ್ದೆ 2013 ಸೆಕ್ಷನ್ 204(1) ಮತ್ತು ಕಂಪನಿಗಳ (ಆಡಳಿತ ಸಿಬ್ಬಂದಿಯ ನೇಮಕಾತಿ ಮತ್ತು ಸಂಭಾವನೆ) ನಿಯಮಗಳು, 2014ರ ನಿಯಮ ಸಂಖ್ಯೆ 9ರ ಅನ್ವಯ)

**ಗೆ,**

**ಸದಸ್ಯರು,**
**ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್**
**ಬೆಂಗಳೂರು**

ನಾನು ಅನ್ವಯಿತ ಶಾಸನಬದ್ಧ ಮುನ್ನೇರ್ಪಾಡುಗಳ ಸರಣಿಯ ಸೆಕ್ರೆಟೇರಿಯಲ್ ಲೆಕ್ಕಪರಿಶೋಧನೆ ಹಾಗೂ ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ (U85110KA1966SGC001612) (ಇನ್ನು ಮುಂದೆ ಕಂಪನಿ ಎಂದು ಕರೆಯಲಾಗುವುದು) ಉತ್ತಮ ಕಾರ್ಪೋರೇಟ್ ಅಭ್ಯಾಸಗಳ ಅನುಸರಣೆಯ ಅನ್ವಯ ಲೆಕ್ಕಪರಿಶೋಧನೆ ಮಾಡಿದ್ದೇನೆ. ಕಾರ್ಪೋರೇಟ್ ನಡತೆ/ಶಾಸನಬದ್ಧ ಅನುಪಾಲನೆಗಳ ಮೌಲ್ಯಮಾಪನಕ್ಕೆ ಮತ್ತು ಇದರ ಬಗ್ಗೆ ನನ್ನ ಅಭಿಪ್ರಾಯ ತಿಳಿಸಲು ಸೂಕ್ತವಾದ ಆಧಾರವನ್ನು ನನಗೆ ಒದಗಿಸಿದ ರೀತಿಯಲ್ಲಿ ಸೆಕ್ರೆಟೇರಿಯಲ್ ಲೆಕ್ಕ ಪರಿಶೋಧನೆ ನಡೆಸಲಾಗಿದೆ.

ಕಂಪನಿಯು ನಿರ್ವಹಿಸಿರುವ ಪುಸ್ತಕಗಳು, ಪತ್ರಗಳು, ಮಿನಿಟ್ ಪುಸ್ತಕಗಳು, ನಮೂನೆಗಳು ಮತ್ತು ಸಲ್ಲಿಸಿರುವ ರಿಟರ್ನ್ ಇತರೆ ದಾಖಲಾತಿಗಳನ್ನು ನಾನು/ನಾವು ಪರಿಶೀಲನೆ ಮಾಡಿದ ಆಧಾರದಲ್ಲಿ ಕಾರ್ಯದರ್ಶಿ ಲೆಕ್ಕಪರಿಶೋಧನೆ ನಡೆಸಿದ ಅವಧಿಯಲ್ಲಿ ಕಂಪನಿ ತನ್ನ ಅಧಿಕಾರಿಗಳು, ಏಜೆಂಟ್ಸ್ ಮತ್ತು ಅಧಿಕೃತ ಪ್ರತಿನಿಧಿಗಳು ಒದಗಿಸಿದ ಮಾಹಿತಿಯನ್ನು ಗಮನಿಸಲಾಗಿದೆ. ನನ್ನ ಅಭಿಪ್ರಾಯದಂತೆ, ಕಂಪನಿ ಒದಗಿಸಿದಂತೆ 2019ನೇ ಮಾರ್ಚ್ 31ರ ಹಣಕಾಸು ವರ್ಷಾಂತ್ಯ ಒಳಗೊಳ್ಳುವ ಪರಿಶೋಧನಾ ಅವಧಿಯಲ್ಲಿ ನಾನು ವರದಿ ಮಾಡಿದ್ದೇನೆ ಹಾಗೂ ಕೆಳಗೆ ಪಟ್ಟಿ ಮಾಡಲಾದ ಶಾಸನಬದ್ಧ ಮುನ್ನೇರ್ಪಾಡುಗಳನ್ನು ಅನುಸರಿಸಲಾಗಿದೆ. ಕಂಪನಿಯು ಸೂಕ್ತ ಮಂಡಳಿ-ಪ್ರಕ್ರಿಯೆ ಮತ್ತು ಅನುಸರಣೆ – ವ್ಯವಸ್ಥೆ ಕೌಶಲ್ಯ ಹೊಂದಿದ್ದು ಅದರ ಅನುಸಾರ ವರದಿ ಮಾಡಲಾಗಿದೆ.

ಕೆಳಕಂಡ ಉಪಬಂಧಗಳ ಅನುಸಾರ 2019ನೇ ಮಾರ್ಚ್ 31ರ ವರ್ಷಾಂತ್ಯಕ್ಕೆ ಕಂಪನಿ ನಿರ್ವಹಿಸಿದ ಪುಸ್ತಕಗಳು, ಪತ್ರಗಳು, ಮಿನಿಟ್ ಪುಸ್ತಕಗಳು, ನಮೂನೆಗಳು ಮತ್ತು ರಿಟರ್ನ್ ಸಲ್ಲಿಕೆಗಳು ಮತ್ತು ಇತರೆ ದಾಖಲಾತಿಗಳನ್ನು ನಾನು ಪರಿಶೀಲಿಸಿದ್ದೇನೆ:

i. ಕಂಪನಿಗಳ ಕಾಯ್ದೆ, 2013(ಕಾಯ್ದೆ) ಮತ್ತು ಇದರಡಿಯಲ್ಲಿ ಮಾಡಿರುವ ನಿಯಮಗಳು,

ii. ಸೆಕ್ಯುರಿಟೀಸ್ ಕಾಂಟ್ರಾಕ್ಟ್ (ನಿಯಂತ್ರಣ) ಕಾಯ್ದೆ, 1956 (ಎಸ್‌ಸಿಆರ್‌ಎ) ಮತ್ತು ಇದರಡಿಯಲ್ಲಿ ಮಾಡಿರುವ ನಿಯಮಗಳು,

iii. ವಿದೇಶಿ ವಿನಿಮಯ ನಿರ್ವಹಣೆ ಕಾಯ್ದೆ, 1999 ಮತ್ತು ವಿದೇಶಿ ವಿನಿಮಯ ಗಳಿಕೆ ಮತ್ತು ಹೊರಹರಿವಿನ ಪ್ರಮಾಣಕ್ಕೆ ಇದರಡಿ ಮಾಡಿರುವ ನಿಯಮಗಳು ಮತ್ತು ನಿಬಂಧನೆಗಳು,

iv. ಕಂಪನಿಯು ಹೆಸರು ಸೇರ್ಪಡೆಯಾಗಿರದ ಸಾರ್ವಜನಿಕ ಕಂಪನಿ ಮತ್ತು ಸರ್ಕಾರದ ಕಂಪನಿಯಾಗಿರುವುದರಿಂದ ಕೆಳಕಂಡ ಕಾನೂನುಗಳ ಅನ್ವಯ ಅಗತ್ಯತೆಗಳನ್ನು ಅನುಸರಿಸಬೇಕಾಗಿರುವುದಿಲ್ಲ-

ಎ. ಡಿಪಾಸಿಟರೀಸ್ ಕಾಯ್ದೆ 1996 ಮತ್ತು ಇದರಡಿಯಲ್ಲಿ ಮಾಡಿರುವ ನಿಬಂಧನೆಗಳು.

ಬಿ. ಸೆಕ್ಯುರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ (ಷೇರುಗಳು ಮತ್ತು ಸ್ವಾಧೀನತೆಗಳ ಗಣನೀಯ ಸ್ವಾಧೀನತೆ) ನಿಬಂಧನೆಗಳು, 2016;

ಸಿ. ಸೆಕ್ಯುರಿಟೀಸ್ ಅಂಡ್ ಎಕ್ಸ್‌ಚೇಂಟ್ ಬೋರ್ಡ್ ಆಫ್ ಇಂಡಿಯಾ (ಆಂತರಿಕರ ವ್ಯಾಪಾರ ನಿಷೇಧ) ನಿಬಂಧನೆಗಳು, 2015;

ಡಿ. ಸೆಕ್ಯುರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ (ಬಂಡವಾಳ ಮತ್ತು ಪ್ರಕಟಣೆ ಅಗತ್ಯತೆಗಳ ನೀಡಿಕೆ) ನಿಬಂಧನೆಗಳು, 2016;

ಇ. ಸೆಕ್ಯುರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ (ಷೇರು ಆಧಾರಿತ ನೌಕರರ ಸೌಲಭ್ಯಗಳು) ನಿಬಂಧನೆಗಳು, 2014;

ಎಫ್. ಸೆಕ್ಯುರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ (ನೀಡಿಕೆಯ ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟರು) ನಿಬಂಧನೆಗಳು, 2006 ಕಂಪನಿಗಳ ಕಾಯ್ದೆ ಮತ್ತು ಗ್ರಾಹಕರ ಜೊತೆ ವ್ಯವಹರಿಸುವ ಸಂಬಂಧ;

ಜಿ. ಸೆಕ್ಯುರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ (ಈಕ್ವಿಟಿ ಷೇರುಗಳ ಸೇರ್ಪಡೆ ತೆಗೆದುಹಾಕುವಿಕೆ) ನಿಬಂಧನೆಗಳು, 2009;

ಎಚ್. ಸೆಕ್ಯುರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ (ಸೆಕ್ಯುರಿಟಿಗಳ ಮರು ಖರೀದಿ) ನಿಬಂಧನೆಗಳು, 2013; ಮತ್ತು

ಐ. ಸೆಬಿ (ಹೆಸರು ಸೇರ್ಪಡೆ ಹೊಣೆ ಮತ್ತು ಪ್ರಕಟಣೆ ಅಗತ್ಯತೆಗಳು) ನಿಬಂಧನೆಗಳು 2015 (ಎಲ್‌ಒಡಿಆರ್ ನಿಬಂಧನೆಗಳು)

ಮುಂದುವರಿದು ನಾವು ವರದಿ ಮಾಡುವುದೇನೆಂದರೆ, ಭಾರತೀಯ ಕಂಪನಿ ಸೆಕ್ರೆಟರಿಗಳ ಸಂಸ್ಥೆಯು (ICSI) ಹೊರಡಿಸಿರುವ ಮಾರ್ಗಸೂಚಿಗಳನುಸಾರ ಪಡೆದಿರುವ ಮಾಹಿತಿ ಮತ್ತು ನಿರ್ವಹಣೆ ಮಾಡಿರುವ ದಾಖಲೆಗಳ ಆಧಾರದ ಮೇಲೆ, ನನ್ನ ಅಭಿಪ್ರಾಯದಲ್ಲಿ ಕಂಪನಿಯು ಅನ್ವಯವಾಗುವ ಪ್ರಮಾಣದವರೆಗೆ ಈ ಕೆಳಕಂಡ ಉಪಬಂಧಗಳನ್ನು ಪರಿಪಾಲಿಸಿದೆ:

**1. ಕೈಗಾರಿಕೆಯ ನಿರ್ದಿಷ್ಟ ಕಾನೂನುಗಳು**

ಎ) ಕರ್ನಾಟಕ ಚಿಟ್ ಫಂಡ್ ಕಾಯ್ದೆ, 1982

ಬಿ) ಕರ್ನಾಟಕ ಅಬಕಾರಿ ಕಾಯ್ದೆ, 1968

ಸಿ) ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಮಳಿಗೆಗಳ ಕಾಯ್ದೆ, 1961

ಡಿ) ವೃತ್ತಿಗಳು, ವ್ಯಾಪಾರಗಳು, ಕಸಬು ಮತ್ತು ಉದ್ಯೋಗಗಳ ಮೇಲಿನ ಕರ್ನಾಟಕ ತೆರಿಗೆ ಕಾಯ್ದೆ, 1976

ಇ) ಅಗತ್ಯ ಪದಾರ್ಥಗಳ ಕಾಯ್ದೆ, 1955

ಎಫ್) ಔಷಧ ನಿಯಂತ್ರಣ ಕಾಯ್ದೆ, 1950

**2. ಸಾಮಾನ್ಯ ಕಾನೂನುಗಳು:**

ಎ. ಕಂಪನಿಗೆ ಅನ್ವಯವಾಗುವಂತೆ ಕೈಗಾರಿಕಾ ಮತ್ತು ಕಾರ್ಮಿಕ ಕಾನೂನುಗಳು.

ಬಿ. ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ (ತಡೆ, ನಿಷೇಧ ಮತ್ತು ಪರಿಹರಿಸುವಿಕೆ) ಕಾಯ್ದೆ, 2013

ಐಸಿಎಸ್ಐ ಹೊರಡಿಸಿದ ಮತ್ತು ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯ ಅಧಿಸೂಚಿಸಿರುವ ಸೆಕ್ರೆಟೇರಿಯಲ್ ಗುಣಮಟ್ಟಗಳು ಎಸ್‌ಎಸ್-1 ಮತ್ತು ಎಸ್‌ಎಸ್-2 ರ ಅನ್ವಯವಾಗುವ ಕಲಂಗಳ ಅನುಸರಣೆ ಮತ್ತು ಸಾಮಾನ್ಯವಾಗಿ ಅವರು ಸದರಿ ಗುಣಮಟ್ಟಗಳನ್ನು ಅನುಸರಿಸಿರುವ ಕುರಿತ ಟಿಪ್ಪಣಿಯನ್ನು ಸಹ ನಾವು ಪರಿಶೀಲಿಸಿದ್ದೇವೆ.

ಪರಾಮರ್ಶನೆಯಲ್ಲಿರುವ ಅವಧಿಯಲ್ಲಿ ಮೇಲೆ ತಿಳಿಸಿರುವ ಕಾಯ್ದೆಯ ಉಪಬಂಧಗಳು, ನಿಯಮಗಳು, ನಿಬಂಧನೆಗಳು, ಮಾರ್ಗದರ್ಶನಗಳು, ಗುಣಮಟ್ಟಗಳು ಇತ್ಯಾದಿಗಳನ್ನು ಕಂಪನಿಯು ಕೆಳಗೆ ತೋರಿಸಿರುವುದನ್ನು ಹೊರತುಪಡಿಸಿ ಪರಿಪಾಲಿಸಿದೆ.

ಕಂಪನಿಯ ಸಾಂಸಾ.ಜ (ಸಿಎಸ್ಆರ್) ಸಮಿತಿಯ ಕಾಯ್ದೆಯ ಸೆಕ್ಷನ್ 135ರನುಸಾರ ಹಣಕಾಸು ವರ್ಷದಲ್ಲಿ ಸಿಎಸ್ಆರ್ ಮೊತ್ತದ ಮಟ್ಟವನ್ನು ಪರಿಗಣಿಸುವ ಸಂಬಂಧ ಒಮ್ಮೆಯೂ ಸಭೆ ನಡೆಸಿರುವುದಿಲ್ಲ.

ನಾನು/ನಾವು ಮತ್ತೆ ವರದಿ ಮಾಡುವುದೇನೆಂದರೆ;

ಕಂಪನಿಯ ನಿರ್ದೇಶಕರ ಮಂಡಳಿಯನ್ನು ಕಾರ್ಯನಿರ್ವಾಹಕ ನಿರ್ದೇಶಕರು, ಕಾರ್ಯನಿರ್ವಾಹಕೇತರ ನಿರ್ದೇಶಕರು, ಸ್ವತಂತ್ರ ನಿರ್ದೇಶಕರು ಮತ್ತು ಒಬ್ಬರು ಮಹಿಳಾ ನಿರ್ದೇಶಕರ ಸೂಕ್ತ ಸಮತೋಲನದೊಂದಿಗೆ ಕ್ರಮವಾಗಿ ರಚಿಸಲಾಗಿದೆ. ಪರಾಮರ್ಶನೆಯಲ್ಲಿರುವ ಅವಧಿಯಲ್ಲಿ ಉಂಟಾಗಿರುವ ನಿರ್ದೇಶಕರುಗಳ ಮಂಡಳಿಯ ಸಂಯೋಜನೆಯಲ್ಲಿನ ಬದಲಾವಣೆಯನ್ನು ಕಾಯ್ದೆಯ ಉಪಬಂಧಗಳ ಅನುಸರಣೆ ಅನ್ವಯ ಮಾಡಲಾಗಿದೆ.

ಮಂಡಳಿ/ಸಮಿತಿ ಸಭೆಗಳನ್ನು ನಡೆಸುವ ಬಗ್ಗೆ ಎಲ್ಲಾ ನಿರ್ದೇಶಕರುಗಳಿಗೆ ಪರಿಪೂರ್ಣ ಸೂಚನೆ ನೀಡಿದೆ. ಕಾರ್ಯಸೂಚಿ ಮತ್ತು ಕಾರ್ಯಸೂಚಿಯ ಮೇಲಿನ ವಿವರವಾದ ಟಿಪ್ಪಣಿಗಳನ್ನು ಕನಿಷ್ಠ ಏಳು ದಿನಗಳ ಮುಂಚಿತವಾಗಿ ಕಳುಹಿಸಲಾಗಿದೆ. ಸಭೆಗೆ ಮುನ್ನ ಕಾರ್ಯಸೂಚಿ ಬಾಬ್ತುಗಳ ಬಗ್ಗೆ ಹೆಚ್ಚಿನ ಮಾಹಿತಿ ಮತ್ತು ಸ್ಪಷ್ಟನೆಗಳನ್ನು ಕೇಳಲು ಮತ್ತು ಪಡೆಯಲು ಮತ್ತು ಸಭೆಯಲ್ಲಿ ಅರ್ಥಪೂರ್ಣವಾಗಿ ಭಾಗವಹಿಸಲು ವ್ಯವಸ್ಥೆಯು ಜಾರಿಯಲ್ಲಿರುವುದು.

ಬಹುಪಾಲು ನಿರ್ಧಾರಗಳನ್ನು ತೆಗೆದುಕೊಂಡಿದ್ದರೂ, ಸದಸ್ಯರ ಅಸಮ್ಮತಿ ನಿಲುವುಗಳನ್ನು ಗಣನೆಗೆ ತೆಗೆದುಕೊಂಡಿದ್ದು, ಅದನ್ನು ಮಿನಿಟ್‌ನ ಭಾಗವಾಗಿ ದಾಖಲು ಮಾಡಲಾಗಿದೆ.

ನಾನು/ನಾವು ಮತ್ತೆ ವರದಿ ಮಾಡುವುದೇನೆಂದರೆ, ಅನ್ವಯವಾಗುವ ಕಾನೂನುಗಳು, ನಿಯಮಗಳು, ನಿಬಂಧನೆಗಳು ಹಾಗೂ ಮಾರ್ಗದರ್ಶನಗಳನ್ನು ಮೇಲ್ವಿಚಾರಣೆ ಮಾಡಲು ಮತ್ತು ಅನುಸರಣೆಯನ್ನು ಖಾತರಿಪಡಿಸಲು ಕಂಪನಿಯ ಗಾತ್ರ ಮತ್ತು ಕಾರ್ಯಾಚರಣೆ ಆಧಾರದ ಮೇಲೆ ಕಂಪನಿಯಲ್ಲಿ ಸಾಕಷ್ಟು ವ್ಯವಸ್ಥೆಗಳು ಮತ್ತು ಪ್ರಕ್ರಿಯೆಗಳು ಇರುವವು.

ನಾನು ಮುಂದುವರಿದು ವರದಿ ಮಾಡುವುದೇನೆಂದರೆ, ವರದಿಗಾರಿಕೆಯ ಅವಧಿಯಲ್ಲಿ ಮೇಲೆ ಪ್ರಸ್ತಾಪಿಸಿರುವ ಕಾನೂನುಗಳು, ನಿಯಮಗಳು, ನಿಬಂಧನೆಗಳು, ಮಾರ್ಗದರ್ಶನಗಳು, ಗುಣಮಟ್ಟಗಳು ಇತ್ಯಾದಿಯ ಅನುಸಾರ ಕಂಪನಿಯ ವ್ಯವಹಾರಗಳ ಗುಣಮಟ್ಟಗಳು ಇತ್ಯಾದಿಯ ಅನುಸಾರ ಕಂಪನಿಯ ವ್ಯವಹಾರಗಳ ಮೇಲೆ ಪ್ರಮುಖವಾದ ಹಿಡಿತ ಹೊಂದಿರುವ ಯಾವುದೇ ಇತರೆ ನಿರ್ದಿಷ್ಟ ಘಟನಾವಳಿಗಳು/ಕ್ರಮಗಳು ನಡೆದಿರುವುದಿಲ್ಲ.

**ಎಸ್.ಕೇದಾರ್‌ನಾಥ್ ಅಂಡ್ ಅಸೋಸಿಯೇಟ್ಸ್ ಪರವಾಗಿ,**

**ಸಹಿ/-**

**ಎಸ್.ಕೇದಾರ್‌ನಾಥ್**

**ಕಂಪನಿ ಕಾರ್ಯದರ್ಶಿ**

**ಸಿ.ಪಿ. ನಂ.4422**

**ದಿನಾಂಕ:16ನೇ ಸೆಪ್ಟೆಂಬರ್ 2019**

**ಸ್ಥಳ: ಬೆಂಗಳೂರು**

**ಸೂಚನೆ:** ಸದರಿ ವರದಿಯನ್ನು ಅನುಬಂಧ-ಎ ಆಗಿ ಸೇರಿಸಿರುವ ಮತ್ತು ಸದರಿ ವರದಿಯ ಅವಿಭಾಜ್ಯ ಭಾಗವಾಗಿರುವ ಸಮ ದಿನಾಂಕದ ನಮ್ಮ ಪತ್ರದ ಜೊತೆಗೆ ಓದಿಕೊಳ್ಳಬೇಕು.

# ಫಾರಂ ಎಒಸಿ-1

## ಸಹಾಯಕ ಕಂಪನಿಗಳು/ಸಹವರ್ತಿ ಕಂಪನಿಗಳು/ಸಹಭಾಗಿ ಉದ್ಯಮಗಳ ಹಣಕಾಸು ಹೇಳಿಕೆಗಳ ವೈಶಿಷ್ಟ್ಯತೆಯನ್ನು ಒಳಗೊಂಡ ವಿವರ

## ಭಾಗ ಎ : ಸಹಾಯಕ ಕಂಪನಿಗಳು

| ಕ್ರ. ಸಂ. | ಸಹಾಯಕ ಕಂಪನಿ ಹೆಸರು | ವರದಿ ಅವಧಿ | ವರದಿಯಲ್ಲಿ ಬಳಸಿರುವ ಕರೆನ್ಸಿ | ಷೇರು ಬಂಡವಾಳ (ಆದ್ಯತಾ ಷೇರು ಸೇರಿ) | ಮೀಸಲುಗಳು ಮತ್ತು ಹೆಚ್ಚಳಗಳು | ಒಟ್ಟು ಆಸ್ತಿ | ಒಟ್ಟು ಹೊಣೆಗಾರಿಕೆಗಳು (ಷೇರು ಬಂಡವಾಳ ಮತ್ತು ಮೀಸಲು ಹೊರತುಪಡಿಸಿ) | ಹೂಡಿಕೆಗಳು | ವಹಿವಾಟು | ಇತರೆ ಆದಾಯ | ಒಟ್ಟು ಆದಾಯ | ತೆರಿಗೆಗೆ ಮುಂಚಿನ ಲಾಭ/ ನಷ್ಟ | ತೆರಿಗೆಗಾಗಿ ಮುನ್ನೇರ್ಪಾಡು (ಮುಂದೂಡಿದ ತೆರಿಗೆ ಸೇರಿ) | ತೆರಿಗೆ ನಂತರದ ಲಾಭ/(ನಷ್ಟ) | ಈಕ್ವಿಟಿ ಷೇರುಗಳ ಮೇಲೆ ಉದ್ದೇಶಿತ ಲಾಭಾಂಶ ಶೇ. | ಈಕ್ವಿಟಿ ಷೇರುಗಳ ಮೇಲೆ ಪ್ರಸ್ತಾಪಿತ ಲಾಭಾಂಶ | ಷೇರುದಾರಿಕೆ ಶೇಕಡವಾರು |
|---|---|---|---|---|---|---|---|---|---|---|---|---|---|---|---|---|---|
| 1 | ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ | 31.03.2019 | ಭಾರತದ ರೂಪಾಯಿ | 357.25 | 13807.43 | 23453.91 | 9289.23 | - | 26233.84 | 414.46 | 26648.30 | 2717.43 | 962.30 | 1754.93 | - | - | 100% |
| 2 | ದಿ ಮೈಸೂರ್ ಕ್ರೋಮ್ ಟ್ಯಾನಿಂಗ್ ಕಂಪನಿ ಲಿಮಿಟೆಡ್ | 31.03.2019 | ಭಾರತದ ರೂಪಾಯಿ | 75.74 | (848.11) | 133.89 | 906.26 | - | | 7.36 | 7.36 | 3.80 | 1.01 | 2.79 | - | - | 95.10% |

## ಅನುಬಂಧ-''ಎ''

ಸದಸ್ಯರುಗಳಿಗೆ,
ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್,

ಮಾನ್ಯರೇ,

ಸಮ ದಿನಾಂಕದ ನಮ್ಮ ವರದಿಯನ್ನು ಸದರಿ ಪತ್ರದ ಜೊತೆಗೆ ಓದಿಕೊಳ್ಳುವುದು.

ಸೆಕ್ರೆಟೇರಿಯಲ್ ದಾಖಲೆ ನಿರ್ವಹಣೆಯು ಕಂಪನಿ ಆಡಳಿತ ವರ್ಗದ ಜವಾಬ್ದಾರಿಯಾಗಿರುವುದು. ನಮ್ಮ ಲೆಕ್ಕಪರಿಶೋಧನೆ ಆಧಾರದ ಮೇಲೆ ಸದರಿ ಸೆಕ್ರೆಟೇರಿಯಲ್ ದಾಖಲೆಗಳ ಬಗ್ಗೆ ಅಭಿಪ್ರಾಯ ತಿಳಿಸುವುದು ನಮ್ಮ ಜವಾಬ್ದಾರಿಯಾಗಿರುವುದು.

ಸೆಕ್ರೆಟೇರಿಯಲ್ ದಾಖಲೆಗಳ ಒಕ್ಕಣೆಗಳ ನಿಖರತೆ ಬಗ್ಗೆ ಸೂಕ್ತವಾದ ಭರವಸೆ ಪಡೆಯಲು ಸೂಕ್ತವಾದ ಲೆಕ್ಕಪರಿಶೋಧನೆ ಪದ್ಧತಿಗಳು ಮತ್ತು ಕ್ರಮಗಳನ್ನು ನಾವು ಅನುಸರಿಸಿದ್ದೇವೆ. ಸೆಕ್ರೆಟೇರಿಯಲ್ ದಾಖಲೆಗಳಲ್ಲಿ ಸರಿಯಾದ ಅಂಶಗಳು ಬಿಂಬಿತವಾಗಿರುವ ಎಂಬ ಬಗ್ಗೆ ಖಾತರಿಪಡಿಸಿಕೊಳ್ಳಲು ಪರೀಕ್ಷಾರ್ಥ ಆಧಾರದ ಮೇಲೆ ಪರಿಶೀಲನೆ ಮಾಡಲಾಗಿದೆ. ನಾವು ಅನುಸರಿಸಿರುವ ಕ್ರಮಗಳು ಮತ್ತು ಪದ್ಧತಿಗಳು ನಮ್ಮ ಅಭಿಪ್ರಾಯಕ್ಕೆ ಸೂಕ್ತವಾದ ಆಧಾರ ಒದಗಿಸುತ್ತೇವೆಂದು ನಾವು ನಂಬಿದ್ದೇವೆ.

ಸರಕುಗಳು ಮತ್ತು ಸೇವಾ ತೆರಿಗೆಗಳು, ಆದಾಯ ತೆರಿಗೆ, ಸೀಮಾ ಸುಂಕ ಮತ್ತು ಕಂಪನಿಗೆ ಅನ್ವಯವಾಗುವ ಇತರೆ ಸಂಬಂಧಪಟ್ಟ ಕಾನೂನುಗಳಿಗೆ ಸಂಬಂಧಿಸಿದ ದಾಖಲೆಗಳೂ ಸೇರಿದಂತೆ ಕಂಪನಿಯ ಯಾವುದೇ ಹಣಕಾಸಿನ ದಾಖಲೆಗಳು ಮತ್ತು ಲೆಕ್ಕದ ಪುಸ್ತಕಗಳು ಸರಿಯಾಗಿರುವಿಕೆ ಮತ್ತು ಸೂಕ್ತತೆಯನ್ನು ನಾವು ಪರಿಶೀಲಿಸಿರುವುದಿಲ್ಲ.

ಅಗತ್ಯವಿರುವಡೆಯಲ್ಲಿ ಕಾನೂನುಗಳು, ನಿಯಮಗಳು, ಮತ್ತು ನಿಬಂಧನೆಗಳ ಅನುಸರಣೆ ಬಗ್ಗೆ ಮತ್ತು ಕಾಲಕಾಲಕ್ಕೆ ಅನ್ವಯವಾಗುವಂತೆ ಘಟನಾವಳಿಗಳನ್ನು ಕಂಪನಿ ಪ್ರತಿನಿಧಿಸಿದೆ. ಕೈಗಾರಿಕಾ ನಿರ್ದಿಷ್ಟ ಕಾನೂನುಗಳ ಅಡಿಯಲ್ಲಿನ ಅನುಸರಣೆಯನ್ನು ಕಂಪನಿ ಒದಗಿಸಿರುವ ಅನ್ವಯವಾಗುವ ಕಾನೂನುಗಳ ಪಟ್ಟಿಯ ಆಧಾರದ ಮೇಲೆ ಪರಿಶೀಲಿಸಲಾಗಿದೆ.

ಕಾರ್ಪೋರೇಟ್ ಮತ್ತು ಇತರೆ ಅನ್ವಯವಾಗುವ ಕಾನೂನುಗಳು, ನಿಯಮಗಳು, ನಿಬಂಧನೆಗಳ ಗುಣಮಟ್ಟಗಳ ಉಪಬಂಧಗಳನ್ನು ಅನುಸರಿಸುವುದು ಆಡಳಿತ ವರ್ಗದ ಜವಾಬ್ದಾರಿಯಾಗಿರುವುದು. ಪರೀಕ್ಷಾರ್ಥ ಆಧಾರದ ಮೇಲೆ ಕ್ರಮಾನುಸರಣೆಯನ್ನು ಪರಿಶೀಲಿಸುವುದಕ್ಕೆ ಮಾತ್ರ ನಮ್ಮ ಪರೀಕ್ಷೆ ಸೀಮಿತವಾಗಿರುವುದು.

ಸೆಕ್ರೆಟೇರಿಯಲ್ ಲೆಕ್ಕಪರಿಶೋಧನಾ ವರದಿಯು ಕಂಪನಿಯ ಮುಂದಿನ ಅಸ್ಥಿತ್ವದ ಬಗ್ಗೆಯಾಗಲಿ ಅಥವಾ ಕಂಪನಿಯ ವ್ಯವಹಾರಗಳನ್ನು ಆಡಳಿತ ವರ್ಗ ನಡೆಸಿರುವ ಸಾಮರ್ಥ್ಯ ಮತ್ತು ಪರಿಣಾಮದ ಬಗ್ಗೆಯಾಗಲಿ ಭರವಸೆ ನೀಡುವುದಾಗಿರುವುದಿಲ್ಲ.

**ಎಸ್.ಕೇದಾರ್‌ನಾಥ್ ಅಂಡ್ ಅಸೋಸಿಯೇಟ್ಸ್ ಪರವಾಗಿ,**
**ಸಹಿ/-**
**ಎಸ್.ಕೇದಾರ್‌ನಾಥ್**
**ಕಂಪನಿ ಕಾರ್ಯದರ್ಶಿ**
**ಸಿ.ಪಿ. ನಂ.4422**

ದಿನಾಂಕ:16ನೇ ಸೆಪ್ಟೆಂಬರ್ 2019
ಸ್ಥಳ: ಬೆಂಗಳೂರು

## ಹತ್ತು ವರ್ಷಗಳ ಸಾಧನೆ

### ಹತ್ತು ವರ್ಷಗಳ ಹಣಕಾಸಿನ ಮುಖ್ಯಾಂಶಗಳು

(ರೂ.ಲಕ್ಷಗಳಲ್ಲಿ)

| | 2009-10 | 2010-11 | 2011-12 | 2012-13 | 2013-14 | 2014-15 | 2015-16 | 2016-17 | 2017-18 | 2018-19 |
|---|---|---|---|---|---|---|---|---|---|---|
| ನಿವ್ವಳ ಮೌಲ್ಯ | 15737.73 | 16166.68 | 18412.05 | 20637.85 | 23701.53 | 26814.97 | 30051.70 | 33190.30 | 33503.15 | 35481.95 |
| (ಷೇರು ಬಂಡವಾಳ ಮೀಸಲು) | | | | | | | | | | |
| ಪಾವತಿಸಿದ ಬಂಡವಾಳ | 366.23 | 366.23 | 366.23 | 366.23 | 2017.66 | 2017.66 | 2017.66 | 2017.66 | 4273.48 | 4273.48 |
| ಷೇರು ಅರ್ಜಿ ಹಣ | 2780.96 | 2780.96 | 3907.25 | 3907.25 | 2255.82 | 2255.82 | 2255.82 | 2255.82 | | |
| ಮೀಸಲು ಮತ್ತು ಹೆಚ್ಚಳ | 12590.54 | 13019.49 | 14138.57 | 16364.37 | 19428.05 | 22541.49 | 25778.22 | 31172.64 | 29229.68 | 31208.47 |
| ಬ್ಯಾಂಕ್‌ಗಳಿಂದ ಪಡೆದ ಸಾಲಗಳು | - | - | - | - | - | - | - | - | - | - |
| ನಿವ್ವಳ ಸ್ಥಿರಾಸ್ತಿಗಳು | 3249.19 | 3999.03 | 4071.36 | 4097.95 | 4221.84 | 5624.66 | 5626.25 | 6225.01 | 6974.83 | 7966.36 |
| ವಹಿವಾಟು | 28637.27 | 50897.06 | 71749.54 | 97828.66 | 120066.32 | 146039.32 | 151490.75 | 161407.69 | 178875.91 | 204763.86 |
| ತೆರಿಗೆ ಮುಂಚಿನ ಲಾಭ | (420.32) | 831.09 | 3160.37 | 3528.05 | 4660.26 | 6052.27 | 5400.50 | 5699.87 | 1486.84 | 3237.82 |
| ಲಾಭಾಂಶ | - | - | - | 10% | 10% | 10% | 10% | 10% | - | - |
| ತೆರಿಗೆ ನಂತರದ ಪ್ರತಿ ಷೇರಿನ ನಿವ್ವಳ ಗಳಿಕೆ (ರೂ.ಗಳಲ್ಲಿ) | (23.00) | 146.00 | 755.35 | 625.69 | 162.96 | 166.36 | 178.71 | 181.68 | 12.68 | 46.30 |
| ಪ್ರತಿ ಷೇರಿನ ನಿವ್ವಳ ಮೌಲ್ಯ (ರೂ.ಗಳಲ್ಲಿ) | 4297.23 | 4414.35 | 3960.57 | 4568.33 | 1062.90 | 1217.21 | 1377.63 | 1644.99 | 783.98 | 830.28 |

## ಹತ್ತು ವರ್ಷಗಳ ಸಂಕ್ಷಿಪ್ತ ಲಾಭ ಮತ್ತು ನಷ್ಟದ ಲೆಕ್ಕ

(ರೂ.ಲಕ್ಷಗಳಲ್ಲಿ)

| | 2009-10 | 2010-11 | 2011-12 | 2012-13 | 2013-14 | 2014-15 | 2015-16 | 2016-17 | 2017-18 | 2018-19 |
|---|---|---|---|---|---|---|---|---|---|---|
| ವಹಿವಾಟು | 28637.27 | 50897.06 | 71749.54 | 97828.66 | 120066.32 | 146039.32 | 151490.75 | 161407.69 | 178875.91 | 204763.86 |
| ಒಟ್ಟು ಆದಾಯ | 3795.04 | 4946.44 | 8204.97 | 10751.19 | 12325.68 | 14919.86 | 15490.81 | 16453.84 | 17952.46 | 20742.63 |
| ಮಾರಾಟ ಮತ್ತು ಆಡಳಿತಾತ್ಮಕ ವೆಚ್ಚಗಳು | 2495.37 | 3830.23 | 6105.53 | 6646.46 | 6965.11 | 8923.90 | 9636.88 | 10433.61 | 15990.08 | 16723.59 |
| ಬಡ್ಡಿ | 26.93 | 26.05 | 28.78 | 51.58 | 30.76 | 48.68 | 145.35 | 2.44 | 0.90 | 33.52 |
| ಸವಕಳಿ | 110.45 | 131.75 | 229.07 | 245.46 | 280.77 | 291.01 | 255.39 | 285.21 | 341.85 | 721.80 |
| ಮುನ್ನೇರ್ಪಾಡು/ ವಜಾ | 1582.61 | 233.86 | 328.48 | 302.75 | 399.05 | 47.72 | 91.36 | 50.60 | 132.79 | 25.90 |
| **ಒಟ್ಟು** | **4215.36** | **4221.89** | **6691.86** | **7246.25** | **7675.69** | **9311.31** | **10128.98** | **10771.86** | **16465.62** | **17504.81** |
| ತೆರಿಗೆಗೆ ಮುಂಚಿನ ಲಾಭ | (420.32) | 724.55 | 1513.11 | 3504.94 | 4649.99 | 5608.55 | 5361.83 | 5681.98 | 1486.84 | 3237.82 |
| ತೆರಿಗೆಗೆ ಮುನ್ನೇರ್ಪಾಡು | | | 1080.78 | 1313.16 | 1372.76 | 2252.67 | 1923.22 | 1978.80 | 939.77 | 1153.69 |
| ಮುಂದೂಡಲಾದ ತೆರಿಗೆ ಸಾಲ | 334.73 | (295.60) | (686.75) | (76.58) | (20.96) | (0.62) | (167.21) | 37.48 | 5.22 | 105.33 |
| ತೆರಿಗೆ ನಂತರದ ಲಾಭ | (85.59) | 428.95 | 1119.08 | 2268.36 | 3298.19 | 3356.50 | 3605.82 | 3665.70 | 541.85 | 1978.80 |

MSIL

## ಹತ್ತು ವರ್ಷಗಳ ಸಂಕ್ಷಿಪ್ತ ಸ್ಥಿತಿ ವಿವರಣಾ ಪಟ್ಟಿ

(ರೂ.ಲಕ್ಷಗಳಲ್ಲಿ)

| | 2009-10 | 2010-11 | 2011-12 | 2012-13 | 2013-14 | 2014-15 | 2015-16 | 2016-17 | 2017-18 | 2018-19 |
|---|---|---|---|---|---|---|---|---|---|---|
| **ಸ್ವಂತ ನಿಧಿಗಳು** | | | | | | | | | | |
| ಷೇರು ಬಂಡವಾಳ | 366.23 | 366.23 | 366.23 | 366.23 | 2017.66 | 2017.66 | 2017.66 | 2017.66 | 4273.48 | 4273.48 |
| ಷೇರು ಅರ್ಜಿ ಹಣ | 2780.96 | 2780.96 | 3907.25 | 3907.25 | 2255.82 | 2255.82 | 2255.82 | 2255.82 | | |
| ಮೀಸಲು ಮತ್ತು ಹೆಚ್ಚಳ | 12590.54 | 13019.49 | 14138.57 | 16364.37 | 19428.05 | 22541.49 | 25778.22 | 31172.64 | 29229.68 | 31208.47 |
| **ಒಟ್ಟು** | **15737.73** | **16166.68** | **18412.05** | **20637.85** | **23701.53** | **26814.97** | **30051.70** | **35446.12** | **33503.16** | **35481.95** |
| **ಸಾಲ ನಿಧಿಗಳು** | | | | | | | | | | |
| ಅಲ್ಪಾವಧಿ ಸಾಲ | 784.45 | 753.05 | 77.42 | 53.88 | 53.88 | 53.88 | 53.88 | 53.88 | 53.88 | 53.88 |
| ನಿಧಿಗಳ ಹೂಡಿಕೆ | 784.45 | 753.05 | 77.42 | 53.88 | 53.88 | 53.88 | 53.88 | 53.88 | 53.88 | 53.88 |
| ಮುಂದೂಡಿದ ತೆರಿಗೆ ಹೊಣೆಗಾರಿಕೆ (ನಿವ್ವಳ) | - | - | - | - | - | - | - | - | - | - |
| **ಒಟ್ಟು** | **16522.18** | **16919.73** | **18489.47** | **20691.73** | **23755.41** | **26868.85** | **30105.58** | **35500.00** | **33557.04** | **35535.83** |
| **ನಿಧಿಗಳ ಉಪಯೋಗ** | | | | | | | | | | |
| ಸ್ಥಿರಾಸ್ತಿಗಳು | 3249.19 | 3999.03 | 4071.36 | 4097.95 | 4221.84 | 5624.66 | 5626.25 | 6225.01 | 6974.83 | 7966.36 |
| ಹೂಡಿಕೆಗಳು | 1336.06 | 1336.06 | 1336.06 | 1336.06 | 1336.06 | 1336.06 | 1336.51 | 3361.36 | 2900.13 | 2998.03 |
| ಮುಂದೂಡಿದ ತೆರಿಗೆ ಆಸ್ತಿ (ನಿವ್ವಳ) | 357.31 | 61.71 | 748.46 | 825.04 | 846.00 | 846.62 | 1013.83 | 976.35 | 971.13 | 865.80 |
| ದುಡಿಮೆ ಬಂಡವಾಳ | 11579.61 | 11522.93 | 12333.59 | 14432.68 | 17351.51 | 19061.51 | 22128.99 | 24937.28 | 22710.95 | 23705.64 |
| **ಒಟ್ಟು** | **16522.17** | **16919.73** | **18489.47** | **20691.73** | **23755.41** | **26868.85** | **30105.58** | **35500.00** | **33557.04** | **35535.83** |

# ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್

## 31ನೇ ಮಾರ್ಚ್ 2019ಕ್ಕೆ ಕೊನೆಗೊಂಡ ವರ್ಷದ ಕ್ರೋಡೀಕೃತ ಲೆಕ್ಕಗಳು

# ಸ್ವತಂತ್ರ ಲೆಕ್ಕಪರಿಶೋಧಕರ ಪರಿಷ್ಕೃತ ವರದಿ

**ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನ**

**ಸದಸ್ಯರುಗಳಿಗೆ**

**ಕ್ರೋಢೀಕೃತ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಹಣಕಾಸು ಹೇಳಿಕೆಗಳ ಮೇಲಿನ ವರದಿ**

## ಅರ್ಹತಾ ಅಭಿಪ್ರಾಯ

ನಾವು ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನ (ಇಲ್ಲಿ ಇದನ್ನು ಇನ್ನು ಮುಂದೆ 'ಧಾರಕ ಕಂಪನಿ' ಎಂಬುದಾಗಿ ಪ್ರಸ್ತಾಪಿಸಲಾಗುವುದು) ಇದರೊಡನಿರುವ ಕ್ರೋಡೀಕೃತ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಹಣಕಾಸು ಹೇಳಿಕೆಗಳು ಮತ್ತು ಇದರ ಸಹಾಯಕ ಸಂಸ್ಥೆಗಳ (ಧಾರಕ ಕಂಪನಿ ಮತ್ತು ಇದರ ಸಹಾಯಕ ಸಂಸ್ಥೆಗಳನ್ನು ಒಟ್ಟಾಗಿ 'ಗ್ರೂಪ್' ಎಂಬುದಾಗಿ ಪ್ರಸ್ತಾಪಿಸಲಾಗಿದೆ), ಮತ್ತು ಇದರ ಸಹವರ್ತಿ ಕಂಪನಿಯ, 31ನೇ ಮಾರ್ಚ್ 2019ರಂದು ಇದ್ದಂತಹ ಕ್ರೋಡೀಕೃತ ಸ್ಥಿತಿ ವಿವರಣಾ ಪಟ್ಟಿ, ಲಾಭ ಮತ್ತು ನಷ್ಟದ (ಇತರೆ ಸಮಗ್ರ ಆದಾಯ ಒಳಗೊಂಡಂತೆ) ಕ್ರೋಡೀಕೃತ ವಿವರ, ಈ ಅವಧಿಗೆ ಕೊನೆಗೊಂಡ ವರ್ಷದ ಕ್ರೋಡೀಕೃತ ನಗದು ಹರಿವಿನ ವಿವರ, ಸದರಿ ದಿನಾಂಕದಂದು ಇದ್ದಂತೆ ಮಹತ್ತರ ಲೆಕ್ಕ ನಿರ್ವಹಣೆ ನೀತಿಗಳ ಸಾರಾಂಶ ಮತ್ತು ಇತರೆ ವಿವರಣಾತ್ಮಕ ಮಾಹಿತಿಗಳ (ಇದನ್ನು ಇಲ್ಲಿ ಇನ್ನು ಮುಂದೆ ''ಕ್ರೋಡೀಕೃತ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಹಣಕಾಸು ಹೇಳಿಕೆಗಳ'' ಎಂಬುದಾಗಿ ಪ್ರಸ್ತಾಪಿಸಲಾಗುವುದು) ಲೆಕ್ಕ ಪರೀಶೋಧನೆ ಮಾಡಿದ್ದೇವೆ.

ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗೆ ದೊರೆತ ಅತ್ಯುತ್ತಮ ಮಾಹಿತಿ ಹಾಗೂ ನೀಡಿದ ವಿವರಣೆಯನುಸಾರ ನಮ್ಮ ವರದಿಯ ಅರ್ಹತಾ ಅಭಿಪ್ರಾಯಕ್ಕೆ ಆಧಾರ ದಡಿ ವಿಭಾಗದಲ್ಲಿ ವಿವರಿಸಿರುವ ಅಂಶಗಳ ಪರಿಸಾವಗಳನ್ನು ಹೊರತುಪಡಿಸಿ ಮುಂದೆ ತೋರಿಸಿರುವ ಕ್ರೋಢೀಕೃತ ಹಣಕಾಸು ಹೇಳಿಕೆಗಳು ಕಂಪನಿಗಳ ಕಾಯ್ದೆ 2013ರ (ಕಾಯ್ದೆ)ಅಗತ್ಯತೆಯಂತೆ ಅದು ಅಪೇಕ್ಷಿಸುವ ವಿಧಾನದಲ್ಲಿ ಮತ್ತು ಕಾಯ್ದೆಯ ಸೆಕ್ಷನ್ 133ರಡಿ ಗೊತ್ತುಪಡಿಸಿರುವ ಭಾರತೀಯ ಲೆಕ್ಕ ನಿರ್ವಹಣಾ ಗುಣಮಟ್ಟಗಳನ್ನು ಕಂಪನಿಗಳ (ಭಾರತೀಯ ಲೆಕ್ಕ ನಿರ್ವಹಣಾ ಗುಣಮಟ್ಟಗಳು) ನಿಯಮಗಳು-2015 ತಿದ್ದುಪಡಿ ಮಾಡಿರುವಂತೆ (Ind AS) ಮತ್ತು ಇತರ ಲೆಕ್ಕ ನಿರ್ವಹಣಾ ತತ್ವಗಳು ಇವುಗಳೊಂದಿಗೆ ಓದಿಕೊಳ್ಳುವ ಮೂಲಕ ಭಾರತದಲ್ಲಿ ಸಾಮಾನ್ಯವಾಗಿ ಅಂಗೀಕರಿಸಿರುವಂತೆ ಕಂಪನಿಯ ಕ್ರೋಢೀಕೃತ ಹಣಕಾಸು ಸ್ಥಿತಿ ದಿನಾಂಕ: 31ನೇ ಮಾರ್ಚ್ 2019ಕ್ಕೆ ಇದ್ದಂತೆ ಮತ್ತು ಅದರ ಕ್ರೋಢೀಕೃತ ಲಾಭ, ಈಕ್ವಿಟಿಯಲ್ಲಿ ಕ್ರೋಢೀಕೃತ ಬದಲಾವಣೆಗಳು ಮತ್ತು ಸದರಿ ದಿನದಂದು ಕೊನೆಗೊಳ್ಳುವ ವರ್ಷದ ಕ್ರೋಢೀಕೃತ ನಗದು ಚಲಾವಣೆಗಳ ಬಗ್ಗೆ ನೈಜ ಮತ್ತು ನ್ಯಾಯೋಚಿತ ಅಭಿಪ್ರಾಯ ನೀಡುತ್ತವೆ.

ನಾವು ದಿನಾಂಕ 16ನೇ ಸೆಪ್ಟೆಂಬರ್ 2019ರಂದು ಲೆಕ್ಕ ಪರಿಶೋಧನಾ ವರದಿ (ಮೂಲ ವರದಿ) ಯನ್ನು ಬೆಂಗಳೂರಿನಲ್ಲಿ ಅದೇ ದಿನಾಂಕದಂದು ನಿರ್ದೇಶಕರ ಮಂಡಳಿಯು ಅಳವಡಿಸಿಕೊಂಡಿದ್ದ ಹಣಕಾಸು ಹೇಳಿಕೆಗಳು ನೀಡಿದ್ದೇವೆ. ಕಂಪನಿಗಳ ಕಾಯ್ದೆ-2013ರ ಸೆಕ್ಷನ್ 143(6)(ಎ) ರಡಿ ಭಾರತದ ನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರ ಅಭಿಪ್ರಾಯದ ಅನುಸಾರ ಸದರಿ ಲೆಕ್ಕಪರಿಶೋಧನಾ ವರದಿಯನ್ನು ಪರಿಷ್ಕರಿಸಿದ್ದೇವೆ. ಈ ಪರಿಷ್ಕೃತ ವರದಿಯು ಕಂಪನಿಯ ಹಣಕಾಸು ಹೇಳಿಕೆಗಳಲ್ಲಿನ ಅಂಕಿ-ಅಂಶಗಳ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ. ಈ ಪರಿಷ್ಕೃತ ಲೆಕ್ಕ ಪರಿಶೋಧನಾ ವರದಿಯು ಮೂಲ ವರದಿಯನ್ನು ರದ್ದುಗೊಳಿಸುತ್ತದೆ. ಏಕೆಂದರೆ ಅದು ಭಾರತದ ಕಂಪ್ಟ್ರೋಲರ್ ಮತ್ತು ಮಹಾ ಲೆಕ್ಕ ಪರಿಶೋಧಕರ ಅಭಿಪ್ರಾಯಗಳನುಸಾರ ಸೂಕ್ತ ರೀತಿಯಲ್ಲಿ ಪರಿಷ್ಕರಿಸಲ್ಪಟ್ಟಿದೆ. ಮೂಲ ಲೆಕ್ಕ ಪರಿಶೋಧನಾ ವರದಿಯ ದಿನಾಂಕದ ನಂತರದ ಘಟನೆಗಳ ಕುರಿತು ನಮ್ಮ ಲೆಕ್ಕ ಪರಿಶೋಧನಾ ವಿಧಾನವು ಸಂಪೂರ್ಣವಾಗಿ ಧಾರಕ ಕಂಪನಿಗೆ ಸಂಬಂಧಿಸಿದಂತೆ ಅರ್ಹತಾ ಅಭಿಪ್ರಾಯಗಳಿಗೆ ಆಧಾರ ದ ಕಂಡಿಕೆಯ (ಸಿ), (ಡಿ) ಮತ್ತು (ಇ) ಅಂಶಗಳಲ್ಲಿ ತಿಳಿಸಿರುವಂತೆ ತಿದ್ದುಪಡಿಗೆ ಮಾತ್ರ ಸೀಮಿತವಾಗಿದೆ.

## ಅರ್ಹತಾ ಅಭಿಪ್ರಾಯಕ್ಕೆ ಆಧಾರ:

ಎ) ಬಾಕಿ ಶಿಲ್ಕುಪಟ್ಟಿಯ ದಿನಾಂಕದಂತೆ ಕಂಪನಿಯು ವಹಿವಾಟು ನಡೆಸಿದ ಸಂಸ್ಥೆ/ವ್ಯಕ್ತಿ/ಗ್ರಾಹಕರುಗಳಿಂದ/ಗೆವ್ಯಾಪರದಸ್ವೀಕೃತಾರ್ಹ,ಮುಂಗಡಗಳು, ಪಾವತಿಸಬೇಕಾಗಿರುವ, ಬರಬೇಕಾಗಿರುವ ಮುಂಗಡಗಳ ಬಾಕಿ ಮೊತ್ತದ ಬಗ್ಗೆ ಕಂಪನಿಯು ಮರು ಹೊಂದಾಣಿಕೆ ಮಾಡಿಕೊಂಡಿರುವುದಾಗಲಿ ಅಥವಾ ದೃಢೀಕರಿಸಿರುವುದಾಗಲಿ ಮಾಡಿರುವುದಿಲ್ಲ. ಇದರಿಂದಾಗಿ ನಮಗೆ ಸಾಕಷ್ಟು ಸರಿಯಾದ ಲೆಕ್ಕಪರಿಶೋಧನಾ ಸಾಕ್ಷ್ಯಾಧಾರವು ಕಂಪನಿಯ ಲೆಕ್ಕಪತ್ರಗಳಲ್ಲಿ ಸದರಿ ಮೊತ್ತವು ಪ್ರಸ್ತಾಪವಾಗಿರುವ ಬಗ್ಗೆ ಬಾಕಿ ಶಿಲ್ಕು ಪಟ್ಟಿಯ ದಿನಾಂಕದಂದಿನಂತೆ ತಿಳಿದುಬರುವುದಿಲ್ಲ . ಈ ವಿವರಗಳ ಅನುಪಸ್ಥಿತಿಯಲ್ಲಿ ಸದರಿ ಮೊತ್ತಗಳ ಮರು ಹೊಂದಾಣಿಕೆಯಾಗಿರುವುದನ್ನು ಖಚಿತಗೊಳಿಸಲು ಸಾಧ್ಯವಾಗುತ್ತಿಲ್ಲ. ಈ ಮರು ಹೊಂದಾಣಿಕೆಯಾಗಿಲ್ಲದ ಅಥವಾ ದೃಢಪಟ್ಟಿಲ್ಲದ ಲೆಕ್ಕಪತ್ರದಿಂದ ಉಂಟಾಗುವ ಹಣಕಾಸು ಪರಿಣಾಮವನ್ನು ನಿರ್ಧರಿಸಲು ಸಾಧ್ಯವಾಗುತ್ತಿಲ್ಲ.

ಬಿ) ಕಂಪನಿಯು ನವಿ ಮುಂಬಾಯಿಯಲ್ಲಿ ನಿರ್ಮಿಸಲಾದ ಕರ್ನಾಟಕ ಭವನಕ್ಕಾಗಿ ಉಂಟಾದ ವೆಚ್ಚದ ಮೊತ್ತ ರೂ.34,10,24,920.00ಗಳನ್ನು ಮೆ|| ಪ್ರೊಜೆಕ್ಟ್ ಮ್ಯಾನೇಜ್‌ಮೆಂಟ್ ಸರ್ವೀಸ್ ರವರಿಂದ ದಿನಾಂಕ: 31.03.2018ರಂದು ಸ್ವೀಕರಿಸಲಾದ ಕಾಮಗಾರಿ ಪೂರ್ಣಗೊಂಡ ಪ್ರಮಾಣಪತ್ರ ಆಧರಿಸಿ ಹೂಡಿಕೆಯನ್ನಾಗಿಸಿದೆ. ಆದರೆ ನಮಗೆ ಈ ಬಗ್ಗೆ ಬಾಕಿ ಶಿಲ್ಕು ಪಟ್ಟಿಯ ದಿನಾಂದಂದಿನಂತೆ ಅಗತ್ಯವಾದ ಸೂಕ್ತ ಲೆಕ್ಕಪತ್ರ ವಿವರಗಳು ಪಡೆದುಕೊಳ್ಳಲು ಸಾಧ್ಯವಾಗಿಲ್ಲ. ಈ ಮಾಹಿತಿಯ ಅನುಪಸ್ಥಿತಿಯಲ್ಲಿ ವಿಶಿಷ್ಟ ಭಾರತೀಯ ಲೆಕ್ಕಪತ್ರ ಪದ್ಧತಿಯ ಮೇಲೆ ಈ ಕ್ರಮದಿಂದ ಉಂಟಾಗುವ ಪರಿಣಾಮದ ಕುರಿತು ನಿರ್ಧರಿಸಲು ಸಾಧ್ಯವಾಗಿಲ್ಲ. ಏಕೆಂದರೆ ಕಂಪನಿಯು ಪಾವತಿಯಾಗದ ಬಿಲ್ಲುಗಳನ್ನು ಇನ್ನೂ ಇಟ್ಟುಕೊಂಡಿದೆ.

ಸಿ) ಪರಿಚ್ಛೇದ ಸಿ ಅಡಿ ಹಣಕಾಸು ಚಟುವಟಿಕೆಗಳಿಂದ ನಗದು ಚಲಾವಣೆ ಹೇಳಿಕೆಯಲ್ಲಿ ಪಾವತಿ ಮಾಡಲಾದ ಬಡ್ಡಿ ಮತ್ತು ಜಾಮೀನು ಕಮೀಷನ್ ಮೊತ್ತವನ್ನೊಳಗೊಂಡ ಆರ್ಥಿಕ ವೆಚ್ಚವೆಂದು ರೂ.69,67,046/-ಗಳೆಂದು ವರದಿ ಮಾಡಲಾಗಿದೆ. ಈ ನಗದು ಚಲಾವಣೆ ಹೇಳಿಕೆಯಲ್ಲಿ ಆದಾಯ

ತೆರಿಗೆಗಾಗಿ ಪಾವತಿ ಮಾಡಲಾದ ಬಡ್ಡಿ ಮೊತ್ತ ರೂ.33,51,677/-ಗಳನ್ನು ಸೇರಿದೆ. ಇದು ಭಾರತೀಯ ಲೆಕ್ಕಪತ್ರ ಪದ್ಧತಿ (Ind AS) ಅನುಗುಣವಾಗಿರುವುದಿಲ್ಲ. ಆದ್ದರಿಂದ ಈ ಮೊತ್ತವನ್ನು ಭಾರತೀಯ ಲೆಕ್ಕಪತ್ರ ಪದ್ಧತಿ (Ind AS) -7 ನಗದು ಚಲಾವಣೆ ಹೇಳಿಕೆಯನುಸಾರ ನಗದು ಚಲಾವಣೆ ಹೇಳಿಕೆಯಲ್ಲಿ ಕಾರ್ಯಕರ್ತರಿಗೆ ನಗದು ಚುನಾವಣೆಯಡಿ ನಮೂದಿಸಬೇಕು.

ಡಿ) ಆಸ್ತಿ ಸ್ಥಾವರ ಮತ್ತು ಉಪಕರಣಗಳ ಕುರಿತು ಲೆಕ್ಕಪತ್ರ ವಿಧಾನದ ನೀತಿ ಕುರಿತು ಚರ್ಚಿಸುತ್ತಿರುವಾಗ ಕ್ರ.ಸಂ.1.2(1)ರಲ್ಲಿ ಕಂಪನಿಗಳ ಕಾಯ್ದೆ-2013ರ ಷೆಡ್ಯೂಲ್-2ರಲ್ಲಿ ಗೊತ್ತುಪಡಿಸಿರುವಂತೆ ವಿವಿಧ ಆಸ್ತಿಗಳ ಉಪಯುಕ್ತ ಜೀವಿತಾವಧಿಯನ್ನು ನಮೂದಿಸಲಾಗಿದೆ. ಆದರೆ ಮಧ್ಯ ವಿತರಣಾ ಮಳಿಗೆಗಳಲ್ಲಿ ಪೀಠೋಪಕರಣಗಳು ಮತ್ತು ಮೊಳೆ ಬಂಧಕ (Fixtures) ಗಳ ಉಪಯುಕ್ತ ಜೀವಿತಾವಧಿಯನ್ನು 5 ವರ್ಷ ಎಂದು ಲೆಕ್ಕ ಹಾಕಲಾಗಿದೆ. ಇದು ಕಂಪನಿಗಳ ಕಾಯ್ದೆ-2013ಕ್ಕೆ ಇರುವ ಷೆಡ್ಯೂಲ್ -2ಕ್ಕನುಗುಣವಾಗಿರುವುದಿಲ್ಲ.

ಇ) ಲಾಭ ಮತ್ತು ನಷ್ಟದ ಕ್ರೋಢೀಕೃತ ಹೇಳಿಕೆಯಲ್ಲಿ ಕಾರ್ಯಾಚರಣೆಯಲ್ಲಿ ಮುಂದುವರೆದಿರುವ ಮತ್ತು ಕಾರ್ಯಾಚರಣೆ ಸ್ಥಗಿತಗೊಂಡಿರುವ ಪ್ರತಿ ಷೇರಿನ ಗಳಿಕೆಯನ್ನು ವರದಿ ಮಾಡಿರುವುದಿಲ್ಲ. ಹೇಗೂ ಈ ಮಾಹಿತಿಯನ್ನು ಪ್ರತಿ ಷೇರಿನ ಗಳಿಕೆ ಶೀರ್ಷಿಕೆಯಡಿ ಕ್ರೋಢೀಕೃತ ಹಣಕಾಸು ಹೇಳಿಕೆಗಳಿಗೆ ಭಾರತೀಯ ಲೆಕ್ಕ ನಿರ್ವಹಣಾ ಗುಣಮಟ್ಟಗಳು 33ರ ಅನುಸಾರ ಬಹಿರಂಗಪಡಿಸುವಿಕೆ ಪ್ರಕಾರ ಟಿಪ್ಪಣಿ-42 ಬಹಿರಂಗಪಡಿಸಲಾಗಿದೆ.

ನಾನು ಧಾರಕ ಕಂಪನಿಯ ಸಹಾಯಕ ಕಂಪನಿಗಳಾದ ದಿ ಮೈಸೂರು ಕ್ರೋಮ್ ಟ್ಯಾನ್ನಿಂಗ್ ಕಂಪನಿ ಲಿ.ಮತ್ತು ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿ. ಸಂಸ್ಥೆಗಳ ಹಣಕಾಸು ಹೇಳಿಕೆಗಳ ಲೆಕ್ಕ ಪರಿಶೋಧನಾ ಅಭಿಪ್ರಾಯಗಳಿಗೆ ಚಾರ್ಟರ್ಡ್‌ಅಕೌಂಟೆಂಟ್‌ರವರ ಸ್ವತಂತ್ರ ಸಂಸ್ಥೆ ಕ್ರಮವಾಗಿ ತಮ್ಮ ದಿನಾಂಕ:30.05.2019 ಮತ್ತು 03.09.2019ರ ವರದಿಗಳಲ್ಲಿ ನೀಡಿರುವ ಅಂಶಗಳಿಗೆ ಕೆಳಕಂಡ ಅರ್ಹತೆಗೆ ನಮ್ಮಿಂದ ಕೆಳಗೆ ಮರು ದಾಖಲಿಸಿರುವುದರೆಡೆಗೆ ತಮ್ಮ ಗಮನವನ್ನು ಸೆಳೆಯುತ್ತೇವೆ.

### ದಿ ಮೈಸೂರು ಕ್ರೋಮ್ ಟ್ಯಾನ್ನಿಂಗ್ ಕಂಪನಿ ಲಿ. (ಎಂಸಿಟಿಎಲ್)

ಎ) ಎಂ.ಸಿ.ಟಿ.ಎಲ್ ಸಂಸ್ಥೆಯು ತನ್ನ ಉತ್ಪಾದನಾ ಚಟುವಟಿಕೆಗಳನ್ನು 1986ರಿಂದಲೇ ನಡೆಸುತ್ತಿಲ್ಲದಿರುವುದರಿಂದ ಕಾರ್ಯನಿರತ ಸಂಸ್ಥೆಯಲ್ಲ. ಕಂಪನಿಯ ಕ್ರೋಢೀಕೃತ ನಷ್ಟ ರೂ.8,48,11,310/-ಯಾಗಿದ್ದು, ಮತ್ತು ನಿವ್ವಳ ಮೌಲ್ಯ ಹಾನಿಗೊಳಗಾಗಿದೆ. ಅಂದಿನ ದಿನಾಂಕದಂತೆ ಕಂಪನಿಯ ಪ್ರಸಕ್ತ ಋಣಭಾರಗಳು ಅದರ ಒಟ್ಟು ಆಸ್ತಿ ಮೌಲ್ಯಕ್ಕಿಂತಲೂ ರೂ.7,72,36,858/- ಗಳಿಂದ ಹೆಚ್ಚಾಗಿದೆ. ಈ ಘಟನೆಗಳು ಮತ್ತು ಸ್ಥಿತಿಗಳೊಂದಿಗೆ ಇತರ ವಿಷಯಗಳು ಟಿಪ್ಪಣಿ 36 (VIII)ರಲ್ಲಿ ನಮೂದಿಸಿರುವಂತೆ ವಸ್ತು ಸ್ಥಿತಿಯ ಅನಿಶ್ಚಿತತೆಯ ಮೇರೆಗೆ ಕಂಪನಿಯ ಮುಂದುವರಿಕೆಯ ಬಗ್ಗೆ ಗಮನಾರ್ಹ ಸಂಶಯ ವ್ಯಕ್ತವಾಗುತ್ತದೆ.

ಬಿ) ಎಂ.ಸಿ.ಟಿ.ಎಲ್. ಸಂಸ್ಥೆಯ ಎಂಎಸ್ಐಎಲ್, ಕೆ.ಎಸ್.ಎಸ್.ಐ.ಡಿ.ಸಿ. ಮತ್ತು ಕರ್ನಾಟಕ ಸರ್ಕಾರದಿಂದ ಪಡೆದುಕೊಂಡಿರುವ ಸಾಲಕ್ಕೆ ಪ್ರಸಕ್ತ ಸಾಲಿಗಾಗಿ ಉಂಟಾದ ಬಡ್ಡಿ ಮೊತ್ತ ರೂ.5,48,111.00 ಗಳು ಮತ್ತು ಏಪ್ರಿಲ್ 1999ರಿಂದ ಪಾವತಿಸಬೇಕಾದ ಬಡ್ಡಿ ಮೊತ್ತ ರೂ.1,21,17,203/-ಗಳನ್ನು ಪಾವತಿ ಮಾಡಿರುವುದಿಲ್ಲ. ಒಂದು ವೇಳೆ ಈ ಬಡ್ಡಿ ಮೊತ್ತಕ್ಕೆ ಅವಕಾಶ ಮಾಡಿಕೊಂಡಿದ್ದಲ್ಲಿ ಪ್ರಸಕ್ತ ಸಾಲಿನಲ್ಲಿ ಸಂಸ್ಥೆಯ ಲಾಭ ಮೊತ್ತ ರೂ.2,79,310/-ಗಳಿಗೆ ಪ್ರತಿಯಾಗಿ ನಷ್ಟದ ಮೊತ್ತ ರೂ.2,68,801/-ಗಳು ಮಾತ್ರ ಆಗುತ್ತಿತ್ತೆಂಬುದು ಸಂಸ್ಥೆಯ ದಿನಾಂಕ:31ನೇ ಮಾರ್ಚ್ 2019ಕ್ಕೆ ಕೊನೆಗೊಂಡ ವರ್ಷದ ಲಾಭ ಮತ್ತು ನಷ್ಟದ ಹೇಳಿಕೆಯಿಂದ ತಿಳಿದುಬರುತ್ತಿದೆ. ಪ್ರಸಕ್ತ ಋಣಭಾರದ ಮೊತ್ತವನ್ನು ರೂ.5,48,111/-ಗಳಿಂದ ಪ್ರಸಕ್ತ ಸಾಲಿನಲ್ಲಿ ಕಡಿಮೆ ಅನುಮೋದಿಸಲಾಗಿದೆ.

### ಮಾರ್ಕೆಟಿಂಗ್ ಕಮ್ಯೂನಿಕೇಷನ್ಸ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ (ಎಂಸಿಎ)

ಎ) ಬಾಕಿ ಶಿಲ್ಕು ಪಟ್ಟಿಯ ದಿನಾಂಕದಂದಿನಂತೆ ಸಂಸ್ಥೆಯು ವಹಿವಾಟು ನಡೆಸಿದ ಸಂಘ/ವ್ಯಕ್ತಿ/ಗ್ರಾಹಕರುಗಳಿಗೆ/ಗಳಿಂದ ವ್ಯಾಪಾರಕ್ಕೆ ಸಂಬಂಧಿಸಿದಂತೆ ಸ್ವೀಕೃತಾರ್ಹ, ಮುಂಗಡಗಳು ಪಾವತಿ ಮಾಡಬೇಕಾಗಿರುವ, ಬರಬೇಕಾಗಿರುವ ಮುಂಗಡಗಳ ಬಾಕಿ ಮೊತ್ತದ ಬಗ್ಗೆ ಸಂಸ್ಥೆಯು ಮರು ಹೊಂದಾಣಿಕೆ ಮಾಡಿಕೊಂಡಿರುವುದಾಗಲಿ ಅಥವಾ ದೃಢೀಕರಿಸಿರುವುದಾಗಲಿ ಮಾಡಿರುವುದಿಲ್ಲ. ಇದರಿಂದಾಗಿ ನಮಗೆ ಅಗತ್ಯವಿರುವ ಸರಿಯಾದ ಲೆಕ್ಕಪರಿಶೋಧನಾ ಸಾಕ್ಷ್ಯಾಧಾರವು ಸಂಸ್ಥೆಯ ಲೆಕ್ಕಪತ್ರಗಳಲ್ಲಿ ಆ ಮೊತ್ತವು ನಮೂದಿತವಾಗಿರುವ ಅಥವಾ ಪ್ರಸ್ತಾಪವಾಗಿರುವ ಬಗ್ಗೆ ಬಾಕಿ ಶಿಲ್ಕು ಪಟ್ಟಿಯ ದಿನಾಂಕದಂದಿನಂತೆ ತಿಳಿದುಬರುತ್ತಿಲ್ಲ.

ಈ ವಿವರಗಳ ಅನುಪಸ್ಥಿತಿಯಲ್ಲಿ ಸದರಿ ಮೊತ್ತಗಳ ಮರು ಹೊಂದಾಣಿಕೆಯಾಗಿರುವ ಬಗ್ಗೆ ಖಚಿತಪಡಿಸಲು ಸಾಧ್ಯವಾಗುತ್ತಿಲ್ಲ. ಈ ಮರು ಹೊಂದಾಣಿಕೆಯಾಗಿಲ್ಲದ ಅಥವಾ ದೃಢಪಟ್ಟಿಲ್ಲದ ಬಾಕಿ ಲೆಕ್ಕಪತ್ರಗಳು ಯಾವುದಾದರೂ ಇದ್ದಲ್ಲಿ ಅವುಗಳಿಂದ ಉಂಟಾಗುವ ಆರ್ಥಿಕ ಪರಿಣಾಮವನ್ನು ನಿರ್ಧರಿಸಲು ಸಾಧ್ಯವಾಗುತ್ತಿಲ್ಲ. ಒಟ್ಟು ಬಾಕಿ ಶಿಲ್ಕುಗಳು, ದೃಢೀಕೃತ ಬಾಕಿ ಶಿಲ್ಕುಗಳು ಮತ್ತು ದೃಢೀಕರಿಸಿಲ್ಲದಿರುವ ಬಾಕಿ ಶಿಲ್ಕುಗಳ ಶೇಕಡವಾರು ಸ್ಥಿತಿಗತಿ ಕೆಳಗೆ ನೀಡಲಾಗಿದೆ.

| ಕ್ರ. ಸಂ | ವಿವರಗಳು | ದಾಖಲೆ ಪುಸ್ತಕದ ಪ್ರಕಾರ ಮೊತ್ತ | ಖಚಿತ ಪಡಿಸಲ್ಪಟ್ಟಿರುವ ಮತ್ತು ಮರು ಹೊಂದಾಣಿಕೆ ಮಾಡಲ್ಪಟ್ಟಿರುವ ಮೊತ್ತ | ಮರು ಹೊಂದಾಣಿಕೆಯಾಗಿಲ್ಲದ/ ಖಚಿತಪಟ್ಟಿಲ್ಲದಿರುವ ಬಾಕಿ ಲೆಕ್ಕದ ಶೇಕಡವಾರು ಪ್ರಮಾಣ |
|---|---|---|---|---|
| 1 | ವ್ಯಾಪಾರದ ಸ್ವೀಕೃತಾರ್ಹ ಮೊತ್ತ | 135,24,72,321 | 21,85,000/- | 99.84% |

| | | | | |
|---|---|---|---|---|
| 2 | ವ್ಯಾಪಾರದ ಮುಂಗಡಗಳು | 5,51,21,000 | - | 100% |
| 3 | ವ್ಯಾಪಾರದ ಪಾವತಿ | | | |
| | ಮಾಡಬೇಕಾಗಿರುವ ಮೊತ್ತ | 82,27,95,847 | - | 100% |
| 4 | ಗ್ರಾಹಕರ ಮುಂಗಡ | 2,51,91,000 | - | 100% |

**ಬಿ) ಕ್ರೋಢೀಕೃತ ಹಣಕಾಸು ಹೇಳಿಕೆಗಳು-**

ಟಿಪ್ಪಣಿ-10ರಲ್ಲಿ ವ್ಯಾಪಾರದ ಸ್ವೀಕೃತಾರ್ಹ ಮೊತ್ತ ರೂ.6,15,56,000/- ಗಳು ಸೇರಿದೆ. ಈ ಮೊತ್ತವು ಕಂಪನಿಯ ಬ್ಯಾಂಕ್ ಖಾತೆಗೆ ನೇರವಾಗಿ ಆರ್‌ಟಿಜಿಎಸ್/ಎನ್‌ಇಎಫ್‌ಟಿ ಮುಖಾಂತರ ಸ್ವೀಕೃತವಾಗಿದೆ. ಈ ಬಗ್ಗೆ ಬಾಕಿ ಶಿಲ್ಕು ಪಟ್ಟಿಯ ದಿನಾಂಕದಂದಿನಂತೆ ಯಾವುದೇ ಮಾಹಿತಿ ಲಭ್ಯವಿರುವುದಿಲ್ಲ. ನಾವು ಈ ಬಗ್ಗೆ ಅಗತ್ಯವಿರುವ ಸೂಕ್ತ ಲೆಕ್ಕಪರಿಶೋಧನಾ ಸಾಕ್ಷ್ಯಾಧಾರ ಪಡೆದುಕೊಳ್ಳಲುಸಾಧ್ಯವಾಗುತ್ತಿಲ್ಲ.ಈಮಾಹಿತಿಯಅನುಪಸ್ಥಿತಿಯಲ್ಲಿ ಸದರಿ ವ್ಯಾಪಾರದ ಸ್ವೀಕೃತಾರ್ಹ ಮೊತ್ತ, ಮುಂಗಡಗಳು, ಪಾವತಿಸಬೇಕಾಗಿರುವುದು ಮತ್ತು ಗ್ರಾಹಕರಿಂದ ಮುಂಗಡಗಳ ಕುರಿತು ಯಾವುದೇ ರೀತಿಯಲ್ಲಿ ಹೊಂದಾಣಿಕೆಯಾಗಿರುವುದನ್ನು ದೃಢೀಕರಿಸಲು ಸಾಧ್ಯವಾಗುತ್ತಿಲ್ಲ. ಈ ಬಗ್ಗೆ ಗ್ರಾಹಕರ ಬಾಕಿ ಶಿಲ್ಕು ಪಟ್ಟಿಯಿಂದ ಮಾಹಿತಿ ಅಗತ್ಯವಿರುವುದು. ಇಂತಹ ಹೊಂದಾಣಿಕೆಗಳ ಹಣಕಾಸು ಪರಿಣಾಮವು ಹಳೆಯದಾಗುತ್ತಿರುವ ಸದರಿ ಬಾಕಿ ಲೆಕ್ಕದ ಮೇಲೆ ಉಂಟು ಮಾಡುವ ಯಾವುದಾದರೂ ಪ್ರಭಾವ ಇದ್ದಲ್ಲಿ ಅದನ್ನು ನಿರ್ಧರಿಸಲು ಸಾಧ್ಯವಾಗುತ್ತಿಲ್ಲ.

ಸಿ) ಈ ವರ್ಷದ ಲೆಕ್ಕ ಪತ್ರ ಪುಸ್ತಕದಲ್ಲಿ ನಮೂದಿಸಿರುವಂತೆ ಖರೀದಿ/ ಮಾರಾಟಗಳು ಮತ್ತು ಮಾಹೆವಾರು ಆಧಾರದ ಮೇಲೆ ಪಾವತಿ ಮಾಡಲಾದ ಜಿಎಸ್‌ಟಿ ಕುರಿತು ರಿಟರ್ನ್‌ಗಳ ನಡುವೆ ವ್ಯತ್ಯಾಸಗಳು ಕಂಡು ಬರುತ್ತಿವೆ. ಈ ವ್ಯತ್ಯಾಸಗಳ ಒತ್ತಡವಾಗಲಿ ಅಥವಾ ಅವುಗಳ ಮರುಹೊಂದಾಣಿಕೆಯಾಗಿರುವ ಕುರಿತಾಗಲಿ ನಮಗೆ ಅಗತ್ಯ ಮಾಹಿತಿ ಅಥವಾ ವಿವರಣೆ ಅಥವಾ ಸೂಕ್ತ ಲೆಕ್ಕಪರಿಶೋಧನಾ ಸಾಕ್ಷ್ಯಾಧಾರ ಪಡೆದುಕೊಳ್ಳಲು ಸಾಧ್ಯವಾಗುತ್ತಿಲ್ಲ. ಈ ಮಾಹಿತಿಯ ಅನುಪಸ್ಥಿತಿಯಲ್ಲಿ ಇಂತಹ ಪೂರ್ಣಗೊಳಿಸದ ಅಂಶಗಳ ಹಣಕಾಸು ಪರಿಣಾಮಗಳನ್ನು ಕುರಿತು ನಿರ್ಧರಿಸಲು ನಮಗೆ ಸಾಧ್ಯವಾಗುತ್ತಿಲ್ಲ.

ಡಿ) ಕಂಪನಿಯು ಒಟ್ಟು 37 ಸಿಬ್ಬಂದಿಯನ್ನು ಹೊಂದಿದ್ದು, ಅವರುಗಳ ಪೈಕಿ 20 ಸಿಬ್ಬಂದಿಯವರು ಮಾತ್ರ ವೇತನಪಟ್ಟಿಯಲ್ಲಿದ್ದು, ಅವರುಗಳನ್ನು ನಿವೃತ್ತಿ ವಿಮಾ ಮೌಲ್ಯಮಾಪನಕ್ಕಾಗಿ ಮತ್ತು ರಜಾ ನಗದೀಕರಣಕ್ಕಾಗಿ ಪರಿಗಣಿಸಿರುವುದು ಬಾಕಿ ಶಿಲ್ಕು ಪಟ್ಟಿಯ ದಿನಾಂಕದಂದಿನಂತೆ ಇರುವ ಮಾಹಿತಿಯಿಂದ ತಿಳಿದುಬರುತ್ತಿದೆ. ಇನ್ನುಳಿದ 17 ಜನ ಸಿಬ್ಬಂದಿಯವರನ್ನು ಸದರಿ ಬಾಕಿ ಶಿಲ್ಕು ಪಟ್ಟಿಯಲ್ಲಿರುವಂತೆ ನಿವೃತ್ತಿ ವಿಮಾ ಮೌಲ್ಯಮಾಪನಕ್ಕಾಗಿ ಪರಿಗಣಿಸದೇ ಇರುವುದರಿಂದ ಉಂಟಾಗುವ ಆರ್ಥಿಕ ಪರಿಣಾಮ ಯಾವುದಾದರೂ ಇದ್ದಲ್ಲಿ ಅದನ್ನು ನಿರ್ಧರಿಸಲು ಸಾಧ್ಯವಾಗುತ್ತಿಲ್ಲ.

ಇ) ಕಂಪನಿಯು ದಿನಾಂಕ:18.06.2019ರಂದು ನಡೆದ ಮಂಡಳಿ ಸಭೆಯಲ್ಲಿ ಲೆಕ್ಕಾನುಸಾರ ಸ್ವೀಕೃತಾರ್ಹ ಮೊತ್ತದಲ್ಲಿ ಬಾಕಿ ವಸೂಲಾಗಬೇಕಿರುವ ಮೊತ್ತ ರೂ.39,29,000/- ಗಳನ್ನು ಕಂಪನಿಯು ವಿಜಯಪುರ ಶಾಖಾ ವ್ಯವಸ್ಥಾಪಕರಾದ ಶ್ರೀ ಎಂ.ಎಸ್. ಪಾಟೀಲ್ ಅವರು ಕಕ್ಷಿ (ಗ್ರಾಹಕ) ದಾರ ಇಲಾಖೆಯಾದ ವಿಜಯಪುರ ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯಿಂದ ಪಡೆದುಕೊಂಡಿದ್ದು, ಸದರಿ ಮೊತ್ತವು ಕಂಪನಿಯಿಂದ ಸ್ವೀಕೃತವಾಗಿಲ್ಲ. ಅದಕ್ಕಾಗಿ ಪ್ರಥಮ ಮಾಹಿತಿ ವರದಿ (ಎಫ್ ಐಆರ್) ಯನ್ನು ವಿಜಯಪುರದ ಜಲನಗರ ಪೊಲೀಸ್ ಠಾಣೆಯಲ್ಲಿ ದಾಖಲಿಸಲಾಗಿದೆ. ಅದೇ ವೇಳೆಯಲ್ಲಿ ಕಂಪನಿಯ ಆಡಳಿತ ಕೈಪಿಡಿಯನುಸಾರ ಸಾರ್ವಜನಿಕ ನೌಕರರ (ನಿವೃತ್ತ ನ್ಯಾಯಾಧೀಶರು) ಮುಖಾಂತರ ಇಲಾಖೆ ವಿಚಾರಣೆ ನಡೆಸಲು ಕ್ರಮ ಜರುಗಿಸಲಾಗಿದೆ. ಈ ಸ್ವೀಕೃತಾರ್ಹ ಸಂಗ್ರಹಿತ ಮೊತ್ತದ ಲೆಕ್ಕವನ್ನು ಬಾಕಿ ಶಿಲ್ಕು ಪಟ್ಟಿಯ ದಿನಾಂಕದಂದಿನಂತೆ ಪರಿಗಣಿಸಿರುವುದರಿಂದ ಉಂಟಾಗುವ ಆರ್ಥಿಕ ಪರಿಣಾಮ ಯಾವುದಾದರೂ ಇದ್ದಲ್ಲಿ ಅದನ್ನು ನಿರ್ಧರಿಸಲು ಸಾಧ್ಯವಾಗುತ್ತಿಲ್ಲ.

ಎಫ್) ಸೆಪ್ಟೆಂಬರ್ 3, 2019ರಂದು ನಡೆದ ಕಂಪನಿಯ 257ನೇ ಮಂಡಳಿಯ ಸಭೆಯಲ್ಲಿ ಆರ್ಥಿಕ ವರ್ಷ 2018-19ರ ಹಣಕಾಸು ಹೇಳಿಕೆಯನ್ನು ಅಂಗೀಕರಿಸಲು ತೆಗೆದುಕೊಂಡ ನಿರ್ಣಯನುಸಾರ, ಕಂಪನಿಯ ಸದಸ್ಯರ ಅನುಮೋದನೆ ಪಡೆದುಕೊಳ್ಳುವ ಷರತ್ತಿಗೆ ಒಳಪಟ್ಟು, 31ನೇ ಮಾರ್ಚ್ 2019ರಂದು ಕೊನೆಗೊಂಡ ವರ್ಷಕ್ಕೆ ಅನ್ವಯಿಸಿ ರೂ.100/- ಮುಖ ಬೆಲೆಯ ಪಾವತಿ ಮಾಡಲಾದ ಪ್ರತಿ ಷೇರಿಗೆ ಶೇಕಡಾ 15 ರಂತೆ. ಲಾಭಾಂಶವನ್ನು ನೀಡಲು ಅನುಮೋದನೆ ಮತ್ತು ಅದನ್ನು ಘೋಷಿಸಲು ಸಮ್ಮತಿಸಲಾಯಿತು. ಕಂಪನಿಯು ಈ ಬಗ್ಗೆ ಲೆಕ್ಕಪತ್ರಗಳ ಟಿಪ್ಪಣಿಯಲ್ಲಿ ಸಮರ್ಪಕ ಮಾಹಿತಿ ನೀಡಿರುವುದಿಲ್ಲ.

ನಾವು ನಮ್ಮ ಲೆಕ್ಕಪರಿಶೋಧನಾ ಕಾರ್ಯವನ್ನು ಕಾಯ್ದೆಯ ಸೆಕ್ಷನ್ 143(10) ರಡಿ ಗೊತ್ತುಪಡಿಸಿರುವ ಲೆಕ್ಕ ಪರಿಶೋಧನೆಯ ಗುಣಮಟ್ಟಗಳಾನುಸಾರ ನಡೆಸಿದ್ದೇವೆ. ನಮ್ಮ ಜವಾಬ್ದಾರಿಗಳ ಕುರಿತು ಸದರಿ ಗುಣಮಟ್ಟಗಳಡಿ ಕ್ರೋಢೀಕೃತ ಹಣಕಾಸು ಹೇಳಿಕೆಗಳ ನಮ್ಮ ವರದಿಯ ಭಾಗದಲ್ಲಿ ಲೆಕ್ಕ ಪರಿಶೋಧನೆಗೆ ಲೆಕ್ಕ ಪರಿಶೋಧಕರ ಜವಾಬ್ದಾರಿಗಳ ಕುರಿತು ಇನ್ನು ವಿವರವಾಗಿ ತಿಳಿಸಲಾಗಿದೆ.

ಕಾಯ್ದೆಯ ಉಪಬಂಧಗಳಡಿ ಭಾರತೀಯ ಚಾರ್ಟರ್ಡ್ ಅಕೌಂಟೆಂಟ್‌ಗಳ ಸಂಸ್ಥೆಯ ಹೊರಡಿಸಿರುವ ನೈತಿಕ ಸಂಹಿತೆಯ ಪ್ರಕಾರ ಮತ್ತು ಕ್ರೋಢೀಕೃತ ಭಾರತೀಯ ಲೆಕ್ಕ ನಿರ್ವಹಣಾ ಗುಣಮಟ್ಟ ಹಣಕಾಸು ಹೇಳಿಕೆಗಳ ನಮ್ಮ ಲೆಕ್ಕ ಪರಿಶೋಧನೆಗಾಗಿ ಸೂಕ್ತವಾದ ನೈತಿಕ ಅಗತ್ಯತೆಗಳೊಂದಿಗೆ ನಾವು ಗುಂಪಿನ ಮತ್ತು ಸಹವರ್ತಿಗಳಿಂದ ಸ್ವತಂತ್ರ ಲೆಕ್ಕ ಪರಿಶೋಧಕಲಾಗಿದ್ದು ಮತ್ತು ನಾವು ಈ ಅಗತ್ಯತೆಗಳನುಸಾರ ಮತ್ತು ಐಸಿಎಐನ ನೈತಿಕ ಸಂಹಿತೆಯನುಸಾರದಲ್ಲಿ ನಮ್ಮ ಇತರ ನೈತಿಕ ಜವಾಬ್ದಾರಿಗಳನ್ನು ಪೂರೈಸಿರುತ್ತೇವೆ.

MSIL

ನಾವು ಪಡೆದುಕೊಂಡಿರುವ ಲೆಕ್ಕ ಪರಿಶೋಧನಾ ಸಾಕ್ಷ್ಯಾಧಾರವು ನಮ್ಮ ಅರ್ಹತಾ ಅಭಿಪ್ರಾಯ ಒದಗಿಸಲು ಸಾಕಷ್ಟು ಮತ್ತು ಸೂಕ್ತವಾಗಿರುವುದೆಂದು ನಂಬುತ್ತೇವೆ.

### ಮಹತ್ವದ ವಿಷಯ

**ಧಾರಕ ಕಂಪನಿಯ ಸಹಾಯಕ ಕಂಪನಿ :** ದಿ ಮೈಸೂರು ಕ್ರೋಮ್ ಟ್ಯಾನ್ನಿಂಗ್ ಕಂಪನಿ ಲಿಮಿಟೆಡ್ ಗೆ ಸಂಬಂಧಿಸಿದ ಹಣಕಾಸು ಹೇಳಿಕೆಗಳ ಕುರಿತು ಚಾರ್ಟರ್ಡ್ ಅಕೌಂಟೆಂಟ್ಸ್ ರವರ ಸ್ವತಂತ್ರ ಸಂಸ್ಥೆಯಾಗಿ ಹೊರಡಿಸಿರುವ ತನ್ನ ದಿನಾಂಕ:30.05.2019ರ ಲೆಕ್ಕ ಪರಿಶೋಧನಾ ವರದಿಯಲ್ಲಿ ಸೇರಿಸಲಾದ ಕೆಳಕಂಡ ಮಹತ್ವದ ವಿಷಯದೆಡೆಗೆ ನಾವು ತಮ್ಮ ಗಮನವನ್ನು ಸೆಳೆಯುತ್ತೇವೆ.

### ದಿ ಮೈಸೂರು ಕ್ರೋಮ್ ಟ್ಯಾನ್ನಿಂಗ್ ಕಂಪನಿ ಲಿಮಿಟೆಡ್ (ಎಂಸಿಟಿಎಲ್)

(1) ಟಿಪ್ಪಣಿ 38 (ix) : ಬಿಡಿಎ ದಿಂದ ವಸೂಲಾಗಬೇಕಿದ್ದ ಪರಿಹಾರ ಮೊತ್ತದ ಕುರಿತು ಕ್ರೋಢೀಕೃತ ಹಣಕಾಸು ಹೇಳಿಕೆಗಳಲ್ಲಿ ಮೊತ್ತದ ಖಚಿತತೆ ಇರುವುದಿಲ್ಲ.

(2) ಟಿಪ್ಪಣಿ 16 (ii) : ಮುಂಗಡಗಳು ಮತ್ತು ಇತರ ಅಂಶಗಳ ಮೇಲಿನ ಬಡ್ಡಿ ಮೊತ್ತಕ್ಕೆ ಕ್ರೋಢೀಕೃತ ಹಣಕಾಸು ಹೇಳಿಕೆಗಳಲ್ಲಿ ಅವಕಾಶ ಮಾಡಿಕೊಂಡಿಲ್ಲದಿರುವುದರಿಂದ ಉಂಟಾಗುವ ಪ್ರತಿ ಕ್ರಿಯಾತ್ಮಕ ಪರಿಣಾಮ ಕುರಿತು ಖಚಿತಪಡಿಸಲು ಸಾಧ್ಯವಾಗುತ್ತಿಲ್ಲ.

(3) ಟಿಪ್ಪಣಿ 49 (iii) : ಸಾಲಗಳು ಮತ್ತು ಮುಂಗಡಗಳ ದೃಢೀಕರಣವಿಲ್ಲದ ಬಗ್ಗೆ ಕ್ರೋಢೀಕೃತ ಹಣಕಾಸು ಹೇಳಿಕೆಗಳು

(4) ಕಂಪನಿಯ ಸಾದಿಲ್ವಾರು ಋಣಭಾರಗಳ ವಿರುದ್ಧ ಹೂಡಲಾದ ಕಾನೂನು ಮೊಕದ್ದಮೆ ಫಲಿತಾಂಶಕ್ಕೆ ಸಂಬಂಧಿಸಿದ ಅನಿಶ್ಚಿತತೆ ಕುರಿತು ವಿವರಿಸುವ ಹಣಕಾಸು ಹೇಳಿಕೆಯ ಚಿತ್ರಣೆ 48 (ಸಿ) ಮತ್ತು ಇತರ ಮಾಹಿತಿಯ ಟಿಪ್ಪಣಿ 38 (ix) ಹಾಗೂ 16 (ii) ಕುರಿತು ಹಣಕಾಸು ಹೇಳಿಕೆಗಳಿಗೆ ಟಿಪ್ಪಣಿಗಳಲ್ಲಿ ತಿಳಿಸಲಾಗಿದೆ.

ಈ ಅಂಶಗಳಿಗೆ ಸಂಬಂಧಿಸಿದಂತೆ ನಮ್ಮ ಅಭಿಪ್ರಾಯವನ್ನು ಮಾರ್ಪಾಡು ಮಾಡಿರುವುದಿಲ್ಲ.

### ಕ್ರೋಢೀಕೃತ ಹಣಕಾಸು ಹೇಳಿಕೆಗಳನ್ನು ಹೊರತುಪಡಿಸಿ ಮಾಹಿತಿ ಮತ್ತು ಆ ಬಗ್ಗೆ ಲೆಕ್ಕ ಪರಿಶೋಧಕರ ವರದಿ

ಧಾರಕ ಕಂಪನಿಯ ನಿರ್ದೇಶಕರುಗಳ ಮಂಡಳಿಯು ಇತರ ಮಾಹಿತಿಯನ್ನು ತಯಾರಿಸುವ ಜವಾಬ್ದಾರಿ ಹೊಂದಿರುತ್ತದೆ. ಇತರ ಮಾಹಿತಿಯು ಕ್ರೋಢೀಕೃತ ಹಣಕಾಸು ಹೇಳಿಕೆಗಳು ಮತ್ತು ಅದರ ಬಗ್ಗೆ ನಮ್ಮ ಲೆಕ್ಕಪರಿಶೋಧಕರ ವರದಿಯನ್ನು ಬಿಟ್ಟು ಮಂಡಳಿಯ ವರದಿ ಅದಕ್ಕೆ ಸಂಬಂಧಿಸಿದ ಅನುಬಂಧಗಳು, ಸಾಂಸ್ಥಿಕ ಆಡಳಿತ ಮಾಹಿತಿ ಮತ್ತು ಷೇರುದಾರರ ಮಾಹಿತಿಯನ್ನು ಒಳಗೊಂಡಿರುತ್ತದೆ. ಕ್ರೋಢೀಕೃತ ಹಣಕಾಸು ಹೇಳಿಕೆಗಳ ಮೇಲಿನ ನಮ್ಮ ಅಭಿಪ್ರಾಯವು ಇತರ ಮಾಹಿತಿಯನ್ನು ಒಳಗೊಂಡಿರುವುದಿಲ್ಲ ಮತ್ತು ನಾವು ಆ ಬಗ್ಗೆ ಯಾವುದೇ ರೀತಿಯ ಭರವಸೆ, ನಿರ್ಧಾರವನ್ನು ವ್ಯಕ್ತಪಡಿಸುವುದಿಲ್ಲ.

ಕ್ರೋಢೀಕೃತ ಹಣಕಾಸು ಹೇಳಿಕೆಗಳ ನಮ್ಮ ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ ಇತರ ಮಾಹಿತಿಯನ್ನು ಓದುವುದು ನಮ್ಮ ಜವಾಬ್ದಾರಿಯಾಗಿರುತ್ತದೆ ಮತ್ತು ಹಾಗೆ ಮಾಡುವುದರ ಮೂಲಕ ಇತರ ಮಾಹಿತಿಯು ಕ್ರೋಢೀಕೃತ ಹೇಳಿಕೆಗಳೊಂದಿಗೆ ವಸ್ತುಶಃ ಪೂರಕವಾಗಿಲ್ಲದಿರುವ ಅಥವಾ ನಮ್ಮ ಲೆಕ್ಕ ಪರಿಶೋಧನೆಯ ಸಂದರ್ಭದಲ್ಲಿ ನಾವು ಪಡೆದುಕೊಂಡಿರುವ ಜ್ಞಾನವು ಅಥವಾ ಇಲ್ಲದಿದ್ದರೆ ವಸ್ತುಶಃ ತಪ್ಪಾಗಿ ಹೇಳಿರುವಂತೆ ಕಂಡುಬರುತ್ತಿರುವುದನ್ನು ಪರಿಗಣಿಸಲಾಗುತ್ತಿದೆ.

ಒಂದು ವೇಳೆ ನಾವು ನಿರ್ವಹಿಸಿದ ಕೆಲಸದ ಆಧಾರದಲ್ಲಿ ಈ ಇತರ ಮಾಹಿತಿಯು ವಸ್ತುಶಃ ತಪ್ಪು ಹೇಳಿಕೆಯಾಗಿದೆ ಎಂದು ನಿರ್ಧರಿಸಿದ್ದೇ ಆದಲ್ಲಿ ಅದಕ್ಕೆ ಸಂಬಂಧಿಸಿದಂತೆ ನಾವು ವರದಿ ಮಾಡಬೇಕಾಗುತ್ತದೆ. ಈ ದಿಶೆಯಲ್ಲಿ ನಾವು ವರದಿ ಮಾಡಬೇಕಾದುದು ಏನೂ ಇರುವುದಿಲ್ಲ.

### ಕ್ರೋಢೀಕೃತ ಹಣಕಾಸು ಹೇಳಿಕೆಗಳ ನಿರ್ವಹಣೆ ಬಗ್ಗೆ ಆಡಳಿತ ಮಂಡಳಿ ಜವಾಬ್ದಾರಿಗಳು:

ಧಾರಕ ಕಂಪನಿಯ ನಿರ್ದೇಶಕರ ಮಂಡಳಿ ಕ್ರೋಢೀಕೃತ ಹಣಕಾಸು ಹೇಳಿಕೆಗಳನ್ನು ಸಿದ್ಧಪಡಿಸುವುದಕ್ಕೆ ಸಂಬಂಧಿಸಿದ ವಿಷಯಗಳಿಗೆ ಜವಾಬ್ದಾರಿಯಾಗಿರುತ್ತದೆ. ಈ ಹೇಳಿಕೆಗಳು ಒಟ್ಟಾಗಿ ಗ್ರೂಪ್ ಮತ್ತು ಅದರ ಸಹವರ್ತಿ ಕಂಪನಿಗಳ 31ನೇ ಮಾರ್ಚ್ 2019ರಂತೆ ಕ್ರೋಢೀಕೃತ ಹಣಕಾಸು ಸ್ಥಿತಿ, ಕ್ರೋಢೀಕೃತ ಹಣಕಾಸು ಕಾರ್ಯನಿರ್ವಹಣೆ, ಕ್ರೋಢೀಕೃತ ಒಟ್ಟಾರೆ ಸಮಗ್ರ ಆದಾಯ, ಈಕ್ವಿಟಿಯಲ್ಲಿ ಕ್ರೋಢೀಕೃತ ಬದಲಾವಣೆ ಮತ್ತು ಕ್ರೋಢೀಕೃತ ನಗದು ಚಲಾವಣೆಯ ವಿವರಗಳ ಬಗ್ಗೆ ಕಾಯ್ದೆಯ ಭಾರತೀಯ ಲೆಕ್ಕ ನಿರ್ವಹಣ ಗುಣಮಟ್ಟಗಳ 130 ರಡಿ ಗೊತ್ತುಪಡಿಸಿರುವ ಅಗತ್ಯತೆ ಅನುಸಾರ ಸಿದ್ಧಪಡಿಸುವುದು ಧಾರಕ ಕಂಪನಿಯ ನಿರ್ದೇಶಕರ ಮಂಡಳಿಯ ಜವಾಬ್ದಾರಿಯಾಗಿರುವುದು.

ಕಂಪನಿಗಳ ಕಾಯ್ದೆ 2013ರ ಸೆಕ್ಷನ್ 134(5)ರಲ್ಲಿ ವಿವರಿಸಿರುವಂತೆ ಪುಸ್ತಕದ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟಗಳು:

(Ind AS) ಸೇರಿದಂತೆ ಭಾರತದಲ್ಲಿ ಸಾಮಾನ್ಯವಾಗಿ ಅಂಗೀಕರಿಸಲಾಗಿರುವ ಲೆಕ್ಕ ನಿರ್ವಹಣೆ ನೀತಿಗಳ ಅನುಸಾರ ಅದರ ಸಹವರ್ತಿ ಕಂಪನಿಯು ಸೇರಿದಂತೆ 'ಗ್ರೂಪ್' ನ ಕ್ರೋಢೀಕೃತ ಹಣಕಾಸಿನ ಸ್ಥಿತಿ, ಕ್ರೋಢೀಕೃತ ಹಣಕಾಸಿನ ಕಾರ್ಯಕ್ಷಮತೆ (ಇತರೆ ಸಮಗ್ರ ಆದಾಯ ಸೇರಿದಂತೆ) ಕ್ರೋಢೀಕೃತ ನಗದು ಹರಿವಿನ ನೈಜ ಮತ್ತು ನ್ಯಾಯೋಚಿತ ಚಿತ್ರಣ ನೀಡುವ ಸದರಿ ಕ್ರೋಢೀಕೃತ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಹಣಕಾಸು ಹೇಳಿಕೆಗಳನ್ನು ಕಂಪನಿಗಳ ಕಾಯ್ದೆ, 2013ರ (ಇದನ್ನು ಇಲ್ಲಿ ಮುಂದೆ 'ಕಾಯ್ದೆ' ಎಂಬುದಾಗಿ ಪ್ರಸ್ತಾಪಿಸಲಾಗುವುದು) ಅಗತ್ಯತೆ ಅನುಸಾರ ಸಿದ್ಧಪಡಿಸುವುದು ಧಾರಕ ಕಂಪನಿಯ ನಿರ್ದೇಶಕರ ಮಂಡಳಿಯ ಜವಾಬ್ದಾರಿಯಾಗಿರುವುದು.

'ಗ್ರೂಪ್' ಮತ್ತು ಇದರ ಸಹವರ್ತಿ ಕಂಪನಿಯ ಆಸ್ತಿಗಳನ್ನು ಸುರಕ್ಷತೆ

ಮಾಡಲು ಕಾಯ್ದೆಯ ಉಪಬಂಧಗಳ ಅನುಸಾರ ಸಾಕಷ್ಟು ಪ್ರಮಾಣದಲ್ಲಿ ಲೆಕ್ಕ ನಿರ್ವಹಣೆ ದಾಖಲೆಗಳನ್ನು ನಿರ್ವಹಣೆ ಮಾಡಲು, ಮತ್ತು ವಂಚನೆಗಳು ಮತ್ತು ಇತರೆ ಅಕ್ರಮಗಳನ್ನು ತಡೆಯಲು ಮತ್ತು ಪತ್ತೆ ಹಚ್ಚಲು; ಸೂಕ್ತವಾದ ಲೆಕ್ಕ ನಿರ್ವಹಣೆ ನೀತಿಗಳನ್ನು ಆಯ್ಕೆ ಮಾಡಲು ಮತ್ತು ಅವುಗಳನ್ನು ಅನ್ವಯಿಸಲು, ಸೂಕ್ತವಾದ ಮತ್ತು ನ್ಯಾಯಸಮ್ಮತವಾದ ತೀರ್ಮಾನಗಳನ್ನು ಮತ್ತು ಅಂದಾಜುಗಳನ್ನು ಮಾಡಲು; ಮತ್ತು ಮೇಲೆ ತಿಳಿಸಿರುವಂತೆ ಧಾರಕ ಕಂಪನಿಯ ನಿರ್ದೇಶಕರು ಕ್ರೋಡೀಕೃತ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸುವ ಉದ್ದೇಶಕ್ಕಾಗಿ ಬಳಸಿಕೊಳ್ಳಲಾಗುವ, ವಂಚನೆ ಅಥವಾ ತಪ್ಪಿನಿಂದಾಗಿ ವಾಸ್ತವಿಕ ತಪ್ಪು ಹೇಳಿಕೆಗಳಿಲ್ಲದೆ ಮುಕ್ತವಾಗಿರುವ ಮತ್ತು ನೈಜ ಮತ್ತು ನ್ಯಾಯಸಮ್ಮತ ಚಿತ್ರಣ ನೀಡುವ ಕ್ರೋಡೀಕೃತ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಹಣಕಾಸು ಹೇಳಿಕೆಗಳನ್ನು ಸಿದ್ಧಪಡಿಸಲು ಮತ್ತು ನಿರೂಪಣೆ ಮಾಡಲು ಸಮ್ಮತವಾದ ಲೆಕ್ಕ ನಿರ್ವಹಣೆ ದಾಖಲೆಗಳ ನಿಖರತೆ ಮತ್ತು ಪರಿಪೂರ್ಣತೆ ಬಗ್ಗೆ ಖಾತರಿಪಡಿಸುವುದಕ್ಕೆ ಪರಿಣಾಮಕಾರಿಯಾಗಿ ಕಾರ್ಯಾಚರಣೆ ಮಾಡುವ ಸಾಕಷ್ಟು ಪ್ರಮಾಣದ ಆಂತರಿಕ ಹಣಕಾಸಿನ ನಿಯಂತ್ರಣಗಳ ವಿನ್ಯಾಸ, ಅನುಷ್ಠಾನ ಮತ್ತು ನಿರ್ವಹಣೆಗೆ 'ಗ್ರೂಪ್' ಮತ್ತು ಇದರ ಸಹವರ್ತಿ ಕಂಪನಿಯಲ್ಲಿ ಒಳಗೊಂಡಿರುವ ಕಂಪನಿಗಳ ನಿರ್ದೇಶಕರುಗಳ ಸಂಬಂಧಪಟ್ಟ ಮಂಡಳಿಯು ಜವಾಬ್ದಾರಿಯಾಗಿರುವುದು.

### ಕ್ರೋಢೀಕೃತ ಹಣಕಾಸು ಹೇಳಿಕೆಗಳ ಲೆಕ್ಕ ಪರಿಶೋಧನೆಗಾಗಿ ಲೆಕ್ಕಪರಿಶೋಧಕರ ಜವಾಬ್ದಾರಿಗಳು:

ಕ್ರೋಢೀಕೃತ ಹಣಕಾಸು ಹೇಳಿಕೆಗಳು ಇಡಿಯಾಗಿ ವಸ್ತುಶಃ ತಪ್ಪು ಹೇಳಿಕೆಗಳಿಂದ ಮುಕ್ತವಾಗಿರುವ, ವಂಚನೆ ಅಥವಾ ತಪ್ಪುಗಳಿಂದಾಗಿರುವ ಬಗ್ಗೆ ಮತ್ತು ನಮ್ಮ ಅಭಿಪ್ರಾಯದೊಂದಿಗೆ ಲೆಕ್ಕಪರಿಶೋಧಕರ ವರದಿ ನೀಡಿರುವುದರ ಕುರಿತು ಸೂಕ್ತವಾದ ಭರವಸೆ ಪಡೆಯುವುದು ನಮ್ಮ ಉದ್ದೇಶಗಳಾಗಿವೆ. ಸೂಕ್ತವಾದ ಭರವಸೆಯು ಉನ್ನತಮಟ್ಟದ ಭರವಸೆಯಾಗಿರುತ್ತದೆ. ಆದರೆ ಲೆಕ್ಕ ಪತ್ರ ನಿರ್ವಹಣಾ ಗುಣಮಟ್ಟಗಳಾನುಸಾರ ಲೆಕ್ಕಪರಿಶೋಧನೆ ನಡೆದಿದೆ ಎಂಬುದಕ್ಕೆ ಆಧಾರ (ಗ್ಯಾರಂಟಿ) ಇಲ್ಲ. ಲೆಕ್ಕಪರಿಶೋಧನೆಗಳು ಯಾವಾಗಲೂ ವಸ್ತುಶಃ ತಪ್ಪು ಹೇಳಿಕೆ ಉಂಟಾಗಿದ್ದಲ್ಲಿ ಅದನ್ನು ಪತ್ತೆ ಹಚ್ಚುತ್ತವೆ.

ತಪ್ಪು ಹೇಳಿಕೆಗಳು ವಂಚನೆ ಅಥವಾ ತಪ್ಪುಗಳಿಂದ ಉಂಟಾಗಲು ಸಾಧ್ಯ ಮತ್ತು ಅವುಗಳು ವೈಯಕ್ತಿಕ ಅಥವಾ ಸಾಮಾನ್ಯರೂಪದಲ್ಲಿ ಆಗಿದೆಯೇ ಎಂಬುದು ಪರಿಗಣಿಸಲ್ಪಡುತ್ತದೆ. ಅವುಗಳು ಈ ಕ್ರೋಢೀಕೃತ ಹಣಕಾಸು ಹೇಳಿಕೆಗಳ ಆಧಾರದಲ್ಲಿ ಬಳಕೆದಾರರು ತೆಗೆದುಕೊಳ್ಳುವ ನಿರ್ಧಾರಗಳ ಮೇಲೆ ಸೂಕ್ತ ರೀತಿಯಲ್ಲಿ ಪ್ರಭಾವ ಬೀರುತ್ತವೆಂದು ಭಾವಿಸಲಾಗಿದೆ.

ಲೆಕ್ಕ ನಿರ್ವಹಣಾ ಗುಣಮಟ್ಟಗಳಾನುಸಾರ ಲೆಕ್ಕ ಪರಿಶೋಧನೆಯ ಭಾಗವಾಗಿ ನಾವು ವೃತ್ತಿಪರ ತೀರ್ಪು ಮತ್ತು ವೃತ್ತಿ ಪ್ರಮಾಣಿಕತೆಯನ್ನು ಲೆಕ್ಕ ಪರಿಶೋಧನೆಯುದ್ದಕ್ಕೂ ಪಾಲಿಸುತ್ತೇವೆ. ಅಲ್ಲದೆ ನಾವು

- ಕ್ರೋಢೀಕೃತ ಹಣಕಾಸು ಹೇಳಿಕೆಗಳಲ್ಲಿನ ವಸ್ತುಶಃ ತಪ್ಪು ಹೇಳಿಕೆಗಳನ್ನು ಗುರುತಿಸುತ್ತೇವೆ ಮತ್ತು ವಂಚನೆ ಅಥವಾ ದೋಷಗಳಿಂದ, ಉಂಟಾದ ತಪ್ಪು ಹೇಳಿಕೆಗಾಗಿ ಅಪಾಯಗಳನ್ನು ಅಂದಾಜಿಸುತ್ತೇವೆ. ಅಂತಹ ಅಪಾಯಗಳಿಗೆ ಪ್ರತಿಯಾಗಿ ಲೆಕ್ಕಪರಿಶೋಧನಾ ವಿಭಾಗಗಳನ್ನು ರೂಪಿಸಿ ನಿರ್ವಹಿಸುತ್ತೇವೆ. ಅಲ್ಲದೆ ನಮ್ಮ ಅಭಿಪ್ರಾಯಕ್ಕೆ ಆಧಾರವಾಗಿ ಲೆಕ್ಕ ಪ್ರಮಾಣದ ಮತ್ತು ಸೂಕ್ತ ರೀತಿಯ ಲೆಕ್ಕ ಪರಿಶೋಧನಾ ಸಾಕ್ಷ್ಯಾಧಾರವನ್ನು ಪಡೆಯುತ್ತೇವೆ. ವಂಚನೆಯಿಂದ ಉಂಟಾದ ವಸ್ತುಶಃ ತಪ್ಪು ಹೇಳಿಕೆಯನ್ನು ಪತ್ತೆ ಹಚ್ಚಿರುವ ಅಪಾಯವು ದೋಷದಿಂದ ಉಂಟಾದ ತಪ್ಪು ಹೇಳಿಕೆಯಗಿಂತಲೂ ತುಂಬಾ ಅಪಾಯಕಾರಿ. ಏಕೆಂದರೆ ವಂಚನೆಯು ಒಳಸಂಚು, ಖೋಟಾ ಅಥವಾ ನಕಲಿಕೆ, ಉದ್ದೇಶಪೂರ್ವಕವಾಗಿ ಬಿಡುವುದು. ತಪ್ಪಾಗಿ ಪ್ರತಿನಿಧಿಸುವುದು ಅಥವಾ ಆಂತರಿಕ ನಿಯಂತ್ರಣ ಮೀರಿ ಹೋಗುವುದೂ ಸೇರಿರುತ್ತದೆ.

  ಪ್ರಸಕ್ತ ಸನ್ನಿವೇಶದಲ್ಲಿ ಸೂಕ್ತ ರೀತಿ ಲೆಕ್ಕಪರಿಶೋಧನಾ ವಿಧಾನಗಳನ್ನು ಲೆಕ್ಕಪರಿಶೋಧನೆಗೆ ರೂಪಿಸಲು ಅದಕ್ಕೆ ತಕ್ಕಂತೆ ಸಂಸ್ಥೆಯ ಆಂತರಿಕ ನಿಯಂತ್ರಣ ಕುರಿತು ಮಾಹಿತಿ ಪಡೆಯುತ್ತೇವೆ. ಅಂತೆಯೇ ಕಂಪನಿಗಳ ಕಾಯ್ದೆ 2013ರ ಸೆಕ್ಷನ್ 143 (3) (i) ರಡಿ ಸಮೂಹ ಮತ್ತು ಅದರ ಸಹವರ್ತಿಗಳು ಸೂಕ್ತ ಆಂತರಿಕ ಹಣಕಾಸು ನಿಯಂತ್ರಣ ಹೊಂದಿರುವ ಮತ್ತು ಅಂತಹ ನಿಯಂತ್ರಣಗಳನ್ನು ಕಾರ್ಯಾಚರಣೆಯ ಪರಿಣಾಮ ತತ್ವದ ಬಗ್ಗೆ ನಮ್ಮ ಅಭಿಪ್ರಾಯ ವ್ಯಕ್ತಪಡಿಸಲು ಜವಾಬ್ದಾರರಾಗಿರುತ್ತೇವೆ.

- ಬಳಸಲಾದ ಲೆಕ್ಕ ನಿರ್ವಹಣಾ ನೀತಿಗಳ ಸೂಕ್ತತೆಯ ಮೌಲ್ಯಮಾಪನ ಮಾಡುವುದು ಮತ್ತು ಆಡಳಿತ ಮಂಡಳಿಯು ಮಾಡಿರುವ ಲೆಕ್ಕ ನಿರ್ವಹಣೆಯ ಅಂದಾಜುಗಳ ಮತ್ತು ಸಂಬಂಧಿತ ಬಹಿರಂಗ ಅಂಶಗಳ ಸರ್ಕಾರತೆ ಮೌಲ್ಯೀಕರಣ ಮಾಡುವುದು.

- ಆಡಳಿತ ಮಂಡಳಿಯು ಲೆಕ್ಕ ನಿರ್ವಹಣೆಯಲ್ಲಿ ಬಳಸಿರುವ ಚಾಲನೆಯಲ್ಲಿರುವ ಸಂಸ್ಥೆಯೆಂಬ ಆಧಾರ ಮತ್ತು ಲೆಕ್ಕಪರಿಶೋಧನಾ ಸಾಕ್ಷ್ಯಾಧಾರ ಪಡೆದ ಆಧಾರಗಳ ಸೂಕ್ತತತೆಯನ್ನು ಹಾಗೆಯೇ ಗ್ರೂಪ್ (ಸಮೂಹ) ಮತ್ತು ಸಹವರ್ತಿಗಳನ್ನು ಚಾಲನೆಯಲ್ಲಿರುವ ಸಂಸ್ಥೆಗಳೆಂದು ಪರಿಗಣಿಸುವಲ್ಲಿ ಯಾವುದಾದರೂ, ವಸ್ತುಶಃ ಅನಿಶ್ಚಿತತೆ ಕಂಡು ಬರುತ್ತಿದೆಯೇ ಹಾಗೂ ಆ ಮೂಲಕ ಸಂಸ್ಥೆಗಳ ಸಾಮರ್ಥ್ಯದ ಮೇಲೆ ಗಣನೀಯ ಸಂಶಯ ಉಂಟಾಗುತ್ತಿದೆಯೇ? ಎಂಬುದನ್ನು ನಿರ್ಧರಿಸುವುದು. ಒಂದು ವೇಳೆ ನಾವು ವಸ್ತುಶಃ ಅನಿಶ್ಚಿತತೆ ಕಂಡು ಬರುತ್ತಿದೆ ಎಂದು ನಿರ್ಧರಿಸಿದಲ್ಲಿ ಆ ಕುರಿತು ನಾವು ಬಹಿರಂಗಿತ ಅಂಶಗಳಿಗೆ ಸಂಬಂಧಿಸಿದ ಕ್ರೋಢೀಕೃತ ಹಣಕಾಸು ಹೇಳಿಕೆಗಳ ನಮ್ಮ ಲೆಕ್ಕಪರಿಶೋಧಕರ ವರದಿಯಲ್ಲಿ ಗಮನ ಸೆಳೆಯಬೇಕಾಗುವುದು ಅಥವಾ ನಮ್ಮ ಅಭಿಪ್ರಾಯವನ್ನು ಮಾರ್ಪಡಿಸಲು ಅಂತಹ ಬಹಿರಂಗಿತ ಅಂಶಗಳು ಸಾರಾಗದಿದ್ದಲ್ಲಿ ಗಮನ ಸೆಳೆಯಬೇಕಾಗುವುದು. ನಮ್ಮ ಅಂತಿಮ ಅಭಿಪ್ರಾಯಗಳು ಲೆಕ್ಕಪರಿಶೋಧಕರ ವರದಿಯ ದಿನಾಂಕದವರೆಗೆ ಪಡೆದುಕೊಂಡಿರುವ ಲೆಕ್ಕಪರಿಶೋಧನಾ ಪುರಾವೆಗಳನ್ನು ಆಧರಿಸಿವೆ. ಆದಾಗ್ಯೂ ಮುಂದೆ ಉಂಟಾಗುವ ಘಟನೆಗಳು ಅಥವಾ ಸನ್ನಿವೇಶಗಳು ಗ್ರೂಪ್

ಮತ್ತು ಸಹವರ್ತಿ ಸಂಸ್ಥೆಗಳನ್ನು ಚಾಲನೆಯಲ್ಲಿರುವ ಸಂಸ್ಥೆಗಳಾಗಿ ಮುಂದುವರಿಯದಿರಲು ಕಾರಣವಾಗಬಹುದು.

- ಬಹಿರಂಗಿತ ಅಂಶಗಳೂ ಸೇರಿದಂತೆ ಕ್ರೋಢೀಕೃತ ಹಣಕಾಸು ಹೇಳಿಕೆಗಳ ಒಟ್ಟಾರೆ ಮಂಡನೆ, ರಚನೆ ಮತ್ತು ವಿಷಯಗಳ ಮೌಲ್ಯೀಕರಣ ಮತ್ತು ಕ್ರೋಢೀಕೃತ ಹಣಕಾಸು ಹೇಳಿಕೆಗಳು ಕೆಳಕಾಣಿಸಿದ ವಹಿವಾಟುಗಳನ್ನು ಮತ್ತು ಘಟನೆಗಳನ್ನು ಸರಿಯಾದ ರೀತಿಯ ಮಂಡನೆ ಎಂದು ಪರಿಗಣಿಸಲು ಪ್ರತಿನಿಧಿಸುತ್ತೇವೆಯೇ ಎಂಬುದರ ಮೌಲ್ಯೀಕರಣ.

- ಕ್ರೋಢೀಕೃತ ಹಣಕಾಸು ಹೇಳಿಕೆಗಳಲ್ಲಿ ವಾಸ್ತವಿಕತೆಯು ತಪ್ಪು ಹೇಳಿಕೆಗಳ ಪ್ರಮಾಣವಾಗಿರುತ್ತದೆ. ಅದು ಬಿಡಿ ಬಿಡಿಯಾಗಿರಬಹುದು ಅಥವಾ ಸರಾಸರಿಯಾಗಿರಬಹುದು. ಅವುಗಳು ಹಣಕಾಸು ಹೇಳಿಕೆಗಳನ್ನು ಬಳಸುವ ಸಾಕಷ್ಟು ಜ್ಞಾನವುಳ್ಳ ವ್ಯಕ್ತಿಯ ಆರ್ಥಿಕ ನಿರ್ಧಾರಗಳ ಮೇಲೆ ಪ್ರಭಾವ ಬೀರುತ್ತವೆ. ನಾವು ವಾಸ್ತವಿಕತೆಯ ಪ್ರಮಾಣ ಮತ್ತು ಗುಣಾತ್ಮಕ ಅಂಶಗಳನ್ನು (1) ನಮ್ಮ ಪರಿಶೋಧನಾ ಕಾರ್ಯದ ವ್ಯಾಪ್ತಿಯ ಯೋಜನೆ ಮತ್ತು ನಮ್ಮ ಕರ್ತವ್ಯದ ಫಲಿತಾಂಶದ ಮೌಲ್ಯಮಾಪನ ಹಾಗೂ (2) ಹಣಕಾಸು ಹೇಳಿಕೆಗಳಲ್ಲಿ ಯಾವುದೇ ಗುರುತಿಸಲಾದ ತಪ್ಪು ಹೇಳಿಕೆಗಳ ಪರಿಣಾಮದ ಮೌಲ್ಯಮಾಪನದಲ್ಲಿ ಪರಿಗಣಿಸುತ್ತೇವೆ.

- ನಾವು ಕ್ರೋಢೀಕೃತ ಹಣಕಾಸು ಹೇಳಿಕೆಗಳಲ್ಲಿ ಒಳಗೊಂಡಿರುವ ಧಾರಕ ಕಂಪನಿ ಮತ್ತು ಅಂತಹ ಇತರ ಸಂಸ್ಥೆಗಳ ಅಧಿಕಾರದಲ್ಲಿರುವ ಆಡಳಿತ ಮಂಡಳಿಗಳೊಂದಿಗೆ ಆ ಕುರಿತು ನಾವು ಸ್ವತಂತ್ರ ಲೆಕ್ಕಪರಿಶೋಧಕರೆಂಬುದೂ ಸೇರಿದಂತೆ ಇತರ ವಿಷಯಗಳಲ್ಲಿ ಯೋಜಿತ ವ್ಯಾಪ್ತಿ ಮತ್ತು ಲೆಕ್ಕ ಪರಿಶೋಧನೆಯ ಸಮಯ ಹಾಗೂ ನಮ್ಮ ಲೆಕ್ಕಪರಿಶೋಧನೆಯಲ್ಲಿ ಗುರುತಿಸಲ್ಪಟ್ಟ ಆಂತರಿಕ ನಿಯಂತ್ರಣದಲ್ಲಿ ಯಾವುದಾದರೂ, ಮಹತ್ವದ ಕೊರತೆಗಳು ಸೇರಿದಂತೆ ಪ್ರಮುಖ ಲೆಕ್ಕ ಪರಿಶೋಧನಾ ಪತ್ತೇತ ಅಂಶಗಳ ಕುರಿತು ಸಂಪರ್ಕಿಸುತ್ತೇವೆ.

- ಅಂತೆಯೇ ಸಂಸ್ಥೆಯ ಆಡಳಿತ ಸಂಸ್ಥೆಗಳಿಗೆ ನಮ್ಮ ಸ್ವಾತಂತ್ರ್ಯಕ್ಕೆ ಸಂಬಂಧಪಟ್ಟಂತೆ ಸೂಕ್ತ ನೈತಿಕ ಅಗತ್ಯತೆಗಳ ಸಮೇತ ನಾವು ರೂಪಿಸಿದ ಹೇಳಿಕೆಯನ್ನು ನೀಡುತ್ತೇವೆ, ಹಾಗೂ ಅವರಿಗೆ ಎಲ್ಲ ಸಂಬಂಧಗಳು ಮತ್ತು ನಮ್ಮ ಸ್ವತಂತ್ರದ ಮೇಲೆ ಸೂಕ್ತ ಪರಿಣಾಮ ಬೀರಬಹುದೆಂದು ಭಾವಿಸುವ ಇತರ ಅಂಶಗಳು ಮತ್ತು ಎಲ್ಲ ಅನ್ವಯಿಸುವ ಸಂಬಂಧಿತ ಸುರಕ್ಷತೆಗಳ ಕುರಿತು ತಿಳಿಸುತ್ತೇವೆ.

**ಇತರ ವಿಷಯಗಳು:**

ನಾವು ಎರಡು ಸಹಾಯಕ ಸಂಸ್ಥೆಗಳ ಮತ್ತು ಸಹವರ್ತಿ ಸಂಸ್ಥೆಗಳ ಹಣಕಾಸು ಹೇಳಿಕೆಗಳ ಲೆಕ್ಕ ಪರಿಶೋಧನೆಯನ್ನು ಮಾಡಿರುವುದಿಲ್ಲ. ಎರಡೂ ಸಹಾಯಕ ಸಂಸ್ಥೆಗಳ ಹಣಕಾಸು ಹೇಳಿಕೆಗಳು ದಿನಾಂಕ:31.03.2019ರಂದಿನಂತೆ ಒಟ್ಟು ಆಸ್ತಿ ಮೌಲ್ಯ ರೂ.235,87,79,577/- ಒಟ್ಟು ಆದಾಯ (ರೆವಿನ್ಯೂ) ರೂ.266,55,65,321) ಗಳಾಗಿದೆ. ಇದು ಸದರಿ ದಿನಾಂಕದಂದು ಕೊನೆಗೊಂಡ ವರ್ಷದ ಕ್ರೋಢೀಕೃತ ಹಣಕಾಸು ಹೇಳಿಕೆಗಳಲ್ಲಿ ಇರುವಂತೆ ಪರಿಗಣಿಸಲಾಗಿದೆ.

ಕ್ರೋಢೀಕೃತ ಹಣಕಾಸು ಹೇಳಿಕೆಗಳು ಗ್ರೂಪ್‌ನ ನಿವ್ವಳ ಲಾಭದ ಪಾಲು ರೂ.19,29,249/-ಗಳು ಮತ್ತು ಇತರ ಸಂಭಾವ್ಯ ಆದಾಯ ರೂ. ಇಲ್ಲ. ಇದು ಮಾರ್ಚ್ 31, 2019ರಂದು ಕೊನೆಗೊಂಡ ವರ್ಷಕ್ಕೆ ಸಹವರ್ತಿಗಳ ಕ್ರೋಢೀಕೃತ ಹಣಕಾಸು ಹೇಳಿಕೆಗಳಲ್ಲಿರುವಂತೆ ಪರಿಗಣಿಸಲಾಗಿದೆ. ಈ ಹಣಕಾಸು ಹೇಳಿಕೆಗಳು ಲೆಕ್ಕಪರಿಶೋಧನೆಗೊಂಡಿಲ್ಲ ಮತ್ತು ಅವುಗಳನ್ನು ಆಡಳಿತ ಮಂಡಳಿಯಿಂದ ನಮಗೆ ನೀಡಲ್ಪಡಲಾಗಿದೆ. ಅಂತೆಯೇ ಸಹವರ್ತಿ ಸಂಸ್ಥೆಗಳಿಗೆ ಸಂಬಂಧಿಸಿದ ಕ್ರೋಢೀಕೃತ ಹಣಕಾಸು ಹೇಳಿಕೆಗಳಲ್ಲಿನ ಮೊತ್ತಗಳು ಹಾಗೂ ಬಹಿರಂಗಿತ ಅಂಶಗಳ ಬಗ್ಗೆ ನಮ್ಮ ಅಭಿಪ್ರಾಯ ಹಾಗೂ ನಮ್ಮ ವರದಿಯು ಕಾಯ್ದೆಯ ಸೆಷನ್ 143ರ ಉಪ ಸೆಷನ್‌ಗಳು(3) ಮತ್ತು (II)ರನುಗುಣವಾಗಿ ಮೇಲೆ ತಿಳಿಸಿದ ಸಹವರ್ತಿ ಸಂಸ್ಥೆಗೆ ಸಂಬಂಧಿಸಿದಂತೆ ಸಂಪೂರ್ಣವಾಗಿ ಲೆಕ್ಕ ಪರಿಶೋಧನೆಗೊಳ್ಳದ ಹಣಕಾಸು ಹೇಳಿಕೆಗಳ ಆಧಾರದ ಮೇಲೆ ಇರುವುದು.

ಕ್ರೋಢೀಕೃತ ಹಣಕಾಸು ಹೇಳಿಕೆಗಳ ಮೇಲೆ ನಮ್ಮ ಅಭಿಪ್ರಾಯ ಮತ್ತು ಕೆಳಗಿನ ಇತರ ಕಾನೂನು ಹಾಗೂ ಕ್ರಮಬದ್ಧತೆ ಅಗತ್ಯತೆಗಳ ಕುರಿತು ನಮ್ಮ ವರದಿಯನ್ನು ಮೇಲೆ ತಿಳಿಸಲಾದ ವಿಷಯಗಳಿಗೆ ಸಂಬಂಧಪಟ್ಟಂತೆ ನಿರ್ವಹಿಸಿದ ಕಾರ್ಯದ ಮೇಲಿನ ನಮ್ಮ ವಿಶ್ವಾಸ ಮತ್ತು ಬೇರೆ ಲೆಕ್ಕ ಪರಿಶೋಧಕರ ವರದಿಗಳು ಮತ್ತು ಆಡಳಿತ ಮಂಡಳಿಯಿಂದ ದೃಢೀಕೃತ ಹಣಕಾಸು ಹೇಳಿಕೆಗಳ ಆಧಾರದಲ್ಲಿ ಮಾರ್ಪಾಟು ಮಾಡಿರುವುದಿಲ್ಲ.

**ಇತರೆ ಕಾನೂನು ಮತ್ತು ನಿಯಂತ್ರಣ (ಕ್ರಮಬದ್ಧತೆ) ಅಗತ್ಯತೆಗಳ ಮೇಲಿನ ವರದಿ :**

1. **ಕಾಯ್ದೆಯ ಪ್ರಕರಣ 143ರ ಉಪ ಪ್ರಕರಣ 3 ಅನ್ವಯ ಅಗತ್ಯವಾದಂತೆ ನಾವು ವರದಿ ಮಾಡುವುದೇನೆಂದರೆ :**

   ಎ) ಮೇಲೆ ತಿಳಿಸಿರುವ ಕ್ರೋಡೀಕೃತ ಹಣಕಾಸಿನ ಹೇಳಿಕೆಗಳ ಬಗ್ಗೆ ನಾವು ಲೆಕ್ಕಪರಿಶೋಧನೆ ಮಾಡುವ ಉದ್ದೇಶಕ್ಕಾಗಿ ಅಗತ್ಯವೆಂದು ನಮಗೆ ತಿಳಿದು ಬಂದ ಮತ್ತು ನಾವು ನಂಬಿರುವಂತೆ ನಾವು ಎಲ್ಲಾ ಮಾಹಿತಿ ಮತ್ತು ವಿವರಣೆಗಳನ್ನು ಕೇಳಿ ಪಡೆದುಕೊಂಡಿದ್ದೇವೆ.

   ಬಿ) ನಮ್ಮ ಅಭಿಪ್ರಾಯದ ಪ್ರಕಾರ ನಾವು ಆ ಪುಸ್ತಕಗಳು ಮತ್ತು ಇತರೆ ಲೆಕ್ಕಪರಿಶೋಧಕರ ವರದಿಯನ್ನು ಪರಿಶೀಲನೆ ಮಾಡಿದಾಗ ಕಂಡುಬಂದಿರುವಂತೆ, ಮೇಲೆ ತಿಳಿಸಿರುವ ಕ್ರೋಡೀಕೃತ ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸುವುದಕ್ಕೆ ಸಂಬಂಸಿದಂತೆ ಕಾನೂನಿನ ಅನ್ವಯ ಅಗತ್ಯವಾದಂತೆ ಸೂಕ್ತವಾದ ಲೆಕ್ಕದ ಪುಸ್ತಕಗಳನ್ನು ಇಡಲಾಗಿದೆ.

   ಸಿ) ಧಾರಕ ಕಂಪನಿ ಮತ್ತು ಸಹವರ್ತಿಗಳ ಲೆಕ್ಕ ನಿರ್ವಹಣೆ ಕುರಿತು ಕಾಯ್ದೆಯ ಸೆಕ್ಷನ್ 143(8)ರಡಿ ಇತರ ಲೆಕ್ಕ ಪರಿಶೋಧಕರು ಮಾಡಿರುವ ಲೆಕ್ಕ ಪರಿಶೋಧನಾ ವರದಿಗಳನ್ನು ಅನ್ವಯಾನುಸಾರ ನಮಗೆ ಕಳುಹಿಸಿದ್ದು, ಮತ್ತು ಅವುಗಳನ್ನು ಈ ವರದಿ

ಸಿದ್ಧಪಡಿಸುವುದಕ್ಕಾಗಿ ಸರಿಯಾಗಿ ನಿರ್ವಹಿಸಲಾಗಿದೆ.

ಡಿ) ಸದರಿ ವರದಿಯಲ್ಲಿ ಒಳಗೊಂಡಿರುವ ಕ್ರೋಢೀಕೃತ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಸ್ಥಿತಿ ವಿವರಣಾ ಪಟ್ಟಿ, ಕ್ರೋಢೀಕೃತ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಲಾಭ ಮತ್ತು ನಷ್ಟದ ವಿವರ ಮತ್ತು ಕ್ರೋಢೀಕೃತ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ನಗದು ಹರಿಯುವಿಕೆ ಹೇಳಿಕೆಯು, ಕ್ರೋಢೀಕೃತ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಹಣಕಾಸು ಹೇಳಿಕೆಗಳನ್ನು ಸಿದ್ಧಪಡಿಸುವ ಉದ್ದೇಶಕ್ಕಾಗಿ ನಿರ್ವಹಣೆ ಮಾಡಿರುವ ಸಂಬಂಧಪಟ್ಟ ಲೆಕ್ಕಗಳ ಪುಸ್ತಕಗಳ ಅನುಸಾರವಿರುವುದು.

ಇ) ನಮ್ಮ ಅಭಿಪ್ರಾಯದಲ್ಲಿ, ಮೇಲೆ ತಿಳಿಸಿರುವ ಕ್ರೋಢೀಕೃತ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಹಣಕಾಸಿನ ಹೇಳಿಕೆಗಳು, ಕಂಪನಿಗಳ (ಲೆಕ್ಕಪತ್ರಗಳು) ನಿಯಮಗಳು, 2014ರ ನಿಯಮ 7 ಓದಿಕೊಂಡಂತೆ ಕಾಯ್ದೆಯ ಪ್ರಕರಣ 133ರ ಅನ್ವಯ ನಿರ್ದಿಷ್ಟಪಡಿಸಿರುವ ಲೆಕ್ಕ ನಿರ್ವಹಣೆ ಗುಣಮಟ್ಟಗಳ ಅನುಸಾರ ಇರುವವು.

ಎಫ್) ಮೇಲೆ ''ಅರ್ಹತಾ ಅಭಿಪ್ರಾಯಗಳಿಗೆ ಆಧಾರ''ದ ವಿಭಾಗದಲ್ಲಿ ವಿವರಿಸಲಾದ ವಿಷಯಗಳು ನಮ್ಮ ಅಭಿಪ್ರಾಯದಲ್ಲಿ ಗ್ರೂಪ್ ಮತ್ತು ಸಹವರ್ತಿ ಸಂಸ್ಥೆಗಳ ಕಾರ್ಯನಿರ್ವಹಣೆಗೆ ಯಾವುದೇ ಪ್ರತಿಕೂಲ ಪರಿಣಾಮ ಬೀರುವುದಿಲ್ಲ.

ಜಿ) ಸಮೂಹ ಮತ್ತು ಇದರ ಸಹವರ್ತಿ ಕಂಪನಿಯು ಸರ್ಕಾರದ ಕಂಪನಿಯಾಗಿದ್ದು, ನಿರ್ದೇಶಕರುಗಳ ಅನರ್ಹತೆ ವಿಚಾರದಲ್ಲಿ ಕಂಪನಿಗಳ ಕಾಯ್ದೆ 2013ರ ಪ್ರಕರಣ 164(2)ರ ಉಪಬಂಧಗಳು ಅನ್ವಯವಾಗುವುದಿಲ್ಲ.

ಹೆಚ್) ನಾವು ದಿನಾಂಕ:31ನೇ ಮಾರ್ಚ್ 2019ರಂದು ಇದ್ದಂತೆ ಕಂಪನಿಯ ಸ್ವತಂತ್ರ ಹಣಕಾಸು ಹೇಳಿಕೆಗಳ ನಮ್ಮ ಲೆಕ್ಕಪರಿಶೋಧನೆಯ ಜೊತೆಗೆ ಇದೇ ದಿನಾಂಕದಂದು ಇದ್ದಂತೆ ಸಮೂಹ ಮತ್ತು ಇದರ ಸಹವರ್ತಿ ಕಂಪನಿಯ ಹಣಕಾಸಿನ ವರದಿ ಮೇಲಿನ ಆಂತರಿಕ ಹಣಕಾಸು ನಿಯಂತ್ರಣಗಳನ್ನು ಸಹ ನಾವು ಲೆಕ್ಕ ಪರಿಶೋಧನೆ ಮಾಡಿದ್ದೇವೆ ಮತ್ತು 'ಅನುಬಂಧ-ಎ' ಅನುಸಾರ ನಮ್ಮ ವರದಿಯು ಅರ್ಹತಾ ಅಭಿಪ್ರಾಯವನ್ನು ತಿಳಿಸಿರುವುದು.

ಐ) ತಿದ್ದುಪಡಿಯಾದಂತೆ ಕಂಪನಿಗಳ ಕಾಯ್ದೆ 2013ರ ಪ್ರಕರಣ 197(16)ರ ಅಗತ್ಯತೆ ಅನುಸಾರ ಲೆಕ್ಕ ಪರಿಶೋಧಕರ ವರದಿಯಲ್ಲಿ ಸೇರ್ಪಡೆ ಮಾಡಿಕೊಳ್ಳಬೇಕಾಗಿರುವ ಇತರೆ ವಿಷಯಗಳ ಸಂಬಂಧದಲ್ಲಿ:

ನಮ್ಮ ಅಭಿಪ್ರಾಯದಲ್ಲಿ ತಿಳಿಸುವುದೇನೆಂದರೆ ಸಂಬಂಧ ಮತ್ತು ಇವರ ಸಹವರ್ತಿ ಕಂಪನಿಯು ಸರ್ಕಾರದ ಕಂಪನಿ ಆಗಿರುವುದರಿಂದ ಕಂಪನಿಗಳ ಕಾಯ್ದೆ 2013ರ ಪರಿಚ್ಛೇದ ೯ ಓದಿಕೊಂಡಂತೆ ಪ್ರಕರಣ 197ರ ಅನ್ವಯ ಕಡ್ಡಾಯವಾಗುವಂತೆ ವ್ಯವಸ್ಥಾಪಕರಿಗೆ ಸಂಭಾವನೆ ಪಾವತಿ ಮಾಡುವ ವಿಚಾರಕ್ಕೆ ಸಂಬಂಧಿಸಿದಂತೆ ಉಪಬಂಧಗಳು ಅನ್ವಯವಾಗುವುದಿಲ್ಲ.

ಜೆ) ಕಂಪನಿಗಳ (ಲೆಕ್ಕಪರಿಶೋಧನೆ ಮತ್ತು ಲೆಕ್ಕಪರಿಶೋಧಕರು) ನಿಯಮಗಳು, 2014ರ ನಿಯಮ 11ರ ಅನುಸಾರದ ಲೆಕ್ಕ ಪರಿಶೋಧಕರ ವರದಿಯಲ್ಲಿ ಸೇರಿಸಬೇಕಾಗಿರುವ ಇತರೆ ವಿಷಯಗಳ ಸಂಬಂಧದಲ್ಲಿ ನಮ್ಮ ಅಭಿಪ್ರಾಯದಂತೆ ಮತ್ತು ನಮಗೆ ತಿಳಿದಿರುವ ಮಾಹಿತಿಯನುಸಾರ ಹಾಗೂ ನಮಗೆ ಕೊಟ್ಟಿರುವ ವಿವರಣೆಗಳ ಅನುಸಾರ ತಿಳಿಸುವುದೇನೆಂದರೆ;

i. ಇತ್ಯರ್ಥವಾಗದೆ ಉಳಿದಿರುವ ವಿವಾದಗಳಿಂದ ಕಂಪನಿಯ ಕ್ರೋಢೀಕೃತ ಹಣಕಾಸಿನ ಸ್ಥಿತಿಗತಿ ಮೇಲೆ ಉಂಟು ಮಾಡಿರುವ ಪರಿಣಾಮವನ್ನು ಕ್ರೋಢೀಕೃತ ಹಣಕಾಸಿನ ಹೇಳಿಕೆಗಳು ತಿಳಿಸಿವೆ- ಕ್ರೋಢೀಕೃತ ಹಣಕಾಸಿನ ಹೇಳಿಕೆಗಳ ಟಿಪ್ಪಣಿ 38 ನೋಡಿ.

ii. ಯಾವುದೇ ವಾಸ್ತವಿಕ ನಿರೀಕ್ಷಿಸಬಹುದಾದ ನಷ್ಟಗಳಿಗೆ ಒಳಗಾದ ಗುತ್ತಿಗೆಗಳೂ ಸೇರಿದಂತೆ ಯಾವುದೇ ದೀರ್ಘಾವಧಿ ಗುತ್ತಿಗೆಗಳನ್ನು ಕಂಪನಿ ಹೊಂದಿರುವುದಿಲ್ಲ; ಮತ್ತು

iii. ಭಾರತದಲ್ಲಿ ಸ್ಥಾಪನೆಯಾಗಿರುವ ಧಾರಕ ಕಂಪನಿ, ಇದರ ಸಹಾಯಕ ಕಂಪನಿಗಳು ಮತ್ತು ಸಹವರ್ತಿಕಂಪನಿ ಯಿಂದ ಹೂಡಿಕೆದಾರರ ಶಿಕ್ಷಣ ಮತ್ತು ರಕ್ಷಣೆ ನಿಧಿಗೆ ವರ್ಗಾಯಿಸಬೇಕಾಗಿರುವ ಯಾವುದೇ ಹಣ ಇರುವುದಿಲ್ಲ.

**ಮೆ|| ಆಭರ್ಣ ಮತ್ತು ಅನಂತನ್**
**ಚಾರ್ಟರ್ಡ್ ಅಕೌಂಟೆಂಟ್ಸ್ ಪರವಾಗಿ**
**ಸಂಸ್ಥೆ ನೋಂದಣಿ ಸಂ.000003ಎಸ್**
**ಸಹಿ/-**
**(ಆಭರ್ಣ ಭಾಸ್ಕರ್)**
**ಪಾಲುದಾರರು**
**ಸದಸ್ಯತ್ವ ಸಂ.025145**

ಸ್ಥಳ: ಬೆಂಗಳೂರು
ದಿನಾಂಕ:29.09.2019

MSIL

## ಸ್ವತಂತ್ರ ಲೆಕ್ಕಪರಿಶೋಧಕರ ವರದಿಗೆ ಅನುಬಂಧ-ಎ

**(ಸಮ ದಿನಾಂಕದ ನಮ್ಮ ವರದಿಯನ್ನು ನೋಡಿದೆ)**

### ಕಂಪನಿಗಳ ಕಾಯ್ದೆ, 2013ರ ('ಕಾಯ್ದೆ') ಪ್ರಕರಣ 143ರ ಉಪ ಪ್ರಕರಣ 3 ರ ಕಲಂ(i)ರ ಅನ್ವಯ ಆಂತರಿಕ ಹಣಕಾಸಿನ ನಿಯಂತ್ರಣಗಳ ಬಗ್ಗೆ ವರದಿ

'ಗ್ರೂಪ್' ಮತ್ತು ಇದರ ಸಹವರ್ತಿ ಕಂಪನಿಯ ಇಂದಿನವರೆಗಿನ ಮತ್ತು 31ನೇ ಮಾರ್ಚ್ 2019ಕ್ಕೆ ಕೊನೆಗೊಂಡ ವರ್ಷದ ಕ್ರೋಡೀಕೃತ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಹಣಕಾಸಿನ ಹೇಳಿಕೆಗಳ ನಮ್ಮ ಲೆಕ್ಕಪರಿಶೋಧನೆ ಜೊತೆಗೆ ಸದರಿ ದಿನಾಂಕಕ್ಕೆ ಕೊನೆಗೊಂಡ ವರ್ಷದ ಬಗ್ಗೆ ಮೈಸೂರ್ ಸೇಲ್ಸ್ ಇಂಟರ್ ನ್ಯಾಷನಲ್ ಲಿಮಿಟೆಡ್ (ಇದನ್ನು ಇಲ್ಲಿ ಇನ್ನು ಮುಂದೆ 'ಧಾರಕ ಕಂಪನಿ' ಎಂಬುದಾಗಿ ಪ್ರಸ್ತಾಪಿಸಲಾಗುವುದು), ಇದರ ಸಹಾಯಕ ಕಂಪನಿಗಳ (ಧಾರಕ ಕಂಪನಿ ಮತ್ತು ಇದರ ಸಹಾಯಕ ಕಂಪನಿಗಳನ್ನು ಒಟ್ಟಾಗಿ 'ಗ್ರೂಪ್' ಎಂಬುದಾಗಿ ಪ್ರಸ್ತಾಪಿಸಲಾಗುವುದು), ಮತ್ತು ಇದರ ಸಹವರ್ತಿ ಕಂಪನಿಯ ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಲೆಕ್ಕ ಪರಿಶೋಧನೆಯನ್ನು ನಾವು ಮಾಡಿದ್ದೇವೆ.

### ಆಂತರಿಕ ಹಣಕಾಸಿನ ನಿಯಂತ್ರಣಗಳ ಬಗ್ಗೆ ಆಡಳಿತ ಮಂಡಳಿಯ ಜವಾಬ್ದಾರಿ:

ಭಾರತದಲ್ಲಿ ಸ್ಥಾಪನೆಯಾಗಿರುವ ಕಂಪನಿಗಳಾದ ಧಾರಕ ಕಂಪನಿ, ಇದರ ಸಹಾಯಕ ಮತ್ತು ಇದರ ಸಹವರ್ತಿ ಕಂಪನಿಗಳ ಸಂಬಂಧಪಟ್ಟ ನಿರ್ದೇಶಕರ ಮಂಡಳಿಯು, 'ಭಾರತದ ಚಾರ್ಟರ್ಡ್ ಅಕೌಂಟೆಂಟ್ಸ್ ಸಂಸ್ಥೆ ಹೊರಡಿಸಿರುವ ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಲೆಕ್ಕಪರಿಶೋಧನೆಯ ಬಗ್ಗೆಗಿನ ಮಾರ್ಗದರ್ಶಿ ಟಿಪ್ಪಣಿಯಲ್ಲಿ ತಿಳಿಸಿರುವ ಆಂತರಿಕ ನಿಯಂತ್ರಣದ ಅಗತ್ಯ ಅಂಶಗಳನ್ನು ಪರಿಗಣಿಸಿ ಸಂಬಂಧಪಟ್ಟ ಕಂಪನಿಗಳು ರೂಪಿಸಿರುವ ಹಣಕಾಸಿನ ವರದಿಗಾರಿಕೆ ಮಾನದಂಡದ ಮೇಲಿನ ಆಂತರಿಕ ನಿಯಂತ್ರಣ' ದ ಆಧಾರದ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣಗಳನ್ನು ರೂಪಿಸುವ ಮತ್ತು ನಿರ್ವಹಣೆ ಮಾಡುವ ಜವಾಬ್ದಾರಿ ಹೊಂದಿರುವುದು. ಈ ಜವಾಬ್ದಾರಿಗಳಲ್ಲಿ ಕಂಪನಿಗಳ ಕಾಯ್ದೆ, 2013ರ ಅನ್ವಯ ಅಗತ್ಯವಾದಂತೆ ಕಂಪನಿಯ ನೀತಿಗಳ ಅನುಸರಣೆ, ತನ್ನ ಆಸ್ತಿಗಳ ಸಂರಕ್ಷಣೆ ಮಾಡುವಿಕೆ, ವಂಚನೆಗಳು ಮತ್ತು ತಪ್ಪುಗಳ ತಡೆಯುವಿಕೆ ಮತ್ತು ಪತ್ತೆ ಹಚ್ಚುವಿಕೆ, ಲೆಕ್ಕನಿರ್ವಹಣೆ ದಾಖಲೆಗಳ ನಿಖರತೆ ಮತ್ತು ಪರಿಪೂರ್ಣತೆ, ಮತ್ತು ವಿಶ್ವಾಸನೀಯವಾದ ಹಣಕಾಸಿನ ಮಾಹಿತಿಯನ್ನು ಸಕಾಲಿಕವಾಗಿ ಸಿದ್ಧಪಡಿಸುವಿಕೆಯೂ ಒಳಗೊಂಡಂತೆ, ತನ್ನ ವ್ಯವಹಾರವನ್ನು ಕ್ರಮಬದ್ಧವಾಗಿ ಮತ್ತು ಸಮರ್ಥವಾಗಿ ನಡೆಸುವಿಕೆಯನ್ನು ಖಾತರಿಪಡಿಸಲು ಪರಿಣಾಮಕಾರಿಯಾಗಿ ಕಾರ್ಯಾಚರಣೆಯಾಗುವ ಸಾಕಷ್ಟು ಮಟ್ಟದ ಆಂತರಿಕ ಹಣಕಾಸಿನ ನಿಯಂತ್ರಣಗಳನ್ನು ವಿನ್ಯಾಸಪಡಿಸುವುದು, ಅನುಷ್ಠಾನ ಮಾಡುವುದು ಮತ್ತು ನಿರ್ವಹಣೆ ಮಾಡುವುದು ಒಳಗೊಂಡಿರುವುದು.

### ಲೆಕ್ಕ ಪರಿಶೋಧಕರ ಜವಾಬ್ದಾರಿ:

ನಮ್ಮ ಲೆಕ್ಕಪರಿಶೋಧನೆಯ ಆಧಾರದ ಮೇಲೆ ಹಣಕಾಸಿನ ವರದಿಗಾರಿಕೆ ಮೇಲಿನ ಕಂಪನಿಯ ಆಂತರಿಕ ಹಣಕಾಸಿನ ನಿಯಂತ್ರಣಗಳ ಬಗ್ಗೆ ಅಭಿಪ್ರಾಯ ತಿಳಿಸುವುದು ನಮ್ಮ ಜವಾಬ್ದಾರಿಯಾಗಿರುವುದು. ಕಂಪನಿಗಳ ಕಾಯ್ದೆ, 2013ರ ಪ್ರಕರಣ 143(10)ರ ಅನ್ವಯ ನಿಗದಿಪಡಿಸಲಾಗಿರುವುದು ಎಂಬುದಾಗಿ ಭಾವಿಸಲಾದ ಮತ್ತು ಭಾರತದ ಚಾರ್ಟರ್ಡ್ ಅಕೌಂಟೆಂಟ್ಸ್ ಸಂಸ್ಥೆ (ಐಸಿಎಐ) ಹೊರಡಿಸಿರುವ ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣದ ಲೆಕ್ಕಪರಿಶೋಧನೆ ಮೇಲಿನ ಮಾರ್ಗದರ್ಶಿ ಟಿಪ್ಪಣಿ ('ಮಾರ್ಗದರ್ಶಿ ಟಿಪ್ಪಣಿ') ಮತ್ತು ಲೆಕ್ಕಪರಿಶೋಧನೆಯ ಗುಣಮಟ್ಟಗಳ ಅನುಸಾರ ಆಂತರಿಕ ಹಣಕಾಸಿನ ನಿಯಂತ್ರಣಗಳ ಲೆಕ್ಕಪರಿಶೋಧನೆಗೆ ಅನ್ವಯವಾಗುವ ಪ್ರಮಾಣದವರೆಗೆ ನಾವು ನಮ್ಮ ಲೆಕ್ಕಪರಿಶೋಧನೆ ಕಾರ್ಯವನ್ನು ನಡೆಸಿದ್ದೇವೆ. ಈ ಎರಡೂ ಮಾರ್ಗದರ್ಶನಗಳನ್ನು ಐಸಿಎಐ ಹೊರಡಿಸಿದ್ದು, ಇವೆರಡೂ ಮಾರ್ಗದರ್ಶನಗಳು ಆಂತರಿಕ ಹಣಕಾಸಿನ ನಿಯಂತ್ರಣಗಳಿಗೆ ಅನ್ವಯವಾಗುವುವು. ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳು ಸಾಕಷ್ಟು ಮಟ್ಟದಲ್ಲಿರುವುದೇ ಮತ್ತು ನಿರ್ವಹಣೆ ಮಾಡಲಾಗಿರುವುದೇ ಹಾಗೂ ಸದರಿ ನಿಯಂತ್ರಣಗಳು ಎಲ್ಲಾ ವಾಸ್ತವಿಕ ವಿಚಾರಗಳ ಸಂಬಂಧ ಪರಿಣಾಮಕಾರಿಯಾಗಿ ಕಾರ್ಯಾಚರಣೆಯಾಗುತ್ತಿರುವುವೇ ಎಂಬ ಬಗ್ಗೆ ಸೂಕ್ತವಾದ ಭರವಸೆ ಪಡೆಯಲು ನಾವು ನೈತಿಕ ಅಗತ್ಯತೆಗಳನ್ನು ಅನುಸರಿಸಿ ಲೆಕ್ಕಪರಿಶೋಧನೆ ನಡೆಸಲು ಯೋಜನೆ ಮಾಡಬೇಕು ಮತ್ತು ಲೆಕ್ಕ ಪರಿಶೋಧನೆ ನಡೆಸಬೇಕೆಂದು ಸದರಿ ಗುಣಮಟ್ಟಗಳು ಮತ್ತು ಮಾರ್ಗದರ್ಶಿ ಟಿಪ್ಪಣಿಗಳು ತಿಳಿಸುತ್ತವೆ.

ಗ್ರೂಪ್ ಭಾರತೀಯ ಲೆಕ್ಕ ನಿರ್ವಹಣಾ ಗುಣಮಟ್ಟ 115ರಲ್ಲಿ ಗೊತ್ತುಪಡಿಸಲಾದ ಕೆಳಕಂಡ 5 ಮೆಟ್ಟಿಲು ಮಾದರಿ (5 Step Model) ಯನ್ನು ಆಧರಿಸಿ ಗ್ರಾಹಕರೊಂದಿಗೆ ಗುತ್ತಿಗೆಗಳಿಂದ ಆದಾಯವನ್ನು ಮಾನ್ಯ ಮಾಡಿದೆ.

**ಮೆಟ್ಟಿಲು:1 ಗ್ರಾಹಕರೊಂದಿಗೆ ಗುತ್ತಿಗೆ(ಗಳು) ಯನ್ನು ಗುರುತಿಸುವುದು:**

ಒಂದು ಗುತ್ತಿಗೆಯನ್ನು ಇಬ್ಬರು ಅಥವಾ ಅದಕ್ಕೆ ಹೆಚ್ಚಿನ ವ್ಯಕ್ತಿ/ಸಂಸ್ಥೆಗಳ ನಡುವೆ ಉಂಟಾದ ಒಪ್ಪಂದವಾಗಿದ್ದು ಜಾರಿಗೊಳಿಸಬಹುದಾದ ಹಕ್ಕು ಮತ್ತು ಬಾಧ್ಯತೆಗಳನ್ನು ಸೃಜಿಸುತ್ತದೆ ಮತ್ತು ಪ್ರತಿಯೊಂದು ಗುತ್ತಿಗೆಯು ಪೂರೈಸಬೇಕಾಗಿರುವ ಅರ್ಹತೆ, ಮಾನದಂಡವನ್ನು ರೂಪಿಸುತ್ತದೆ ಎಂದು ವ್ಯಾಖ್ಯಾನಿಸಲಾಗುತ್ತದೆ.

**ಮೆಟ್ಟಿಲು: 2** ಗುತ್ತಿಗೆಯಲ್ಲಿ ಕಾರ್ಯನಿರ್ವಹಣಾ ಬಾಧ್ಯತೆಗಳನ್ನು ಗುರುತಿಸುವುದು: ಒಂದು ಕಾರ್ಯ ನಿರ್ವಹಣಾ ಬಾಧ್ಯತೆಯು ಗ್ರಾಹಕರೊಂದಿಗಿನ ಒಂದು ಗುತ್ತಿಗೆಯಲ್ಲಿ ಸರಕು ಅಥವಾ ಸೇವೆಯನ್ನು ಗ್ರಾಹಕರಿಗೆ ವರ್ಗಾವಣೆ ಮಾಡುವುದಾಗಿ ನೀಡುವ ಸತ್ಯ ವಚನ.

**ಮೆಟ್ಟಿಲು: 3** ವಹಿವಾಟಿನ ಬೆಲೆ ನಿರ್ಧರಣೆ: ಗ್ರೂಪ್ (ಸಂಸ್ಥೆ) ತಾನು ವಚನವಿತ್ತಂತೆ ಗ್ರಾಹಕರಿಗೆ ವರ್ಗಾವಣೆ ಮಾಡುವ ಸರಕುಗಳು ಅಥವಾ ಸೇವೆಗೆ ವಿನಿಮಯವಾಗಿ ಪಡೆಯಲುರ್ಹವಾದೆಂದು ಪರಿಗಣಿಸುವ ಮೊತ್ತವಾಗಿರುತ್ತದೆ. ಇದು ಮೂರನೇ ವ್ಯಕ್ತಿಯ/ಸಮೂಹ ಪರವಾಗಿ ಸಂಗ್ರಹಿಸುವ/ಪಡೆಯುವ ಮೊತ್ತವನ್ನು ಹೊರತುಪಟ್ಟಿರುತ್ತದೆ.

**ಮೆಟ್ಟಿಲು:4** ಗುತ್ತಿಗೆಯಲ್ಲಿ ಕಾರ್ಯನಿರ್ವಹಣಾ ಬಾಧ್ಯತೆಗೆ ಹಂಚಿಕೆ ಮಾಡಲಾದ ವಹಿವಾಟು ಬೆಲೆ: ಒಂದು ಗುತ್ತಿಗೆಯಲ್ಲಿ ಒಂದಕ್ಕಿಂತ ಹೆಚ್ಚು ಕಾರ್ಯನಿರ್ವಹಣಾ ಬಾಧ್ಯತೆ ಇದ್ದಲ್ಲಿ ಗ್ರೂಪ್ ತಾನು ತೃಪ್ತಕರವಾಗಿ ನಿರ್ವಹಿಸುವ ಪ್ರತಿ ಕಾರ್ಯ ನಿರ್ವಹಣಾ ಬಾಧ್ಯತೆಗೆ ವಿನಿಮಯವಾಗಿ ಪಡೆಯಲರ್ಹವೆಂದು ಪರಿಗಣಿಸುವ ಮೊತ್ತದಲ್ಲಿ ಪ್ರತಿ ಕಾರ್ಯನಿರ್ವಹಣ ಬಾಧ್ಯತೆಗೆ ವಹಿವಾಟು ಬೆಲೆಯನ್ನು ಹಂಚಿಕೆ ಮಾಡುತ್ತದೆ.

**ಮೆಟ್ಟಿಲು 5:** ಸಂಸ್ಥೆಯು ಕಾರ್ಯನಿರ್ವಹಣ ಬಾಧ್ಯತೆಯನ್ನು ತೃಪ್ತಿಕರವಾಗಿ ಪೂರೈಸಿದಾಗ ಆದಾಯ (Revenue) ವನ್ನು ಮಾನ್ಯ ಮಾಡುವುದು: ಕೆಳಕಂಡ ಯಾವುದಾದರೊಂದು ಮಾನದಂಡವನ್ನು ಪೂರೈಸಿದಲ್ಲಿ ಗ್ರೂಪ್ ಕಾರ್ಯನಿರ್ವಹಣಾ ಬಾಧ್ಯತೆಯನ್ನು ತೃಪ್ತಿಪಡಿಸಿದೆ ಮತ್ತು ಕಾಲಾನಂತರ ಆದಾಯವನ್ನು ಮಾನ್ಯ ಮಾಡುತ್ತದೆ.

(1) ಗ್ರಾಹಕನು ಕಂಪನಿ ನಿರ್ವಹಿಸುತ್ತಾ ಪೂರೈಸಿದ ಕಾರ್ಯ ನಿರ್ವಹಣೆ ಯಿಂದ ಪ್ರಯೋಜನ ಬಳಸಿಕೊಳ್ಳುತ್ತಾನೆ ಮತ್ತು ಉಪಯೋಗವನ್ನು ಏಕಕಾಲಕ್ಕೆ ಬೆಳೆಸಿಕೊಳ್ಳುತ್ತಾನೆ. ಅಥವಾ

(2) ಕಂಪನಿಯ ಕಾರ್ಯನಿರ್ವಹಣೆಯು ಗ್ರಾಹಕನಿಗೆ ಆಸ್ತಿ ಸೃಜಿಸುತ್ತದೆ ಅಥವಾ ಗ್ರಾಹಕನ ನಿಯಂತ್ರಣದಲ್ಲಿರುವ ಆಸ್ತಿಯನ್ನು ಹೆಚ್ಚಿಸುತ್ತದೆ. ಅದು ಆಸ್ತಿಯ ಸೃಷ್ಟಿ ಅಥವಾ ವೃದ್ಧಿಯಾಗಿ ಪರಿಗಣಿತ ಅಥವಾ

(3) ಕಂಪನಿಯ ಕಾರ್ಯ ನಿರ್ವಹಣೆಯು ಕಂಪನಿಗೆ ಪರ್ಯಾಯ ಬಳಕೆಯಾಗಿ ಒಂದು ಆಸ್ತಿಯನ್ನು ಸೃಜಿಸುವುದಿಲ್ಲ ಮತ್ತು ಸಂಸ್ಥೆಯು ಕಾರ್ಯನಿರ್ವಹಣೆ ಪೂರ್ಣಗೊಂಡ ದಿನಾಂಕಕ್ಕೆ ಹಣ ಪಾವತಿಗೆ ಜಾರಿಗೊಳಿಸಬೇಕಾದ ಹಕ್ಕು ಹೊಂದಿರುತ್ತಾನೆ.

ಕಾರ್ಯನಿರ್ವಹಣಾ ಬಾಧ್ಯತೆಗಳಿಗೆ ಮೇಲ್ಕಂಡ ಯಾವುದಾದರೊಂದು ಷರತ್ತು ಪೂರೈಸದಿದ್ದಲ್ಲಿ ಯಾವ ಸಮಯದಲ್ಲಿ ಕಾರ್ಯನಿರ್ವಹಣ ಬಾಧ್ಯತೆಯನ್ನು ತೃಪ್ತಿಪಡಿಸಲಾಗುವುದೋ ಆಗ ಆದಾಯವನ್ನು ಮಾನ್ಯ ಮಾಡಲಾಗುವುದು.

ಕಂಪನಿ ವಚನವಿತ್ತಂತೆ ಸರಕುಗಳನ್ನು ಅಥವಾ ಸೇವೆಗಳನ್ನು ತಲುಪಿಸುವ ಮೂಲಕ ಕಾರ್ಯನಿರ್ವಹಣ ಬಾಧ್ಯತೆಯನ್ನು ತೃಪ್ತಿಕರವಾಗಿ ಪೂರೈಸಿದಾಗ ಅದು ಕಾರ್ಯನಿರ್ವಹಣೆಯಿಂದ ಗಳಿಸಿದ ಪರಿಗಣಿತ ಮೊತ್ತ ಆಧಾರಿತ ಗುತ್ತಿಗೆ ಆಸ್ತಿಯನ್ನು ಸೃಷ್ಟಿಸುತ್ತದೆ. ಗ್ರಾಹಕರಿಂದ ಸ್ವೀಕರಿಸಲ್ಪಟ್ಟ ಪರಿಗಣಿತ ಮೊತ್ತವು ಮಾನ್ಯ ಮಾಡಿದ ಮೊತ್ತಕ್ಕಿಂತ ಹೆಚ್ಚಾಗಿದ್ದಲ್ಲಿ ಅದು ಗುತ್ತಿಗೆ ಋಣಕ್ಕೆ ಅವಕಾಶವಾಗುತ್ತದೆ.

ಕಂದಾಯ (ಆದಾಯ)ವನ್ನು ಒಡಂಬಡಾತ್ಮಕವಾಗಿ ವ್ಯಾಖ್ಯಾನಿಸಲಾದ ಹಣ ಪಾವತಿ ಷರತ್ತುಗಳನ್ನು ಗಣನೆಗೆ ತೆಗೆದುಕೊಂಡು ಮತ್ತು ತೆರಿಗೆ ಮತ್ತು ಕರಗಳನ್ನು ಹೊರತುಪಡಿಸಿ ಸ್ವೀಕರಿಸಲಾದ ಅಥವಾ ಸ್ವೀಕಾರಾರ್ಹ ಪರಿಗಣಿತ ಮೊತ್ತದ ನ್ಯಾಯೋಚಿತ ಮೌಲ್ಯಕ್ಕನು ಗುಣವಾಗಿ ಲೆಕ್ಕ ಹಾಕಲಾಗುವುದು.

**ಬಾಡಿಗೆ ಆದಾಯ:**

ಬಾಡಿಗೆಗಳಿಂದ ಬರುವ ಆದಾಯವನ್ನು ಗುತ್ತಿಗೆ ಅವಧಿಯ ನೇರ ಆಧಾರಿತದ ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಆದಾಯವೆಂದು ಗುರುತಿಸಲಾಗುತ್ತದೆ. ಇದು ಬಾಡಿಗೆಯಲ್ಲಿ ನಿಗದಿತ ಹೆಚ್ಚಳವು ಗ್ರೂಪ್‌ನ ನಿರೀಕ್ಷಿತ ಹಣದುಬ್ಬರದ ವೆಚ್ಚದ ........... ಪರಿಹಾರ ಒದಗಿಸುತ್ತದೆ. ಒಂದು ವೇಳೆ ಯಾವುದಾದರೂ ಉಪ ಗುತ್ತಿಗೆಯಿದ್ದಲ್ಲಿ ಅದರಿಂದ ಬರುವ ಬಾಡಿಗೆ ಆದಾಯವನ್ನು ಸಹ ಇದೇ ರೀತಿಯಲ್ಲಿ ಪರಿಗಣಿಸಲಾಗುವುದು ಮತ್ತು ಅದನ್ನು ಇತರ ಆದಾಯದಡಿ ಸೇರಿಸಲಾಗುವುದು.

**ಲಾಭಾಂಶ ಆದಾಯ:**

ಲಾಭಾಂಶದಿಂದ ಬರುವ ಆದಾಯವನ್ನು ಗ್ರೂಪ್‌ನ ಹಣ ಸ್ವೀಕರಿಸುವ ಹಕ್ಕನ್ನು ಸ್ಥಾಪಿತವಾದಾಗ ಮಾನ್ಯ ಮಾಡಲಾಗುವುದು. ಲಾಭಾಂಶದೊಂದಿಗೆ ಸಮ್ಮಿಳಿತಗೊಂಡ ಆರ್ಥಿಕ ಲಾಭಗಳು ಗ್ರೂಪ್‌ಗೆ ಸೇರುವುದು ಊಹಾತ್ಮಕ ಮತ್ತು ಲಾಭಾಂಶದ ಮೊತ್ತವನ್ನು ವಿಶ್ವಾಸಾರ್ಹವಾಗಿ ಲೆಕ್ಕಹಾಕಲಾಗುವುದು.

**ಬಡ್ಡಿ ಆದಾಯ:**

ಒಂದು ಹಣಕಾಸು ಆಸ್ತಿಯಿಂದ ಬರುವ ಬಡ್ಡಿ ಆದಾಯವನ್ನು ಯಾವಾಗ ಅದರ ಆರ್ಥಿಕ ಲಾಭಗಳು ಗ್ರೂಪ್‌ಗೆ ಸೇರಬಹುದಾಗಿದ್ದಲ್ಲಿ ಮಾನ್ಯ ಮಾಡಲಾಗುವುದು ಮತ್ತು ಆದಾಯದ ಮೊತ್ತವನ್ನು ವಿಶ್ವಾಸಾರ್ಹವಾಗಿ ಲೆಕ್ಕ ಹಾಕಬಹುದಾಗಿದೆ. ಬಾಕಿ ಇರುವ ಅಸಲು ಮೊತ್ತಕ್ಕೆ ಜಾರಿಯಲ್ಲಿರುವ ಬಡ್ಡಿ ದರವನ್ನು ಅನ್ವಯಿಸಿದನ್ನು ಅನುಸರಿಸಿ ಅವಧಿ ಅನುಪಾತಾಧಾರಿತದಲ್ಲಿ ಬಡ್ಡಿಯು ಸಂಚಯವಾಗುತ್ತದೆ.

ವಿಳಂಬಿತ ಸ್ವೀಕೃತಿಗಳು, ರದ್ದತಿ/ಮುಟ್ಟುಗೋಲಾದ ಆದಾಯಗಳ ಮೇಲಿನ ಬಡ್ಡಿ ಮತ್ತು ಗ್ರಾಹಕರಿಂದ ವರ್ಗಾವಣೆ ಶುಲ್ಕಗಳನ್ನು ಅಂತಿಮ ಸಂಗ್ರಹಣೆ ಸಂಶಯಾತ್ಮಕವಾಗಿರುವ ಪ್ರಕರಣಗಳನ್ನು ಹೊರತುಪಡಿಸಿ ಸಂಚಯ ಆಧಾರಿತದಲ್ಲಿ ಪರಿಗಣಿಸಲಾಗುವುದು.

**ಆದಾಯದ ಇತರ ಬಾಬ್ತುಗಳನ್ನು ಸ್ವೀಕೃತಿ ಹಕ್ಕು ಉಂಟಾದಾಗ ಗುರುತಿಸಲಾಗುವುದು:**

**ನಗದು ಆಧಾರಿತ ಆದಾಯ ಮಾನ್ಯತೆ**

ನಗದು ಆಧಾರಿತ ವಹಿವಾಟುಗಳಾಗಿದ್ದು, ಆದರೆ ಅವುಗಳ ನಗದೀಕರಣ ಅನಿಶ್ಚಿತ ಎಂದು ಪರಿಗಣಿತ ಕೆಳಕಂಡ ಬಾಬ್ತುಗಳನ್ನು ಹೊರತುಪಡಿಸಿ ಸಂಚಯ ಆಧಾರಿತದಲ್ಲಿ ಆದಾಯವನ್ನು (Revenue) ಮಾನ್ಯ ಮಾಡಲಾಗುತ್ತದೆ.

**ಚಿಟ್ ಕಾರ್ಯಾಚರಣೆ:**

ಚಿಟ್ ಕಾರ್ಯಾಚರಣೆಯಿಂದ ಬರುವ ಎಲ್ಲ ರೀತಿಯ ಕಂದಾಯ (ಆದಾಯ)ಗಳು ನಗದು ಆಧಾರಿತವಾಗಿವೆ.

**ಬಾಡಿಗೆ ರೂಪದ ಖರೀದಿ:**

ಬಾಡಿಗೆ ರೂಪದ ಖರೀದಿ ಮಾರಾಟಗಳ ಮೇಲಿನ ಬಡ್ಡಿ ಆದಾಯವನ್ನು ನಗದು ಆಧಾರದಲ್ಲಿ ಪರಿಗಣಿಸಲಾಗಿದೆ. ಕರ ಸಾಲ/ಜಾರಿಯಲ್ಲಿರುವ ವಿದೇಶಿ ವಾಣಿಜ್ಯ ನೀತಿಯ ವಿವಿಧ ಉತ್ತೇಜನ ಯೋಜನೆಗಳಡಿ ವಿನಾಯ್ತಿ, ತೆರಿಗೆ ಸಾಲ, ಸಮೀಕ್ಷಾ ಕೊರತೆಯಿಂದಾಗಿ ಕಸ್ಟಮ್ ಸುಂಕದ ಹಿಂಪಾವತಿ/ಸೇವಾ ತೆರಿಗೆ/ಮಾರಾಟ ತೆರಿಗೆ/ವ್ಯಾಟ್ (ಮೌಲ್ಯಾಧಾರಿತ ತೆರಿಗೆ)/ಆದಾಯ ತೆರಿಗೆ ಹಿಂಪಾವತಿ/ಜಿಎಸ್‌ಟಿ ಮತ್ತು ಅವುಗಳ ಮೇಲಿನ ಬಡ್ಡಿ ಇತ್ಯಾದಿ.

★ ಅವಧಿ ಮೀರಿದ ವಸೂಲಾತಿಗಳ ಮೇಲಿನ ಬಡ್ಡಿ

★ ಪೂರೈಕೆದಾರರು/ಒಡಂಬಡಿಕೆದಾರರ ಮೇಲಿನ ಸಂಪನ್ನಗೊಂಡ ಹಾನಿಗಳು.

ಐ) **ಸರಕುಗಳು** :

ಈ ಸರಕುಗಳನ್ನು ನಿವ್ವಳ ವಾಸ್ತವೀಕರಣ ಮಾಡಬಹುದಾದ ಮೌಲ್ಯಗಳಲ್ಲಿ ಬರುವ ಹಳೆ (ಅನುಪಯುಕ್ತ) ಮತ್ತು ಉಪ ಉತ್ಪನ್ನಗಳನ್ನು ಹೊರತುಪಡಿಸಿ ಉಳಿದವುಗಳನ್ನು ಕಡಿಮೆ ಬೆಲೆಗೆ ಮೌಲ್ಯ ಮಾಡಲಾಗಿರುತ್ತದೆ. ನಿವ್ವಳ ವಾಸ್ತವೀಕರಣದ ಮೌಲ್ಯವು ಸಾಮಾನ್ಯ ವಿಭಾಗದಲ್ಲಿ ಮಾರಾಟವಾಗಬಹುದಾದ ಅಂದಾಜು ಬೆಲೆ ಆಗಿರುತ್ತದೆ. ಪೂರ್ಣಗೊಳಿಸುವಿಕೆಯ ಕಡಿಮೆ ಅಂದಾಜು

ಮೌಲ್ಯ ಮತ್ತು ಮಾರಾಟ ಮಾಡಲು ಅಗತ್ಯವಿರುವ ಅಂದಾಜು ಬೆಲೆ ಕಳೆಯಬೇಕಾಗುವುದು.

(i) ಕಚ್ಚಾ ಸಾಮಗ್ರಿಜಗಳ ವೆಚ್ಚವು ಖರೀದಿ ಬೆಲೆ ಮತ್ತು ಇತರ ವೆಚ್ಚಗಳಾದ ಅಂದರೆ ಸರಕುಗಳನ್ನು ಹಾಲಿ ಸ್ಥಳಕ್ಕೆ ಮತ್ತು ಹಂತಕ್ಕೆ ಸಾಗಿಸಲು ಉಂಟಾದ ವೆಚ್ಚಗಳನ್ನು ಒಳಗೊಂಡಿರುತ್ತದೆ. ಬೆಲೆಯನ್ನು ಕಾಗದದ ವಿಭಾಗದಲ್ಲಿ ಸರಾಸರಿ ತೂಕದ ಆಧಾರದ ಮೇಲೆ ಮತ್ತು ಪಾನೀಯ/ಔಷಧಿಗಳ ಪ್ರಕರಣದಲ್ಲಿ ಮೊದಲ ಆಗಮನ ಮೊದಲ ನಿರ್ಗಮನ ಆಧಾರದಲ್ಲಿ ಮಾಡಲಾಗಿದೆ.

(ii) ಸಿದ್ಧಪಡಿಸಿದ ಸರಕುಗಳು ಮತ್ತು ಪ್ರಗತಿಯಲ್ಲಿರುವ ಕಾರ್ಯಗಳ ವೆಚ್ಚವು ಸಾಮಗ್ರಿಗಳು ನೇರ ಬೆಲೆ ಮತ್ತು ಕಾರ್ಮಿಕ ವೆಚ್ಚ ಮತ್ತು ಸಾಮಾನ್ಯ ಕಾರ್ಯಾಚರಣೆ ಆಧಾರದಲ್ಲಿ ಅಂದರೆ ತರಲು ಉಂಟಾಗುವ ವೆಚ್ಚ ಹೊರತುಪಡಿಸಿ ಅವುಗಳ ಮೇಲಿನ ಭಾಗಶಃ ತಯಾರಿಕಾ ವೆಚ್ಚ ಒಳಗೊಂಡಿರುತ್ತದೆ. ಸರಾಸರಿ ತೂಕದ ಮೇಲೆ ಬೆಲೆ ನಿರ್ಧಾರಣೆ ಮಾಡಲಾಗುತ್ತದೆ.

ಕಚ್ಚಾ ಸಾಮಗ್ರಿಗಳು, ಗ್ರಾಹಕ ವಸ್ತುಗಳನ್ನು ಮತ್ತು ಪರಿವರ್ತನಾಗಾರರಿಂದ ನೋಟ್ ಪುಸ್ತಕಗಳನ್ನು ಸ್ವೀಕರಿಸುವಾಗ ಸಿದ್ಧಪಡಿಸಿದ ಸರಕು ಎಂದು ಪರಿಗಣಿಸಲಾಗುತ್ತದೆ.

(iii) ಮದ್ಯದ ದಾಸ್ತಾನಿನ ಮೌಲ್ಯಮಾಪನಕ್ಕಾಗಿ ಸಾಗಾಣಿಕೆ ಆಗಮನ ಸರಕನ್ನು ಪರಿಗಣಿಸಿರುವುದಿಲ್ಲ.

(iv) ಅನುಪಯುಕ್ತ ಸರಕುಗಳನ್ನು ನಿಧಾನಗತಿಯ ಮತ್ತು ದೋಷರೂಪಿತ ಸರಕುಗಳನ್ನು ನಿವ್ವಳ ವಾಸ್ತವೀಕರಣದ ಮೌಲ್ಯಕ್ಕೆ ದಾಖಲಿಸಿದೆ.

**ಜೆ) ಸ್ವತ್ತು , ಸ್ಥಾವರ ಮತ್ತು ಉಪಕರಣ(ಪಿಪಿಇ):**

ಉಪಕರಣಗಳನ್ನು ಅವುಗಳ ಸ್ವಾಧೀನ ವೆಚ್ಚದಲ್ಲಿ ತಿಳಿಸಲಾಗಿದೆ. ಭಾರತೀಯ ಲೆಕ್ಕ ನಿರ್ವಹಣಾ ಗುಣಮಟ್ಟಗಳಿಗೆ ವರ್ಗಾವಣೆಗೊಂಡ ಅಂದರೆ ದಿನಾಂಕ:01.04.2016ರಂದು ಗ್ರೂಪ್ (ಸಂಸ್ಥೆ) ತನ್ನ ಎಲ್ಲ ಸ್ವತ್ತು, ಸ್ಥಾವರ ಮತ್ತು ಉಪಕರಣಗಳನ್ನು ಹಿಂದಿನ ಜಿಎಎಪಿ ಹೊಂದಿರುವ ಮೌಲ್ಯ (ಭಾವಿತ ವೆಚ್ಚ)ದಲ್ಲಿ ಅಳೆಯಲು ಆಯ್ಕೆ ಮಾಡಿಕೊಂಡಿದೆ. ಅದರಂತೆ ವೆಚ್ಚ/ಬೆಲೆಯು ಖರೀದಿ ಬೆಲೆ, ಬಂಡವಾಳೀಕರಣದ ಅರ್ಹತೆ ಪೂರೈಸಿದ್ದಲ್ಲಿ ಸಾಲದ ವೆಚ್ಚ, ಸ್ಥಗಿತ ಅಥವಾ ಮುಚ್ಚುವುದಕ್ಕಾಗಿ ತಗಲಬಹುದಾದ ಯಾವುದೇ ನಿರೀಕ್ಷಿತ ವೆಚ್ಚ ಮತ್ತು ಉದ್ದೇಶಿತ ಬಳಕೆಗಾಗಿ ಸ್ವತ್ತನ್ನು ಕಾರ್ಯ ಸ್ಥಿತಿಗೆ ತರಲು ಉಂಟಾಗುವ ನೇರ ಅನ್ವಯಿಕ ವೆಚ್ಚಗಳು; ಯಾವುದೇ ವ್ಯಾಪಾರಿತ ಕಡಿತ ಮತ್ತು ರಿಯಾಯಿತಿಗಳನ್ನು ಖರೀದಿ ಬೆಲೆಗೆ ಬರಲು ಕಡಿತಗೊಳಿಸಲಾಗುತ್ತದೆ.

**ಆನಂತರದ ಅಳತೆ (ಲೆಕ್ಕಚಾರ)/ಮೌಲ್ಯೀಕರಣ:**

ಅನಂತರದ ವೆಚ್ಚಗಳು ಸ್ವತ್ತು ಹೊಂದಿರುವ ಮೊತ್ತ ಅಥವಾ ಪ್ರತ್ಯೇಕ ಸ್ವತ್ತು ಎಂದು ಗುರುತಿಸಿರುವುದು ಇವುಗಳಲ್ಲಿ ಯಾವುದೋ ಸೂಕ್ತ ಅದು ಎಂದು ಪರಿಗಣಿಸಿ ಸ್ವತ್ತಿನಿಂದ ಗ್ರೂಪ್‌ಗೆ ಬರಬಹುದಾದ ಭವಿಷ್ಯದ ಹಣಕಾಸು ಪ್ರಯೋಜನಗಳಿದ್ದಲ್ಲಿ ಮಾತ್ರ ಸೇರಿದ ಬಾಬ್ತುಗಳನ್ನು ಒಳಗೊಂಡಿರುತ್ತವೆ. ಇತರ ಎಲ್ಲ ದುರಸ್ತಿ ಮತ್ತು ನಿರ್ವಹಣ ವೆಚ್ಚಗಳನ್ನು ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಭರಿಸಲಾದ ವೆಚ್ಚ ಪರಿಗಣಿಸಲಾಗಿದೆ.

**ಸವಕಳಿ ಮತ್ತು ಉಪಯುಕ್ತ ಜೀವಿತಾವಧಿಯಲ್ಲಿ :**

ಗೋಚರಿತ ಸ್ಥಿರಾಸ್ತಿಗಳ ಸವಕಳಿಯನ್ನು ಕಂಪನಿಗಳ ಕಾಯ್ದೆ 2013ರ ಪರಿಚ್ಛೇದ-II ರಲ್ಲಿ ನಿಗದಿಪಡಿಸಿರುವ ಉಪಯುಕ್ತತೆ ಅವಯ ಅನುಸಾರ ನೇರ ಮಾರ್ಗದ ವಿಧಾನದಲ್ಲಿ ತಿಳಿಸಿದೆ. ತಾಂತ್ರಿಕ ಸಲಹೆಯ ಆಧಾರದ ಮೇಲೆ ಆಸ್ತಿಗಳ ಜೀವಿತಾವಧಿಯನ್ನು ನಿರ್ಧರಣೆ ಮಾಡಿರುವ ಕೆಲವು ಪ್ರವರ್ಗಗಳ ಆಸ್ತಿಗಳ ಸಂಬಂಧದಲ್ಲಿ ಆಸ್ತಿಗಳ ಸ್ವರೂಪ, ಆಸ್ತಿಯ ಅಂದಾಜು ಮಾಡಿದ ಉಪಯುಕ್ತತೆ, ಆಸ್ತಿಯ ಕಾರ್ಯಾಚರಣೆ ಸ್ಥಿತಿಗಳು, ಬದಲಾವಣೆ ಮತ್ತು ನಿರ್ವಹಣೆ ಬೆಂಬಲದ ಹಿಂದಿನ ಮಾಹಿತಿ ಇತ್ಯಾದಿ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಸವಕಳಿ ಲೆಕ್ಕಾಚಾರಕ್ಕೆ ಪರಿಗಣಿಸಿರುವುದನ್ನು ಈ ಕೆಳಗೆ ನೀಡಲಾಗಿದೆ.

| ವಿವರಗಳು | ಉಪಯುಕ್ತತೆ |
|---|---|
| ಕಟ್ಟಡಗಳು | 60 ವರ್ಷಗಳು |
| ಅಗ್ನಿಶಾಮಕ ಉಪಕರಣಗಳು | 10 ವರ್ಷಗಳು |
| ವಿದ್ಯುತ್ ಉಪಕರಣಗಳು | 10 ವರ್ಷಗಳು |
| ಪೀಠೋಪಕರಣ ಮತ್ತು ಅಳವಡಿಕೆಗಳು | 10 ವರ್ಷಗಳು |
| ವಾಹನಗಳು | 8 ವರ್ಷಗಳು |
| ಪೀಠೋಪಕರಣ ಮತ್ತು ಅಳವಡಿಕೆಗಳು-ಮದ್ಯ ಮಾರಾಟ ಮಳಿಗೆ | 5 ವರ್ಷಗಳು |
| ನಿರ್ವಹಣೆ ಉಪಕರಣಗಳು | 5 ವರ್ಷಗಳು |
| ತೂಕದ ಯಂತ್ರಗಳು | 5 ವರ್ಷಗಳು |
| ಕಚೇರಿ ಉಪಕರಣಗಳು | 5 ವರ್ಷಗಳು |
| ಕಂಪ್ಯೂಟರ್‌ಗಳು | 3 ವರ್ಷಗಳು |
| ಭೋಗ್ಯಕ್ಕೆ ಒಳಪಟ್ಟ ಆಸ್ತಿಗಳು | ಪ್ರಾಥಮಿಕ ಭೋಗ್ಯ ಅವಧಿ -ಭೂಮಿ ಹೊರತುಪಡಿಸಿ |

ಗುತ್ತಿಗೆ ಮೇಲಿರುವ ಜಮೀನಿನಲ್ಲಿ ನಿರ್ಮಿಸಿರುವ ಕಟ್ಟಡದ ಸವಕಳಿಯನ್ನು, ಅದನ್ನು ಬಳಕೆಗೆ ಒಳಪಡಿಸಿದ ದಿನಾಂಕದಿಂದ ಪ್ರಾರಂಭಿಸಿ ಗುತ್ತಿಗೆಯ ಉಳಿಕೆ ಅವಧಿಯಲ್ಲಿ ತಿಳಿಸಲಾಗಿದೆ.

ವರ್ಷದ ಅವಧಿಯಲ್ಲಿ ಸೇರ್ಪಡೆ ಮಾಡಿದ/ವಿಲೇವಾರಿ ಮಾಡಿದ/ವಿಸರ್ಜನೆ ಮಾಡಿದ ಸ್ಥಿರಾಸ್ತಿಗಳ ಸವಕಳಿಯನ್ನು ಸೇರ್ಪಡೆ ಮಾಡಿದ/ವಿಲೇವಾರಿ ಮಾಡಿದ/ವಿಸರ್ಜಿಸಿದ ದಿನಾಂಕವನ್ನು ಗಣನೆಗೆ ತೆಗೆದುಕೊಂಡು ದಮಾಷ ಆಧಾರದ ಮೇಲೆ ತಿಳಿಸಲಾಗಿದೆ.

MSIL

### ಅಮಾನ್ಯತೆ:

ಸ್ವತ್ತು , ಸ್ಥಾವರ ಮತ್ತು ಉಪಕರಣಗಳ ಯಾವುದೋ ಬಾಬ್ತು ಅದರ ಮಹತ್ತರ ಭಾಗವು ಆರಂಭದಲ್ಲಿ ಮಾನ್ಯ ಮಾಡಿದ್ದನ್ನು ಅದರ ವಿಲೇವಾರಿ, ಅಥವಾ ಅದರ ಬಳಕೆಯಿಂದ ಅಥವಾ ವಿಲೇವಾರಿಯಿಂದ ಮುಂದೆ ಯಾವುದೇ ಆರ್ಥಿಕ ಲಾಭ ಇಲ್ಲ ಎಂದು ಪರಿಗಣಿಸಿದಾಗ ಅದನ್ನು ಅಮಾನ್ಯಗೊಂಡ ಬಾಬ್ತು ಎಂದು ಪರಿಗಣಿಸಲಾಗುವುದು. ಸ್ವತ್ತಿನ ಅಮಾನ್ಯೀಕರಣದಿಂದ ಉಂಟಾಗುವ ಯಾವುದೇ ಲಾಭ ಅಥವಾ ನಷ್ಟ, (ಇದನ್ನು ನಿವ್ವಳ ವಿಲೇವಾರಿಯಿಂದ ಬರುವ ಮೊತ್ತ ಮತ್ತು ಸ್ವತ್ತು ಹೊಂದಿರುವ ಮೊತ್ತದ ನಡುವಿನ ವ್ಯತ್ಯಾಸದ ಮೂಲಕ ಲೆಕ್ಕ ಹಾಕಲಾಗುವುದು) ವನ್ನು ಸ್ವತ್ತು ಅಮಾನ್ಯಗೊಂಡಾಗ ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಸೇರಿಸಲಾಗುತ್ತದೆ.

### ಕೆ) ಅಗೋಚರಿತ ಆಸ್ತಿಗಳು: ಮಾನ್ಯತೆ ಮತ್ತು ಆರಂಭದ ಮಾಪನ

ಅಗೋಚರಿತ ಆಸ್ತಿ (ತಂತ್ರಾಂಶಗಳು:ಸಾಫ್ಟ್‌ವೇರ್) ಗಳನ್ನು ಅವುಗಳ ಸ್ವಾಧೀನತೆಯ ವೆಚ್ಚ ಬೆಲೆಯಲ್ಲಿ ತಿಳಿಸಲಾಗಿದೆ. ಭಾರತೀಯ ಲೆಕ್ಕ ನಿರ್ವಹಣಾ ಗುಣಮಟ್ಟಗಳಿಗೆ ವರ್ಗಾವಣೆಯಾದ ಮೇಲೆ ಅಂದರೆ ದಿನಾಂಕ:01.04.2016ರಂದು ಸಂಸ್ಥೆ (ಗ್ರೂಪ್) ಮಾಪನಕ್ಕೆ ಹಿಂದಿನ ಜಿಎಎಪಿ ಹೊಂದಿನ ಮೌಲ್ಯ (ಭಾವಿತ ವೆಚ್ಚ) ವಿಧಾನವನ್ನು ಆಯ್ಕೆ ಮಾಡಿಕೊಂಡಿದೆ.

ವೆಚ್ಚವು ಖರೀದಿ ಬೆಲೆ, ಬಂಡವಾಳೀಕರಣ ಮಾನದಂಡವನ್ನು ಪೂರೈಸಿದ್ದಲ್ಲಿ ಸಾಲದ ವೆಚ್ಚ ಮತ್ತು ನೇರವಾಗಿ ಅನ್ವಯಿಸಬಹುದಾದ ಅಥವಾ ಕಾರಣೀಭೂತವಾಗಬಹುದಾದ ವೆಚ್ಚಗಳಾದ ಅಂದರೆ ಸ್ವತ್ತನ್ನು ಉದ್ದೇಶಿತ ಬಳಕೆಗಾಗಿ ಕಾರ್ಯನಿರ್ವಹಿಸುವ ಸ್ಥಿತಿಗೆ ತರಲು ತಗಲುವ ವೆಚ್ಚಗಳನ್ನು ಒಳಗೊಂಡಿರುತ್ತದೆ. ಯಾವುದೇ ವ್ಯಾಪಾರಿ ಕಡಿತ, ರಿಯಾಯಿತಿಗಳನ್ನು ಕಡಿತಗೊಳಿಸಿ ಖರೀದಿ ಬೆಲೆಯನ್ನು ಪರಿಗಣಿಸಬೇಕು.

#### ತದನಂತರದ ಮಾಪನ (ಅಮಾರ್ಟೈಜೇಷನ್ ಅಥವಾ ಕ್ರಮೇಣವಾಗಿ ಆರಂಭದ ಮೌಲ್ಯವನ್ನು ಅಳಿಸಿಕಹಾಕುವುದು):

ಬಂಡವಾಳೀಕರಣಗೊಂಡ ತಂತ್ರಾಂಶಗಳು ವೆಚ್ಚವನ್ನು ಅವುಗಳನ್ನು ಸ್ವಾಧೀನಗೊಳಿಸಿಕೊಂಡ ದಿನಾಂಕದಿಂದ ನೇರ ಮಾರ್ಗದ ವಿಧಾನದಿಂದ 6 ವರ್ಷಗಳ ಅಮಾರ್ಟೈಜೇಷನ್ ಮಾಡಲಾಗಿದೆ. ಅಂದರೆ ಅವುಗಳ ಜೀವಿತಾವಧಿ 6 ವರ್ಷಗಳೆಂದಾಯಿತು. ಅಗೋಚರ ಆಸ್ತಿಯ ಅಮಾನ್ಯತೆಯಿಂದ ಉಂಟಾಗುವ ಲಾಭ ಅಥವಾ ನಷ್ಟಗಳನ್ನು ಸದರಿ ಆಸ್ತಿಯ ಹೊಂದಿರುವ ಮೊತ್ತ ಮತ್ತು ವಿಲೇವಾರಿಯಿಂದ ಲಭ್ಯವಾಗುವ ನಿವ್ವಳ ಮೊತ್ತಗಳ ನಡುವಿನ ವ್ಯತ್ಯಾಸದ ಮೂಲಕ ಮಾಪನ ಮಾಡಲಾಗುವುದು ಮತ್ತು ಆಸ್ತಿಯ ಅಮಾನ್ಯಗೊಳಿಸಿದಾಗ ಅದನ್ನು ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಗುರುತಿಸಲಾಗುವುದು.

ಅಗೋಚರಿತ ಆಸ್ತಿಜಗಳ ಉಳಿಕೆ ಮೌಲ್ಯ , ಉಪಯುಕ್ತ ಜೀವಿತಾವಧಿ ಮತ್ತು ಅಮೌಲ್ಯೀಕರಣ (ಅಮಾರ್ಟೈಜೇಷನ್) ವಿಧಾನಗಳನ್ನು ಪ್ರತಿ ವರದಿ ಮಾಡುವ ದಿನಾಂಕದ ಕೊನೆಯಲ್ಲಿ ಪರಿಶೀಲಿಸಲಾಗುತ್ತದೆ ಮತ್ತು ಸೂಕ್ತವೆನಿಸಿದಲ್ಲಿ ಮುಂದಿನ ಅವಧಿಗೆ ಹೊಂದಾಣಿಕೆ ಮಾಡಲಾಗುತ್ತದೆ.

#### ಪ್ರಗತಿಯಲ್ಲಿರುವ ಹೂಡಿಕೆ ಕಾಮಗಾರಿ (ನಿರ್ಮಾಣ ಕಾಮಗಾರಿ):

ಪ್ರಗತಿಯಲ್ಲಿರುವ ಬಂಡವಾಳ ಹೂಡಿಕೆ ಕಾಮಗಾರಿಯನ್ನು ನಿರ್ಮಾಣದ ಅವಧಿಯಲ್ಲಿ ಭರಿಸಲಾದ ವೆಚ್ಚ, ಅರ್ಹತಾ ಆಸ್ತಿಗಳ ಸ್ವಾಧೀನಕ್ಕಾಗಿ ತರಲಾದ ಸಾಲದ ಮೇಲಿನ ಬಡ್ಡಿ ಮತ್ತು ಸ್ವತ್ತಿನ ಬಳಕೆಯ ದಿನಾಂಕವನ್ನು ಮುಂದಿನ ಅವಧಿಯಲ್ಲಿ ಯೋಜನಾ ಅನುಷ್ಠಾನ ಸಂಬಂಧಿಸಿದ ಕಾರ್ಯಗಳಿಗಾಗಿ ಉಂಟಾದ ವೆಚ್ಚಗಳಲ್ಲಿ ತಿಳಿಸಲಾಗುತ್ತದೆ.

ಪ್ರತಿ ಬಾಕಿ ಶಿಲ್ಕು ಪಟ್ಟಿಯ ದಿನಾಂಕಕ್ಕೆ ಕಾಣಿಸಿಕೊಂಡ ಸ್ವತ್ತು , ಸ್ಥಾವರ ಮತ್ತು ಉಪಕರಣ (ಪಿಪಿಇ)ಗಳ ಖರೀದಿ/ಸ್ವಾಧೀನ ಪ್ರಕ್ರಿಯೆಗಳಿಗಾಗಿ ನೀಡಲಾದ ಬಂಡವಾಳ ಮುಂಗಡಗಳನ್ನು ಇತರ ಚಾಲ್ತಿಯೇತರ ಆಸ್ತಿಗಳೆಂದು ಪ್ರತ್ಯೇಕವಾಗಿ ನಮೂದಿಸಲಾಗುವುದು.

#### ಹೂಡಿಕೆ ಆಸ್ತಿ : ಸ್ವತ್ತು

ಹೂಡಿಕೆ ಆಸ್ತಿಗಳು, ಅಂದರೆ ಬಾಡಿಗೆ ಗಳಿಸಲು ಹೊಂದಿರುವ ಆಸ್ತಿಗಳು ಮತ್ತು ಅಥವಾ ಬಂಡವಾಳ ವೃದ್ಧಿಗಾಗಿ (ಆ ಉದ್ದೇಶಕ್ಕಾಗಿ ನಿರ್ಮಾಣ ಹಂತದಲ್ಲಿರುವ ಆಸ್ತಿಯೂ ಸೇರಿದಂತೆ) ಇರುವ ಆಸ್ತಿಗಳು. ಹೂಡಿಕೆ ಆಸ್ತಿಗಳನ್ನು ಆರಂಭದಲ್ಲಿ ವರ್ಗಾವಣೆಗಾಗಿ ಉಂಟಾದ ವೆಚ್ಚವೂ ಸೇರಿದಂತೆ ಒಟ್ಟು ವೆಚ್ಚದಲ್ಲಿ ಲೆಕ್ಕ ಹಾಕಲಾಗುವುದು.

ಗ್ರೂಪ್‌ನ ಎಲ್ಲ ಆಸ್ತಿ ಹಿತಾಸಕ್ತಿಗಳನ್ನು ಬಾಡಿಗೆ ಗಳಿಸಲು ಕಾರ್ಯಾಚರಣೆಯಲ್ಲಿರುವ ಗುತ್ತಿಗೆಗಳಡಿ ಅಥವಾ ಬಂಡವಾಳ ವೃದ್ಧಿ ಉದ್ದೇಶಕ್ಕಾಗಿ ಹೊಂದಿರುವುವುಗಳನ್ನು ಹೂಡಿಕೆ ಆಸ್ತಿಗಳೆಂದು ಪರಿಗಣಿತವಾಗುವುವು. ಆರಂಭದ ಮಾನ್ಯತೆಯ ನಂತರ ಗ್ರೂಪ್ ಹೂಡಿಕೆ ಆಸ್ತಿಯನ್ನು ತಗುಲಿದ ವೆಚ್ಚದಲ್ಲಿ ಮಾಪನ ಮಾಡುವುದು.

ಹೂಡಿಕೆ ಆಸ್ತಿಗಳನ್ನು ಅವುಗಳ ವಿಲೇವಾರಿ ಮೇರೆಗೆ ಅಥವಾ ಶಾಶ್ವತವಾಗಿ ಹೂಡಿಕೆ ಆಸ್ತಿಗಳನ್ನು ಬಳಕೆಯಿಂದ ಹಿಂಪಡೆದಾಗ ಮತ್ತು ವಿಲೇವಾರಿಯ ನಂತರ ಮುಂದೆ ಅದರಿಂದ ಯಾವುದೇ ಆರ್ಥಿಕ ಲಾಭ ಇಲ್ಲವೆಂದಾಗ ಅಮಾನ್ಯ ಮಾಡಲಾಗುತ್ತದೆ. ಅಮಾನ್ಯಗೊಂಡ ಆಸ್ತಿಯಿಂದ ಯಾವುದೇ ಲಾಭ ಅಥವಾ ನಷ್ಟ (ಆಸ್ತಿ ಹೊಂದಿರುವ ಮೌಲ್ಯ ಮತ್ತು ಅದರ ವಿಲೇವಾರಿಯಿಂದ ಬಂದ ಮೊತ್ತಗಳ ನಡುವಿನ ವ್ಯತ್ಯಾಸದ ಮೂಲಕ ಲೆಕ್ಕ ಹಾಕಲಾಗುವುದು) ಗಳನ್ನು ಆಸ್ತಿಯ ಅಮಾನ್ಯಗೊಳಿಸಿದ ವರ್ಷದ ಅವಧಿಗೆ ಸಂಬಂಧಿಸಿದ ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಸೇರಿಸಲಾಗುತ್ತದೆ.

ಹೂಡಿಕೆ ಆಸ್ತಿಗಳನ್ನು ಅವುಗಳು ಸೇರಿದ ಆಸ್ತಿಯ ವರ್ಗ ಮತ್ತು ಆ ವರ್ಗದ ಆಸ್ತಿಗಳಿಗೆ ಗೊತ್ತುಪಡಿಸಿದ ಜೀವಿತಾವಧಿಯನುಸಾರ ಅಪಮೌಲ್ಯೀಕರಣ ಅಥವಾ ಸವಕಳಿಗೊಳಿಸಲಾಗುತ್ತದೆ.

**ಎಲ್) ಸಾಲದ ವೆಚ್ಚಗಳು:**

ಸಾಲದ ವೆಚ್ಚಗಳನ್ನು ನೇರವಾಗಿ ಸೂಕ್ತ ಅಥವಾ ಅರ್ಹ ಆಸ್ತಿಗಳ ಸ್ವಾಧೀನ, ನಿರ್ಮಾಣ ಅಥವಾ ಉತ್ಪಾದನಾ ಕಾರ್ಯಗಳಿಗೆಂದು ಕಾರಣವಾಗಿಸಲಾಗುವುದು. ಈ ಆಸ್ತಿಗಳು ಉದ್ದೇಶಿತ ಉಪಯೋಗಕ್ಕೆ ಸಿದ್ಧಪಡಿಸಲು ಗಣನೀಯ ಸಮಯ ತೆಗೆದುಕೊಳ್ಳುತ್ತವೆ. ಉದ್ದೇಶಿತ ಉಪಯೋಗಕ್ಕೆ ಸಿದ್ಧವಾಗುವವರೆಗೆ ಆ ವೆಚ್ಚಗಳನ್ನು ಆಸ್ತಿಯ ಬೆಲೆ ಅಥವಾ ವೆಚ್ಚಕ್ಕೆ ಸೇರಿಸಲಾಗುವುದು.

ಇನ್ನುಳಿದ ಎಲ್ಲ ಸಾಲದ ವೆಚ್ಚಗಳನ್ನು ವೆಚ್ಚ ಮಾಡಲಾದ ವರ್ಷದ ಅವಧಿಗೆ ಸಂಬಂಧಿಸಿದ ಲಾಭ ಮತ್ತು ನಷ್ಟದ ಹೇಳಿಕೆಗಳಲ್ಲಿ ಮಾನ್ಯ ಮಾಡಲಾಗುತ್ತದೆ.

ಸಾಲಗಳನ್ನು ಆರಂಭದಲ್ಲಿ ನ್ಯಾಯೋಚಿತ ಮೌಲ್ಯದಲ್ಲಿ; ನಿವ್ವಳ ವರ್ಗಾವಣೆಗೆ ಭರಿಸಿದ ನಿವ್ವಳ ವೆಚ್ಚದಲ್ಲಿ ಮಾನ್ಯ ಮಾಡಲಾಗುತ್ತದೆ. ತದನಂತರ ಸಾಲಗಳನ್ನು ಅಮಾಲ್ಯೀಕರಣ ವೆಚ್ಚದಲ್ಲಿ ಪರಿಗಣಿಸಲಾಗುತ್ತದೆ. ಮೊತ್ತಗಳಲ್ಲಿ ಯಾವುದೇ ವ್ಯತ್ಯಾಸ ಅಂದರೆ (ನಿವ್ವಳ ವರ್ಗಾವಣೆ ವೆಚ್ಚ) ಮತ್ತು ಮರು ಗಳಿಕೆ ಮೊತ್ತಗಳ ನಡುವೆ ಇರುವ ವ್ಯತ್ಯಾಸವನ್ನು ಸಾಲದ ಅವಧಿಯ ಲಾಭ ಅಥವಾ ನಷ್ಟಗಳಲ್ಲಿ ಜಾರಿಯಲ್ಲಿರುವ ಬಡ್ಡಿ ವಿಧಾನ ಆಧರಿಸಿ ಪರಿಗಣಿಸಲಾಗುವುದು.

ಕಂಪನಿ ಸಾಲದ ವೆಚ್ಚದ ಮೊತ್ತವನ್ನು ಬಂಡವಾಳೀಕರಣಕ್ಕೆ ಅರ್ಹವೆಂದು ಗುರುತಿಸುವ ಮೊತ್ತವನ್ನು ಸಾಲ ತರುವುದಕ್ಕಾಗಿ ಭರಿಸಲಾದ ನಿರ್ಧರಿಸುತ್ತದೆ. ಇದರಲ್ಲಿ ಯಾವುದಾದರೂ ಬಹು ಆದಾಯ ಇದ್ದಲ್ಲಿ ಅಂದರೆ ಒಂದು ನಿರ್ದಿಷ್ಟ ಸಾಲವನ್ನು ಅದರ ಉದ್ದೇಶಿತ ಬಳಕೆಯು ಬಾಕಿಯಿದ್ದು, ತಾತ್ಕಾಲಿಕವಾಗಿ ಹೂಡಿಕೆ ಮಾಡುವುದರಿಂದ ಬರುವ ಬಡ್ಡಿ ಮೊತ್ತವನ್ನು ಕಡತಗೊಳಿಸಲಾಗುತ್ತದೆ. ತಾತ್ಕಾಲಿಕ ಹೂಡಿಕೆಗಾಗಿ ನಿಧಿ ಪಡೆಯುವ ಸಂಸ್ಥೆಯು ನಿರ್ದಿಷ್ಟವಾಗಿ ಸೂಕ್ತ/ಅರ್ಹ ಆಸ್ತಿಯನ್ನು ಪಡೆಯುವ ಉದ್ದೇಶಕ್ಕೆ ಪಡೆಯಬೇಕು. ಒಂದು ವೇಳೆ ಗ್ರೂಪ್ ಸಾಮಾನ್ಯವಾಗಿ ಸಾಲ ತಂದಲ್ಲಿ ಮತ್ತು ಅದನ್ನು ಸೂಕ್ತ/ಕಡತ ಆಸ್ತಿ ಹೊಂದುವುದಕ್ಕಾಗಿ ಉಪಯೋಗಿಸಿಕೊಂಡಲ್ಲಿ ಅಂತಹ ಸಾಲ ವೆಚ್ಚಗಳು ಬಂಡವಾಳೀಕರಣಕ್ಕೆ ಅರ್ಹವಾಗಿದ್ದು ಅದನ್ನು ಆ ಆಸ್ತಿಯ ವೆಚ್ಚಕ್ಕೆ ಬಂಡವಾಳೀಕರಣ ದರ ಅನ್ವಯಿಸಿ ನಿರ್ಧರಣೆ ಮಾಡಲಾಗುವುದು.

ಗ್ರೂಪ್ ಸೂಕ್ತ/ಅರ್ಹವಾದ ಆಸ್ತಿಯ ಅಭಿವೃದ್ಧಿಯನ್ನು ವಿಸ್ತರಣೆಯಾದ ಅವಧಿಯಲ್ಲಿ ಅಮಾನತ್ತುಗೊಳಿಸಿದ್ದಲ್ಲಿ ಆ ಅವಧಿಗೆ ಸಂಬಂಧಿಸಿದಂತೆ ಬಂಡವಾಳೀಕರಣದ ಸಾಲದ ವೆಚ್ಚಗಳನ್ನು ಅಮಾನತ್ತುಗೊಳಿಸುತ್ತದೆ.

**ಎಂ) ನಗದು ಮತ್ತು ನಗದು ಸಮಾನಗಳು:**

ಬಾಕಿ ಶಿಲ್ಕು ಪಟ್ಟಿಯಲ್ಲಿ ನಗದು ಮತ್ತು ನಗದು ಸಮಾನಗಳು, ಬ್ಯಾಂಕ್‌ಗಳಲ್ಲಿನ ನಗದು, ಕೈಯಲ್ಲಿರುವ ನಗದು ಮತ್ತು ಮೂಲತಃ 3 ತಿಂಗಳು ಅಥವಾ ಕಡಿಮೆ ಪ್ರಬುದ್ಧ ಅವಧಿಯ ಅಲ್ಪಾವಧಿ ಠೇವಣಿಗಳು (ಈ ಠೇವಣಿಗಳು ಅವುಗಳ ಮೌಲ್ಯದಲ್ಲಿ ಯಾವುದೇ ಮಹತ್ತರ ಬದಲಾವಣೆಯಾಗದ ಅಪಾಯವಿಲ್ಲದಿರುವಂತೆ) ಗಳನ್ನುಒಳಗೊಂಡಿರುತ್ತವೆ.

**ಎನ್) ಗುತ್ತಿಗೆಗಳು:**

ಗುತ್ತಿಗೆಗಳಲ್ಲಿ ಗುತ್ತಿಗೆ ನೀಡುವವರು ಪರಿಣಾಮಕಾರಿಯಾಗಿ ಎಲ್ಲ ಬಗೆಯ ಗಣನೀಯ ಅಪಾಯಗಳು ಮತ್ತು ಗುತ್ತಿಗೆ ನೀಡಿದ ಆಸ್ತಿಯ ಮಾಲೀಕತ್ವವನ್ನು ಹೊಂದಿರುತ್ತಾರೆ. ಅಂತಹ ಆಸ್ತಿಗಳನ್ನು ಕಾರ್ಯಾಚರಣೆಯಲ್ಲಿರುವ ಆಸ್ತಿಗಳೆಂದು ವರ್ಗೀಕರಣ ಮಾಡಲಾಗಿದೆ.

**ಗುತ್ತಿಗೆ ಪಡೆಯುವವರಾಗಿ :**

**ಹಣಕಾಸು ಗುತ್ತಿಗೆ:**

ಗುತ್ತಿಗೆಗೆ ನೀಡಿರುವ ಬಾಬ್ತುಗಳ ಮಾಲೀಕತ್ವಕ್ಕೆ ಸಂಬಂಧಿಸಿದ ಎಲ್ಲಾ ಅಪಾಯಗಳು ಮತ್ತು ಸೌಲಭ್ಯಗಳನ್ನು ಕಂಪನಿಗೆ ಪರಿಣಾಮಕಾರಿಯಾಗಿ ಗಣನೀಯವಾಗಿ ವರ್ಗಾವಣೆ ಮಾಡಿದ ಹಣಕಾಸಿನ ಗುತ್ತಿಗೆಗಳನ್ನು ಗುತ್ತಿಗೆ ಅವಧಿಯ ಪ್ರಾರಂಭದಲ್ಲಿ ಗುತ್ತಿಗೆಗೆ ನೀಡಿದ ಸ್ವತ್ತಿನ ನ್ಯಾಯೋಚಿತ ಮೌಲ್ಯದ ಕಡಿಮೆ ದರದಲ್ಲಿ ಮತ್ತು ಕನಿಷ್ಠ ಗುತ್ತಿಗೆ ಪಾವತಿಗಳ ಪ್ರಸಕ್ತದ ಮೌಲ್ಯದಲ್ಲಿ ಬಂಡವಾಳೀಕರಿಸಿದೆ. ಹೊಣೆಗಾರಿಕೆಯ ಉಳಿಕೆ ಬಾಕಿಯ ಮೇಲಿನ ಸ್ಥಿರವಾದ ಬಡ್ಡಿದರ ರೂಪಿಸಲು ಹಣಕಾಸಿನ ಶುಲ್ಕಗಳು ಮತ್ತು ಗುತ್ತಿಗೆ ಹೊಣೆಗಾರಿಕೆ ಇಳಿಕೆ ನಡುವೆ ಗುತ್ತಿಗೆ ಪಾವತಿಗಳನ್ನು ಹಂಚಿಕೆ ಮಾಡಿದೆ. ಹಣಕಾಸಿನ ಶುಲ್ಕಗಳನ್ನು ಲಾಭ ಮತ್ತು ನಷ್ಟದ ವಿವರದಲ್ಲಿ ಹಣಕಾಸಿನ ವೆಚ್ಚ ಎಂಬುದಾಗಿ ಮಾನ್ಯ ಮಾಡಿದೆ. ಗುತ್ತಿಗೆ ನಿರ್ವಹಣೆ ಶುಲ್ಕಗಳು ಕಾನೂನು ಶುಲ್ಕಗಳು, ಮತ್ತು ಗುತ್ತಿಗೆಯ ಇತರೆ ಪ್ರಾರಂಭಿಕ ನೇರ ವೆಚ್ಚಗಳನ್ನು ಬಂಡವಾಳೀಕರಿಸಲಾಗಿದೆ.

ಆಸ್ತಿಯ ಉಪಯುಕ್ತತೆ ಅವಧಿಯಲ್ಲಿ ನೇರ ಮಾರ್ಗದ ಆಧಾರದಲ್ಲಿ ಅಥವಾ ಕಂಪನಿಗಳ ಕಾಯ್ದೆ 2013ರ ಪರಿಚ್ಛೇದ-II ರಲ್ಲಿ ತಿಳಿಸಿರುವ ಉಪಯುಕ್ತತೆ ಅವಧಿ ಇದರಲ್ಲಿ ಯಾವುದು ಕಡಿಮೆಯಾಗಿರುವುದೋ ಅದರಂತೆ ಗುತ್ತಿಗೆಗೆ ಪಡೆದಿರುವ ಆಸ್ತಿಯ ಸವಕಳಿ ಮಾಡಿದೆ. ಆದರೂ, ಗುತ್ತಿಗೆ ಅವಧಿಯ ಕೊನೆಯಲ್ಲಿ ಕಂಪನಿಯು ಮಾಲೀಕತ್ವ ಪಡೆಯುವ ಸೂಕ್ತವಾದ ನಿಶ್ಚಿತತೆ ಇಲ್ಲದಿದ್ದಲ್ಲಿ, ಆಸ್ತಿಯ ಅಂದಾಜು ಮಾಡಲಾದ ಉಪಯುಕ್ತತೆ ಅವಧಿ, ಗುತ್ತಿಗೆ ಅವಧಿ ಅಥವಾ ಕಂಪನಿಗಳ ಕಾಯ್ದೆ , 2013ರ ಪರಿಚ್ಛೇದ-II ರಲ್ಲಿ ತಿಳಿಸಿರುವ ಉಪಯುಕ್ತತೆ ಅವಧಿಯಲ್ಲಿ ಯಾವುದು ಕಡಿಮೆಯಾಗಿರುವುದೋ ಅದರ ನೇರ ಮಾರ್ಗದ ಆಧಾರದ ಮೇಲೆ ಬಂಡವಾಳೀಕರಿಸಿದ ಆಸ್ತಿಯ ಸವಕಳಿ ಮಾಡಿದೆ.

ಗುತ್ತಿಗೆ ನೀಡಿರುವವರು, ಗುತ್ತಿಗೆ ನೀಡಿದ ಬಾಬ್ತಿನ ಮಾಲೀಕತ್ವದ ಎಲ್ಲಾ ಅಪಾಯಗಳು ಮತ್ತು ಸೌಲಭ್ಯಗಳನ್ನು ಗಣನೀಯವಾಗಿ ಪರಿಣಾಮಕಾರಿಯಾಗಿ ಉಳಿಸಿಕೊಂಡಿರುವ ಸಂದರ್ಭಗಳಲ್ಲಿ ಅಂತಹ ಗುತ್ತಿಗೆಗಳನ್ನು ಕಾರ್ಯಾಚರಣೆ ಗುತ್ತಿಗೆಗಳು ಎಂಬುದಾಗಿ ವರ್ಗೀಕರಿಸಲಾಗಿದೆ. ಕಾರ್ಯಾಚರಣೆ ಗುತ್ತಿಗೆ ಪಾವತಿಗಳನ್ನು,

ಭಾರತೀಯ ಲೆಕ್ಕನಿರ್ವಹಣೆ ಗುಣಮಟ್ಟ 17ರ ಅನುಸಾರ, ಗುತ್ತಿಗೆ ಅವಧಿಯಲ್ಲಿ ನೇರ ಮಾರ್ಗದ ಆಧಾರದ ಮೇಲೆ ಲಾಭ ಮತ್ತು ನಷ್ಟದ ವಿವರದಲ್ಲಿ ಖರ್ಚು ಎಂಬುದಾಗಿ ಮಾನ್ಯ ಮಾಡಿದೆ.

**ಕಾರ್ಯಾಚರಣೆ ಗುತ್ತಿಗೆ:**

ಕಾರ್ಯಾಚರಣೆ ಗುತ್ತಿಗೆಗಳಡಿ ಮಾಡಲಾದ ಪಾವತಿಗಳನ್ನು (ಗುತ್ತಿಗೆ ನೀಡಿರುವವರಿಂದ ಸ್ವೀಕರಿಸಲಾದ ಯಾವುದೇ ನಿವ್ವಳ ಪ್ರೋತ್ಸಾಹಧನ) ನೇರ ಮಾರ್ಗದ ವಿಧಾನದಲ್ಲಿ ಗುತ್ತಿಗೆ ಅವಧಿಯ ಲಾಭ ಅಥವಾ ನಷ್ಟ ಬಾಬ್ತಿಗೆ ವಿಧಿಸಲಾಗುವುದು. ಒಂದು ವೇಳೆ ಗುತ್ತಿಗೆ ಅವಧಿಯಲ್ಲಿ ಪಾವತಿಯನ್ನು ನಿರೀಕ್ಷಿತ ಸಾಮಾನ್ಯ ಹಣದುಬ್ಬರವನ್ನು ಗಮನದಲ್ಲಿಟ್ಟುಕೊಂಡು ಗುತ್ತಿಗೆ ನೀಡಿದವರ ನಿರೀಕ್ಷಿತ ಹಣದುಬ್ಬರ ವೆಚ್ಚದ ಹೆಚ್ಚಳಕ್ಕೆ ಪರಿಹಾರವಾಗಿ ಹೆಚ್ಚಳವಾಗುವಂತೆ ರೂಪಿಸಿದ್ದಲ್ಲಿ ಅದನ್ನು ಲಾಭ ಅಥವಾ ನಷ್ಟಕ್ಕೆ ಸೇರಿಸಲಾಗದು.

**ಗುತ್ತಿಗೆ ನೀಡಿದವರಾಗಿ:**

ಕಂಪನಿ ಸಾಮಾನ್ಯವಾಗಿ ಕಾರ್ಯಾಚರಣೆ ಗುತ್ತಿಗೆಯ ಒಡಂಬಡಿಕೆ ಮಾಡಿಕೊಳ್ಳುತ್ತದೆ. ಸಂಬಂಧಿತ ಗುತ್ತಿಗೆ ಅವಧಿಯಲ್ಲಿ ಕಾರ್ಯಾಚರಣೆ ಗುತ್ತಿಗೆಯಿಂದ ಬರುವ ಬಾಡಿಗೆ ಆದಾಯವನ್ನು ನೇರ ಮಾರ್ಗ ವಿಧಾನದಲ್ಲಿ ಗುರುತಿಸಲಾಗುತ್ತದೆ.

**ಓ) ಸಿಬ್ಬಂದಿಗಳ ಸೌಲಭ್ಯಗಳು:**

**ನಿರೂಪಿತ ವಂತಿಗೆ ಯೋಜನೆ:**

ಕಂಪನಿಯ ನಿರೂಪಿತ ವಂತಿಗೆ ಯೋಜನೆಗಳು–ನೌಕರರ ಭವಿಷ್ಯನಿಧಿ (ನೌಕರರ ಭವಿಷ್ಯನಿಧಿ ಮತ್ತು ಇತರ ಉಪಬಂಧಗಳ ಕಾಯ್ದೆ, 1952ರ ವ್ಯವಸ್ಥೆಯ ಅನ್ವಯ) ಮತ್ತು ಇಎಸ್‌ಐ (ಕಾರ್ಮಿಕರ ರಾಜ್ಯ ವಿಮಾ ಕಾಯ್ದೆ, 1948ರ ಉಪಬಂಧಗಳ ಅನ್ವಯ) ಆಗಿರುತ್ತವೆ. ಇವುಗಳಿಗೆ ಕಂಪನಿಯ ವಂತಿಗೆಗಳನ್ನು ನೀಡುವುದರ ಹೊರತಾಗಿ ಕಂಪನಿಯು ಯಾವುದೇ ಹೆಚ್ಚಿನ ಹೊಣೆಗಾರಿಕೆಗಳನ್ನು ಹೊಂದಿರುವುದಿಲ್ಲ. ಭವಿಷ್ಯನಿಧಿ ಮತ್ತು ಇಎಸ್‌ಐಗೆ ಕಂಪನಿಯ ವಂತಿಗೆಯನ್ನು ನಿಗದಿಪಡಿಸಿದ ದರಗಳಲ್ಲಿ ಪಾವತಿ ಮಾಡಿದೆ ಮತ್ತು ಅದನ್ನು ಲಾಭ ಮತ್ತು ನಷ್ಟದ ವಿವರಗಳಲ್ಲಿ ತಿಳಿಸಿದೆ.

**ಮರಣ ಪರಿಹಾರ ನಿಧಿ:**

ಮರಣ ಪರಿಹಾರ ನಿಧಿಯ ಬಗ್ಗೆ ಕಂಪನಿ ಹೊಂದಿರುವ ಹೊಣೆಗಾರಿಕೆಯನ್ನು ವರದಿಗಾರಿಕೆ ದಿನಾಂಕದಲ್ಲಿದ್ದಂತೆ ವಿಮಾಗಣನ ಮೌಲ್ಯ ಮಾಪನದ ಆಧಾರದ ಮೇಲೆ ಲೆಕ್ಕ ಮಾಡಲಾಗಿದೆ. ಮೌಲ್ಯಮಾಪನವನ್ನು ಕಂಪನಿಯ ನೀತಿಯ ಆಧಾರದ ಮೇಲೆ ಮಾಡಲಾಗಿದೆ.

**ನಿರೂಪಿತ ಸೌಲಭ್ಯ ಯೋಜನೆ:**

ಗ್ರೂಪ್ ನಿವೃತ್ತಿ ನಿಧಿ (ಗ್ರ್ಯಾಚ್ಯುಟಿ) ಕಾಯ್ದೆ 1972ರನ್ವಯ ಗ್ರ್ಯಾಚ್ಯುಟಿ ಪಾವತಿಗಾಗಿ ನಿರೂಪಿತ ಸೌಲಭ್ಯ ಯೋಜನೆಯನ್ನು ಹೊಂದಿದೆ. ಗ್ರ್ಯಾಚ್ಯುಟಿ ಯೋಜನೆಯು ನೌಕರರ ನಿವೃತ್ತಿಗೆ ನಿಗದಿಯಾಗಿರುವ ವಯೋಮಾನದ ಸೇವಾ ಅವಧಿಯಲ್ಲಿ 5 ವರ್ಷ ಅಥವಾ ಹೆಚ್ಚು ವರ್ಷ ಸೇವೆ ಸಲ್ಲಿಸಿರುವ ನೌಕರರಿಗೆ ಒಟ್ಟಾಗಿ ಹಣಕಾಸು ಪಾವತಿ ಸೌಲಭ್ಯ ಒದಗಿಸುತ್ತದೆ. ಅಂಗವಿಕಲತೆ ಅಥವಾ ಸೇವೆಯಿಂದ ವಜಾ (ರದ್ದು) ಆದಲ್ಲಿ ಅಂತಹ ಸಿಬ್ಬಂದಿಯವರಿಗೆ ಅವರು ಗ್ರೂಪ್‌ನೊಂದಿಗೆ ಅದುವರೆಗೂ ಸೇವೆ ಸಲ್ಲಿಸಿದ ವರ್ಷಗಳು ಮತ್ತು ಸಂಬಂಧಪಟ್ಟ ಸಿಬ್ಬಂದಿಯವರು ಪಡೆದು ಕೊನೆಯ ತಿಂಗಳ ವೇತನ ಅಂಶಗಳನ್ನು ಪರಿಗಣಿಸಿ ಗ್ರ್ಯಾಚ್ಯುಟಿಯನ್ನು ಪಾವತಿ ಮಾಡಲಾಗುತ್ತದೆ. ಭಾರತೀಯ ಜೀವ ನಿಗಮ ನಿರ್ವಹಿಸುತ್ತಿರುವ ನೌಕರರ ನಿವೃತ್ತಿ ನಿಧಿ ಟ್ರಸ್ಟ್‌ಗೆ ಗ್ರೂಪ್ ವಂತಿಗೆ ಅಥವಾ ಕೊಡುಗೆ ನೀಡುತ್ತದೆ.

ಗ್ರೂಪ್‌ನ ಋಣಭಾರವನ್ನು (ಯೋಜಿತ ಘಟಕ ಸಾಲ ವಿಧಾನವನ್ನು ಬಳಸಿ) ಪ್ರತಿ ವರದಿ ಅವಧಿಯ ಕೊನೆಯಲ್ಲಿ ವಿಮಾಗಣನ ಮೌಲ್ಯಮಾಪನದಿಂದ ನಿರ್ಧರಣೆ ಮಾಡಲಾಗುತ್ತಿದೆ. ನಿರೂಪಿತ ಸೌಲಭ್ಯ ಬಾಧ್ಯತೆಯ ಪ್ರಸಕ್ತ ಮೌಲ್ಯವನ್ನು ಭವಿಷ್ಯ ಅಂದಾಜು ನಗದು ಚಲಾವಣೆಯನ್ನು ಸಂಬಂಧಿತ ಬಾಧ್ಯತೆಯ ಅಂದಾಜು ಅವಧಿಯನ್ನು ಹೊಂದಿರುವ ಸರ್ಕಾರದ ಬಾಂಡುಗಳಿಂದ ವರದಿಯ ವರ್ಷದ ಕೊನೆಯಲ್ಲಿ ಲಭ್ಯವಾಗುವ ಮಾರುಕಟ್ಟೆ ಫಲಿತಾಂಶಗಳಿಗೆ ಸಂಬಂಧಿಸಿ ಕಡಿತಗೊಳಿಸುವ ಮೂಲಕ ನಿರ್ಧರಣೆ ಮಾಡಲಾಗುತ್ತದೆ. ನಿವ್ವಳ ಬಡ್ಡಿ ವೆಚ್ಚವನ್ನು ನಿರೂಪಿತ ಸೌಲಭ್ಯ ಬಾಧ್ಯತೆಯನ್ನು ನಿವ್ವಳ ಬಾಕಿ ಮತ್ತು ಯಾವುದುದರ ಯೋಜನೆ ಆಸ್ತಿಗಳಿದ್ದಲ್ಲಿ ಅವುಗಳ ನ್ಯಾಯೋಚಿತ ಮೌಲ್ಯಗಳಿಗೆ ಕಡಿತ ದರ (ಸೋಡಿ) ಅನ್ವಯಿಸಿ ಲೆಕ್ಕ ಹಾಕಲಾಗುತ್ತಿದೆ.

ಈ ವೆಚ್ಚವನ್ನು ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ನೌಕರರ ಸೌಲಭ್ಯ ವೆಚ್ಚದಲ್ಲಿ ಸೇರಿಸಲಾಗುತ್ತದೆ.

ಋಣಭಾರ ಅಥವಾ ಗ್ರ್ಯಾಚ್ಯುಟಿ ಯೋಜನೆಯ ಸಂಬಂಧಿತ ಬಾಕಿ ಶಿಲ್ಕು ಪಟ್ಟಿಯಲ್ಲಿ ಗುರುತಿಸಲಾದ ಆಸ್ತಿಯು ವರದಿ ಅವಧಿಯ ಕೊನೆಯಲ್ಲಿ ಯಾವುದಾದರೂ ಯೋಜನಾ ಆಸ್ತಿಗಳಿದ್ದಲ್ಲಿ ಅವುಗಳ ನ್ಯಾಯೋಚಿತ ಮೌಲ್ಯವನ್ನು ಕಳೆದು ಉಂಟಾಗುವ ಮೌಲ್ಯವೇ ನಿರೂಪಿತ ಸೌಲಭ್ಯ ಬಾಧ್ಯತೆ ಪ್ರಸಕ್ತ ಮೌಲ್ಯವಾಗುತ್ತದೆ.

ವಿಮಾಗಣನಾ ಅಂದಾಜುಗಳಲ್ಲಿ ಅನುಭವ, ಹೊಂದಾಣಿಕೆ ಮತ್ತು ಮಾರ್ಪಾಟುಗಳಿಂದ ಉಂಟಾಗುವ ಲಾಭ ಮತ್ತು ನಷ್ಟಗಳ ಮರು ಮಾಪನವನ್ನು ಅವುಗಳು ಉದ್ಭವಿಸಿರುವ ಅವಧಿಯಲ್ಲಿ ಮಾನ್ಯ ಮಾಡಲಾಗುತ್ತದೆ. ಇದನ್ನು ನೇರವಾಗಿ ಇತರ ಸಮಗ್ರ ಆದಾಯದಲ್ಲಿ ಮತ್ತು ಲಾಭ ಅಥವಾ ನಷ್ಟದಲ್ಲಿ ಎಂದಿಗೂ ಮರು ವರ್ಗೀಕರಣ ಮಾಡುವುದಿಲ್ಲ. ನಿರೂಪಿತ ಸೌಲಭ್ಯ ಬಾಧ್ಯತೆಯ ಪ್ರಸಕ್ತ ಮೌಲ್ಯದಲ್ಲಿ ಯೋಜನಾ ತಿದ್ದುಪಡಿ ಅಥವಾ ಸ್ಥಗಿತತೆಯಿಂದ ಉಂಟಾಗುವ ಬದಲಾವಣೆಯನ್ನು ತಕ್ಷಣವೇ ಲಾಭ ಮತ್ತು ನಷ್ಟ ಹೇಳಿಕೆಯಲ್ಲಿ ಹಿಂದಿನ ಸೇವಾ ವೆಚ್ಚವೆಂದು ಮಾನ್ಯಮಾಡಲಾಗುತ್ತದೆ.

ಪಿ) **ಗಳಿಕೆ ರಜೆಗಳು:**

ಕಂಪನಿಯ ನೀತಿನಿಯಮಾನುಸಾರ ನೌಕರರು ಉಪಯೋಗಿಸದೇ ಜಮೆಯಾಗುವ ರಜೆಗಳನ್ನು ಮುಂದಿನ ಸೇವಾ ಅವಧಿಗೆ ಮುಂದುವರಿಸಿಕೊಂಡು ಹೋಗಬಹುದು ಮತ್ತು ಬಳಸಿಕೊಳ್ಳಬಹುದು ಅಥವಾ ನಗದು ಪರಿಹಾರ ಪಡೆದುಕೊಳ್ಳಬಹುದಾಗಿದೆ. ಪರಿಹಾರಿತ ಗೈರುಹಾಜರಿಯು ನೌಕರರು ಸೇವೆ ಸಲ್ಲಿಸುವ ಅವಧಿಯ ಕೊನೆಯಾದ ನಂತರ 12 ತಿಂಗಳೊಳಗಾಗಿ ಬಾಕಿ ಇರುತ್ತವೆ. ಆ ಸೌಲಭ್ಯವನ್ನು ಪ್ರಸಕ್ತ ನೌಕರರ ಸೌಲಭ್ಯ ಎಂದು ವರ್ಗೀಕರಣ ಮಾಡಲಾಗುವುದು. ಕಂಪನಿ ಆ ತೆರನಾದ ಪರಿಹಾರಿತ ಗೈರುಹಾಜರಿಯನ್ನು ನೌಕರರು ಸೇವೆ ಸಲ್ಲಿಸುವ ವರ್ಷದಲ್ಲಿ ತನ್ನ ಬಾಧ್ಯತೆಯೆಂದು ಪರಿಗಣಿಸುತ್ತದೆ. ಅದು ನೌಕರರ ಹಕ್ಕನ್ನು ವೃದ್ಧಿಸುತ್ತದೆ. ಇದರೆಡೆಗಿನ ಸದರಿ ಬಾಧ್ಯತೆಯನ್ನು ಸಂಗ್ರಹಿತ ಪರಿಹಾರಿತ ಗೈರುಹಾಜರಿಗಳ ನಿರೀಕ್ಷಿತ ವೆಚ್ಚ ಬಳಕೆಯಾಗದ ರಜಾ ಹಕ್ಕಿನ ಪರಿಣಾಮವಾಗಿ ಹೆಚ್ಚುವರಿ ಮೊತ್ತವಾಗಿ ಪಾವತಿ ಮಾಡಬೇಕಾಗಿದೆ ಎಂದು ವರದಿಯ ಅವಧಿಯಂದಿನಂತೆ ಲೆಕ್ಕಕ್ಕೆ ತೆಗೆದುಕೊಳ್ಳಲಾಗುತ್ತದೆ. ಕಂಪನಿಯ ಋಣಭಾರವನ್ನು ವಿಮಾಗಣವಾಗಿ (ಯೋಜಿತ ಘಟಕ ಸಾಲ ವಿಧಾನ ಬಳಸಿ) ಪ್ರತಿ ವರದಿ ಮಾಡುವ ಅವಧಿಯ ಕೊನೆಯಲ್ಲಿ ನಿರ್ಧರಣೆ ಮಾಡಲಾಗಿದೆ.

**ನೌಕರರ ಇತರ ಅಲ್ಪಾವಧಿ ಸೌಲಭ್ಯಗಳು:**

ಸೇವೆ ಸಲ್ಲಿಸಿದ ಹನ್ನೆರಡು ತಿಂಗಳುಗಳ ಒಳಗೆ ಸಮಗ್ರವಾಗಿ ನೀಡಬೇಕಾಗಿ ಬರುವ ಎಲ್ಲಾ ನೌಕರರ ಸೌಲಭ್ಯಗಳನ್ನು ಅಲ್ಪಾವಧಿ ನೌಕರರ ಸೌಲಭ್ಯಗಳು ಎಂಬುದಾಗಿ ವರ್ಗೀಕರಿಸಲಾಗಿದೆ. ಸಂಬಳಗಳು, ವೇತನಗಳು, ಅಂದಾಜು ಮಾಡಲಾದ ಬೋನಸ್, ಎಕ್ಸ್-ಗ್ರೇಷಿಯಾ ಮತ್ತು ಅಲ್ಪಾವಧಿ ಪರಿಹಾರಿತ ಗೈರುಹಾಜರಿಗಳಂತಹ ಸೌಲಭ್ಯಗಳನ್ನು, ಸಂಬಂಧಿಸಿದ ನೌಕರನು ಸಲ್ಲಿಸಿದ ಸಂಬಂಧಪಟ್ಟ ಸೇವೆಯ ಅವಧಿಯಲ್ಲಿ ಗುರುತಿಸಿದೆ.

ಅಲ್ಪಾವಧಿ ನೌಕರರ ಸೌಲಭ್ಯಗಳು ಕಾರ್ಯನಿರ್ವಹಣಾ ಬೋನಸ್ ಸೇರಿದಂತೆ ನೌಕರರ ವೆಚ್ಚಗಳೆಂದು ನೌಕರರು ಸಲ್ಲಿಸುವ ಸೇವಾ ಅವಧಿಗೆ ಪಾವತಿ ಮಾಡಿದ ಅಥವಾ ಮಾಡಬೇಕಾದ ಮೊತ್ತದ ಆಧಾರದಲ್ಲಿ ಲಾಭ ಮತ್ತು ನಷ್ಟದ ಹೇಳಿಕೆಯ ಪಟ್ಟಿಯಲ್ಲಿ ಮಾನ್ಯ ಮಾಡಲಾಗುತ್ತದೆ.

**ತೆರಿಗೆ ವೆಚ್ಚಗಳು:**

**ಆದಾಯ ತೆರಿಗೆಗಳು**

ಆದಾಯ ತೆರಿಗೆ ವೆಚ್ಚಗಳು ಚಾಲ್ತಿಯಲ್ಲಿ ಪಾವತಿ ಮಾಡಬೇಕಾದ ತೆರಿಗೆ ಮತ್ತು ಮುಂದೂಡಿದ ತೆರಿಗೆಗಳ ಒಟ್ಟು ಮೊತ್ತವಾಗಿವೆ.

**ಚಾಲ್ತಿ ತೆರಿಗೆ**

ಚಾಲ್ತಿ ತೆರಿಗೆಯು ಆದಾಯ ತೆರಿಗೆ ಕಾಯ್ದೆ 1961ರ ಉಪಬಂಧಗಳನುಸಾರ ಮತ್ತು ಅನ್ವಯಿತ ತೆರಿಗೆ ದರಗಳನುಸಾರ ಆ ವರ್ಷದ ತೆರಿಗೆ ವಿಧಿಸಬಹುದಾದ ಲಾಭದ ಮೊತ್ತ ಆಧರಿಸಿ ನಿರ್ಧರಣೆ ಮಾಡಿರುವ ಪಾವತಿ ಮಾಡಬೇಕಾದ ತೆರಿಗೆ ಮೊತ್ತವಾಗಿರುತ್ತದೆ. ಅಂತೆಯೇ ಇತರ ದೇಶಗಳಲ್ಲಿ ಗ್ರೂಪ್ ಕಾರ್ಯನಿರ್ವಹಿಸಿ ಅಲ್ಲಿ ತೆರಿಗೆ ವಿಧಿಸಬಹುದಾದ ಆದಾಯ ಗಳಿಸಿದಲ್ಲಿ ಆದೇಶದಲ್ಲಿ ಅನ್ವಯಿಸುವ ತೆರಿಗೆ ಕಾನೂನುಗಳನುಸಾರ ಚಾಲ್ತಿ ತೆರಿಗೆ ಪಾವತಿ ಮಾಡಬೇಕಾಗುವುದು.

ಕಂಪನಿ ಚಾಲ್ತಿ ತೆರಿಗೆ ಆಸ್ತಿ ಮತ್ತು ಚಾಲ್ತಿ ತೆರಿಗೆ ಋಣ ಬಾಧ್ಯತೆಗಳನ್ನು ನಿರುಕ್ತಿಗೊಳಿಸಿದೆ. ಇಲ್ಲಿ ಕಂಪನಿ ಕಾನೂನಾತ್ಮಕವಾಗಿ ಪರಿಗಣಿತ ಮೊತ್ತಗಳನ್ನು ಚಾಲನೆಗೊಳಪಡಿಸಿ ಜಾರಿಗೊಳಿಸುವ ಹಕ್ಕು ಹೊಂದಿದೆ ಮತ್ತು ಅದು ನಿವ್ವಳ ಆಧರಿತದಲ್ಲಿ ಇತ್ಯರ್ಥಪಡಿಸುವ ಅಥವಾ ಏಕಕಾಲಕ್ಕೆ ಆಸ್ತಿಯನ್ನು ಹೊಂದಲು ಮತ್ತು ಋಣಬಾಧ್ಯತೆಯನ್ನು ಇತ್ಯರ್ಥಗೊಳಿಸಲು ಉದ್ದೇಶಿಸುತ್ತದೆ.

**ಮುಂದೂಡಿತ ತೆರಿಗೆ:**

ಮುಂದೂಡಿದ ತೆರಿಗೆಗಳನ್ನು ಆಸ್ತಿಗಳ ವಾಹಕ ಮೊತ್ತಗಳು ಮತ್ತು ಋಣಬಾಧ್ಯತೆಗಳ ನಡುವಿನ ತಾತ್ಕಾಲಿಕ ವ್ಯತ್ಯಾಸಗಳೆಂದು ಹಣಕಾಸು ಹೇಳಿಕೆಗಳಲ್ಲಿ ಮತ್ತು ತೆರಿಗೆ ವಿಧಿಸಬಹುದಾದ ಲಾಭದ ಗಣನೆಯಲ್ಲಿ ಉಪಯೋಗಿಸುವ ಸಮನ್ವಯಿಕ ತೆರಿಗೆ ಆಧಾರಗಳಲ್ಲಿ ಮಾನ್ಯ ಮಾಡಲಾಗುತ್ತದೆ. ಮುಂದೂಡಿದ ತೆರಿಗೆ ಬಾಧ್ಯತೆಗಳನ್ನು ಸಾಮಾನ್ಯವಾಗಿ ಎಲ್ಲ ತೆರಿಗೆ ವಿಧಿಸಬಹುದಾದ ತಾತ್ಕಾಲಿಕ ವ್ಯತ್ಯಾಸಗಳೆಂದು ಗುರುತಿಸಲಾಗುತ್ತದೆ. ಮುಂದೂಡಿದ ತೆರಿಗೆ ಆಸ್ತಿಗಳನ್ನು ಸಾಮಾನ್ಯವಾಗಿ ಎಲ್ಲಾ ಕಡಿತಗೊಳಿಸಬಹುದಾದ ತಾತ್ಕಾಲಿಕ ವ್ಯತ್ಯಾಸಗಳಿಗಾಗಿ ತೆರಿಗೆ ವಿಧಿಸಬಹುದಾದ ಲಾಭಗಳು ಲಭ್ಯವಾಗಲಿದ್ದು ಅವುಗಳಿಗೆ ಪ್ರತಿಯಾಗಿ ಆ ಕಡಿತಗೊಳಿಸಬಹುದಾದ ತಾತ್ಕಾಲಿಕ ವ್ಯತ್ಯಾಸಗಳನ್ನು ಬಳಸಿಕೊಳ್ಳಲು ಸಾಧ್ಯ ಎಂದು ಮಾನ್ಯ ಮಾಡಲಾಗುತ್ತದೆ.

ಮುಂದೂಡಿದ ತೆರಿಗೆ ಆಸ್ತಿಗಳ ವಾಹಕ ಮೊತ್ತವನ್ನು ವರದಿ ಮಾಡುವ ಪ್ರತಿ ಅವಧಿಯ ಕೊನೆಯಲ್ಲಿ ಪರಿಶೀಲಿಸಲಾಗುತ್ತದೆ ಮತ್ತು ಮುಂದೆ ಅದು ಉಂಟಾಗಬಹುದೆಂದು ಊಹಿಸುವುದಕ್ಕಿಲ್ಲ ಎನ್ನುವ ಮಟ್ಟಿಗೆ ಕಡಿತಗೊಳಿಸಲಾಗುತ್ತದೆ. ಏಕೆಂದರೆ ಸಾಕಷ್ಟು ತೆರಿಗೆ ವಿಧಿಸಬಹುದಾದ ಲಾಭವು ಲಭ್ಯವಿದ್ದು ಪೂರ್ಣ ತೆರಿಗೆ ಕಡಿತಕ್ಕೆ ಅವಕಾಶ ಅಥವಾ ವಸೂಲಿ ಮಾಡಬೇಕಾದ ಆಸ್ತಿಯ ಭಾಗ ಲಭ್ಯವಿರುತ್ತದೆ.

ಕನಿಷ್ಠಪರ್ಯಾಯತೆರಿಗೆ(MAT) ಯನ್ನು ತೆರಿಗೆಕಾನೂನುಗಳಾನುಸಾರ ಪಾವತಿ ಮಾಡಲಾಗುತ್ತದೆ.ಇದು ಮುಂದಿನ ತೆರಿಗೆ ಬಾಧ್ಯತೆಗಳಿಗೆ ಹೊಂದಾಣಿಕೆ ರೂಪದಲ್ಲಿ ಭವಿಷ್ಯದ ಹಣಕಾಸು ಸೌಲಭ್ಯಗಳನ್ನು ನೀಡುತ್ತದೆ. ಅದನ್ನು ಕಂಪನಿ ಸಾಮಾನ್ಯ ರೀತಿಯಲ್ಲಿ ತೆರಿಗೆ ಪಾವತಿ ಮಾಡುತ್ತದೆ ಎಂದು ಖಚಿತವಾಗುವ ಸಾಕ್ಷ್ಯಾಧಾರಗಳಿದ್ದಲ್ಲಿ ಆಸ್ತಿ ಎಂದು ಪರಿಗಣಿಸಲಾಗುತ್ತದೆ. ಅದರನುಸಾರ ಕನಿಷ್ಠ ಪರ್ಯಾಯ ತೆರಿಗೆಯನ್ನು ಬಾಕಿ ಶಿಲ್ಕು ಪಟ್ಟಿಯಲ್ಲಿ ಮುಂದೂಡಿದ ತೆರಿಗೆ ಆಸ್ತಿ ಎಂದು ಅದು ಭವಿಷ್ಯದ ಹಣಕಾಸು ಸೌಲಭ್ಯ ಕಂಪನಿಗೆ ತರುವ ಹೇರಳ ಸಾಧ್ಯತೆಗಳು ಇವೆ ಎಂದಾಗ ಪರಿಗಣಿಸಲಾಗುತ್ತದೆ.

ಮುಂದೂಡಿದ ತೆರಿಗೆ ಆಸ್ತಿಗಳು ಮತ್ತು ಬಾಧ್ಯತೆಗಳನ್ನು ಬಾಧ್ಯತೆಗಳು ಇತ್ಯರ್ಥಗೊಳಿಸಲಾದ ಅವಧಿಯಲ್ಲಿ ಅನ್ವಯವಾಗಬಹುದೆಂದು ನಿರೀಕ್ಷಿಸಿದ ತೆರಿಗೆ ದರಗಳಲ್ಲಿ ಅಥವಾ ಆಸ್ತಿಯ ನಗದೀಕರಣದ ಅಥವಾ ಹಾಲಿ ಇರುವ ತೆರಿಗೆದರ (ತೆರಿಗೆ ಕಾನೂನುಗಳು) ಅಥವಾ ತದನಂತರ ವರದಿ ಅವಧಿಯ ಕೊನೆಯಲ್ಲಿ ರೂಪಿಸುವ ಕಾನೂನುಗಳನ್ನು ಆಧರಿಸಿ ಮಾಪನ ಮಾಡಲಾಗುತ್ತದೆ.

ಮುಂದೂಡಿದ ತೆರಿಗೆ ಆಸ್ತಿಗಳು ಮತ್ತು ಮುಂದೂಡಿದ ತೆರಿಗೆ ಬಾಧ್ಯತೆಗಳು ಒಂದು ವೇಳೆ ಚಾಲ್ತಿ ತೆರಿಗೆ ಬಾಧ್ಯತೆಗಳಿಗೆ ಪ್ರತಿಯಾಗಿ ಚಾಲ್ತಿ ತೆರಿಗೆ ಆಸ್ತಿಗಳನ್ನು ರೂಪಿಸಲು ಕಾನೂನಾತ್ಮಕ ಹಕ್ಕು ಅಸ್ತಿತ್ವದಲ್ಲಿದ್ದಲ್ಲಿ ಮತ್ತು ಮುಂದೂಡಿದ ತೆರಿಗೆಗಳು. ಅದೇ ತೆರಿಗೆ ವಿಧಿಸಬಹುದಾದ ಸಂಸ್ಥೆ ಮತ್ತು ಅದೇ ತೆರಿಗೆ ಪ್ರಾಧಿಕಾರಕ್ಕೆ ಸಂಬಂಧಿಸಿದಲ್ಲಿ ನಿರುಕ್ತಿಗೊಳ್ಳುತ್ತವೆ.

### ಒಂದು ಅವಧಿಯ ಚಾಲ್ತಿ ಮತ್ತು ಮುಂದೂಡಿದ ತೆರಿಗೆ:

ಚಾಲ್ತಿ ಮತ್ತು ಮುಂದೂಡಿದ ತೆರಿಗೆಯನ್ನು ಇತರ ಸಮಗ್ರ ಆದಾಯ ಅಥವಾ ನೇರವಾಗಿ ಈಕ್ವಿಟಿಯಲ್ಲಿ ಬರುವ ಬಾಬ್ತುಗಳಿಗೆ ಸಂಬಂಧಿಸಿದಂತಹ ಪ್ರಕರಣದಲ್ಲಿ ಚಾಲ್ತಿ ಮತ್ತು ಮುಂದೂಡಿದ ತೆರಿಗೆಗಳನ್ನು ಸಹ ಕ್ರಮವಾಗಿ ಇತರ ಸಮಗ್ರ ಆದಾಯ ಅಥವಾ ನೇರವಾಗಿ ಈಕ್ವಿಟಿಯಲ್ಲಿ ಮಾನ್ಯ ಮಾಡಿರುವುದನ್ನು ಹೊರತುಪಡಿಸಿ ಕಂಪನಿಯ ಲಾಭ ಅಥವಾ ನಷ್ಟದಲ್ಲಿ ಮಾನ್ಯ ಮಾಡಲಾಗುತ್ತದೆ.

### ಕ್ಯೂ) ಪ್ರತಿ ಷೇರಿನ ಗಳಿಕೆಗಳು:

ಷೇರು ಒಂದರ ಮೂಲ ಗಳಿಕೆಗಳನ್ನು, ಈಕ್ವಿಟಿ ಷೇರುದಾರರುಗಳಿಗೆ ಅನ್ವಯಿಸಬಹುದಾದ ಅವಧಿಗೆ ನಿವ್ವಳ ಲಾಭ ಅಥವಾ ನಷ್ಟವನ್ನು, (ಕಾರಣವಾಗಬಹುದಾದತೆರಿಗೆಕಡಿತದನಂತರ) ಆ ಅವಧಿಯಲ್ಲಿ ಬಾಕಿ ಉಳಿದಿರುವ ಈಕ್ವಿಟಿ ಷೇರುಗಳ ಪರಿಗಣಿತ ಸರಾಸರಿ ಸಂಖ್ಯೆಯಿಂದ ಭಾಗಿಸಿ ಲೆಕ್ಕಾಚಾರ ಮಾಡಲಾಗಿದೆ. ಈ ಅವಧಿಯಲ್ಲಿ ಬಾಕಿ ಉಳಿದಿರುವ ಈಕ್ವಿಟಿ ಷೇರುಗಳ ಪರಿಗಣಿತ ಸರಾಸರಿ ಸಂಖ್ಯೆಯನ್ನು ಸಂಬಂಧಿಸಿತ ಸಂಪನ್ಮೂಲಗಳಲ್ಲಿ ಯಾವುದೇ ಬದಲಾವಣೆಯಿಲ್ಲದೆ ಬದಲಾಯಿಸಿದ ಪೋಟೆನ್ಷಿಯಲ್ ಷೇರುಗಳ ಪರಿವರ್ತನೆಯನ್ನು ಹೊರತುಪಡಿಸಿ ಬೋನಸ್ ನೀಡಿಕೆಗೆ; ಹೊಂದಾಣಿಕೆ ಮಾಡಲಾಗಿದೆ. ಷೇರು ಒಂದರ ಕ್ಷೀಣಿಸಿದ ಗಳಿಕೆಗಳನ್ನು ಲೆಕ್ಕಾಚಾರ ಮಾಡುವ ಉದ್ದೇಶಕ್ಕಾಗಿ, ಈಕ್ವಿಟಿ ಷೇರುದಾರರುಗಳಿಗೆ ಅನ್ವಯಿಸಬಹುದಾದ ಅವಧಿಯ ನಿವ್ವಳ ಲಾಭ ಅಥವಾ ನಷ್ಟವನ್ನು ಮತ್ತು ಈ ಅವಧಿಯಲ್ಲಿ ಬಾಕಿಯಿರುವ ಷೇರುಗಳ ಪರಿಗಣಿತ ಸರಾಸರಿ ಸಂಖ್ಯೆಯನ್ನು ಎಲ್ಲಾ ಕ್ಷೀಣಿಸುವ ಪ್ರಚ್ಛನ್ನ (ಪೊಟೆನ್ಷಿಯಲ್) ಈಕ್ವಿಟಿ ಷೇರುಗಳಿಗೆ ಕೆಳಕಂಡ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಹೊಂದಾಣಿಕೆ ಮಾಡಿದೆ. ಪ್ರತಿ ಷೇರಿನ ಕ್ಷೀಣಿಸಿದ ಗಳಿಕೆಯು ಪ್ರತಿ ಷೇರಿನ ಮೂಲ ಗಳಿಕೆಯ ನಿರ್ಧಾರಣೆಗೆ ಬಳಸಿದ ಸಂಖ್ಯೆಗೆ ಹೊರಗಿನವುಗಳನ್ನು ಪರಿಗಣಿಸಲು ಹೊಂದಾಣಿಕೆಯಾಗುತ್ತದೆ.

(i) ಕ್ಷೀಣಿಸಿದ ಈಕ್ವಿಟಿ ಷೇರುಗಳ ಮೌಲ್ಯದೊಂದಿಗೆ ಬಡ್ಡಿ ಮತ್ತು ಇತರ ಹಣಕಾಸು ವೆಚ್ಚಗಳ ಸಂಯೋಜನೆಗಳ ಆದಾಯ ತೆರಿಗೆಯ ನಂತರದ ಪರಿಣಾಮ ಮತ್ತು

(ii) ಎಲ್ಲಾ ಕ್ಷೀಣಿಸಿದ ಈಕ್ವಿಟಿ ಷೇರುಗಳ ಮೌಲ್ಯದ ಪರಿವರ್ತನೆಯನ್ನು ಊಹಿಸಿ ಮಾಪನ ಮಾಡಿದ ಸರಾಸರಿ ಬಾಕಿ ಇರಬಹುದಾದ ಹೆಚ್ಚುವರಿ ಈಕ್ವಿಟಿ ಷೇರುಗಳು

### ಆರ್) ಉಪಬಂಧಗಳು, ಸಂಭಾವ್ಯ ಬಾಧ್ಯತೆಗಳು ಮತ್ತು ಸಂಭಾವ್ಯ ಆಸ್ತಿಗಳು:

ಕಂಪನಿ ಹಿಂದಿನ ಘಟನಾವಳಿಗಳ ಪರಿಣಾಮವಾಗಿ ಪುಸ್ತಕದಲ್ಲಿ ಪೂರೈಸಬೇಕಾಗಿರುವ ಬಾಧ್ಯತೆಯನ್ನು (ಕಾನೂನಾತ್ಮಕ ಅಥವಾ ರಚನಾತ್ಮಕ) ಹೊಂದಿದ್ದಲ್ಲಿ ಆಗ ಅದಕ್ಕಾಗಿ ಅವಕಾಶಗಳನ್ನು ಅಥವಾ ಉಪಬಂಧಗಳಿಗೆ ಮಾನ್ಯ ಮಾಡಲಾಗಿದೆ. ಆ ರೀತಿಯ ಬಾಧ್ಯತೆಗಳನ್ನು ಇತ್ಯರ್ಥಪಡಿಸಲು ಸಂಪನ್ಮೂಲಗಳ ರವಾನೆಯ ಅಗತ್ಯವಿದ್ದು, ಈ ಬಗ್ಗೆ ವಿಶ್ವಾಸನೀಯವಾಗಿ ಅಂದಾಜು ಮಾಡಬಹುದಾಗಿದೆ.

ಬಾಕಿ ಶಿಲ್ಕು ಪಟ್ಟಿಯ ದಿನಾಂಕದಂದಿನಂತೆ ಪ್ರಸಕ್ತ ಹೊಣೆಗಾರಿಕೆ ಅಥವಾ ಬಾಧ್ಯತೆಯನ್ನು ಇತ್ಯರ್ಥಪಡಿಸಲು ಅಗತ್ಯವೆಂದು ಪರಿಗಣಿಸಿರುವ ಮೊತ್ತವು ಅತ್ಯುತ್ತಮ ಅಂದಾಜು ಮೊತ್ತ ಎಂದು ಬಾಧ್ಯತೆಯನ್ನು ಆವರಿಸಿಕೊಂಡಿರುವ ಅಪಾಯ ಮತ್ತು ಅನಿಶ್ಚಿತತೆಗಳನ್ನು ಗಣನೆಗೆ ತೆಗೆದುಕೊಂಡು ಮಾನ್ಯ ಮಾಡಲಾಗಿದೆ. ಪ್ರಸಕ್ತ ಬಾಧ್ಯತೆಯನ್ನು ಇತ್ಯರ್ಥಪಡಿಸಲು ನಗದು ಚಲಾವಣೆಯನ್ನು ಬಳಸಿ ಅಂದಾಜಿಸಿದ ಮುನ್ನೇರ್ಪಾಡುಗಳನ್ನು ಮಾಪನ ಮಾಡಿದಾಗ ಅದರ ವಾಹಕ ಮೊತ್ತವು ಆ ನಗದು ಚಲಾವಣೆಯ ಪ್ರಸಕ್ತ ಮೌಲ್ಯವಾಗಿರುತ್ತದೆ. (ಯಾವಾಗ ಹಣದ ಸಮಯ ಮೌಲ್ಯದ ಪರಿಣಾಮ ವಸ್ತುವಾಗಿರುವುದು).

ಒಂದು ವೇಳೆ ಹಣದ ಸಮಯ ಮೌಲ್ಯದ ಪರಿಣಾಮ ವಸ್ತುವಾಗಿದ್ದಲ್ಲಿ ಮುನ್ನೇರ್ಪಾಡುಗಳನ್ನು ಮುಂದಿನ ನಿರೀಕ್ಷಿತ ನಗದು ಚಲಾವಣೆಯನ್ನು ತೆರಿಗೆ ಪೂರ್ವ ದರದಲ್ಲಿ ಕಡಿತಗೊಳಿಸುವ ಮೂಲಕ ನಿರ್ಧರಣೆ ಮಾಡಲಾಗುತ್ತದೆ. ಇದು ಹಣದ ಸಮಯ ಮೌಲ್ಯದ ಮಾರುಕಟ್ಟೆ ಅಂದಾಜುಗಳನ್ನು ಮತ್ತು ಬಾಧ್ಯತೆಗೆ ನಿರ್ದಿಷ್ಟವಾದ ಅಪಾಯಗಳನ್ನು ಬಿಂಬಿಸುತ್ತದೆ. ಕಾಲಾವಧಿಯ ಕಾರಣದಿಂದಾಗಿ ಮುನ್ನೇರ್ಪಾಡುಗಳ ಹೆಚ್ಚಳವನ್ನು ಬಡ್ಡಿ ವೆಚ್ಚವೆಂದು ಮಾನ್ಯ ಮಾಡಲಾಗಿದೆ.

ಗುರುತರ ಜವಾಬ್ದಾರಿಯುಳ್ಳ ಗುತ್ತಿಗೆಗಳಡಿ ಉಂಟಾಗುವ ಪ್ರಸಕ್ತ ಬಾಧ್ಯತೆಗಳನ್ನು ಮುನ್ನೇರ್ಪಾಡುಗಳೆಂದು ಮಾನ್ಯ ಮಾಡಲಾಗಿದೆ ಮತ್ತು ಮಾಪನ ಮಾಡಲಾಗಿದೆ.. ಒಂದು ಗುರುತರ ಗುತ್ತಿಗೆಯನ್ನು ಒಂದು ಗುತ್ತಿಗೆಯಡಿ ಇರುವ ಬಾಧ್ಯತೆಗಳನ್ನು ಪೂರೈಸಲು ತಡೆಯಲಸಾಧ್ಯವಾದ ವೆಚ್ಚದ ಮೊತ್ತವು ಆ ಗುತ್ತಿಗೆಯಿಂದ ಬರಬಹುದೆಂದು ನಿರೀಕ್ಷಿಸಲಾದ ಹಣಕಾಸು ಲಾಭಕ್ಕಿಂತ ಹೆಚ್ಚಾಗಿದ್ದಲ್ಲಿ ಅಂತಹ ಗುತ್ತಿಗೆಯನ್ನು ಗುರುತರ ಜವಾಬ್ದಾರಿಗಳ ಗುತ್ತಿಗೆ ಎಂದು ಪರಿಗಣಿಸಲಾಗುತ್ತದೆ.

ಸ್ಥಗಿತಗೊಳಿಸುವ ವೆಚ್ಚಗಳನ್ನು ಬಾಧ್ಯತೆಯ ಇತ್ಯರ್ಥವಾಗಿ ವೆಚ್ಚದ ಅತ್ಯುತ್ತಮ ಅಂದಾಜು ಎಂದು ಪರಿಗಣಿಸಲಾಗುವುದು ಅಥವಾ ಬಾಧ್ಯತೆಯನ್ನು ಮೂರನೇ ವ್ಯಕ್ತಿಗೆ ವರ್ಗಾಯಿಸುವುದು. ಬಾಧ್ಯತೆಗಳ ಸ್ಥಗಿತಗೊಳಿಸುವ ಮುನ್ನೇರ್ಪಾಡುಗಳನ್ನು ವ್ಯವಸ್ಥೆಯ ಆರಂಭದಲ್ಲೇ ಗುರುತಿಸಬೇಕಾಗುತ್ತದೆ. ವ್ಯವಸ್ಥೆಗಳ ಕೊನೆಯಲ್ಲಿ ಭರಿಸಬೇಕಾದ ಅಂದಾಜು ವೆಚ್ಚಗಳನ್ನು ಮರಳಿ ಪಡೆಯುವ ಮಾರುಕಟ್ಟೆ ದರ ಬಳಸಿ ಅದರ ಪ್ರಸಕ್ತ ಮೌಲ್ಯಕ್ಕೆ ಕಡಿತಗೊಳಿಸಲಾಗಿದೆ.

ಕೆಲವು ಅಥವಾ ಎಲ್ಲ ಹಣಕಾಸು ಲಾಭಗಳನ್ನು ಸೌಲಭ್ಯಗಳನ್ನು ಇತ್ಯರ್ಥಗೊಳಿಸಬೇಕಾದಲ್ಲಿ ಮೂರನೇ ವ್ಯಕ್ತಿ ಸಂಸ್ಥೆಯಿಂದ ಮರು ವಸೂಲಿ ಮಾಡುವ ಅವಕಾಶವನ್ನು ನಿರೀಕ್ಷಿಸಲಾಗುತ್ತದೆ. ಹಾಗೆ ಪಡೆಯಬಹುದಾದ ಮೊತ್ತವು ಒಂದು ವೇಳೆ ಮರು ಭರಿಸುವಿಕೆಯ ಮೊತ್ತವು ಪಡೆಯಲಾಗುವುದು. ಬಹುತೇಕ ಖಚಿತವಾಗಿದ್ದಲ್ಲಿ ಆಸ್ತಿ ಎಂದು ಮಾನ್ಯ ಮಾಡಲಾಗಿದೆ. ಮರು ಮತ್ತು ಆ ಪಡೆಯಬಹುದಾದ ಮೊತ್ತವು ವಿಶ್ವಾಸನೀಯವಾಗಿ ಮಾಪನ ಮಾಡಲಾಗಿದೆ.

**ಸಂಭಾವ್ಯ ಬಾಧ್ಯತೆಗಳನ್ನು ಕೆಳಕಂಡ ಪ್ರಕರಣ ಸನ್ನಿವೇಶಗಳಿದ್ದಲ್ಲಿ ಬಹಿರಂಗಪಡಿಸಲಾಗಿದೆ:**

(i) ಪ್ರಸಕ್ತ ಬಾಧ್ಯತೆಯು ಹಿಂದಿನ ಘಟನಾವಳಿಯಿಂದ ಉಂಟಾಗಿರುತ್ತದೆ. ಆ ಬಾಧ್ಯತೆಯನ್ನು ಇತ್ಯರ್ಥಪಡಿಸಲು ಸಂಪನ್ಮೂಲಗಳ ರವಾನೆಯು (ಹೊರ ಹರಿವಿಕೆ) ಅಗತ್ಯತೆ ಕಂಡು ಬರುವ ಸಾಧ್ಯತೆಗಳು ಇಲ್ಲದಿರುವಾಗ

(ii) ಪ್ರಸಕ್ತ ಬಾಧ್ಯತೆಯು ಹಿಂದಿನ ಘಟನೆಯಿಂದ ಉಂಟಾಗಿದ್ದು ಬಾಧ್ಯತೆಯ ವಿಶ್ವಸನೀಯ ಅಂದಾಜು ಮಾಡಲು ಸಾಧ್ಯವಾಗದಿದ್ದಾಗ ಮತ್ತು

(iii) ಹಿಂದಿನ ಘಟನಾವಳಿಗಳಿಂದ ಉಂಟಾಗಬಹುದಾದ ಬಾಧ್ಯತೆಗಳಲ್ಲಿ ಸಂಪನ್ಮೂಲಗಳ ರವಾನೆ (ಹೊರಹರಿವಿಕೆ) ಸಾಧ್ಯತೆಗಳು ಕ್ಷೀಣವಾಗಿಲ್ಲ ದಿದ್ದಲ್ಲಿ;

ಸಂಭಾವ್ಯ ಆಸ್ತಿಗಳನ್ನು ಆರ್ಥಿಕ ಲಾಭಗಳ ಒಳಹರಿವಿಕೆಯ ಸಾಧ್ಯತೆಗಳಿದ್ದಾಗ ಲೆಕ್ಕ ನಿರ್ವಹಣಾ ವಿಭಾಗಕ್ಕೆ ಟಿಪ್ಪಣಿಗಳ ಮೂಲಕ ಹಣಕಾಸು ಹೇಳಿಕೆಗಳಲ್ಲಿ ತೋರಿಸಲಾಗುತ್ತದೆ.

ಪ್ರತಿ ಬಾಕಿ ಶಿಲ್ಕು ಪಟ್ಟಿಯ ದಿನಾಂಕದಂದು ಮುನ್ನೇರ್ಪಾಡುಗಳು, ಸಂಭಾವ್ಯ ಬಾಧ್ಯತೆಗಳು ಮತ್ತು ಸಂಭಾವ್ಯ ಆಸ್ತಿಗಳ ಕುರಿತು ಪರಿಶೀಲಿಸಲಾಗಿದೆ.

**ಎಸ್) ಹಣಕಾಸು ಸಾಧನಗಳು**

**ಹಣಕಾಸು ಆಸ್ತಿಗಳು:**

**ಆರಂಭಿಕ ಮಾನ್ಯತೆ ಮತ್ತು ಮಾಪನ:**

ಎಲ್ಲ ಆರ್ಥಿಕ ಹಣಕಾಸು ಆಸ್ತಿಗಳನ್ನು ಆರಂಭದಲ್ಲಿ ನ್ಯಾಯೋಚಿತ ಮೌಲ್ಯದಲ್ಲಿ ಮಾನ್ಯ ಮಾಡಲಾಗಿದೆ ಮತ್ತು ಆ ಹಣಕಾಸು ಆಸ್ತಿಯ ಸ್ವಾಧೀನಕ್ಕೆ ಸಂಬಂಧಿಸಿದ ವೆಚ್ಚವನ್ನು ಹಣ ಹೊಂದಾಣಿಕೆ ಮಾಡಲಾಗಿದೆ.

**ತದನಂತರ ಮಾಪನ**

**ಋಣ ಸಾಧನಗಳು**

**ಋಣಸಾಧನಗಳು ಅಪಮೌಲ್ಯಗೊಳಿಸಿದ ವೆಚ್ಚದಲ್ಲಿ :**

ಒಂದು ಋಣ ಸಾಧನವನ್ನು ವ್ಯವಹಾರದ ಮಾದರಿಯ ವ್ಯಾಪ್ತಿಯಲ್ಲಿ ಅಂದರೆ ಗುತ್ತಿಗೆಗಾರಿಕೆಯ ನಗದು ಹರಿವಿಕೆಯ ಸಂಗ್ರಹಣೆಗಾಗಿ ಆಸ್ತಿಯ ಹೊಂದುವ ಉದ್ದೇಶಕ್ಕಾಗಿ ಆಸ್ತಿಯನ್ನು ಹಿಡಿದಿಟ್ಟದ್ದಲ್ಲಿ ಅದನ್ನು ತದನಂತರ ಮಾಪನ ಮಾಡಲಾಗುತ್ತದೆ ಮತ್ತು ಗುತ್ತಿಗೆಗಾರಿಕೆಯ ಹಣಕಾಸು ಆಸ್ತಿಯ ಷರತ್ತುಗಳು ನಿರ್ದಿಷ್ಟ ದಿನಾಂಕಗಳಂದು ನಗದು ಹರಿವಿಕೆಗೆ ಅವಕಾಶ ಒದಗಿಸುತ್ತದೆ. ಅವುಗಳು ಇಡಿಯಾಗಿ ಬಾಕಿ ಇರುವ ಅಸಲು ಮೊತ್ತದ ಮೇಲೆ ಅಸಲು ಮತ್ತು ಬಡ್ಡಿ ಮೊತ್ತದ ಪಾವತಿಯಾಗಿರುತ್ತವೆ.

ಆರಂಭದ ಮಾಪನದ ನಂತರ ಅಂತಹ ಹಣಕಾಸು ಆಸ್ತಿಗಳನ್ನು, ಪರಿಣಾಮಕಾರಿ ಬಡ್ಡಿ ದರವನ್ನು ಉಪಯೋಗಿಸಿಕೊಂಡು ಅಪಮೌಲ್ಯೀಕರಣ ವೆಚ್ಚ ವಿಧಾನದಲ್ಲಿ ಮಾಪನ ಮಾಡಲಾಗಿದೆ. ಅಪಮೌಲ್ಯೀಕರಣ ವೆಚ್ಚವನ್ನು ಪರಿಣಾಮಕಾರಿ ಬಡ್ಡಿ ದರದ ಅವಿಭಾಜ್ಯ ಭಾಗಗಳಾದ ಯಾವುದೇ ಸೋಡಿ, ಸ್ವಾಧೀನದ ಮೇಲೆ ಪ್ರೀಮಿಯಂ ಮತ್ತು ಶುಲ್ಕಗಳು ಅಥವಾ ವೆಚ್ಚಗಳನ್ನು ಗಣನೆಗೆ ತೆಗೆದುಕೊಂಡು ಲೆಕ್ಕ ಹಾಕಲಾಗಿದೆ. ಪರಿಣಾಮಕಾರಿ ಬಡ್ಡಿ ದರದ ಅಪಮೌಲ್ಯೀಕರಣವು ಲಾಭ ಅಥವಾ ನಷ್ಟದ ಹಣಕಾಸು ಆದಾಯದಲ್ಲಿ ಒಳಗೊಂಡಿದೆ. ನಿಶ್ಚಲತೆಯಿಂದ ಉಂಟಾದ ನಷ್ಟವನ್ನು ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಮಾನ್ಯ ಮಾಡಲಾಗಿದೆ.

**ಋಣಸಾಧನಗಳನ್ನು ಇತರ ಸಮಗ್ರ ಆದಾಯದ ಮುಖಾಂತರ ನ್ಯಾಯೋಚಿತ ಮೌಲ್ಯದಲ್ಲಿ :**

ಒಂದು ಋಣ ಸಾಧನವನ್ನು ತದನಂತರದಲ್ಲಿ ಒಂದು ವೇಳೆ ಅದನ್ನು ವ್ಯವಹಾರದ ಮಾದರಿ ವ್ಯಾಪ್ತಿಯಲ್ಲಿ ಹಿಡಿದಿಟ್ಟದಲ್ಲಿ ಅದನ್ನು ಇತರ ಸಮಗ್ರ ಆದಾಯದ ಮುಖಾಂತರ ನ್ಯಾಯೋಚಿತ ಮೌಲ್ಯದಲ್ಲಿ ಮಾಪನ ಮಾಡಲಾಗಿದೆ. ಇದರ ಉದ್ದೇಶವಾದ ಗುತ್ತಿಗೆಗಾರಿಕೆಯ ನಗದು ಚಲಾವಣೆ ಮತ್ತು ಹಣಕಾಸು ಆಸ್ತಿಗಳ ಮಾರಾಟ ಎರಡನ್ನು ಸಾಧಿಸಲಾಗಿದೆ ಮತ್ತು ಆಸ್ತಿಯ ಗುತ್ತಿಗೆಗಾರಿಕೆಯ ಷರತ್ತುಗಳು ನಿರ್ದಿಷ್ಟ ದಿನಾಂಕಗಳಂದು ನಗದು ಚಲಾವಣೆಗೆ ಅವಕಾಶ ಒದಗಿಸುತ್ತವೆ. ಅವುಗಳು ಸಂಪೂರ್ಣವಾಗಿ ಬಾಕಿ ಇರುವ ಅಸಲು ಮೊತ್ತದ ಮೇಲಿನ ಅಸಲು ಮತ್ತು ಬಡ್ಡಿ ಮೊತ್ತದ ಪಾವತಿಯಾಗಿರುತ್ತಾರೆ. ನ್ಯಾಯೋಚಿತ ಮೌಲ್ಯ ಚಲನವಲನಗಳನ್ನು ಇತರ ಸಮಗ್ರ ಆದಾಯದಲ್ಲಿ ಮಾನ್ಯ ಮಾಡಲಾಗಿದೆ.

**ಋಣಸಾಧನಗಳು ಲಾಭ ಮತ್ತು ನಷ್ಟದ ಮುಖಾಂತರ ನ್ಯಾಯೋಚಿತ ಮೌಲ್ಯದಲ್ಲಿ : (FVTPL)**

MSIL

ಎಫ್‌ವಿಟಿಪಿಎಲ್ ಋಣಸಾಧನೆಗಳಿಗೆ ಒಂದು ಉಳಿಕೆ ಪ್ರವರ್ಗ ವಾಗಿರುತ್ತದೆ. ಯಾವುದೇ ಋಣಸಾಧನವು ಅಪಮೌಲ್ಯೀಕರಣದ ವೆಚ್ಚ ಅಥವಾ ಎಫ್‌ವಿಓಸಿಐ (ಇತರ ಸಮಗ್ರ ಆದಾಯದ ಮುಖಾಂತರ ನ್ಯಾಯೋಚಿತ ಮೌಲ್ಯ) ರೂಪದಲ್ಲಿ ಪ್ರವರ್ಗೀಕರಣ ಮಾಡಲು ಬೇಕಾದ ಅರ್ಹತೆಗಳನ್ನು ಪೂರೈಸದಿದ್ದಲ್ಲಿ ಅದನ್ನು ಎಫ್‌ವಿಟಿಪಿಎಲ್ ಎಂದು ವರ್ಗೀಕರಣ ಮಾಡಲಾಗಿರುತ್ತದೆ. ಎಫ್‌ವಿಟಿಪಿಎಲ್ ವ್ಯಾಪ್ತಿಗೆ ಒಳಪಟ್ಟ ಎಲ್ಲ ಋಣಸಾಧನಗಳನ್ನು ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಗುರುತಿಸಲಾದ ಎಲ್ಲ ಮಾರ್ಪಾಡುಗಳೊಂದಿಗೆ ನ್ಯಾಯೋಚಿತ ಮೌಲ್ಯದಲ್ಲಿ ಮಾಪನ ಮಾಡಲಾಗಿದೆ.

**ಈಕ್ವಿಟಿ ಹೂಡಿಕೆಗಳು:**

ಭಾರತೀಯ ಲೆಕ್ಕ ನಿರ್ವಹಣಾ ಗುಣಮಟ್ಟಗಳು 109 ವ್ಯಾಪ್ತಿಯಲ್ಲಿ ಎಲ್ಲ ಈಕ್ವಿಟಿ ಹೂಡಿಕೆಗಳು ಹಣಕಾಸು ಸಾಧನಗಳನ್ನು ನ್ಯಾಯೋಚಿತ ಮೌಲ್ಯದಲ್ಲಿ ಮಾಪನ ಮಾಡಲಾಗಿದೆ. ವಾಣಿಜ್ಯೋದ್ದೇಶಕ್ಕಾಗಿ ಮತ್ತು ಸಂಭಾವ್ಯ ಪರಿಗಣನೆಗೊಳಗಾಗಿ ಹೊಂದಿರುವ ಈಕ್ವಿಟಿ ಸಾಧನಗಳನ್ನು ವ್ಯವಹಾರ ಸಹಪಾಲುದಾರಿನಲ್ಲಿ ಸ್ವಾಧೀನಕಾರರಿಂದ ಮಾನ್ಯ ಮಾಡಲಾಗಿದೆ. ಇದಕ್ಕೆ ಭಾರತೀಯ ಲೆಕ್ಕ ನಿರ್ವಹಣಾ ಗುಣಮಟ್ಟಗಳು 103 ವ್ಯವಹಾರ ಸಹ ಪಾಲುದಾರಿಕೆಯು (Business Conbination) ಅನ್ವಯಿಸುತ್ತದೆ. ಇವುಗಳನ್ನು ಎಫ್‌ವಿಟಿಪಿಎಲ್‌ಗೆ ವರ್ಗೀಕರಣ ಮಾಡಲಾಗಿದೆ. ಎಲ್ಲ ಇತರ ಈಕ್ವಿಟಿ ಸಾಧನಗಳನ್ನು ಕಂಪನಿ ಇತರ ಸಮಗ್ರ ಆದಾಯದಲ್ಲಿ ಪ್ರಸ್ತುತಪಡಿಸಲು ಕಂಪನಿ ರದ್ದುಪಡಿಸಲಾಗದ ಆಯ್ಕೆಯನ್ನು ನ್ಯಾಯೋಚಿತ ಮೌಲ್ಯದಲ್ಲಿ ತದನಂತರದ ಬದಲಾವಣೆಗಳೊಂದಿಗೆ ಮಾಡಿಕೊಳ್ಳಬಹುದಾಗಿದೆ. ಗ್ರೂಪ್ ಈ ರೀತಿಯ ಆಯ್ಕೆಯನ್ನು ಸಾಧನ ನಂತರ ಸಾಧನ ಆಧಾರದಲ್ಲಿ ಮಾಡಿಕೊಳ್ಳುತ್ತದೆ. ಈ ವರ್ಗೀಕರಣವು ಆರಂಭದ ಮಾನ್ಯತೆಯ ಮೇರೆಗೆ ಮಾಡಿಕೊಂಡಿದೆ ಮತ್ತು ರದ್ದುಪಡಿಸಲಾಗದಂತಿದೆ.

ಕಂಪನಿ ಒಂದು ವೇಳೆ ಒಂದು ಈಕ್ವಿಟಿ ಸಾಧನವನ್ನು ಎಫ್‌ವಿಓಸಿಐಗೆ ವರ್ಗೀಕರಣ ಮಾಡಲು ತೀರ್ಮಾನಿಸಿದಲ್ಲಿ ಆಗ ಸಾಧನದ ಎಲ್ಲ ನ್ಯಾಯೋಚಿತ ಮೌಲ್ಯಗಳು ಮಾರ್ಪಾಡುತ್ತವೆ. ಇದು ಲಾಭಾಂಶ, ದುರ್ಬಲತೆಯ ಲಾಭಗಳು ಅಥವಾ ನಷ್ಟಗಳನ್ನು ಹೊರತಾಗಿಸಿದೆ. ಮತ್ತು ವಿದೇಶಿ ವಿನಿಮಯದ ಲಾಭಗಳು ಮತ್ತು ನಷ್ಟಗಳನ್ನು ಇತರ ಸಮಗ್ರ ಆದಾಯದಲ್ಲಿ ಮಾನ್ಯ ಮಾಡಲಾಗಿದೆ. ಇತರ ಸಮಗ್ರ ಆದಾಯ ಮೊತ್ತಗಳು, ಹೂಡಿಕೆ ಮಾರಾಟದ ಮೇಲಿನ ಮೊತ್ತವೂ ಸಹ ಲಾಭ ಮತ್ತು ನಷ್ಟದ ಹೇಳಿಕೆಗೆ ಮರು ಬಳಕೆ ಮಾಡಲಾಗುವುದಿಲ್ಲ.

ಎಫ್‌ವಿಟಿಪಿಎಲ್ ಪ್ರವರ್ಗದಲ್ಲಿ ಸೇರಿಸಲ್ಪಟ್ಟ ಈಕ್ವಿಟಿ ಸಾಧನಗಳನ್ನು ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಮಾನ್ಯ ಮಾಡಲಾಗಿರುವ ಎಲ್ಲ ಬದಲಾವಣೆಗಳೊಂದಿಗೆ ನ್ಯಾಯೋಚಿತ ಮೌಲ್ಯದಲ್ಲಿ ಮಾಪನ ಮಾಡಲಾಗಿದೆ.

**ಹಣಕಾಸು ಆಸ್ತಿಗಳ ಅಮಾನ್ಯತೆ:**

ಒಂದು ಹಣಕಾಸು ಆಸ್ತಿಯನ್ನು ಆ ಆಸ್ತಿಯಿಂದ ಪಡೆಯಬೇಕಾದ ನಗದು ಚಲಾವಣೆ (ಹರಿವಿಕೆ) ಹಕ್ಕುಗಳು ಸ್ಥಗಿತಗೊಂಡಾಗ ಅಥವಾ ಕಂಪನಿ ಆಸ್ತಿಯಿಂದ ಬರಬೇಕಾಗಿರುವ ನಗದು ಹರಿವಿಕೆ ಸ್ವೀಕರಿಸುವ ತನ್ನ ಹಕ್ಕುಗಳನ್ನು ವರ್ಗಾವಣೆ ಮಾಡಿದಾಗ ಪ್ರಧಾನವಾಗಿ ಅಮಾನ್ಯ ಮಾಡಲಾಗುತ್ತದೆ. ಒಂದು ವೇಳೆ ಕಂಪನಿ ಆಸ್ತಿಯ ಮಾಲೀಕತ್ವವನ್ನು ವರ್ಗಾವಣೆಯೂ ಮಾಡದೇ ಅಥವಾ ಮಾಲೀಕತ್ವದ ಗಣನೀಯ ಅಪಾಯ ಮತ್ತು ಅನುಕೂಲತೆಗಳನ್ನು ಉಳಿಸಿಕೊಳ್ಳದೇ ಮತ್ತು ವರ್ಗಾವಣೆಯಾದ ಆಸ್ತಿಯ ಮೇಲೆ ನಿಯಂತ್ರಣ ಮುಂದುವರಿಸಿದಲ್ಲಿ, ಕಂಪನಿ ಆಸ್ತಿಯ ಮೇಲೆ ತನಗಿರುವ ಆಸಕ್ತಿಯನ್ನು ಮತ್ತು ಅದು ಪಾವತಿ ಮಾಡಬೇಕಾಗಿರುವ ಮೊತ್ತಗಳ ಋಣಬಾಧ್ಯತೆಯನ್ನು ಮಾನ್ಯ ಮಾಡುತ್ತದೆ ಎಂದರ್ಥ.

ಒಂದು ವೇಳೆ ಕಂಪನಿ ವರ್ಗಾವಣೆಯಾದ ಹಣಕಾಸು ಆಸ್ತಿಯ ಎಲ್ಲ ಗಣನೀಯ ಅಪಾಯಗಳು ಮತ್ತು ಅನುಕೂಲಗಳನ್ನು ಉಳಿಸಿಕೊಳ್ಳುತ್ತಿದ್ದಲ್ಲಿ ಕಂಪನಿ ಸದರಿ ಹಣಕಾಸು ಆಸ್ತಿಯ ಮಾನ್ಯತೆಯನ್ನು ಮುಂದುವರಿಸಿದೆ ಮತ್ತು ಸ್ವೀಕರಿಸಿದ ಮೊತ್ತಕ್ಕೆ ಉಪ ಅಡಮಾನದ ಸಾಲಗಳಿಗೂ ಮಾನ್ಯ ಮಾಡುತ್ತದೆ ಎಂದರ್ಥ.

ಒಂದು ಹಣಕಾಸು ಆಸ್ತಿಯ ಅದರ ಪೂರ್ಣ ಪ್ರಮಾಣದಲ್ಲಿ ಅಥವಾ ಇಡಿಯಾಗಿ ಅಮಾನ್ಯತೆಯ ಮೇರೆಗೆ ಆಸ್ತಿಯ ವಾಹಕ ಮೊತ್ತ ಮತ್ತು ಸ್ವೀಕರಿಸಿದ ಪರಿಗಣಿತ ಮೊತ್ತ ಮತ್ತು ಸ್ವೀಕರಿಸಬಹುದಾದ ಮೊತ್ತ ನಡುವೆ ವ್ಯತ್ಯಾಸ ಹಾಗೂ ಸಮಗ್ರ ಆದಾಯದಲ್ಲಿ ಗುರುತಿಸಲಾದ ಸಂಚಿತ ಲಾಭ ಅಥವಾ ನಷ್ಟ ಹಾಗೂ ಈಕ್ವಿಟಿಯಲ್ಲಿ ಸಂಚಯಗೊಂಡ ಮೊತ್ತಗಳನ್ನು ಲಾಭ ಮತ್ತು ನಷ್ಟದಲ್ಲಿ ಮಾನ್ಯ ಮಾಡಲಾಗಿದೆ.

**ಟಿ) ಹಣಕಾಸು ಹೊಣೆಗಾರಿಕೆಗಳು**

ಆರಂಭದ ಮಾನ್ಯತೆ; ಎಲ್ಲ ಹಣಕಾಸು ಹೊಣೆಗಾರಿಕೆಗಳನ್ನು ಆರಂಭದಲ್ಲಿ ನ್ಯಾಯೋಚಿತ ಮೌಲ್ಯದಲ್ಲಿ ಮಾನ್ಯ ಮಾಡಲಾಗಿದೆ ಮತ್ತು ಹಣಕಾಸು ಹೊಣೆಗಾರಿಕೆಗಳ ಸ್ವಾಧೀನ ಪ್ರಕ್ರಿಯೆಯಲ್ಲಿ ಉಂಟಾದ ವ್ಯವಹಾರಿಕ ವೆಚ್ಚಗಳನ್ನು ಸಹ ಹೊಂದಾಣಿಕೆ ಮಾಡಲಾಗಿದೆ. ಈ ಹೊಣೆಗಾರಿಕೆಗಳನ್ನು ಅಪಮೌಲ್ಯೀಕರಣಗೊಂಡ ವೆಚ್ಚಗಳೆಂದು ವರ್ಗೀಕರಿಸಲಾಗಿದೆ.

**ತದನಂತರದ ಮಾಪನ:**

ಈ ಹೊಣೆಗಾರಿಕೆ ಅಥವಾ ಬಾಧ್ಯತೆಗಳು, ಸಾಲಗಳು ಮತ್ತು ಠೇವಣಿಗಳನ್ನು ಒಳಗೊಂಡಿವೆ. ಆರಂಭದ ಮಾನ್ಯತೆ ನಂತರ ಈ ಬಾಧ್ಯತೆಗಳನ್ನು ಪರಿಣಾಮಕಾರಿ ಬಡ್ಡಿ ದರ ಉಪಯೋಗಿಸಿಕೊಂಡು ಅಪಮೌಲ್ಯೀಕರಣಗೊಂಡ ಮೊತ್ತಕ್ಕೆ ಮಾನ್ಯ ಮಾಡಲಾಗಿದೆ.

**ಹಣಕಾಸು ಋಣಭಾರದ ಅಮಾನ್ಯತೆ:**

ಒಂದು ಹಣಕಾಸು ಋಣ ಬಾಧ್ಯತೆಯನ್ನು ಋಣಭಾರ ಬಾಧ್ಯತೆಯಡಿ ಹೊಣೆಗಾರಿಕೆಯನ್ನು ಬಿಡುಗಡೆಗೊಳಿಸಿದಲ್ಲಿ ಅಥವಾ ರದ್ದುಪಡಿಸಿದಲ್ಲಿ ಅಥವಾ ಅವಧಿ ಮುಗಿದಿದ್ದಲ್ಲಿ ಅಮಾನ್ಯತೆ

ಮಾಡಲಾಗುತ್ತದೆ. ಹಾಲಿ ಹಣಕಾಸು ಋಣಬಾಧ್ಯತೆಯನ್ನು ಬದಲಿಸಿ ಅದೇ ಸಾಲಿನಿಂದ ಗಣನೀಯವಾದ ಬೇರೆ ಷರತ್ತುಗಳೊಂದಿಗೆ ಅಥವಾ ಹಾಲಿ ಬಾಧ್ಯತೆಯ ಷರತ್ತುಗಳಲ್ಲಿ ಸಾಕಷ್ಟು ಮಾರ್ಪಾಟುಗಳೊಂದಿಗೆ ಮತ್ತೊಂದು ಹಣಕಾಸು ಋಣಬಾಧ್ಯತೆ ಉಂಟು ಮಾಡಿದಾಗ ಅಂತಹ ವಿನಿಮಯ ಅಥವಾ ಮಾರ್ಪಾಟು, ಮೂಲ ಋಣಬಾಧ್ಯತೆಯ ಅಮಾನ್ಯತೆ ಎಂದು ಪರಿಗಣಿಸಲಾಗುತ್ತದೆ ಮತ್ತು ಹೊಸ ಬಾಧ್ಯತೆಯ ಮಾನ್ಯತೆಯಾಗಿರುತ್ತದೆ.

ಈ ಎರಡು ಬಗೆಯ ಋಣಬಾಧ್ಯತೆಗಳ ವಾಹಕ ಮೊತ್ತಗಳ ನಡುವಿನ ವ್ಯತ್ಯಾಸವನ್ನು ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಮಾನ್ಯ ಮಾಡಲಾಗಿದೆ.

**ಹಣಕಾಸು ಸಾಧನಗಳನ್ನು ಸ್ಥಗಿತಗೊಳಿಸುವಿಕೆ:**

ಹಣಕಾಸು ಆಸ್ತಿಗಳು ಮತ್ತು ಹಣಕಾಸು ಋಣಬಾಧ್ಯತೆಗಳನ್ನು ಒಂದು ವೇಳೆ ಮಾನ್ಯ ಮಾಡಿದ ಮೊತ್ತಗಳನ್ನು ಸ್ಥಗಿತಗೊಳಿಸಲು ಪ್ರಸ್ತುತ ಜಾರಿಗೊಳಿಸಬಹುದಾದ ಕಾನೂನಾತ್ಮಕ ಹಕ್ಕು ಹೊಂದಿದ್ದಲ್ಲಿ ಮತ್ತು ನಿವ್ವಳ ಆಧಾರದಲ್ಲಿ ಏಕಕಾಲಕ್ಕೆ ಆಸ್ತಿಯ ಸಾಕಾರಕ್ಕೆ ಮತ್ತು ಋಣಬಾಧ್ಯತೆಗಳ ಇತ್ಯರ್ಥದ ಉದ್ದೇಶ ಹೊಂದಿದ್ದಲ್ಲಿ ಸ್ಥಗಿತಗೊಳಿಸಲಾಗುತ್ತದೆ.

**ಯು) ಹಣಕಾಸು ಭರವಸೆ ಗುತ್ತಿಗೆಗಳು:**

ಕಂಪನಿಯಿಂದ ಹೊರಡಿಸಲಾದ ಹಣಕಾಸು ಭರವಸೆ ಗುತ್ತಿಗೆಗಳು ಎಂದರೆ ಋಣ ಸಾಧನದ ಷರತ್ತುಗಳನುಸಾರ ನಿಗದಿತ ಸಮಯಕ್ಕೆ ನಿರ್ದಿಷ್ಟಪಡಿಸಿದ ಋಣಗಾರ ಹಣ ಸಂದಾಯ ಮಾಡಲು ವಿಫಲವಾದಾಗ ಅದರಿಂದುಂಟಾಗುವ ಹಾನಿಯನ್ನು ತುಂಬಲು ಧಾರಕನಿಗೆ ಮರು ಪಾವತಿ ಮಾಡಬೇಕಾಗಿರುವ ಕುರಿತು ಮಾಡಿಕೊಂಡ ಗುತ್ತಿಗೆಗಳಾಗಿವೆ.

ಹಣಕಾಸು ಭರವಸೆಯ ಗುತ್ತಿಗೆಗಳನ್ನು ಆರಂಭದಲ್ಲಿ ನ್ಯಾಯೋಚಿತ ಮೌಲ್ಯಕ್ಕನುಗುಣವಾಗಿ ಋಣಬಾಧ್ಯತೆ ಎಂದು ಮಾನ್ಯ ಮಾಡಲಾಗಿದೆ. ವ್ಯವಹಾರಿಕ ವೆಚ್ಚಗಳಿಗೆ ಹೊಂದಾಣಿಕೆ ಮಾಡಲಾಗಿದೆ. ಇವುಗಳನ್ನು ಭರವಸೆ (ಗ್ಯಾರಂಟಿ) ಪತ್ರ ಹೊರಡಿಸಿದ್ದ ನೇರ ಕಾರಣದಿಂದಾಗಿ ಮಾಡಲಾಗಿದೆ. ತದನಂತರ ಋಣಬಾಧ್ಯತೆಯನ್ನು ಭಾರತೀಯ ಲೆಕ್ಕ ನಿರ್ವಹಣಾ ಗುಣಮಟ್ಟಗಳು 109 ನಿಶ್ಚಲತೆ ಅಗತ್ಯಗಳನುಸಾರ ನಿರ್ಧಾರಣೆ ಮಾಡಿರುವಂತೆ ಹಾನಿ ಭತ್ಯೆಗಳ ಮೊತ್ತಕ್ಕಿಂತಲೂ ಹೆಚ್ಚಿನ ಮೊತ್ತದಲ್ಲಿ ಮಾಪನ ಮಾಡಲಾಗಿದೆ ಮತ್ತು ಮಾನ್ಯ ಮಾಡಿದ ಮೊತ್ತದಲ್ಲಿ ಸಂಚಿತ ಅಪಮೌಲ್ಯೀಕರಣ ವಜಾ ಮಾಡಿದೆ.

**ಸಾಲಗಳು ಮತ್ತು ಸಾಲ ಪಡೆಯುವಿಕೆ:**

ಆರಂಭದ ಮಾನ್ಯತೆಯ ನಂತರ ಬಡ್ಡಿ ಹೊಂದಿರುವ ಸಾಲಗಳು ಮತ್ತು ಸಾಲ ಪಡೆಯುವಿಕೆಗಳನ್ನು ಪರಿಣಾಮಕಾರಿ ಬಡ್ಡಿ ದರ ವಿಧಾನ ಅನ್ವಯಿಸಿ ಅಪಮೌಲ್ಯೀಕರಣ ವೆಚ್ಚದಲ್ಲಿ ಮಾಪನ ಮಾಡಲಾಗಿದೆ. (ಇನ್ನು ಮುಂದೆ ಇದನ್ನು ಇಐಆರ್ ಎಂದು ಉಲ್ಲೇಖಿಸಲಾಗುವುದು) ಲಾಭಗಳು ಮತ್ತು ನಷ್ಟಗಳನ್ನು ಇಐಆರ್ ಅಪಮೌಲ್ಯೀಕರಣ ವಿಧಾನದಿಂದ ಋಣಬಾಧ್ಯತೆಗಳನ್ನು ಸಹ ಅಮಾನ್ಯಗೊಳಿಸುವುದರೊಂದಿಗೆ ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಮಾನ್ಯ ಮಾಡಲಾಗಿದೆ.

ಹಣಕಾಸು ಋಣಬಾಧ್ಯತೆಗಳು ಲಾಭ ಅಥವಾ ನಷ್ಟದ ಮೂಲಕ ನ್ಯಾಯೋಚಿತ ಮೌಲ್ಯ ಹೊಂದಿದ್ದು, ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಮಾನ್ಯ ಮಾಡಲಾದ ನ್ಯಾಯೋಚಿತ ಮೌಲ್ಯದಲ್ಲಿನ ಬದಲಾವಣೆಗಳೊಂದಿಗೆ ನ್ಯಾಯೋಚಿತ ಮೌಲ್ಯದಲ್ಲಿ ಮಾಪನ ಮಾಡಲಾಗಿದೆ. ಎಫ್‌ವಿಟಿಪಿಎಲ್ ಎಂದು ಗೊತ್ತುಪಡಿಸಿರುವ ಋಣಬಾಧ್ಯತೆಗಳಿಗೆ, ಸ್ವಂತಸಾಲದ ಅಪಾಯಗಳಲ್ಲಿನ ಬದಲಾವಣೆಗಳ ಮುಂದೆ ನ್ಯಾಯೋಚಿತ ಮೌಲ್ಯದ ಲಾಭ/ನಷ್ಟಗಳನ್ನು ಇತರ ಸಮಗ್ರ ಆದಾಯದಲ್ಲಿ ಮಾನ್ಯ ಮಾಡಲಾಗಿದೆ. ಈ ಲಾಭ/ನಷ್ಟಗಳನ್ನು ನಂತರ ಲಾಭ ಮತ್ತು ನಷ್ಟದ ಹೇಳಿಕೆಗೆ ವರ್ಗಾವಣೆ ಮಾಡಿರುವುದಿಲ್ಲ. ಆದಾಗ್ಯೂ, ಕಂಪನಿ ಈಕ್ವಿಟಿಯ ವ್ಯಾಪ್ತಿಯಲ್ಲಿ ಸಂಚಿತ ಲಾಭ ನಷ್ಟವನ್ನು ವರ್ಗಾಯಿಸಬಹುದಾಗಿದೆ. ಅಂತಹ ಋಣಬಾಧ್ಯತೆಗಳ ನ್ಯಾಯೋಚಿತ ಮೌಲ್ಯಗಳಲ್ಲಿನ ಇತರ ಎಲ್ಲ ಮಾರ್ಪಾಟುಗಳನ್ನು ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಮಾನ್ಯ ಮಾಡಲಾಗಿದೆ.

**ವಿ) ಹಣಕಾಸು ಆಸ್ತಿಗಳ ನಿಶ್ಚಲತೆ:**

ಕಂಪನಿ ಹಣಕಾಸು ಆಸ್ತಿಗಳಿಗೆ ನಿರೀಕ್ಷಿತ ಸಾಲ ನಷ್ಟ(ಇಸಿಎಲ್) ಮಾದರಿ ಬಳಸಿ ನಷ್ಟ ಪರಿಹಾರ ಭತ್ಯೆಗಳನ್ನು ಮಾನ್ಯ ಮಾಡುತ್ತದೆ. ಈ ಆಸ್ತಿಗಳನ್ನು ಲಾಭ ಅಥವಾ ನಷ್ಟದ ಮುಖಾಂತರ ನ್ಯಾಯೋಚಿತ ಮೌಲ್ಯೀಕರಣ ಮಾಡಿರುವುದಿಲ್ಲ. ಮಹತ್ತರವಾದ ಹಣಕಾಸು ಅಂಶವನ್ನು ಒಳಗೊಂಡಿರದ ವ್ಯಾಪಾರದಿಂದ ಬರಬಹುದಾದ ನಷ್ಟ ಪರಿಹಾರ/ಭತ್ಯೆಗಳನ್ನು ನಿರೀಕ್ಷಿತ ಸಾಲ ನಷ್ಟದ ಜೀವಿತಾವಧಿಗೆ ಸಮನಾದ ಮೊತ್ತಕ್ಕೆ ಮಾಪನ ಮಾಡಲಾಗಿದೆ. ಇತರ ಎಲ್ಲ ಹಣಕಾಸು ಆಸ್ತಿಗಳಿಗೆ ನಿರೀಕ್ಷಿತ ಸಾಲ ನಷ್ಟವನ್ನು 12ತಿಂಗಳಿಗೆ ಇಸಿಎಲ್‌ಗೆ ಸಮನಾಗಿರುವಂತೆ ಮಾಪನ ಮಾಡಿದೆ. ಒಂದು ವೇಳೆ ಸಾಲದ ಅಪಾಯದಲ್ಲಿ ಆರಂಭದಲ್ಲಿ ಗುರುತಿಸಿದ್ದಕ್ಕಿಂತ ಮಹತ್ತರವಾದ ಏರಿಕೆ ಕಂಡುಬಂದಲ್ಲಿ ಆಗ ಅಂತಹ ಪ್ರಕರಣಗಳನ್ನು ಜೀವಿತಾವಧಿ ಇಸಿಎಲ್ ನಂತೆ ಮಾಪನ ಮಾಡಲಾಗಿದೆ. ನಿರೀಕ್ಷಿತ ಸಾಲ ನಷ್ಟದ ಮೊತ್ತವು (ಅಥವಾ ಪ್ರತಿಲೋಮ) ವರದಿ ಮಾಡುವ ದಿನಾಂಕದಂದಿನಂತೆ ನಷ್ಟ ಪರಿಹಾರ/ಭತ್ಯೆಗಳು ಹೊಂದಾಣಿಕೆಗಾಗಿ ಅಗತ್ಯವಿದ್ದು, ಮಾನ್ಯ ಮಾಡಬೇಕಾಗಿರುವ ಮೊತ್ತವನ್ನು ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ನಿಶ್ಚಲತೆಯ ಲಾಭ ಅಥವಾ ನಷ್ಟ ಎಂದು ಮಾನ್ಯ ಮಾಡಲಾಗಿದೆ.

**ಡಬ್ಲ್ಯೂ) ಹಣಕಾಸೇತರ ಆಸ್ತಿಗಳ ನಿಶ್ಚಲತೆ / ಕುಗ್ಗಿಸುವಿಕೆ:**

ಪ್ರತಿ ವರದಿ ಅವಧಿಯ ಕೊನೆಯಲ್ಲಿ ಕಂಪನಿ ತನ್ನ ಎಲ್ಲ ಗೋಚರಿತ ಮತ್ತು ಅಗೋಚರಿತ ಆಸ್ತಿಗಳ ವಾಹಕ ಮೊತ್ತಗಳನ್ನು ಪರಿಶೀಲಿಸಿ ಅವುಗಳಲ್ಲಿ ಯಾವುದಾದರೂ ನಿಶ್ಚಲತೆ ನಷ್ಟವನ್ನು ಎದುರಿಸುತ್ತದೆ ಎಂಬುದನ್ನು ನಿರ್ಧಾರಣೆ ಮಾಡುತ್ತದೆ. ಒಂದು ವೇಳೆ ಅಂತಹ

MSIL

ಯಾವುದಾದರೂ ಲಕ್ಷಣ ಕಂಡು ಬಂದಲ್ಲಿ ಆ ಆಸ್ತಿಯ ಮರು ಪಡೆಯಬಹುದಾದ ಮೊತ್ತವನ್ನು ನಿಶ್ಚಿಲತೆಯ ನಷ್ಟದ ಪ್ರಮಾಣ ನಿರ್ಧರಿಸಲು ಅಂದಾಜು ಮಾಡಲಾಗುತ್ತದೆ.

ಯಾವುದೇ ಒಂದು ಆಸ್ತಿಯ ಹಿಂಪಡೆಯಬಹುದಾದ ಮೊತ್ತದ ಅಂದಾಜೀಕರಣ ಸಾಧ್ಯವಿಲ್ಲದಿದ್ದಲ್ಲಿ, ಕಂಪನಿ ಆ ಆಸ್ತಿಗೆ ಸಂಬಂಧಪಟ್ಟ ನಗದು ಸೃಜಿಸುವ ಘಟಕದ ಹಿಂಪಡೆಯಬಹುದಾದ ಮೊತ್ತವನ್ನು ಅಂದಾಜು ಮಾಡುತ್ತದೆ. ಅದರಲ್ಲಿ ಹಂಚಿಕೆಗಾಗಿ ಸಕಾರಣಾತ್ಮಕ ಮತ್ತು ಗಟ್ಟಿಯಾದ ಆಧಾರಗಳನ್ನು ಗುರುತಿಸುವಂತಿರಬೇಕು. ಸಾಂಸ್ಥಿಕ ಆಸ್ತಿಗಳನ್ನು ಸಹ ಬಿಡಿಯಾದ ನಗದು ಸೃಜಿಸುವ ಘಟಕಗಳಿಗೆ ಹಂಚಿಕೆ ಮಾಡಲಾಗಿದೆ. ಅಥವಾ ಅದಾಗದಿದ್ದಲ್ಲಿ ಅವುಗಳನ್ನು ನಗದು ಸೃಜಿಸುವ ಘಟಕಗಳ ಅತ್ಯಂತ ಸಣ್ಣ ಗುಂಪುಗಳಿಗೆ ಹಂಚಿಕೆ ಮಾಡಲಾಗಿದ್ದು, ಆ ಮೂಲಕ ಸಕಾರಾಣಾತ್ಮಕ ಮತ್ತು ಗಟ್ಟಿಯಾದ ಹಂಚಿಕೆಯ ನೆಲೆಯನ್ನು ಗುರುತಿಸಲು ಸಾಧ್ಯ .

ಹಿಂಪಡೆಯಬಹುದಾದ ಮೊತ್ತವು ನ್ಯಾಯೋಚಿತ ಮೌಲ್ಯವನ್ನು ಮೀರಿದ್ದು, ಮಾರಾಟ ಮಾಡಲು ಕಡಿಮೆ ವೆಚ್ಚ ಮತ್ತು ಬಳಕೆಯ ಮೌಲ್ಯವು ಕಡಿಮೆಯಾಗಿದ್ದು, ಬಳಕೆಯಲ್ಲಿರುವ ಮೌಲ್ಯದ ಅಂದಾಜುವಿಕೆಯಲ್ಲಿ ಅಂದಾಜಿತ ಭವಿಷ್ಯದ ನಗದು ಚಲಾವಣೆಗಳನ್ನು ಅವುಗಳ ಅಪ್ರಸಕ್ತ ಮೌಲ್ಯಕ್ಕೆ ತೆರಿಗೆ ಪೂರ್ವ ಸೋಡಿ ದರ ಅನ್ವಯಿಸಿ ಕಡಿತಗೊಳಿಸಲಾಗುತ್ತಿದೆ. ಇದು ಹಣದ ಸಮಯ ಮೌಲ್ಯ ಮತ್ತು ಆಸ್ತಿಗೆ ನಿರ್ದಿಷ್ಟವಾದ ಅಪಾಯಗಳ ಚಾಲ್ತಿ ಮಾರುಕಟ್ಟೆ ಲೆಕ್ಕಾಚಾರಗಳನ್ನು ಬಿಂಬಿಸುತ್ತಿದ್ದು, ಅದಕ್ಕಾಗಿ ಭವಿಷ್ಯದ ನಗದು ಚಲಾವಣೆಗಳ ಅಂದಾಜುಗಳನ್ನು ಸರಿದೂಗಿಸಿರುವುದಿಲ್ಲ.

ಆಸ್ತಿಯ (ನಗದು ಸೃಜಿಸುವ ಘಟಕ) ಹಿಂಪಡೆಯಬಹುದಾದ ಮೊತ್ತವು ಅದು ಹೊಂದಿರುವ ಮೊತ್ತಕ್ಕಿಂತ ಕಡಿಮೆ ಅಂದಾಜು ಮಾಡಿದ್ದಲ್ಲಿ ಆಸ್ತಿ (ನಗದು ಸೃಜಿಸುವ ಘಟಕ) ಯ ವಾಹಕ ಮೊತ್ತವನ್ನು ಹಿಂಪಡೆಯಬಹುದಾದ ಮೊತ್ತಕ್ಕೆ ಇಳಿಸಲಾಗಿರುತ್ತದೆ. ನಿಶ್ಚಲತೆಯ! ಕುಗ್ಗಿಸುವಿಕೆ ನಷ್ಟವನ್ನು ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ತಕ್ಷಣವೇ ಮಾನ್ಯ ಮಾಡಲಾಗಿರುತ್ತದೆ. ಇಲ್ಲದಿದ್ದಲ್ಲಿ ಸಂಬಂಧಿತ ಆಸ್ತಿಯು ಮರು ಮೌಲ್ಯೀಕರಣದ ಮೊತ್ತ ಹೊಂದಿದ್ದಲ್ಲಿ ಅಂತಹ ಪ್ರಕರಣದಲ್ಲಿ ನಿಶ್ಚಲತೆ ನಷ್ಟವನ್ನು ಮರು ಮೌಲ್ಯೀಕರಣದ ಇಳಿಕೆ ಎಂದು ಪರಿಗಣಿಸಲಾಗಿರುತ್ತದೆ. ತದನಂತರ ನಿಶ್ಚಲತೆ (ಕುಗ್ಗಿಸುವಿಕೆ)ಯ ನಷ್ಟವು ವ್ಯತಿರಿಕ್ತಗೊಂಡಾಗ; (ಅಥವಾ ನಗದು ಸೃಜಿಸುವ ಘಟಕ) ಪ್ರತಿಲೋಮಗೊಂಡಾಗ ಆಸ್ತಿಯ ವಾಹಕ ಮೊತ್ತವು ಅದರ ಹಿಂಪಡೆಯಬಹುದಾದ ಮೊತ್ತದ ಪರಿಷ್ಕೃತ ಅಂದಾಜಿಗೆ ಏರಿಕೆಯಾಗಿರುತ್ತದೆ. ಆದರೆ ಏರಿಕೆಯಾದ ವಾಹಕ ಮೊತ್ತವು ಹಿಂದಿನ ವರ್ಷ ಆಸ್ತಿಯ ನಿಶ್ಚಲತೆ ಮತ್ತು ಕುಗ್ಗುವಿಕೆಯ ನಷ್ಟವಿಲ್ಲದಿದ್ದಲ್ಲಿ ನಿರ್ಧರಣೆ ಮಾಡಬಹುದಾಗಿದ್ದು, ವಾಹಕ ಮೊತ್ತವನ್ನು ಮೀರುವುದಿಲ್ಲ. ನಿಶ್ಚಲತೆ; ಕುಗ್ಗಿಸುವಿಕೆ ನಷ್ಟದ ವ್ಯತಿರಿಕ್ತತೆಯನ್ನು ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ತಕ್ಷಣವೇ ಮಾನ್ಯ ಮಾಡಲಾಗುತ್ತದೆ. ಇಲ್ಲದಿದ್ದಲ್ಲಿ ಸಂಬಂಧಿತ ಆಸ್ತಿಯ ಮರು ಮೌಲ್ಯೀಕರಣದ ಮೊತ್ತ ಹೊಂದಿದ್ದಲ್ಲಿ ಅಂತಹ ಪ್ರಕರಣದಲ್ಲಿ ನಿಶ್ಚಲತೆ; ಕುಗ್ಗುಸುವಿಕೆ ನಷ್ಟದ ವ್ಯತಿರಿಕ್ತತೆಯನ್ನು ಮರು ಮೌಲ್ಯೀಕರಣದ ಏರಿಕೆ ಎಂದು ಪರಿಗಣಿಸಲಾಗುತ್ತಿದೆ.

**ಎಕ್ಸ್) ಸಹಾಯಕ ಸಂಸ್ಥೆಗಳು ಮತ್ತು ಜಂಟಿ ಉದ್ಯಮಗಳಲ್ಲಿ ಹೂಡಿಕೆ:**

ಸಹಾಯಕ ಸಂಸ್ಥೆಗಳ ಮತ್ತು ಜಂಟಿ ಉದ್ಯಮಗಳ ಈಕ್ವಿಟಿ ಸಾಧನಗಳಲ್ಲಿ ಕಂಪನಿಯ ಹೂಡಿಕೆಯನ್ನು ಅದರ ಮುಖ ಬೆಲೆಗೆ ಲೆಕ್ಕಾಚಾರ ಮಾಡಲಾಗಿದೆ. ಇದರಲ್ಲಿ ಹೂಡಿಕೆಯ ವಾಹಕ ಮೊತ್ತವು ಅಂದಾಜಿತ ವಸೂಲಾತಿಯಾಗಬಹುದಾದ ಮೊತ್ತಕ್ಕಿಂತ ಅಧಿಕವಾಗಿರುತ್ತದೆ. ಅದನ್ನು ತಕ್ಷಣವೇ ವಸೂಲಾತಿಯಾಗಬಹುದಾದ ಮೊತ್ತಕ್ಕೆ ನಮೂದಿಸಲಾಗುತ್ತದೆ ಮತ್ತು ವ್ಯತ್ಯಾಸದ ಮೊತ್ತವನ್ನು ನಷ್ಟ ಮತ್ತು ಲಾಭ ಹೇಳಿಕೆಗೆ ವರ್ಗಾಯಿಸಲಾಗಿರುತ್ತದೆ. ಹೂಡಿಕೆಯ ವಿಲೇವಾರಿ ಮೇರೆಗೆ ವಿಲೇವಾರಿಯಿಂದ ದೊರೆತ ಮೊತ್ತವಾಹಕ ಮೊತ್ತಗಳ ನಡುವಿನ ವ್ಯತ್ಯಾಸವನ್ನು ಲಾಭ ಮತ್ತು ನಷ್ಟದ ಹೇಳಿಕೆಗೆ ಜಮೆ ಮಾಡಲಾಗಿರುತ್ತದೆ.

**ವೈ) ವಿಭಾಗ: ಶಾಖಾ ವರದಿಗಾರಿಕೆ:**

ಒಂದು ಕಾರ್ಯಾಚರಣೆ ವಿಭಾಗವು ಗ್ರೂಪ್‌ನ ಒಂದು ಭಾಗವಾಗಿದ್ದು, ಅದು ವಾಣಿಜ್ಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುತ್ತದೆ. ಅದರಿಂದ ಆ ವಿಭಾಗವು ಆದಾಯ ಗಳಿಸಬಹುದು ಮತ್ತು ಖರ್ಚುಗಳನ್ನು ಭರಿಸಬಹುದು. ಈ ರೀತಿ ಅದು ಕಂಪನಿಯ ಇತರ ಭಾಗಗಳೊಂದಿಗಿನ ವಹಿವಾಟಿನ ಆದಾಯ ಮತ್ತು ಖರ್ಚುಗಳನ್ನು ನಿರ್ವಹಿಸುತ್ತದೆ ಮತ್ತು ಅದಕ್ಕಾಗಿ ವಿಶೇಷ ಹಣಕಾಸು ಮಾಹಿತಿಯು ಲಭ್ಯವಿರುತ್ತದೆ. ಕಾರ್ಯಾಚರಣೆ ವಿಭಾಗಗಳು ಆಂತರಿಕ ವರದಿಗಾರಿಕೆಯ ಅನುರೂಪದಲ್ಲಿ ಅಂದರೆ ಮುಖ್ಯ ಕಾರ್ಯಾಚರಣೆ ನಿರ್ಧಾರ ಮಾಡುವವರಿಗೆ ಒದಗಿಸಿರುವಂತೆ ವರದಿ ಮಾಡಲ್ಪಡುತ್ತವೆ.

ವಿಭಾಗೀಯ ಲೆಕ್ಕ ನಿರ್ವಹಣಾ ನೀತಿಗಳು ಗ್ರೂಪ್‌ನ ಲೆಕ್ಕ ನಿರ್ವಹಣಾ ನೀತಿಗಳಿಗನುಗುಣವಾಗಿಯೇ ಇರುತ್ತದೆ. ಇದರೊಂದಿಗೆ ಕೆಳಕಂಡ ನಿರ್ದಿಷ್ಟ ಲೆಕ್ಕ ನಿರ್ವಹಣ ನೀತಿಗಳನ್ನು ಶಾಖಾ ವರದಿಗಾರಿಕೆಗಾಗಿ ಅನುಸರಿಸಲಾಗುತ್ತಿದೆ.

(i) ಶಾಖಾ ಆದಾಯವು ಅಂತರ್ ಶಾಖಾ ಆದಾಯವೂ ಸೇರಿದಂತೆ ಶಾಖೆಯೊಂದಿಗೆ/ಶಾಖೆಗೆ ನೇರವಾಗಿ ಗುರುತಿಸಬಹುದಾದ/ಹಂಚಿಕೆ ಮಾಡಬಹುದಾದ ಮಾರಾಟ ಮತ್ತು ಇತರ ಆದಾಯಗಳನ್ನು ಒಳಗೊಂಡಿರುತ್ತದೆ.

(ii) ಶಾಖಾ ಫಲಿತಾಂಶದ ನಿರ್ಧರಣೆಗಾಗಿ ಶಾಖೆಯೊಂದಿಗೆ / ಶಾಖೆಗೆ ನೇರವಾಗಿ ಗುರುತಿಸಬಹುದಾದ/ಹಂಚಿಕೆ ಮಾಡಬಹುದಾದ ವೆಚ್ಚಗಳನ್ನು ಪರಿಗಣಿಸಲಾಗಿರುತ್ತದೆ. ಇಡೀ ಸಂಸ್ಥೆ (ಗ್ರೂಪ್)ಗೆ ಸಂಬಂಧಿಸಿದ ವೆಚ್ಚಗಳು ಮತ್ತು ಶಾಖೆಗೆ ಹಂಚಿಕೆ ಮಾಡದಿರುವ ವೆಚ್ಚಗಳನ್ನು ಇತರ ಹಂಚಿಕೆ ಮಾಡಲಾಗದ ಸಾಂಸ್ಥಿಕ (ಕಾರ್ಪೋರೇಟ್) ವೆಚ್ಚದಡಿ ಸೇರಿಸಲಾಗಿರುತ್ತದೆ.

(iii) ಇಡೀ ಸಂಸ್ಥೆ (ಗ್ರೂಪ್) ಗೆ ಸಂಬಂಧಿಸಿದ ಆದಾಯ ಮತ್ತು ಶಾಖೆಗೆ ಹಂಚಿಕೆ ಮಾಡಲಾಗದ ಆದಾಯವನ್ನು 'ಹಂಚಿಕೆ ಮಾಡಲಾಗದ ಆದಾಯ' ದಲ್ಲಿ ಸೇರಿಸಲಾಗಿರುತ್ತದೆ.

(iv) ಶಾಖಾ ಫಲಿತಾಂಶವು ಸಂಸ್ಥೆಯ ಲಾಭ ಕಂಡುಕೊಳ್ಳಲು ಇಳಿಕೆ ಮಾಡಲಾದ ಅಂತರ್ ಶಾಖಾ ಅಂಚುಗಳು ಮತ್ತು ಮಾರಾಟಗಳನ್ನು ಒಳಗೊಂಡಿರುತ್ತದೆ.

(v) ಶಾಖಾ ಆಸ್ತಿಗಳು ಮತ್ತು ಋಣ ಬಾಧ್ಯತೆಗಳು ಆಯಾ ಸಂಬಂಧಿತ ಶಾಖೆಗಳೊಂದಿಗೆ ನೇರವಾಗಿ ಗುರುತಿಸಬಹುದಾದವುಗಳನ್ನು ಒಳಗೊಂಡಿರುತ್ತವೆ. ಹಂಚಿಕೆ ಮಾಡಲಾಗದ ಆಸ್ತಿಗಳು ಮತ್ತು ಋಣಬಾಧ್ಯತೆಗಳು ಇಡೀ ಗ್ರೂಪ್ (ಸಂಸ್ಥೆ)ಗೆ ಸಂಬಂಧಿಸಿದ ಆಸ್ತಿ ಮತ್ತು ಋಣ ಬಾಧ್ಯತೆಗಳನ್ನು ಪ್ರತಿನಿಧಿಸುತ್ತವೆ ಮತ್ತು ಅವುಗಳನ್ನು ಯಾವುದೇ ಶಾಖೆಗೆ ಹಂಚಿಕೆ ಮಾಡಲಾಗದು.

(vi) ಕಾರ್ಯ ನಿರ್ವಹಣೆಯನ್ನು ಆಂತರಿಕ ಆಡಳಿತ ಮಂಡಳಿಯ ವರದಿಗಳಲ್ಲಿ ಸೇರಿಸಿರುವಂತೆ ಶಾಖಾ ಲಾಭದ ಆಧಾರದ ಮೇಲೆ ಮಾಪನ ಮಾಡಲಾಗಿರುತ್ತದೆ. ಅವುಗಳನ್ನು ಗ್ರೂಪ್‌ನ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು ಪರಿಶೀಲಿಸಿರುತ್ತಾರೆ. ಶಾಖಾ ಲಾಭವನ್ನು ಕಾರ್ಯ ನಿರ್ವಹಣ ಮಾಪನಕ್ಕಾಗಿ ಬಳಸಲಾಗುತ್ತಿದೆ. ಇದು ಆಡಳಿತ ಮಂಡಳಿಯು ನಂಬಿರುವಂತೆ ಈ ರೀತಿಯ ಮಾಹಿತಿಯು ಈ ಉದ್ದಿಮೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಇತರ ಸಂಸ್ಥೆಗಳ ಕೆಲವು ನಿಶ್ಚಿತ ಶಾಖೆಗಳ ಫಲಿತಾಂಶಗಳ ಮೌಲ್ಯಮಾಪನಕ್ಕೆ ಅತ್ಯಂತ ಸೂಕ್ತವಾಗಿರುತ್ತದೆ.

**ಜಡ್) ನಗದು ಚಲಾವಣೆ ಹೇಳಿಕೆ : ವಿವರ ಪಟ್ಟಿ**

ನಗದು ಚಲಾವಣೆ ಅಥವಾ ಹರಿವಿಕೆಯನ್ನು ಪರೋಕ್ಷ ವಿಧಾನ ಬಳಸಿ ವರದಿ ಮಾಡಲಾಗಿರುತ್ತದೆ. ಆ ಮೂಲಕ ನಗದು ರಹಿತ ರೀತಿಯ ವ್ಯವಹಾರಗಳು ಯಾವುದೇ ಮುಂದೂಡಿಕೆಗಳು ಅಥವಾ ಹಿಂದಿನ ಕಾರ್ಯಾಚರಣೆಯ ನಗದು ರಸೀತಿಗಳು/ಪಾವತಿಗಳು ಸೇರುವಿಕೆಗಳು ಮತ್ತು ಹೂಡಿಕೆಗೆ ಅಥವಾ ಹಣಕಾಸು ನಗದು ಚಲಾವಣೆಗಳೊಂದಿಗೆ ಸಂಬಂಧಿಸಿದ ಆದಾಯ ಅಥವಾ ವೆಚ್ಚಗಳ ಅಂಶಗಳ ಪರಿಣಾಮಗಳಿಗಾಗಿ ಆ ಅವಧಿಯ ಲಾಭವನ್ನು ಹೊಂದಾಣಿಕೆ ಮಾಡಲಾಗಿರುತ್ತದೆ. ಗ್ರೂಪ್‌ನ ಕಾರ್ಯಾಚರಣೆ, ಹೂಡಿಕೆ ಮತ್ತು ಹಣಕಾಸು ಕಾರ್ಯಚಟುವಟಿಕೆಗಳಿಂದ ಬರುವ ನಗದನ್ನು ಪ್ರತ್ಯೇಕಗೊಳಿಸಲಾಗಿರುತ್ತದೆ.

ವ್ಯಕ್ತಿಗಳು /ಸಂಸ್ಥೆಗಳಿಗೆ (ಪಾರ್ಟಿಸ್) ಸಂಬಂಧಿಸಿದ ಸಾಲಗಳು ಚಾಲ್ತಿ ಖಾತೆಗಳ ಸ್ವಭಾವದ್ದಾಗಿರುತ್ತದೆ. ಅದರಂತೆ ಸಂಬಂಧಿಸಿದ ವ್ಯಕ್ತಿ/ಸಂಸ್ಥೆಗಳಿಂದ/ಕಂಪನಿಗೆ ಬರುವ ಸ್ವೀಕೃತಿಗಳು ಮತ್ತು ಪಾವತಿಗಳನ್ನು ನಿವ್ವಳ ಆಧಾರಿತದಲ್ಲಿ ನಗದು ಚಲಾವಣೆ ಹರಿವಿಕೆ ಹೇಳಿಕೆಯಲ್ಲಿ ತೋರಿಸಲಾಗಿರುತ್ತದೆ.

**ಝಡ್) ವರದಿ ಮಾಡುವ ದಿನಾಂಕದ ನಂತರದ ಘಟನೆಗಳು:**

ಆಸ್ತಿಗಳು ಮತ್ತು ಬಾಧ್ಯತೆಗಳನ್ನು ವರದಿಗಾರಿಕೆ ಅವಧಿಯ ನಂತರ ಉದ್ಭವಿಸುವ ಘಟನೆಗಳಿಗಾಗಿ ಹೊಂದಾಣಿಕೆ ಮಾಡಲಾಗಿರುತ್ತದೆ. ಇದು ವರದಿ ಅವಧಿಯ ಕೊನೆಯಲ್ಲಿ ಉಂಟಾಗುವ ಸನ್ನಿವೇಶಗಳಿಗೆ ಸಂಬಂಧಿಸಿದಂತೆ, ಮೊತ್ತಗಳ ಅಂದಾಜಿಕೆಗೆ ಸಹಕಾರಿಯಾಗಿ ಹೆಚ್ಚುವರಿ ಸಾಕ್ಷ್ಯವನ್ನು ಒದಗಿಸುತ್ತವೆ.

ಕಂಪನಿಯಿಂದ ವರದಿಯ ಅವಧಿಯ ನಂತರ ಘೋಷಿಸಲಾಗುವ ಲಾಭಾಂಶವನ್ನು ವರದಿ ಅವಧಿಯ ಕೊನೆಯಲ್ಲಿ ಋಣಬಾಧ್ಯತೆ ಎಂದು ಪರಿಗಣಿಸಲಾಗುವುದಿಲ್ಲ. ವರದಿಯ ಅವಧಿಯ ನಂತರ ಆದರೆ ಹಣಕಾಸು ಹೇಳಿಕೆಗಳನ್ನು ಹೊರಡಿಸುವುದಕ್ಕಿಂತ ಮುಂಚೆ ಘೋಷಿತ ಲಾಭಾಂಶಗಳನ್ನು ಬಾಕಿ ಶಿಲ್ಕು ಪಟ್ಟಿಯ ದಿನಾಂಕದಂದು ಯಾವುದೇ ಹೊಣೆಗಾರಿಕೆ ಬಾಧ್ಯತೆ ಬೀಳದಿರುವುದರಿಂದ ಋಣ ಬಾಧ್ಯತೆ ಎಂದು ಪರಿಗಣಿಸಿರುವುದಿಲ್ಲ. ಅಂತಹ ಲಾಭಾಂಶಗಳನ್ನು ಹಣಕಾಸು ಹೇಳಿಕೆಗಳಿಗೆ ನೀಡುವ ಟಿಪ್ಪಣಿಗಳಲ್ಲಿ ತೋರಿಸಲಾಗಿರುತ್ತದೆ.

**ವಿಶೇಷ ಅಂಶಗಳು: ವಸ್ತುಗಳು: ಬಾಬ್ತುಗಳು:**

ವಿಶೇಷ ಬಾಬ್ತುಗಳನ್ನು ಹಣಕಾಸು ಹೇಳಿಕೆಗಳಲ್ಲಿ ಪ್ರತ್ಯೇಕವಾಗಿ ತೋರಿಸಲಾಗಿರುತ್ತದೆ. ಇದು ಗ್ರೂಪ್ (ಸಂಸ್ಥೆ) ನ ಹಣಕಾಸು ಕಾರ್ಯನಿರ್ವಹಣೆಯ ಬಗ್ಗೆ ಮತ್ತಷ್ಟು ತಿಳಿದುಕೊಳ್ಳಲು ಅವಕಾಶವಾಗುವುದಕ್ಕೆ ಅವಶ್ಯವಿರುತ್ತದೆ. ಅವುಗಳು ಆದಾಯದ ಅಥವಾ ವೆಚ್ಚಗಳ ಸಲಕರಣೆಗಳ ಬಾಬ್ತುಗಳಾಗಿದ್ದು, ಅವುಗಳ ಸ್ವಭಾವ ಅಥವಾ ಮೊತ್ತದ ಮಹತ್ವದ ಮೇರೆಗೆ ಪ್ರತ್ಯೇಕವಾಗಿ ತೋರಿಸಲಾಗಿರುತ್ತದೆ.

ಹಿಂದಿನ ಅವಧಿ/ಅವಧಿಗಳಿಗೆ ಸಂಬಂಧಿಸಿದ ಸಲಕರಣೆ ಮೊತ್ತಗಳ ದೋಷ ಅಥವಾ ತಪ್ಪುಗಳನ್ನು ಹಿಂದಿನ ಅವಧಿಯ ತಪ್ಪುಗಳ ಲಕ್ಷಣದೊಂದಿಗೆ ಟಿಪ್ಪಣಿಯ ಮೂಲಕ ಅಭಿವ್ಯಕ್ತಪಡಿಸಲಾಗಿದೆ.

ಅಂತಹ ಪ್ರತಿ ಹಿಂದಿನ ಅವಧಿಯ ಸರಿಪಡಿಸುವಿಕೆಯ ಪ್ರಮಾಣವನ್ನು ಪೂರ್ವಾನ್ವಯದೊಂದಿಗೆ ಪ್ರತಿ ಷೇರಿನ ಮೂಲ ಮತ್ತು ದುರ್ಬಲಗೊಳಿಸಿದ ಗಳಿಕೆಗಳಲ್ಲಿನ ಮಾರ್ಪಾಡುಗಳ ಸಮೇತ ಕಾರ್ಯ ಸಾಧು ಹಂತದವರಿಗೆ ಪ್ರಸ್ತುತಪಡಿಸಲಾಗಿದೆ.

ಆದಾಗ್ಯೂ ಒಂದು ನಿರ್ದಿಷ್ಟ ಅವಧಿಗೆ ಸಂಬಂಧಿಸಿದಂತೆ ಪೂರ್ವಾನ್ವಯ ಮರು ಹೇಳಿಕೆ ಕಾರ್ಯ ಸಾಧುವಾಗದಿರುವಾಗ ಅಂತಹ ಪರಿಸ್ಥಿತಿಯಲ್ಲಿ ತಪ್ಪನ್ನು ಹೇಗೆ ಮತ್ತು ಎಲ್ಲಿಂದ ಸರಿಪಡಿಸಲಾಗಿದೆ ಎಂದು ವಿವರಣೆಯನ್ನು ನೀಡಬೇಕಾದ ಸನ್ನಿವೇಶ ಉದ್ಭವವಾಗುವುದು. ಅದನ್ನು ಲೆಕ್ಕ ನಿರ್ವಹಣ ವಿಭಾಗಕ್ಕೆ ನೀಡುವ ಟಿಪ್ಪಣಿಗಳಲ್ಲಿ ಅಭಿವ್ಯಕ್ತಗೊಳಿಸಲಾಗಿರುತ್ತದೆ.

**ಎಬಿ) ಮಾರಾಟ ಮತ್ತು ಕಾರ್ಯಾಚರಣೆ ಸ್ಥಗಿತಕ್ಕಾಗಿ ಹೊಂದಿರುವ ಚಾಲ್ತಿಯೇತರ ಆಸ್ತಿಗಳು:**

ಒಂದು ಸಂಸ್ಥೆಯು ಆಸ್ತಿಯ ಬಳಕೆಯನ್ನು ಮುಂದುವರಿಸುವಿಕೆಗೆ ಬದಲಾಗಿ ಮಾರಾಟ ವ್ಯವಹಾರಗಳ ಮೂಲಕ ಅದರ ವಾಹಕ

MSIL

ಮೊತ್ತವನ್ನು ಅಸಲು ರೂಪದಲ್ಲಿ ಹಿಂಪಡೆಯಬಹುದಾಗಿದ್ದಲ್ಲಿ ಮಾರಾಟಕ್ಕಿಟ್ಟು ಅಂತಹ ಆಸ್ತಿಯನ್ನು ಚಾಲ್ತಿಯೇತರ ಆಸ್ತಿ ಎಂದು ವರ್ಗೀಕರಣ ಮಾಡಲಾಗುವುದು. ಆಸ್ತಿಯು ತಾನಿರುವ ಸ್ಥಿತಿಯಲ್ಲಿ ತಕ್ಷಣವೇ ಮಾರಾಟಕ್ಕೆ ಲಭ್ಯವಿದ್ದು, ಈ ರೀತಿಯ ಆಸ್ತಿಗಳ ಮಾರಾಟಕ್ಕೆ ಸಾಮಾನ್ಯವಾಗಿ ಮತ್ತು ಸಾಂಪ್ರದಾಯಿಕವಾಗಿ ಅನ್ವಯಿಸುವ ನಿಬಂಧನೆಗಳು ಮತ್ತು ಷರತ್ತುಗಳು ಅನ್ವಯಿಸುವ ಷರತ್ತಿಗೆ ಒಳಪಟ್ಟು ಮತ್ತು ಅದರ ಮಾರಾಟದ ಸಾಧ್ಯತೆಗಳು ಹೆಚ್ಚಾಗಿದ್ದಲ್ಲಿ ಸದರಿ ನಿಬಂಧನೆಯನ್ನು ಪೂರೈಸಿದೆ ಎಂದು ಪರಿಗಣಿಸಲಾಗುತ್ತದೆ. ಆಡಳಿತ ಮಂಡಳಿಯು ಮಾರಾಟಕ್ಕೆ ಬದ್ಧವಾಗಿರಲೇಬೇಕು. ಅದರಿಂದ ವರ್ಗೀಕರಣ ದಿನಾಂಕದಿಂದ ಒಂದು ವರ್ಷದೊಳಗಾಗಿ ಪೂರ್ಣಗೊಂಡ ಮಾರಾಟ ಎಂಬ ಮಾನ್ಯತೆಗೆ ಅರ್ಹಗೊಳಿಸುವುದನ್ನು ನಿರೀಕ್ಷಿಸಲಾಗುತ್ತದೆ. ಚಾಲ್ತಿಯೇತರ ಆಸ್ತಿಗಳನ್ನು ಮಾರಾಟಕ್ಕಿಟ್ಟಿದ್ದು ಅವುಗಳನ್ನು ಪ್ರತ್ಯೇಕವಾಗಿ ಪ್ರಸ್ತುತಪಡಿಸಲಾಗಿದೆ ಮತ್ತು ಮಾರಾಟಕ್ಕಿಟ್ಟ ಆಸ್ತಿ ಎಂದು ವರ್ಗೀಕರಣದ ತಕ್ಷಣದ ಪೂರ್ವಭಾವಿಯಾಗಿ ಅವುಗಳ ವಾಹಕ ಮೊತ್ತಕ್ಕೆ ಕಡಿಮೆಯಾಗಿ ಮಾಪನ ಮಾಡಲಾಗಿರುತ್ತದೆ ಮತ್ತು ಅವುಗಳ ನ್ಯಾಯೋಚಿತ ಮೌಲ್ಯವು ಮಾರಾಟದ ಕಡಿಮೆ ವೆಚ್ಚಕ್ಕೆ ಕಾರಣವಾಗುತ್ತದೆ. ಆದಾಗ್ಯೂ ಹಣಕಾಸು ಆಸ್ತಿಗಳಂತಹ ಕೆಲವು ಮಾರಾಟಕ್ಕಿಟ್ಟ ಆಸ್ತಿಗಳು, ನೌಕರರ ಸೌಲಭ್ಯಗಳಿಂದ ಉಂಟಾಗುವ ಆಸ್ತಿಗಳು ಮತ್ತು ಮುಂದೂಡಿದ ತೆರಿಗೆ ಆಸ್ತಿಗಳನ್ನು ಕಂಪನಿ ಅಂತಹ ಆಸ್ತಿಗಳಿಗಾಗಿ ಹೊಂದಿರುವ ಸೂಕ್ತ ಲೆಕ್ಕ ನಿರ್ವಹಣಾ ನೀತಿಯನುಸಾರ ಮಾಪನ ಮಾಡುವುದನ್ನು ಮುಂದುವರಿಸುವುದು. ಒಂದು ಬಾರಿ ಆಸ್ತಿಯನ್ನು ಮಾರಾಟಕ್ಕಿಟ್ಟ ಆಸ್ತಿ ಎಂದು ವರ್ಗೀಕರಣ ಮಾಡಿದಲ್ಲಿ ಆ ಆಸ್ತಿಗಳು ಸವಕಳಿ ಅಥವಾ ಅಪಮೌಲ್ಯೀಕರಣ ಪರಿಗಣಿಸಲಾಗುವುದು.

ಸ್ಥಗಿತಗೊಂಡ ಕಾರ್ಯಾಚರಣೆ ಕಂಪನಿಯ ವ್ಯಾವಹಾರಿಕ ಭಾಗವಾಗಿದ್ದು, ಅದು ವ್ಯಾಪಾರದ ಪ್ರತ್ಯೇಕ ಮಾರ್ಗವನ್ನು ಪ್ರತಿನಿಧಿಸುತ್ತದೆ. ಅಂದರೆ ವಿಲೇ ಮಾಡಲಾದ ಅಥವಾ ಮಾರಾಟಕ್ಕಿಟ್ಟಿರುವ ಅಥವಾ ಸಹಾಯಕ ಸಂಸ್ಥೆಯನ್ನಾಗಿ ಮರು ಮಾರಾಟಕ್ಕೆಂದೇ ವಿಶೇಷ ಪರಿಗಣನೆಯಲ್ಲಿ ಸ್ವಾಧೀನಪಡಿಸಿಕೊಂಡಿರುವುದಾಗಿರುತ್ತದೆ. ಸ್ಥಗಿತಗೊಳಿಸಿದ ಕಾರ್ಯಾಚರಣೆ ಎಂಬ ವರ್ಗೀಕರಣವು ವಿಲೇವಾರಿ ಪೂರ್ವದಲ್ಲಿ ಅಥವಾ ಕಾರ್ಯಾಚರಣೆಯು ಮಾರಾಟಕ್ಕಿಟ್ಟ ಎಂದು ವರ್ಗೀಕರಣಕ್ಕಾಗಿರುವ ಅರ್ಹತಾ ಮಾನದಂಡಗಳನ್ನು ಪೂರೈಸಿದಾಗ ಉದ್ಭವವಾಗುವುದು.

ಎಸಿ) **ಸರ್ಕಾರದ ಅನುದಾನಗಳು:** ಸರ್ಕಾರದ ಅನುದಾನಗಳನ್ನು, ಅನುದಾನ ಸ್ವೀಕರಿಸಲಾಗುವುದೆಂಬ ಮತ್ತು ಅದಕ್ಕೆ ಲಗತ್ತುಗೊಂಡ ಎಲ್ಲ ನಿಬಂಧನೆಗಳನ್ನು ಪೂರೈಸಲಾಗುವುದೆಂದು ಸಕಾರಾಣಾತ್ಮಕ ಭರವಸೆಯಿದ್ದಲ್ಲಿ ಮಾನ್ಯ ಮಾಡಲಾಗಿರುತ್ತದೆ.

ಅನುದಾನ ಖರ್ಚು ಬಾಬ್ತಿಗೆ ಸಂಬಂಧಿಸಿದಾಗ ಅದನ್ನು ಕಾಲಾವಧಿಯ ಮೇಲೆ ಒಂದು ವ್ಯವಸ್ಥಿತ ಆಧಾರದಲ್ಲಿ ಆದಾಯ ಎಂದು ಮಾನ್ಯ ಮಾಡಲಾಗಿರುತ್ತದೆ. ಸಂಬಂಧಿತ ವೆಚ್ಚಗಳು ಅಂದರೆ ಯಾವುದಕ್ಕೆ ಪರಿಹಾರಾರ್ಥ ಎಂದು ಉದ್ದೇಶಿಸಲಾಗಿತ್ತು. ಅದಕ್ಕಾಗಿಯೇ ವೆಚ್ಚ ಮಾಡಲಾಗಿರುತ್ತದೆ. ಅನುದಾನವು ಆಸ್ತಿಗೆ ಸಂಬಂಧಿಸಿದಾಗ, ಅದನ್ನು ಆಸ್ತಿಯ ವಾಹಕ ಮೊತ್ತದಿಂದ ಅನುದಾನ ಕಡಿತಗೊಳಿಸುವುದರಿಂದ ಪ್ರಸ್ತುತಪಡಿಸಲಾಗಿರುತ್ತದೆ. ಕಂಪನಿ ಹಣಕಾಸೇತರ ಆಸ್ತಿಯ ಅನುದಾನ ಸ್ವೀಕರಿಸಿದಾಗ ಅದನ್ನು ಔಪಚಾರಿಕ ಮೌಲ್ಯ ಎಂದು ಪರಿಗಣಿಸಲಾಗಿರುತ್ತದೆ.

ಸಾಲಗಳು ಅಥವಾ ಅದೇ ತೆರನಾದ ನೆರವುಗಳನ್ನು ಸರ್ಕಾರಗಳು ಅಥವಾ ಸಂಬಂಧಿತ ಸಂಸ್ಥೆಗಳು ಚಾಲ್ತಿಯಲ್ಲಿ ಅನ್ವಯದಿಂದಾಗುವ ಮಾರುಕಟ್ಟೆ ದರಗಳಿಗಿಂತಲೂ ಕಡಿಮೆ ಬಡ್ಡಿದರದಲ್ಲಿ ಒದಗಿಸಿದಾಗ ಈ ರೀತಿಯ ಅನುಕೂಲಕರ ಬಡ್ಡಿಯ ಪರಿಣಾಮವನ್ನು ಸರ್ಕಾರದ ಅನುದಾನ ಎಂದು ಪರಿಗಣಿಸಲಾಗಿರುತ್ತದೆ. ಸಾಲ ಅಥವಾ ನೆರವನ್ನು ನ್ಯಾಯೋಚಿತ ಮೌಲ್ಯದಲ್ಲಿ ಆರಂಭದಲ್ಲಿ ಮಾನ್ಯ ಮತ್ತು ಮಾಪನ ಮಾಡಲಾಗಿದೆ ಹಾಗೂ ಸರ್ಕಾರದ ಅನುದಾನವನ್ನು ಸಾಲದ ಆರಂಭದ ವಾಹಕ ಮೌಲ್ಯ ಮತ್ತು ಸ್ವೀಕರಿಸಲಾದ ಮೊತ್ತಗಳ ನಡುವಿನ ವ್ಯತ್ಯಾಸವಾಗಿ ಮಾಪನ ಮಾಡಲಾಗಿರುತ್ತದೆ. ಸಾಲವನ್ನು ತದನಂತರದಲ್ಲಿ ಹಣಕಾಸು ಋಣ ಬಾಧ್ಯತೆಗಳಿಗೆ ಅನ್ವಯಿಸುವ ಲೆಕ್ಕ ನಿರ್ವಹಣ ನೀತಿಯನುಸಾರ ಮಾಪನ ಮಾಡಲಾಗಿರುತ್ತದೆ.

ಎಡಿ) **ಇತರೆ ಹೂಡಿಕೆಗಳು:** ತಕ್ಷಣವೇ ಫಲದಾಯಕದಲ್ಲಿ ಮತ್ತು ಒಂದು ವರ್ಷಕ್ಕೂ ಹೆಚ್ಚಿನ ಅವಧಿಗೆ ಇಟ್ಟುಕೊಳ್ಳುವ ಉದ್ದೇಶವಿಲ್ಲದ ಹೂಡಿಕೆಗಳನ್ನು ಚಾಲ್ತಿ ಹೂಡಿಕೆಗಳೆಂದು ವರ್ಗೀಕರಣ ಮಾಡಲಾಗಿದೆ. ಇತರ ಎಲ್ಲಾ ಹೂಡಿಕೆಗಳನ್ನು ದೀರ್ಘಾವಧಿ ಹೂಡಿಕೆಗಳೆಂದು ವರ್ಗೀಕರಿಸಲಾಗಿದೆ.

ದೀರ್ಘಾವಧಿ ಹೂಡಿಕೆಗಳನ್ನು ವರದಿಯ ದಿನಾಂಕದ ಕೊನೆಯಲ್ಲಿ ನ್ಯಾಯೋಚಿತ ಮೌಲ್ಯೀಕರಣಗೊಳಿಸಲಾಗಿರುತ್ತದೆ. ಪ್ರತಿ ದೀರ್ಘಾವಧಿ ಹೂಡಿಕೆಯ ಮೌಲ್ಯದಲ್ಲಿ ಕಡಿತವಾಗುವ ಸಂಭಾವ್ಯತೆ; ಅವಕಾಶ ಯಾವುದಾದರೂ ಇದ್ದಲ್ಲಿ ಅದನ್ನು ತಾತ್ಕಾಲಿಕ ಸ್ವಭಾವ ಹೊರತುಪಡಿಸಿ ಉಳಿದಿರುವುದನ್ನು ಒಪ್ಪದಿರಲು ಮಾಡಲಾಗಿದೆ. ಚಾಲ್ತಿ ಹೂಡಿಕೆಗಳನ್ನು ವೆಚ್ಚ ಅಥವಾ ನ್ಯಾಯೋಚಿತ ಮೌಲ್ಯಕ್ಕಿಂತಲೂ ಕಡಿಮೆ ದರದಲ್ಲಿ ನಮೂದಿಸಲಾಗಿದೆ. ಹೂಡಿಕೆಗಳ ಮಾರಾಟದಿಂದ ಉಂಟಾಗುವ ಲಾಭ/ನಷ್ಟವನ್ನು ಹೂಡಿಕೆಯ ವೆಚ್ಚದೊಂದಿಗೆ ಉಲ್ಲೇಖಿಸಿಕೊಂಡು ಮಾನ್ಯ ಮಾಡಲಾಗಿರುತ್ತದೆ.

ಎಇ) **ಉಪ ಹಣಕಾಸು ಸಾಧನಗಳು ಮತ್ತು ಕಾವಲು ಲೆಕ್ಕ ನಿರ್ವಹಣೆ:**

ಕಂಪನಿ ವಿದೇಶಿ ವಿನಿಮಯ ಮೌಲ್ಯದಂತಹ ಉಪ ಹಣಕಾಸು ಸಾಧನಗಳನ್ನು ವಿದೇಶಿ ಹಣ (Currency) ವಿನಿಮಯ ದರದಲ್ಲಾಗದ ಬದಲಾವಣೆಗಳ ಅಪಾಯಗಳನ್ನು ಹತ್ತಿಕ್ಕಲು ಹೊಂದುತ್ತದೆ. ಈ ಬಗೆಯ ಗುತ್ತಿಗೆಗಳಿಗೆ ಎದುರು ಪಾರ್ಟಿ ಸಂಸ್ಥೆ ಸಾಮಾನ್ಯವಾಗಿ ಬ್ಯಾಂಕ್ ಆಗಿರುತ್ತದೆ. ಉಪಸಾಧನಗಳನ್ನು ನ್ಯಾಯೋಚಿತ ಮೌಲ್ಯಕ್ಕೆ ಮಾನ್ಯ ಮಾಡಲಾಗುವುದು ಮತ್ತು ಮಾಪನ ಮಾಡಲಾಗುತ್ತಿದೆ.

**ನಗದು ಚಲಾವಣೆ ಕಾವಲುಗಳು: ರಕ್ಷಣೆಗಳು:**

ಉಪ ಕಾವಲು/ರಕ್ಷಣ ಸಾಧನದ ನ್ಯಾಯೋಚಿತ ಮೌಲ್ಯದಲ್ಲಿನ ಬದಲಾವಣೆಗಳನ್ನು ನಗದುಗಳ ಚಲಾವಣೆ ಕಾವಲು ಎಂದು ಕರೆಯಲಾಗಿದ್ದು ಅವುಗಳನ್ನು ಇತರ ಸಮಗ್ರ ಆದಾಯದಲ್ಲಿ ಮಾನ್ಯ ಮಾಡಲಾಗಿದೆ ಮತ್ತು ನಗದು ಹರಿವು ಕಾವಲಿನ ಮೀಸಲಿನಲ್ಲಿ ಈಕ್ವಿಟಿಯ ವ್ಯಾಪ್ತಿಯೊಳಗೆ ಕಾವಲು ಪರಿಣಾಮಕಾರಿಯಾಗಿರುವ ಮಟ್ಟದಲ್ಲಿಪ್ರಸ್ತುತಪಡಿಸಲಾಗಿದೆ. ಕಾವಲ ಪರಿಣಾಮಕಾರಿಯಾಗಿಲ್ಲದ ಮಟ್ಟದಲ್ಲಿ ನ್ಯಾಯೋಚಿತ ಮೌಲ್ಯದಲ್ಲಿನ ಬದಲಾವಣೆಗಳನ್ನು ಲಾಭ ಮತ್ತು ನಷ್ಟದ ಹೇಳಿಕೆಗಳಲ್ಲಿ ಮಾನ್ಯ ಮಾಡಲಾಗಿದೆ.

**ಎಎಫ್) ವ್ಯಾಪಾರ ಸಂಯೋಗಗಳು-ಸಾಮಾನ್ಯ ನಿಯಂತ್ರಣ:**

ಕಂಪನಿ ನಿಯಂತ್ರಿಸುತ್ತಿರುವ ಸಂಸ್ಥೆಗಳನ್ನೊಳಗೊಂಡ ವಿಲೀನವು ಆಸಕ್ತಿಗಳ ಸೇರ್ಪಡೆ ವಿಧಾನವನ್ನು ಉಪಯೋಗಿಸಿ ಕೆಳಕಂಡಂತೆ ಲೆಕ್ಕಚಾರ ಮಾಡಲಾಗಿದೆ.

ಸಂಯೋಜಿತ ಸಂಸ್ಥೆಗಳ ಆಸ್ತಿಗಳು ಮತ್ತು ಋಣ ಬಾಧ್ಯತೆಗಳು ಅವುಗಳ ವಾಹಕ ಮೊತ್ತಗಳಿಗೆ ಬಿಂಬಿತವಾಗಿವೆ. ನ್ಯಾಯೋಚಿತ ಮೌಲ್ಯಗಳನ್ನು ಬಿಂಬಿಸಲು ಅಥವಾ ಯಾವುದೇ ಹೊಸ ಆಸ್ತಿಗಳು ಅಥವಾ ಋಣ ಬಾಧ್ಯತೆಗಳನ್ನು ಮಾನ್ಯ ಮಾಡಲು ಹೊಂದಾಣಿಕೆ ಇರುವುದಿಲ್ಲ. ಲೆಕ್ಕ ನಿರ್ವಹಣ ನೀತಿಗಳನ್ನು ಸಾಮರಸ್ಯಗೊಳಿಸಲು ಮಾತ್ರ ಹೊಂದಾಣಿಕೆಗಳನ್ನು ಮಾಡಲಾಗಿದೆ.

ಹಿಂದಿನ ಅವಧಿಗಳಿಗೆ ಸಂಬಂಧಿಸಿದ ಹಣಕಾಸು ಹೇಳಿಕೆಗಳಲ್ಲಿನ ಹಣಕಾಸು ಮಾಹಿತಿಯನ್ನು ವ್ಯಾಪಾರ ಸಂಯೋಗವು ಹಿಂದಿನ ಅವಧಿಯ ಆರಂಭದಲ್ಲೇ ಉಂಟಾಗಿರುವಂತೆ ಹಣಕಾಸು ಹೇಳಿಕೆಗಳಲ್ಲಿ ಮರು ರೂಪಿಸಲಾಗಿದೆ. ಇದು ವಾಸ್ತವಿಕ ಸಂಯೋಗದ ದಿನಾಂಕದ ಹೊರತಾಗಿಯೂ ಮಾಡಲಾಗಿರುತ್ತದೆ. ಆದಾಗ್ಯೂ, ವ್ಯಾಪಾರ ಸಂಯೋಗವು ಆ ದಿನಾಂಕದ ನಂತರ ಉಂಟಾಗಿದ್ದಲ್ಲಿ ಹಿಂದಿನ ಅವಧಿಯ ಮಾಹಿತಿಯನ್ನು ಆ ದಿನಾಂಕದಿಂದ ಮಾತ್ರ ಮರು ರೂಪಿಸಲಾಗಿದೆ.

ವರ್ಗಾವಣೆಗೊಳ್ಳುವ ಸಂಸ್ಥೆಯ ಹಣಕಾಸು ಹೇಳಿಕೆಗಳಲ್ಲಿನ ಉಳಿಸಿಕೊಂಡಿರುವ ಗಳಿಕೆಯ ಬಾಕಿ ಮೊತ್ತವನ್ನು ವರ್ಗಾವಣೆ ಅಂತರ್ಗತ ಸಂಸ್ಥೆಯ ಹಣಕಾಸು ಹೇಳಿಕೆಗಳಲ್ಲಿನ ಸಂವಾದಿ ಬಾಕಿ ಮೊತ್ತದೊಂದಿಗೆ ಸರಾಸರಿಗೊಳಿಸಲಾಗಿರುತ್ತದೆ ಅಥವಾ ಸಾಮಾನ್ಯ ಮೀಸಲಿಗೆ ಪ್ರತಿಯಾಗಿ ಹೊಂದಾಣಿಕೆ ಮಾಡಲಾಗಿರುತ್ತದೆ.

ಮೀಸಲುಗಳ ಗುರುತನ್ನು ಸಂರಕ್ಷಿಸಲಾಗಿರುತ್ತದೆ ಮತ್ತು ವರ್ಗಾವಣೆಗೊಂಡ ಸಂಸ್ಥೆಯ ಮೀಸಲು ವರ್ಗಾವಣೆ ಅಂತರ್ಗತ ಮಾಡಿಕೊಂಡ ಸಂಸ್ಥೆಯ ಮೀಸಲಾಗಿ ಬಿಡುತ್ತದೆ.

ವರ್ಗಾವಣೆಗೊಂಡ ಸಂಸ್ಥೆ ನೀಡಲಾದ ಷೇರು ಬಂಡವಾಳ ಮೊತ್ತ ಎಂದು ದಾಖಲಾದ ಮೊತ್ತಗಳು ಯಾವುದೇ ಹೆಚ್ಚುವರಿ ಪರಿಗಣನೆಯು ಅಂದರೆ ನಗದು ಅಥವಾ ಇತರ ಆಸ್ತಿ ರೂಪದಲ್ಲಿರುವುದು ಮತ್ತು ಅದರ ಷೇರು ಬಂಡವಾಳದ ನಡುವೆ ಯಾವುದಾದರೂ ವ್ಯತ್ಯಾಸವಿದ್ದಲ್ಲಿ ಅದನ್ನು ಬಂಡವಾಳ ಮೀಸಲು ಮೊತ್ತಕ್ಕೆ ವರ್ಗಾವಣೆ ಮಾಡಲಾಗಿರುತ್ತದೆ ಮತ್ತು ಅದನ್ನು ಇತರ ಬಂಡವಾಳ ಮೀಸಲಿನಿಂದ ಪ್ರತ್ಯೇಕವಾಗಿ ಪ್ರಸ್ತುತಪಡಿಸಲಾಗಿದೆ.

**1.3 ಲೆಕ್ಕ ನಿರ್ವಹಣ ನೀತಿಗಳ ಅನ್ವಯಿಕೆಯಲ್ಲಿ ಮಹತ್ತರ ಅಂದಾಜುಗಳು:**

ಎ) **ಆದಾಯ:** ಕಂಪನಿಯ ಒಂದು ಮೊತ್ತವು ಸಕಾರಣಾತ್ಮಕವಾಗಿ ಖಚಿತಪಟ್ಟಿರುವುದು ಮತ್ತು ಅದರ ವಸೂಲಾತಿಯು ನಿಶ್ಚಿತವಾಗಿದ್ದಲ್ಲಿ ಅದನ್ನು ಆದಾಯವೆಂದು ಮಾನ್ಯ ಮಾಡುತ್ತದೆ.

ಬಿ) **ಸರಕುಗಳು:** ಸರಕುಗಳನ್ನು ಸಕಾರಣಾತ್ಮಕವಾಗಿ ಉಸ್ತುವಾರಿ ಮಾಡುವುದು ನಿಶ್ಚಿತವಾದಾಗ ಗ್ರೂಪ್ ಅವುಗಳನ್ನು ಮಾನ್ಯ ಮಾಡುತ್ತದೆ.

| III. ನ್ಯಾಯೋಚಿತ (ಮುಖಬೆಲೆ)ಬೆಲೆಗೆ ಮಾಪನ ಮಾಡಿದ ಹಣಕಾಸು ಬಾಧ್ಯತೆಗಳು | | | | | | | | | | |
|---|---|---|---|---|---|---|---|---|---|---|
| A | ಮುಂಗಡ ಹಣ ಠೇವಣಿ ಭದ್ರತಾ ಠೇವಣಿ | | | 128,747,136 | | | 130,567,620 | | | 70,635,547 |
| B | ಮುಂಗಡದ ಆದಾಯ | | | 11,638,353 | | | 5,326,271 | | | 1,719,254 |
| C | ಇತರ | | | 411,753,651 | | | 497,511,422 | | | 461,811,996 |
| | | | | **552,139,140** | | | **633,405,313** | | | **534,166,797** |

| | | | | | | | | | | |
|---|---|---|---|---|---|---|---|---|---|---|
| **IV.** | **ನ್ಯಾಯೋಚಿತ ಮೌಲ್ಯ (ಮುಖ ಬೆಲೆ)ದಲ್ಲಿ ಮಾಪನ ಮಾಡದಿರುವ ಹಣಕಾಸು ಬಾಧ್ಯತೆಗಳು** | | | | | | | | | |
| A | ವ್ಯಾಪಾರ ಸಂಬಂಧ ಪಾವತಿ ಮಾಡಬೇಕಾಗಿರುವುದು | | | 1,721,983,176 | | | 2,057,957,681 | | | 817,010,606 |
| B | ಇತರ ಹಣಕಾಸು ಬಾಧ್ಯತೆಗಳು | | | 1,058,833,648 | | | 978,935,863 | | | 1,056,794,214 |
| (i) | ಇತರ ಬಾಧ್ಯತೆಗಳು | | | | | | | | | |
| (ii) | ಸಾಲಗಳು/ಠೇವಣಿಗಳ ಮೇಲೆ ಸಂಗ್ರಹವಾದ ಬಡ್ಡಿ | | | 5,387,534 | | | 5,387,534 | | | 5,387,534 |
| (iii) | ಮುಂಗಡ ಹಣ ಭದ್ರತಾ ಠೇವಣಿಗಳು | | | 3,252,000 | | | 3,252,000 | | | 6,364,578 |
| C | ಸಾಲಗಳು | | | 17,455,532 | | | 17,455,532 | | | 17,455,532 |
| | | | | | | | | | | |
| | | | | **2,806,911,890** | | | **3,062,988,609** | | | **1,903,012,463** |

ಕಂಪನಿಯು ಅಲ್ಪಾವಧಿ ವ್ಯಾಪಾರದಿಂದ ಬರಬಹುದಾದಂತಹ ಹಣಕಾಸು ಸಾಧನೆಗಳ ನ್ಯಾಯೋಚಿತ ಮೌಲ್ಯವನ್ನು ಬಹಿರಂಗಪಡಿಸಿಲ್ಲ. ಏಕೆಂದರೆ ಅವುಗಳ ವಾಹಕ ಮೊತ್ತಗಳು ನ್ಯಾಯೋಚಿತ ಮೌಲ್ಯದ ಸಕಾರಣಾತ್ಮಕ ಅಂದಾಜು ಏರಿಕೆಯಾಗಿರುವುದು.

### ii. ನ್ಯಾಯೋಚಿತ ಮೌಲ್ಯ (ಮುಖಬೆಲೆ) ಶ್ರೇಣಿ ವ್ಯವಸ್ಥೆ

ಹಣಕಾಸು ಸಾಧನೆಗಳ ನ್ಯಾಯೋಚಿತ ಮೌಲ್ಯ (ಮುಖಬೆಲೆ)ದ ಮಾಪನಕ್ಕಾಗಿ ಬಳಸಲಾದ ಶ್ರೇಣಿ ಮಟ್ಟಗಳು ಎಲ್ಲೆಲ್ಲಿ ಅನ್ವಯವಾಗಬಹುದು ಎಂಬುದನ್ನು ಕೆಳಗೆ ನೀಡಲಾಗಿದೆ.

| | | ಟಿಪ್ಪಣಿ ಸಂಖ್ಯೆ | ದಿ: 31.03.2019 ರಂದು ಇದ್ದಂತೆ | | | ದಿ: 31.03.2018 ರಂದು ಇದ್ದಂತೆ | | | ದಿ: 31.03.2017 ರಂದು ಇದ್ದಂತೆ | | |
|---|---|---|---|---|---|---|---|---|---|---|---|
| | | | ಮಟ್ಟ 1 | ಮಟ್ಟ 2 | ಮಟ್ಟ 3 | ಮಟ್ಟ 1 | ಮಟ್ಟ 2 | ಮಟ್ಟ 3 | ಮಟ್ಟ 1 | ಮಟ್ಟ 2 | ಮಟ್ಟ 3 |
| I | ನ್ಯಾಯೋಚಿತ ಮೌಲ್ಯದಲ್ಲಿ ಮಾಪನ ಮಾಡಿದ ಹಣಕಾಸು ಆಸ್ತಿಗಳು-ಮುಂದುವರಿದ ನ್ಯಾಯೋಚಿತ ಮೌಲ್ಯದ ಮಾಪನಗಳು | | | | | | | | | | |
| A | ಹಣಕಾಸು ಆಸ್ತಿಗಳು ಮತ್ತು ಬಾಧ್ಯತೆಗಳು | 6 & 16 | | | | | | | | | |
| | ಎಫ್‌ವಿಟಿಪಿಐಗೆ ಹಣಕಾಸು ಹೂಡಿಕೆಗಳು-ನಮೂದಿಸಿಲ್ಲದ | | 12,571,845 | 226,981,741 | | 18,672,900 | 211,090,598 | | 15,180,964 | 260,702,863 | |

ಮಟ್ಟ 1- ಮಟ್ಟ 1ರ ಶ್ರೇಣಿಯು ನಮೂದಿತ ಬೆಲೆಗಳನ್ನು ಬಳಸಿ ಮಾಪನ ಮಾಡಲಾದ ಹಣಕಾಸು ಸಾಧನೆಗಳನ್ನು ಒಳಗೊಳ್ಳುತ್ತದೆ.

ಮಟ್ಟ 2- ಮಾರುಕಟ್ಟೆಯಲ್ಲಿ ಸಕ್ರಿಯವಾಗಿ ವ್ಯವಹಾರ ಮಾಡದಿರುವ ಹಣಕಾಸು ಸಾಧನಗಳ ನ್ಯಾಯೋಚಿತ ಮೌಲ್ಯವನ್ನು ಮೌಲ್ಯಮಾಪನ ತಂತ್ರಗಳನ್ನು ಬಳಸಿ ನಿರ್ಧರಣೆ ಮಾಡಲಾಗುತ್ತದೆ. ಇವುಗಳು ಪರಿಶೀಲಿಸಬಹುದಾದ ಮಾರುಕಟ್ಟೆ ಅಂಕಿ ಅಂಶಗಳು ಮಾಹಿತಿಯ ಬಳಕೆಯನ್ನು ಗರಿಷ್ಟ ಪ್ರಮಾಣದಲ್ಲಿ ಮಾಡುವುವು ಮತ್ತು ಸಂಸ್ಥೆಯ ನಿರ್ದಿಷ್ಟ ಅಂದಾಜುಗಳ ಮೇಲೆ ಎಷ್ಟು ಸಾಧ್ಯವೊ ಅಷ್ಟು ಕಡಿಮೆ ಪ್ರಮಾಣದಲ್ಲಿ ಅವಲಂಬಿತವಾಗಿರುತ್ತವೆ.

ಮಟ್ಟ 3- ಒಂದು ವೇಳೆ ಒಂದು ಅಥವಾ ಹೆಚ್ಚಿನ ಮಹತ್ತರ ಒಳ ಅಂಶಗಳು (ಅಡಕ) ಪರಿಶೀಲಿಸಬಹುದಾದ ಮಾರುಕಟ್ಟೆ ಅಂಕಿ ಅಂಶಗಳ ಮಾತಿ ಆಧಾರಿತವಲ್ಲದಿದ್ದಲ್ಲಿ ಅಂತಹ ಹಣಕಾಸು ಸಾಧನಗಳನ್ನು ಮಟ್ಟ-3 ರಲ್ಲಿ ಬಳಪಡಿಸಲಾಗುತ್ತದೆ.

47. ದಿನಾಂಕ: 02.10.2006ರಂದು ಜಾರಿಗೆ ಬಂದಿರುವ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಅಭಿವೃದ್ಧಿ ಕಾಯ್ದೆ 2006 (MSMED) ಅಡಿ ಸೂಕ್ಷ್ಮ ಸಣ್ಣ ಮತ್ತು ಮಧ್ಯಮ ಉದ್ದಿಮೆಗಳಿಗೆ ಸಂಬಂಧಿಸಿದಂತೆ ಕೆಲವು ನಿಶ್ಚಿತ ಮಾತಿಯನ್ನು ಬಹಿರಂಗಗೊಳಿಸಬೇಕಾಗುತ್ತದೆ. ಕಂಪನಿಯು 2018-19ನೇ ಆರ್ಥಿಕ ಸಾಲಿನಲ್ಲಿ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ದಿಮೆಗಳ ಅಭಿವೃದ್ಧಿ ಕಾಯ್ದೆ-2006ರ ಸೆಕ್ಷನ್ 22ರ ಪ್ರಕಾರ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ದಿಮೆಗಳನ್ನು ಗುರುತಿಸಿದೆ.

(ಎಲ್ಲಿ ಮೊತ್ತಗಳು ನಿರ್ದಿಷ್ಟ ಪಡಿಸಿದ ಹೊರತು ರೂಪಾಯಿಗಳಲ್ಲಿ)

| ವಿವರಗಳು | 31ನೇ ಮಾರ್ಚ್ 2019 ರಂದು ಇದ್ದಂತೆ | 31ನೇ ಮಾರ್ಚ್ 2018 ರಂದು ಇದ್ದಂತೆ |
|---|---|---|
| ವರ್ಷದ ಕೊನೆಯಲ್ಲಿದ್ದಂತೆ ಯಾವುದೇ ಸರಬರಾಜುದಾರರಿಗೆ ಪಾವತಿ ಮಾಡದೇ ಉಳಿದಿರುವ ಅಸಲು ಮೊತ್ತ ಅದರ ಮೇಲಿನ ಬಡ್ಡಿ ಬಾಕಿ | | |
| ಅಸಲು ಮೊತ್ತ | | 153,204 |
| ಎಂಎಸ್‌ಎಂಇಡಿ ಕಾಯ್ದೆ 2006ರಡಿ ಪಾವತಿಸಬೇಕಾದ ಬಡ್ಡಿ | | 12,066 |
| **ಒಟ್ಟು** | | **12,066** |
| ಲೆಕ್ಕ ನಿರ್ವಹಣೆ ವರ್ಷದಲ್ಲಿ ಗೊತ್ತಪಡಿಸಿದ ದಿನದ ಆಚೆ ಸರಬರಾಜುದಾರನಿಗೆ ಪಾವತಿ ಮಾಡಲಾದ ಮೊತ್ತಗಳೊಂದಿಗೆ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ದಿಮೆಗಳ ಅಭಿವೃದ್ಧಿ ಕಾಯ್ದೆ-2006 ಸೆಕ್ಷನ್ 16ರ ಪ್ರಕಾರ ಕಂಪನಿಯಿಂದ ಪಾವತಿ ಮಾಡಲಾದ ಬಡ್ಡಿ ಮೊತ್ತ | | |
| ಪಾವತಿ ಮಾಡಬೇಕಾದ ಬಡ್ಡಿ ಮತ್ತು ಪಾವತಿ ಮಾಡಲು ವಿವರವಾದ ಅವಧಿಗೆ ಪಾವತಿಸಬೇಕಾಗಿರುವುದು (ಯಾವುದನ್ನು ವರ್ಷದಲ್ಲಿ ಗೊತ್ತುಪಡಿಸಿದ ದಿನದಾಚೆ ಪಾವತಿ ಮಾಡಿರುವುದು) ಆದರೆ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ದಿಮೆಗಳ ಅಭಿವೃದ್ಧಿ ಕಾಯ್ದೆ-2006 ರಡಿ ನಿರ್ದಿಷ್ಟ ಪಡಿಸಿದ ಬಡ್ಡಿಯನ್ನ ಸೇರಿಸದೆ ಮಾಡಿರುವುದು ★ | | 12,066 |
| ವರ್ಷದ ಕೊನೆಯಲ್ಲಿ ಸಂಗ್ರಹವಾದ ಬಡ್ಡಿ ಮತ್ತು ಪಾವತಿ ಮಾಡದೇ ಉಳಿದಿರುವುದು | | 12,066 |
| ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಅಭಿವೃದ್ಧಿ ಕಾಯ್ದೆ 2006 ಸೆಕ್ಷನ್ 23ರಡಿ ಸಣ್ಣ ಉದ್ದಿಮೆಗೆ ಕಡಿತಗೊಳಿಸಬಹುದಾದ ವೆಚ್ಚವೆಂದು ವಜಾ ಮಾಡುವ ಉದ್ದೇಶದಿಂದ ಬಾಕಿ ಇರುವ ಬಡ್ಡಿ ಬಾಕಿ ಮೇಲಿನಂತೆ ಬಾಕಿ ಇರುವ ದಿನಾಂಕದವರೆಗೆ ವಾಸ್ತವವಾಗಿ ಪಾವತಿ ಮಾಡಿದ್ದು, ಮುಂದಿನ ಬಡ್ಡಿ ಮೊತ್ತ ಬಾಕಿ ಉಳಿದಿರುವುದು ಮತ್ತು ಮುಂದಿನ ವರ್ಷಗಳಲ್ಲಿ ಪಾವತಿ ಮಾಡಬೇಕಾಗಿರುವುದು. ★ | | 12,066 |

★ಮೇಲ್ಕಂಡ ಮಾಹಿತಿಯನ್ನು ಅಂತಹ ವ್ಯಕ್ತಿ: ಸಂಸ್ಥೆಗಳನ್ನು ಕಂಪನಿಯಿಂದ ಎಂಎಸ್‌ಎಂಇ ಎಂದು ಗುರುತಿಸಿದ್ದು, ಆ ವ್ಯಕ್ತಿಗೆ ಸಂಬಂಧಿಸಿದಂತೆ ಒದಗಿಸಲಾಗಿದೆ. ಇವುಗಳು ವ್ಯಾಪಾರದ ರೂಢಿಯಂತೆ ಸೋಡಿ/ಮನ್ನಗಳ ನಿವ್ವಳ ಮೊತ್ತವಳಾಗಿವೆ. ಅದನ್ನೆ ಲೆಕ್ಕ ಪರಿಶೋಧಕರು ನಂಬಿರುವದು.

48. ಸಂಭಾವ್ಯ ಹೊಣೆಗಾರಿಕೆಗಳು ಮತ್ತು ಬದ್ಧತೆಗಳು (ನಿರ್ದಿಷ್ಟಪಡಿಸಿರದಿದ್ದಲ್ಲಿ ಎಲ್ಲಾ ಮೊಬಲಗುಗಳು ರೂಪಾಯಿಯಲ್ಲಿದೆ)

ಎ. ಮಾತೃ ಕಂಪನಿ

| ಕ್ರ.ಸಂ. | ವಿವರಗಳು | 2018-19 | 2017-18 |
|---|---|---|---|
| i | ಕಂಪನಿಯು ಬ್ಯಾಂಕುಗಳಿಗೆ ನೀಡಿರುವ ಖಾತರಿಗಳು/ಪ್ರತಿ ಖಾತರಿಗಳು | 394,815,474 | 385,544,381 |
| ii | ಅಗ್ನಿ ಅಪಘಾತ ಪಾಲಿಸಿಗಳ ಬಗ್ಗೆ ವಿಮೆ ಕ್ಲೈಮ್ ಉಳಿಕೆ ಪ್ರಕರಣಗಳು | 20,773,297 | 20,773,297 |
| | ಅಗ್ನಿ ಅಪಘಾತ ಪಾಲಿಸಿಗಳ ಬಗ್ಗೆ ವಿಮೆ ಕ್ಲೈಮ್ ಡಿಕ್ರಿ ಆಗಿರುವ ಪ್ರಕರಣಗಳು | 48,870,362 | 48,870,362 |
| | ವಿಮಾ ಹಕ್ಕಿನ ಮೇಲಿನ ಬಡ್ಡಿ | 52,608,448 | 48,758,984 |
| iii | ಕಬ್ಬಿಣದ ಅದಿರು ರಫ್ತು ಪಕ್ಷದಿಂದ ಮಾಡಲಾದ ಕ್ಲೈಮ್ (ಬಡ್ಡಿ ಸೇರಿದಂತೆ) | 157,019,850 | 147,853,074 |
| iv | ಪಿಂಚಣಿ, ಸಣ್ಣ ಉಳಿತಾಯ ಸ್ವತ್ತು ಉಸ್ತುವಾರಿ ನಿರ್ದೇಶನಾಲಯದಿಂದ ಮಾಡಲಾದ ಕ್ಲೈಮ್‌ಗಳು | 460,986,366 | 460,986,366 |
| v | ವೆನ್‌ಕೇರ್ (ಇಂಡಿಯಾ) ಲಿಮಿಟೆಡ್‌ನಿಂದ ವಿಂಡ್‌ಮಿಲ್‌ನ ಗುತ್ತಿಗೆ ಬಗೆಗಿನ ಕ್ಲೈಮ್ | 11,923,000 | 11,923,000 |
| vi | ತೆರಿಗೆ ತಗಾದೆಗಳು | 38,310,940 | 49,575,098 |
| vii | ಸೇವಾ ತೆರಿಗೆ ತಗಾದೆಗಳು | 17,600,000 | 14,700,000 |

ಕಂಪನಿಯು ಸದರಿ ಕ್ಲೈಮ್‌ಗಳನ್ನು ಪ್ರಶ್ನಿಸಿರುವುದರಿಂದಾಗಿ ಮೇಲಿನ ಮೊಬಲಗುಗಳನ್ನು ಒದಗಿಸಿರುವುದಿಲ್ಲ.

i. ಟಿಸಿಎಸ್‌ಗೆ ಸಂಬಂಧಿಸಿದ ಸಾರಾಯಿ ಮೇಲಿನ ರೂ.36,17,49,381 ಹಾಗೂ ಇತರೆ ಮಾಮೂಲಿ ವ್ಯವಹಾರ ವಿಷಯಗಳಿಗೆ ಸಂಬಂಧಿಸಿದ ರೂ.3,30,66,093ರ ಬಗ್ಗೆ ತಗಾದೆಗೆ ಬ್ಯಾಂಕ್ ಖಾತರಿ ನೀಡಲಾಗಿದೆ.

ಕಂಪನಿಯು ಮೂಲದಲ್ಲಿ ತೆರಿಗೆ ಮೊತ್ತ ರೂ.30,23,31,283/-(ರೂ.30,23,31,283)ರ ಮತ್ತು ಅದರ ಮೇಲಿನ ಬಡ್ಡಿ ಮೊತ್ತ ರೂ.30,67,65,640/- ಸಂಗ್ರಹಿಸದಿರುವುದಕ್ಕಾಗಿ ಆದಾಯ ತೆರಿಗೆ ಇಲಾಖೆಯಿಂದ ತಗಾದೆ ನೋಟೀಸುಗಳನ್ನು ಪಡೆದಿತ್ತು. ಕಂಪನಿಯು ರೂ.24,05,81,902 (ರೂ.24,05,81,902/-) ಪಾವತಿಸಿತ್ತು. ಆದಾಯ ತೆರಿಗೆ ಇಲಾಖೆಯವರು ಈ ಬಾಕಿ ಬೇಡಿಕೆ ಬಗ್ಗೆ 2006-07ರ ಆರ್ಥಿಕ ವರ್ಷಕ್ಕೆ ಸಂಬಂಧಿಸಿದಂತೆ ಮರು ಪಾವತಿ ಬಾಕಿ ಮೊತ್ತ ರೂ.42,40,233/-ರ ಮರು ಪಾವತಿ ಹೊಂದಿಸಿಕೊಂಡಿತು. ರೂ.25,25,407ರ ಏರ್ಪಾಡು ಮಾಡಲಾಗಿದೆ. ಮತ್ತು ರೂ.36,17,49,381 (ರೂ.36,17,49,381)ಕ್ಕೆ ಬ್ಯಾಂಕ್ ಖಾತರಿ ಒದಗಿಸಿದೆ. ಮಾನ್ಯ ಸರ್ವೋಚ್ಚ ನ್ಯಾಯಾಲಯವು 2018-19 ಅವಧಿಯಲ್ಲಿ ಹಲವು ಬಾರಿ ವಿಷಯವನ್ನು ಕೈಗೆತ್ತಿಕೊಂಡಿದ್ದರೂ ಅದು ಅಂತಿಮ ವಿಚಾರಣೆಗೆ ತಲುಪಿರುವುದಿಲ್ಲ.

ii (i) 2000-01 ವರ್ಷದಲ್ಲಿ ಕಂಪನಿ ಸ್ವಾಮ್ಯದ ಬೆಂಗಳೂರು ಏರ್ ಕಾರ್ಗೋ ಸಂಕೀರ್ಣದಲ್ಲಿ ಉಂಟಾದ ಅಗ್ನಿ ಅವಘಡದ ಬಗ್ಗೆ ತಮ್ಮ ಗ್ರಾಹಕರ ಕ್ಲೈಮ್‌ಗಳನ್ನು ಇತ್ಯರ್ಥಪಡಿಸಿರುವ ಕೆಲವು ವಿಮಾ ಕಂಪನಿಗಳು ಪ್ರತಿಸ್ಥಾಪನಾ ತತ್ವದನ್ವಯ ಅವರಿಂದ ಇತ್ಯರ್ಥಪಡಿಸಲಾದ ಸದರಿ ಕ್ಲೈಮ್‌ಗಳ ವಸೂಲಾತಿಗೆ ಕಂಪನಿ ವಿರುದ್ಧ ಹಲವಾರು ಮೊಕದ್ದಮೆಗಳನ್ನು ಹೂಡಿವೆ. ಕಂಪನಿಯು ಸಿಟಿ ಸಿವಿಲ್ ನ್ಯಾಯಾಲಯದಲ್ಲಿ ಕ್ಲೈಮ್‌ಗಳನ್ನು ವಿರೋಧಿಸಿತ್ತು. ಡಿಕ್ರಿ ಆದ ಮೊಕದ್ದಮೆಗಳ ಪ್ರಕರಣದಲ್ಲಿ ಸಿಟಿ ಸಿವಿಲ್ ನ್ಯಾಯಾಲಯದ ಆದೇಶಗಳಿಂದ ಬಾಧಿತಗೊಂಡು ಕಂಪನಿಯು ಕರ್ನಾಟಕ ಘನ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿತ್ತು. ಘನ ಉಚ್ಚ ನ್ಯಾಯಾಲಯವು ಕ್ಲೈಮ್‌ದಾರರಿಗೆ ಈ ಮೊಬಲಗನ್ನು ಪಾವತಿಸಲು ಎಂಎಸ್‌ಐಎಲ್ ಮತ್ತು ಸುಂಕ ಇಲಾಖೆಯು ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ ಜವಾಬ್ದಾರಿಯಾಗಿರುವುದಾಗಿ ದಿನಾಂಕ:09.03.2009ರ ತನ್ನ ಆದೇಶದಲ್ಲಿ ಡಿಕ್ರಿ ಮಾಡಿತು. ಉಚ್ಚ ನ್ಯಾಯಾಲಯದ ಆದೇಶಗಳಿಂದ ಬಾಧಿತ ಕಂಪನಿಯು ಸೀಮಾ ಸುಂಕಗಳ ಇಲಾಖೆ ಜೊತೆಯಾಗಿ ಉಚ್ಚ ನ್ಯಾಯಾಲಯದ ಆದೇಶದ ವಿರುದ್ಧ ಸರ್ವೋಚ್ಚ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿದ್ದವು. ವಿವಾದಕ್ಕೆ ಸಂಬಂಧಿಸಿದ ಪಕ್ಷಗಳ ವಿಚಾರಣೆ ನಡೆಸಿದ ಘನ ಸರ್ವೋಚ್ಚ ನ್ಯಾಯಾಲಯವು ಸರ್ಕಾರಿ ಏಜೆನ್ಸಿಗಳಾಗಿದ್ದು, ಸಂಬಂಧಿಸಿದ ಎಲ್ಲಾ ಪಕ್ಷಗಳು ಪರಸ್ಪರ ಚರ್ಚಿಸಿ ಕ್ಲೈಮ್‌ನ್ನು ಸೌಹಾರ್ದಯುತವಾಗಿ ಇತ್ಯರ್ಥಪಡಿಸಿಕೊಳ್ಳುವಂತೆ ದಿನಾಂಕ:06.11.2009ರ ತನ್ನ ಆದೇಶದಲ್ಲಿ ನಿರ್ದೇಶನ ನೀಡಿತು. ಇದೇ ವಿಧದ ವಿಷಯಗಳ ಕೆಲವು ಪ್ರಕರಣಗಳಲ್ಲಿ ಸಿವಿಲ್ ನ್ಯಾಯಾಲಯಗಳು ಘನ ಉಚ್ಚ ನ್ಯಾಯಾಲಯದ ತತ್ವದಂತೆ ಅನುಸರಿಸಿ ಎಂಎಸ್‌ಐಎಲ್ ಮತ್ತು ಸುಂಕಗಳ ಇಲಾಖೆಯು ವಿಮೆ ಕ್ಲೈಮ್ ಇತ್ಯರ್ಥಕ್ಕಾಗಿ ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ ಹೊಣೆಯಾಗಿದೆಯೆಂದು ಡಿಕ್ರಿ ಮಾಡಿವೆ. ಕಂಪನಿಯು ನಾಲ್ಕನೆ ಒಂದು ಭಾಗ ಶೇ.6ರಂತೆ ಬಂಡವಾಳೀಕರಿಸಿದ ಬಡ್ಡಿ ಸೇರಿದಂತೆ ರೂ.3,38,26,269/- (ರೂ.3,25,43,115/-)ರ ದಷ್ಟು ಪುಸ್ತಕಗಳಲ್ಲಿ ಒದಗಿಸಿದೆ. ಮತ್ತು ಬಾಕಿ ಮೊತ್ತ ರೂ.10,14,78,810/- (ರೂ.9,76,29,346/-) ರ ಸಂಭಾವ್ಯ ಹೊಣೆಗಾರಿಕೆಯೆಂದು ತೋರಿಸಲಾಗಿದೆ.

ವಿಮಾ ಕಂಪನಿಗಳು ಮತ್ತು ಸೀಮಾ ಸುಂಕಗಳ ಇಲಾಖೆಯಿಂದ ವಸೂಲಿ ಪ್ರಕ್ರಿಯೆ ನಡೆಯುತ್ತಿದೆ. ಡಿಕ್ರಿಯೇತರ ಪ್ರಕರಣಗಳಿಗೆ ಸಂಬಂಧಿಸಿದ ಮೊಬಲಗು ರೂ.2,07,73.297/-(ರೂ.2,07,73.297/-) ಆಗಿದ್ದು, ಸಂಭಾವ್ಯ ಹೊಣೆಗಾರಿಕೆಯಲ್ಲಿ ವರದಿ ಮಾಡಲಾಗಿದೆ. ಕಂಪನಿಯು ಸುಂಕಗಳಿಂದ ನೀಡಲಾದ ದಿನಾಂಕ ವ್ಯಾಪಾರ ಸುತ್ತೋಲೆ ಅನುಸಾರ ಪ್ರತಿ ಕೆಜಿಗೆ ಯುಎಸ್ ಡಾಲರ್ 20ರ ದರದಂತೆ ತನ್ನ ವಿಮೆ ಕಂಪನಿಯೊಂದಿಗೆ ಬಿಎಸಿಸಿ ಉಗ್ರಾಣದಲ್ಲಿರುವ ಸರಕಿಗೆ ವಿಮೆ ಮಾಡಿದೆ.

iii. ಕಂಪನಿಯು ಪ್ರತಿ ಎಂಟಿಗೆ ರೂ.1000/-ದಂತೆ ಚೀನಾಕ್ಕೆ ರಫ್ತು ಮಾಡಲು 52% ಎಫ್‌ಇ (ಕಬ್ಬಿಣ) ಒಳಾಂಶದ 50,000 ಎಂಟಿ ಸಂಗ್ರಹಣೆಗಾಗಿ ಸರಬರಾಜುದಾರ ಮಲ್ಲಪ್ಪ ಮಿನರಲ್ ಇಂಡಸ್ಟ್ರೀಸ್ (ಎಂಎಂಐ)ನೊಂದಿಗೆ 13ನೇ ನವೆಂಬರ್ 2009ರಂದು ಒಪ್ಪಂದವೊಂದನ್ನು ಮಾಡಿಕೊಂಡಿತ್ತು ಹಾಗೂ ಪ್ರತಿಯಾಗಿ ಪ್ರತಿ ಎಂಟಿಗೆ ಯುಎಸ್ ಡಾಲರ್ 28 (ರೂ.1,288/-)ರಂತೆ ಎಫ್‌ಒಬಿ ಗೋವಾಗೆ ರಫ್ತಿಗಾಗಿ ಸಾಗರೋತ್ತರ ಖರೀದಿದಾಗ ಫ್ರೇಮರಿ ಹೋಲ್ಡಿಂಗ್ ಲಿಮಿಟೆಡ್‌ನೊಂದಿಗೆ ಒಪ್ಪಂದ ಮಾಡಿಕೊಂಡಿತು. ಕಂಪನಿಯು ಪಾವತಿಸಬೇಕಾದ ಪ್ರತಿ ಎಂಟಿಗೆ ರೂ.200/-ರ ಸೇವಾ ಶುಲ್ಕ ಅಂಶೀಕರಿಸಿದ ನಂತರ ಪ್ರತಿ ಎಂಟಿಗೆ ರೂ.88/-ರ ಲಾಭ ಯೋಜಿಸಿದೆ.

ಸಾಗರೋತ್ತರ ಖರೀದಿದಾರರೊಂದಿಗೆ ಒಪ್ಪಂದವು 25 ರಿಂದ 30ನೇ ನವೆಂಬರ್ ನಡುವಿನ ಅವಧಿಯಲ್ಲಿ ಲೇಕ್ಯಾನ್ ಅವಧಿ ಎಂದು ಮತ್ತು ಹಡಗಿಗೆ ತುಂಬುವಿಕೆಯನ್ನು ಪೂರ್ಣಗೊಳಿಸುವಿಕೆ 15ನೇ ಡಿಸೆಂಬರ್ 2009ರಂದು ಅಥವಾ ಮುಂಚಿತವಾಗಿ ಮತ್ತು 52% ಎಎಫ್‌ಇ ಒಳಾಂಶ ಯೋಜಿತವಾದುದಾಗಿತ್ತು . ಒಪ್ಪಂದದ ಷರತ್ತುಗಳಲ್ಲಿಲ್ಲೊಂದಾದ ಎಲ್ಲಾ ವಿವಾದಗಳನ್ನು ಹಾಂಗ್‌ಕಾಂಗ್ ಸ್ಥಳವಾಗಿಸಿಕೊಂಡು ಮಧ್ಯಸ್ಥಿಕಾ ಪ್ರಾಧಿಕಾರಕ್ಕೆ ಇತ್ಯರ್ಥಕ್ಕೆ ವಹಿಸುವುದಾಗಿದೆ. ರೂ.5 ಕೋಟಿಗಳಿಗೆ ಎಂಎಂಐ ಪರವಾಗಿ ರದ್ದುಪಡಿಸಲಾಗದ (ಎಲ್‌ಒಸಿ) ನಂಬಿಕೆ ಪತ್ರ ರೂಪಿಸಲಾಗಿತ್ತು. ಸರಬರಾಜುದಾರರ ಅದಿರನ್ನು ಸಂಗ್ರಹಿಸಲು ನಿಧಿಗಳನ್ನು ಕ್ರೋಢೀಕರಿಸಲು ವಿಫಲರಾಗಿ ಎಂಎಸ್‌ಐಎಲ್ ನಿಂದ ಮುಂಗಡ ಕೇಳಿದರು. 10ನೇ ಡಿಸೆಂಬರ್ 2009ರಂದು ಬಂದರಿಗೆ ಹಡಗು ಆಗಾಗಲೇ ಒಂದಿದರಿಂದಾಗಿ ವಿಳಂಬ ಶುಲ್ಕ ಹೋಗಲಾಡಿಸಲು ಕಂಪನಿಯು ಮುಂದಿನ ದಿನಾಂಕದ ಚೆಕ್ಕುಗಳ ನೀಡಿಕೆಗೆ ಒಳಪಟ್ಟಂತೆ ಮತ್ತು ಸ್ವತ್ತುಗಳ ಮೇಲೆ ನ್ಯಾಯ ಸಮ್ಮತ ಅಡಮಾನ ರೂಪಿಸುವುದಕ್ಕೆ ಒಳಪಟ್ಟು 2.15 ಕೋಟಿಗಳ ಮುಂಗಡ ನೀಡಿತು. ಇದನ್ನು ಕಂಪನಿ ಪೂರ್ಣಗೊಳಿಸಲಿಲ್ಲ. ಅದಿರನ್ನು ಸರಬರಾಜು ಮಾಡಲು ನಿರಂತರ ವಿಫಲತೆ ಕಾರಣದಿಂದಾಗಿ ಕಂಪನಿ ಸಂಗ್ರಹಣೆಗೆ ಚೆಕ್ಕುಗಳನ್ನು ಬ್ಯಾಂಕಿಗೆ ಹಾಕಿದ್ದು, ಆದರೆ ಈ ಚೆಕ್ಕುಗಳು ಮಾನ್ಯವಾಗಲಿಲ್ಲ. ಹಾಗಾಗಿ 25.02.2010ರಂದು 1881ರ 'ಸಂಧಾನ ಮಾಡಬಹುದಾದ ವಿಷಯಗಳ ಕಾಯ್ದೆ' ಯನ್ವಯ ಕ್ರಿಮಿನಲ್ ಮೊಕದ್ದಮೆಯನ್ನು ಹೂಡಲಾಯಿತು. ಇದೀಗ ಪ್ರಕರಣವು ಚೀಫ್ ಮೆಟ್ರೋ ಪಾಲಿಟನ್ ನ್ಯಾಯಾಲಯ, ಬೆಂಗಳೂರು ಇವರ ಮುಂದೆ ಬಾಕಿಯಾಗಿ ಉಳಿದಿದೆ. 8ನೇ ಆಗಸ್ಟ 2019ರಂದು ನಡೆದ ವಿಚಾರಣೆಯಲ್ಲಿ ಆರೋಪಿ ಪರ ವಕೀಲರು ಆರೋಪಿಯ ಮೃತರಾಗಿದ್ದರೆಂದು ಹಾಗೂ ಮರಣ ಪ್ರಮಾಣ ಪತ್ರವನ್ನು ಮುಂದಿನ ವಿಚಾರಣೆಯಲ್ಲಿ ಮಂಡಿಸುವುದಾಗಿ ತಿಳಿಸಿದರು.

ಎಂಎಂಐ ಸರಬರಾಜು ಮಾಡಲು ವಿಫಲವಾದಾಗ ಕಂಪನಿಯು ಮತ್ತೊಬ್ಬ ಸರಬರಾಜುದಾರ, ಸರಂ ಎಕ್ಸ್‌ಪೋರ್ಟ್ಸ್ ಇವರನ್ನು ವಿಚಾರಿಸಲಾಗಿ ಅವರು ಹಿಂದಿನ ನಿಯಮ ಮತ್ತು ಷರತ್ತುಗಳ ಮೇರೆಗೆ ಒಪ್ಪಿದರು. ಎಂಎಸ್‌ಐಎಲ್ ಹೊಸ ಸರಬರಾಜುದಾರರಿಗೆ ರೂ.4.5 ಕೋಟಿ ಮುಂಗಡ ನೀಡಿತು ಮತ್ತು 46,846.48 ಎಂಟಿ ಅದಿರು ತುಂಬಲಾದ ಹಡಗು 29 ದಿನಗಳ ವಿಳಂಬದ ನಂತರ 14ನೇ ಜನವರಿ 2010ರಂದು ಪಯಣ ಮಾಡಿತು. ಭಾರತ ಸರ್ಕಾರವು ಸುಂಕದಲ್ಲಿ ಹೆಚ್ಚಳ ಮಾಡಿದ್ದರಿಂದಾಗಿ ಎಂಎಸ್‌ಐಎಲ್ ರೂ.32,22,680/-ರ ಹೆಚ್ಚುವರಿ ಸೀಮಾ ಸುಂಕದ ಶುಲ್ಕವನ್ನು ಭರಿಸಬೇಕಾಯಿತು. ಸರಂ ಎಕ್ಸ್‌ಪೋರ್ಟ್‌ನಿಂದ ಸರಬರಾಜು, ಸರಬರಾಜದ ಅದಿರು ಹಡಗು ತುಂಬುವಿಕೆಗೆ ಲಭ್ಯವಾದ ಅವಧಿ ಕೊನೆಗೊಂಡಿದ್ದರಿಂದ ಅದಿರು ಪರೀಕ್ಷಾ ವರದಿಗೆ ಕಾಯಲು ಸಾಧ್ಯವಾಗದೆ ತುರ್ತು ಆಧಾರದಲ್ಲಿ ರವಾನೆ ಮಾಡಲ್ಪಟ್ಟಿತು ಹಾಗೂ ತದನಂತರ ಬಂದ ಪರೀಕ್ಷಾ ವರದಿಯು ಷಿಪ್ಮೆಂಟ್‌ನ ಎಫ್‌ಇ ಒಳಾಂಶವು ಕೇವಲ 49.37% ಎಂಬುದಾಗಿ ತಿಳಿಸಿತು.

ಕಂಪನಿಯು ಖರೀದಿದಾರರ ಮೇಲೆ ಇನ್‌ವಾಯ್ಸ್ ಸಲ್ಲಿಸಿತು ಹಾಗೂ ಎಲ್‌ಸಿ ಮೂಲಕ ದಸ್ತಾವೇಜುಗಳ ವ್ಯವಹಾರ ನಡೆಸಿತು. ಇದು (ಎಲ್‌ಸಿ) ರದ್ದಾಗಿದ್ದರಿಂದಾಗಿ ವ್ಯವಹರಣೆ ಮಾಡಲಾಗಲಿಲ್ಲ. ಹಾಂಗ್ ಕಾಂಗ್ ಬಂದರಿಗೆ ಸರಕು ತಲುಪಿದ ನಂತರ ಚೈನಾದ ಗುಣಮಟ್ಟ ಪರಿಶೀಲನ ವರದಿಯು ಅದಿರಿನ ಎಫ್‌ಇ ಒಳಾಂಶವು 45.9% ನ ಎಂದು ತಿಳಿಸಿತು. ಹಾಗಾಗಿ ಖರೀದಿದಾರ ಅದಿರನ್ನು ಕಡಿಮೆ ಗುಣಮಟ್ಟದ್ದೆಂದು ತಿರಸ್ಕರಿಸಿದರು. ತದನಂತರ ಸಾಗರೋತ್ತರ ಖರೀದಿದಾರರು ಅದಿರನ್ನು ಮಾರಾಟ ಮಾಡಲು ಮತ್ತು ಅದರಿಂದ ಹಣ ಪಡೆಯಲು ಅಧಿಕಾರ ನೀಡಲಾಯಿತು. ಅದಿರನ್ನು ಸಿಎಫ್ ಆರ್ ಆಧಾರದ ಮೇರೆ ಪ್ರತಿ ಎಂಟಿಗೆ ಯುಎಸ್ ಡಾಲರ್ 35 ರಂತೆ ಮಾರಾಟ ಮಾಡಲಾಯಿತು ಹಾಗೂ ದಿನಾಂಕ 23ನೇ ಮಾರ್ಚ್ 2010ರ ಇನ್ ವಾಯ್ಸ್ ಅನುಸಾರ ಯುಸ್ ಡಾಲರ್ 16.3962680 ಲಭ್ಯವಾಯಿತು. ಎಂಎಸ್‌ಐಎಲ್ ವಿದೇಶಿ ಖರೀದಿದಾರರಿಗೆ ಮಾರಾಟ ದ ಹಣ ಜಮೆ ಮಾಡಲು ಕೋರಿತು. ಇದಕ್ಕೆ ಪ್ರತಿಯಾಗಿ ಅವರು ಅವರ ಕ್ಲೈಮಿನ ಬಗ್ಗೆ ಕಂಪನಿಗೆ ಯುಎಸ್ ಡಾಲರ್ 24,25,051.88 ಕ್ಲೈಮ್ ಮಾಡಿದರು. ಇದನ್ನು ಕಂಪನಿ ಒಪ್ಪಲಿಲ್ಲ.

ಮೇಲಿನ ಅಂಶಗಳನ್ನು ಪರಿಗಣಿಸಿ ಮತ್ತು ಯುಎಸ್ ಡಾಲರ್ 1=ರೂ.46/- ವಿನಿಮಯ ದರ ಮತ್ತು ಯುಎಸ್ ಡಾಲರ್ 24ರಂತೆ ಗೋವಾದಿಂದ ಚೀನಾ ನಡುವಿನ ಬಾಡಿಗೆ ಸೇರಿಸಿ ಕಂಪನಿಯು ಆ ವಿದೇಶಿ ಕಂಪನಿಯ ವಿರುದ್ಧ ಮಾರಾಟ, ಮಾರಾಟ ವೆಚ್ಚ, ಗುತ್ತಿಗೆ ಕ್ಲೈಮ್‌ಗಳನ್ನು ಲೆಕ್ಕ ಹಾಕಿ ಮತ್ತು ಕಂಪನಿಯ ಕ್ಲೈಮ್‌ಗಳು 31ನೇ ಮಾರ್ಚ್ 2010ಕ್ಕೆ ಕೊನೆಗೊಂಡ ವರ್ಷದ ಪುಸ್ತಕಗಳಲ್ಲಿ ತಾತ್ಕಾಲಿಕ ವ್ಯವಸ್ಥೆ ಮಾಡಲಾಗಿದೆ. ಚೀನಾದಲ್ಲಿ ಮಾಡಲಾದ ಖರ್ಚುಗಳು ಮತ್ತು ಎಫ್‌ಇಎಂಎ ಅನ್ವಯದ ಸಂಬಂಧದಲ್ಲಿ ಸಾಗರೋತ್ತರ ಖರೀದಿದಾರರ ಕ್ಲೈಮ್‌ಗಳನ್ನು ಈ ಹಂತದಲ್ಲಿ ಪರಿಗಣಿಸಿಲ್ಲ. ಫ್ರೇಮರಿ ಹೋಲ್ಡಿಂಗ್ಸ್ ಲಿಮಿಟೆಡ್ ಕಬ್ಬಿಣದ ಅದಿರು ಮಾರಾಟದ ಮೂಲಕದ ಯುಎಸ್ ಡಾಲರ್ 5,02,071 ಉತ್ಪತ್ತಿ ಸರಿಹೊಂದಿಸಿಕೊಂಡು ನಂತರ ಯುಎಸ್ ಡಾಲರ್ 19,74,545/- (ರೂ.11,79,98,809/- ಯುಎಸ್ ಡಾಲರ್ ರೂ.59.76/- ವಿನಿಮಯ ದರ ಪರಿಗಣಿಸಿ) ಕ್ಲೈಮ್ ಮಾಡಿದೆ. ಮಧ್ಯಸ್ಥಿಕೆ ಐತೀರ್ಪಿನ ಅನುಸಾರ ಎಂಎಸ್‌ಐಎಲ್ ಫ್ರೆಮರಿ ಹೋಲ್ಡಿಂಗ್ಸ್ ಲಿಮಿಟೆಡ್‌ಗೆ ಯುಎಸ್ ಡಾಲರ್ 18,80,851 (ರೂ.12,46,72,209) ಮತ್ತು ರೂ.2,77,72,466/- ಮೊಬಲಗಿನ ಬಡ್ಡಿ ಪಾವತಿಸಲು ಹೊಣೆಯಾಗಿದೆ.

ಕಂಪನಿಯು ವಿಳಂಬ ಶುಲ್ಕ ಮತ್ತು ಸರಕು ಸಾಗಣೆಗೆ ಸಂಬಂಧಪಟ್ಟಂತೆ ಉಂಟಾದ ವೆಚ್ಚ ಯುಎಸ್ ಡಾಲರ್ 17,07,100/- (ರೂ. 10,68,47,359/-) ರಿಂದ ಅದಿರು ಮಾರಾಟದಿಂದ ದೊರೆತ ಯುಎಸ್ ಡಾಲರ್ 16,39,627ಕ್ಕೆ ಮೊಬಲಗು (ರೂ.44,72,429/-) ಗಳನ್ನು ಕಳೆದು ಯುಎಸ್ ಡಾಲರ್ 67,473ಗಳ ಹೊಣೆಗಾರಿಕೆ ಅಂಗೀಕರಿಸಿದೆ. ಯುಎಸ್ ಡಾಲರ್ 18,13,378/- (ಡಾಲರ್ ಒಂದಕ್ಕೆ ರೂ.66.285 ಯುಎಸ್ ಡಾಲರ್ ವಿನಿಮಯ ದರ

ಪರಿಗಣಿಸಿ ರೂ.12,01,99,779/-) ಉಳಿಕೆ ಮೊಬಲಿಗಿಗೆ ಕಂಪನಿ ವಿವಾದ ಮಾಡಿದ್ದು, ಸಂಭಾವ್ಯ ಹೊಣೆಗಾರಿಕೆಯಡಿಯಲ್ಲಿ ತಿಳಿಯಪಡಿಸಲಾಗಿದೆ. ಮಧ್ಯಸ್ಥಿಕೆ ಐತೀರ್ಪು ರದ್ದುಗೊಳಿಸಲು ಸಿಟಿ ಸಿವಿಲ್ ನ್ಯಾಯಾಲಯ, ಬೆಂಗಳೂರು ಸಮ್ಮುಖದಲ್ಲಿ ಭಾರತೀಯ ಮಧ್ಯಸ್ಥಿಕೆ ಕಾಯ್ದೆಯ ಪ್ರಕರಣ 34ರನ್ವಯ ಸಲ್ಲಿಸಲಾದ ಅರ್ಜಿಯು 'ವಿಚಾರಣೆ' ಹಂತದಲ್ಲಿದೆ. ಮೇಲಿನ ವ್ಯವಹಾರಗಳಲ್ಲಿ ಕರ್ನಾಟಕ ವಿಧಾನಸಭೆಯ ಸಾರ್ವಜನಿಕ ಉದ್ದಿಮೆಗಳ ಬಗೆಗಿನ ಸಮಿತಿ ಮಾಡಿರುವ ಅಕ್ರಮಗಳ ವರದಿ ಹಿನ್ನೆಲೆಯಲ್ಲಿ ಕಂಪನಿಯು ವ್ಯಾಪ್ತಿಗೊಳಪಟ್ಟ ಪೊಲೀಸ್ ಠಾಣೆಯಲ್ಲಿ ಕ್ರಿಮಿನಲ್ ದೂರು ಸಲ್ಲಿಸಿದ್ದು, ಪೊಲೀಸರು ಪ್ರಕರಣದ ತನಿಖೆ ಮಾಡುತ್ತಿದ್ದಾರೆ. ಈ ಕ್ರಿಮಿನಲ್ ದೂರುಗಳ ಸಂಬಂಧದಲ್ಲಿ ಪೊಲೀಸರು ಆರೋಪಿ ಪಟ್ಟಿ ಸಿದ್ಧಪಡಿಸಿದ್ದು ಎಂಸಿಎಂಎಂ ನ್ಯಾಯಾಲಯ, ಬೆಂಗಳೂರು ಇಲ್ಲಿ ಮೊಕದ್ದಮೆ ಹೂಡಲಾಗಿದೆ.

iv) **ಸಣ್ಣ ಉಳಿತಾಯ ನಿರ್ದೇಶನಾಲಯ;**

ಪಿಂಚಣಿ, ಸಣ್ಣ ಉಳಿತಾಯಗಳು. ಸ್ವತ್ತು ಮೇಲ್ವಿಚಾರಣೆ ನಿರ್ದೇಶನಾಲಯದಿಂದ ಬಂದ ದಿನಾಂಕ 31ನೇ ಮಾರ್ಚ್ 2017ರ ಪತ್ರ ಸಂಖ್ಯೆ :ಪಿಆರ್ ಎಜಿ (ಜಿ ಮತ್ತು ಎಸ್‌ಎಸ್‌ಎ)/ಒಎಡಿ-ಐಐಐ/ಜಿ/2016-17/13ಕ್ಕೆ ಉಲ್ಲೇಖಿಸಿ ಲಾಟರಿ ಮಾರಾಟದಿಂದ ಬಂದ ಮೊತ್ತದಲ್ಲಿ ಕಡಿಮೆ ಮೊತ್ತ ಪಾವತಿ ಮಾಡಿದ್ದು, ಮತ್ತು ವಿಳಂಬ ಪಾವತಿಗೆ ಅದರ ಮೇಲಿನ ಬಡ್ಡಿ ಸೇರಿದಂತೆ ರೂ.46,09,86,366ಗಳ ಪಾವತಿ ಕೋರಿದ್ದ ಪತ್ರವು ದಿನಾಂಕ 20ನೇ ಜೂನ್ 2019ರ ಪತ್ರವೊಂದನ್ನು ಸ್ವೀಕರಿಸಲಾಯಿತು. ಈ ಸಂಬಂಧ ಕಂಪನಿಯು ಪೂರ್ಣ ಮತ್ತು ಅಂತಿಮ ಇತ್ಯರ್ಥವಾಗಿ 17ನೇ ಅಕ್ಟೋಬರ್ 2016ರಂದು ರೂ.3,52,60,961ಗಳನ್ನು ಪಾವತಿ ಮಾಡಿದ್ದಾಗಿ ಮತ್ತು ಈ ವಿಷಯಕ್ಕೆ ಸಂಬಂಧಿಸಿದಂತೆ ಇನ್ನೂ ಹೆಚ್ಚಿನ ಮೊತ್ತ(ಕ್ಲೇಮ್) ಪಾವತಿಗೆ ಬೇಡಿಕೆ ಸಲ್ಲಿಸುವಂತಿಲ್ಲ ಎಂದು ದಿನಾಂಕ:18.10.2016ರ ಪತ್ರದಲ್ಲಿ ತಿಳಿಸಿದೆ. ಈ ಪತ್ರವನ್ನು ಸಣ್ಣ ಉಳಿತಾಯ ನಿರ್ದೇಶನಾಲಯದಲ್ಲಿ ಸ್ವೀಕೃತಗೊಂಡಿದೆ. ಆದಾಗ್ಯೂ ಸದರಿ ಇಲಾಖೆಯು ಬಾಕಿ ಮೊತ್ತದ ಪಾವತಿಗೆ ಬೇಡಿಕೆ ಮಂಡಿಸುತ್ತಿದೆ. ಇದನ್ನು ಕಂಪನಿಯು ಸಂಭಾವ್ಯ ಬಾಧ್ಯತೆಯಲ್ಲಿ ವರದಿ ಮಾಡಿದೆ.

v) ಹಿಂದಿನ ವರ್ಷದಲ್ಲಿ ಮೆ|| ವೆಸ್ಕೆರ್ (ಇಂಡಿಯಾ) ಲಿ., ಸಂಸ್ಥೆಯು ಮಂಡಿಸಿದ್ದ ಕ್ಲೇಮ್(ಹಕ್ಕು) ಮೊತ್ತ ರೂ.1,19,23,000/- ಗಳನ್ನು ಸಂಭಾವ್ಯ ಬಾಧ್ಯತೆಯಡಿ ಬಹಿರಂಗಪಡಿಸಲಾಗಿದೆ. ಕಂಪನಿಯು ಸದರಿ ಕಂಪನಿಯ ವಿರುದ್ಧ 2015-16ರಲ್ಲಿ ಮಧ್ಯಸ್ಥಿಕೆ ಪ್ರಾಧಿಕಾರದಲ್ಲಿ ಮೊಕದ್ದಮೆ ಹೂಡಿದೆ. ಮಧ್ಯಸ್ಥಿಕೆ ಪ್ರಾಧಿಕಾರಿಯಿಂದ ಮಧ್ಯಸ್ಥಿಕೆ ಐತೀರ್ಪಿನಲ್ಲಿ ಮೊತ್ತ ತಿಳಿಸಿ ದಿನಾಂಕ:27.04.2016ರಂದು ಪ್ರಕರಣ ವಿಲೇವಾರಿ ಮಾಡಲಾಗಿದೆ. ಅದರಂತೆ ಮಧ್ಯಸ್ಥಿಕೆ ಪ್ರಾಧಿಕಾರಿಯು ಕಂಪನಿಯು ಮಂಡಿಸಿದ್ದ ಗುತ್ತಿಗೆ ಬಾಡಿಗೆ ಮೊತ್ತ ವೆಚ್ಚ ದಿನಾಂಕ:31.03.2019ರವರೆಗೆ ಅದರ ಮೇಲಿನ ಮೊತ್ತದಲ್ಲಿ ರೂ.155.59 ಲಕ್ಷಗಳಿಗೆ ಅನುಮತಿಸಿದೆ ಮತ್ತು ಇನ್ನುಳಿದ ರೂ.239.37 ಲಕ್ಷಗಳನ್ನು ವಜಾ ಮಾಡಿದೆ. ಮಧ್ಯಸ್ಥಿಕೆ ಪ್ರಾಧಿಕಾರಿಯ ಐತೀರ್ಪು ನೀಡುವಾಗ ವಿಂಡ್‌ವೀಲ್ ವರ್ಲೈನ್‌ಗಳ ವಿಲೇವಾರಿ ವಿಷಯವನ್ನು ಪರಿಗಣಿಸಿರುವುದಿಲ್ಲ. ಆದರೆ ಎಂಎಸ್‌ಐಎಲ್ ಮತ್ತು ಮೆ|| ವಾತಾ ಸ್ಮಾರ್ಟ್ ಲಿ. ಇವರಿಗೆ ಬಾಕಿ ಇರುವ ಮೊತ್ತವನ್ನು ಭದ್ರತಾ ಠೇವಣಿಯಿಂದ ಹೊಂದಾಣಿಕೆ ಮಾಡಿಕೊಳ್ಳುವಂತೆ ಆದೇಶಿಸಿದ್ದು, ಇದು ಗುತ್ತಿಗೆ ಒಪ್ಪಂದದನುಗುಣವಾಗಿ ಇರುವುದಿಲ್ಲ.

ಕಂಪನಿ ವಕೀಲರ ಅಭಿಪ್ರಾಯದ ಮೇರೆ ಕಂಪನಿಯು 27.04.2016ರ ಮೂಲ ಅರ್ಜಿ ಸಲ್ಲಿಸುವ ಮೂಲಕ ಘನ ಮದ್ರಾಸ್ ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಿತು. ವಿಷಯವು ಘನ ಮದ್ರಾಸ್ ಉಚ್ಚ ನ್ಯಾಯಾಲಯದಲ್ಲಿ ವಿಚಾರಣೆಯಾಗುತ್ತಿದೆ. ಜೊತೆಗೆ ಮತ್ತೊಂದು ಸಂಬಂಧಿತ ವಿಷಯಗಳಲ್ಲಿ ಉಚ್ಚ ನ್ಯಾಯಾಲಯ ನೀಡಿದ ಆದೇಶಗಳನ್ನು ಪ್ರಶ್ನಿಸಲು ಕಳಚಲಾದ ವಿಂಡ್‌ಮಿಲ್ ಟರ್ಬೈನುಗಳ ತಪಸೀಲು ಪಟ್ಟಿಯನ್ನು ಪಡೆಯಲು ವೆಸ್ಕೇರ್‌ಗೆ ಏಕಪಕ್ಷೀಯವಾಗಿ ಅವಕಾಶ ನೀಡಿರುವುದಕ್ಕೆ ನ್ಯಾಯಾಲಯದ ಮುಂದೆ ಅರ್ಜಿಯೊಂದನ್ನು ಸಲ್ಲಿಸಲಾಯಿತು. ಮುಂದಿನ ವಿಚಾರಣೆ ದಿನಾಂಕವನ್ನು ಈವರೆಗೆ ತಿಳಿಸಲಾಗಿಲ್ಲ. ಮದ್ರಾಸ್ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಲಾದ ಮೊಕದ್ದಮೆಯ ಫಲಿತಾಂಶದ ಅನಿಶ್ಚಿತತೆ ಹಿನ್ನೆಲೆಯಲ್ಲಿ ಕಂಪನಿಯ ಪುಸ್ತಕಗಳಲ್ಲಿ ಯಾವುದೇ ಕ್ಲೇಮುಗಳನ್ನು ಗುರುತಿಸಿಲ್ಲ. ವಿಷಯವನ್ನು ಘನ ಮದ್ರಾಸ್ ಉಚ್ಚ ನ್ಯಾಯಾಲಯವು ಹಲವಾರು ಸಂದರ್ಭಗಳಲ್ಲಿ ವಿಚಾರಣೆ ಮಾಡಿದ್ದು ಇದೀಗ ವಿಷಯವು ನವೆಂಬರ್/ಡಿಸೆಂಬರ್ 2019ರ ಅವಧಿಯಲ್ಲಿ ಹೆಚ್ಚಿನ ವಿಚಾರಣೆಗೆ ನಿಗದಿಯಾಗಿದೆ.

**vi ಆದಾಯ ತೆರಿಗೆ ಇಲಾಖೆ ಆದೇಶದ ಅನುಸಾರ ಈ ಕೆಳಗೆ ತಿಳಿಸಿರುವುವುಗಳು ತೆರಿಗೆ ತಗಾದೆಗಳಾಗಿವೆ.**

**(ನಿರ್ದಿಷ್ಟಪಡಿಸದಿರುವೆಡೆಯಲ್ಲಿ ಎಲ್ಲಾ ಮೊಬಲಗುಗಳು ರೂಪಾಯಿಗಳಲ್ಲಿವೆ)**

| ಕರ ನಿರ್ಧರಣ ವರ್ಷ | ಮೊಬಲಗು (ರೂ.ಗಳಲ್ಲಿ) | ಷರಾ |
|---|---|---|
| 2010-11 | 34,245,480 | ಐಟಿಎಟಿ ಹೊಸ ಪರಿಗಣನೆಗಾಗಿ ವಿಷಯವನ್ನು ಸಿಐಟಿ(ಎ)ಗೆ ವಾಪಸ್ಸು ಕಳುಹಿಸಿದೆ. |
| 2014-15 | 2,200,000 | ಆದಾಯ ತೆರಿಗೆ ಇಲಾಖೆಯು ಸಿಐಟಿ ಆದೇಶದ ವಿರುದ್ಧ ಮನವಿ ಸಲ್ಲಿಸಿದೆ. ರಜೆ ವೇತನ ಅವಕಾಶ |
| 2015-16 | 1,865,460 | ಸಿಐಟಿ(ಎ)ನೊಂದಿಗೆ ಮೇಲ್ಮನವಿ ಬಾಕಿ ಉಳಿದಿದೆ. |
| **ಒಟ್ಟು** | **38,310,940** | |

vii **ಸೇವಾ ತೆರಿಗೆ**

2002-03ರ ಹಲವಾರು ವರ್ಷಗಳಿಗೆ ಸಿಇಎಸ್‌ಟಿಎಟಿ ಮುಂದೆ ಪ್ರಶ್ನಿಸಲಾದ ಸೇವಾ ತೆರಿಗೆಯ ಒಟ್ಟು ಮೊಬಲಗು ರೂ.2,67,00,000/- ಆಗಿದೆ. ಆದಾಗ್ಯೂ, ಕಂಪನಿಯು ಈ ಬಾಕಿಗಳ ಬಗ್ಗೆ ರೂ.91,00,000ಗಳನ್ನು ಜಮೆ ಮಾಡಿದೆ. ಉಳಿಕೆ ಮೊಬಲಗನ್ನು 'ಸಂಭಾವ್ಯ ಹೊಣೆಗಾರಿಕೆ' ಅಡಿಯಲ್ಲಿ ತೋರಿಸಲಾಗಿದೆ.

MSIL

**ಬಿ. ಸಂಪೂರ್ಣ ಸ್ವಾಮ್ಯದ ಸಹಾಯಕ ಸಂಸ್ಥೆ: ಎಂಸಿ ಅಂಡ್ ಎ**

i. ಬ್ಯಾಂಕ್ ರೂ.1,04,17,481/-(2018 ರೂ.1,04,78,281/-) ಪ್ರಸಾರ ಭಾರತಿ, ನೈರುತ್ಯ ರೈಲ್ವೆ ಹುಬ್ಬಳ್ಳಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕಗಳ ಇಲಾಖೆ, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ, ನವ ಮಂಗಳೂರು ಪೋರ್ಟ್ ಟ್ರಸ್ಟ್, ಮೈಸೂರ್ದು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕಂಟ್ರೋಲರ್, ಯುಎಎಸ್, ಧಾರವಾಡ ಇವರಿಗೆ ವ್ಯವಹಾರಕ್ಕಾಗಿ ನೀಡಿದ ಖಾತರಿಗಳಾದ ಬ್ಯಾಂಕ್ ಖಾತರಿಯಾಗಿದ್ದು ಇದಕ್ಕೆ ಕಂಪನಿಯು ಸಂಭಾವ್ಯವಾಗಿ ಹೊಣೆಯಾಗಿರುತ್ತದೆ. ಈ ಖಾತರಿಗಳನ್ನು ರೂ.1,04,73,667 ಮೌಲ್ಯದ ಬ್ಯಾಂಕ್ ಠೇವಣಿಗಳ ಅಡಮಾನದ ಅನ್ವಯ ನೀಡಲಾಗಿರುತ್ತದೆ.

ii. ಕಂಪನಿಯು 23ನೇ ಜುಲೈ 1984ರಿಂದ ಶೇ.25ರಷ್ಟು ಬಾಕಿ ವೇತನಗಳೊಂದಿಗೆ ಈ ಹಿಂದಿನ ನೌಕರ ದಿವಂಗತ ಹೆಚ್.ಎಸ್. ಹನುಮಂತಯ್ಯ ಇವರನ್ನು ಮರು ನೇಮಕ ಮಾಡಿಕೊಳ್ಳಲು ನಿರ್ದೇಶನ ನೀಡಿ ಕಾರ್ಮಿಕ ನ್ಯಾಯಾಲಯವು ನೀಡಿದ ತೀರ್ಪನ್ನು ಎತ್ತಿ ಹಿಡಿದ ಕರ್ನಾಟಕದ ಘನ ಉಚ್ಚ ನ್ಯಾಯಾಲಯದ ಆದೇಶದ ವಿರುದ್ಧ ಘನ ಸರ್ವೋಚ್ಚ ನ್ಯಾಯಾಲಯದ ಮುಂದೆ (ಸಿವಿಲ್ ಮೇಲ್ಮನವಿ ಸಂಖ್ಯೆ (ಎಸ್)9320/2010) ವಿಶೇಷ ಅನುಮತಿ ಅರ್ಜಿ ಸಲ್ಲಿಸಿದೆ. ವರ್ಷಾವಧಿಯಲ್ಲಿ ಸರ್ವೋಚ್ಚ ನ್ಯಾಯಾಲಯವು ದಿನಾಂಕ 12ನೇ ಅಕ್ಟೋಬರ್ 2017ರ ತನ್ನ ಆದೇಶದಲ್ಲಿ ವಿಷಯದಲ್ಲಿ ಯಾವುದೇ ಯೋಗ್ಯತೆಯಿಲ್ಲವೆಂದು ಅಭಿಪ್ರಾಯಿಸಿದೆ. ಜೊತೆಗೆ ಪ್ರತಿವಾದಿಯ ವಿರುದ್ಧ ಮೇಲ್ಮನವಿ ಕೊನೆಗೊಂಡಿದೆ. ತತ್ಪರಿಣಾಮವಾಗಿ ಮೇಲ್ಮನವಿ ಕೊನೆಗೊಂಡು ವಜಾಗೊಂಡಿದೆ. ಕಂಪನಿಯು ಭಾರತದ ಘನ ಸರ್ವೋಚ್ಚ ನ್ಯಾಯಾಲಯದ ಆದೇಶದನುಸಾರ ಕಂಪನಿ ಕೈಗೊಳ್ಳಬೇಕಾದ ಮುಂದಿನ ಕ್ರಮದ ಬಗ್ಗೆ ವಕೀಲರ ಅಭಿಪ್ರಾಯ ಕೇಳಿತು. ವಕೀಲರು ಮೇಲ್ಮನವಿ ಬಾಕಿಯಿರುವ ಅವಧಿಯಲ್ಲಿ ಪ್ರತಿವಾದಿ ಮೃತರಾಗಿರುವ ಬಗೆಗಿನ ಅಂಶವನ್ನು ದಾಖಲಿಸಿ ವಿಶೇಷ ಅನುಮತಿ ಅರ್ಜಿ ವಿಲೇವಾರಿಯಾಗಿರುವುದಾಗಿ ಅಭಿಪ್ರಾಯಿಸಿದರು. ಅತನ ಕಾನೂನು ಅನುಸಾರದ ಪ್ರತಿನಿಧಿಗಳು ಅಥವಾ ಅವಲಂಬಿತರು ಆತನ ಪರವಾಗಿ ಯಾವುದೇ ಕ್ಲೇಮು ಮಾಡಿದ್ದೆ ಆದ ಹಂತದಲ್ಲಿ ವಿಷಯದ ಬಗ್ಗೆ ಕೈಗೊಳ್ಳಬಹುದಾದ ಮುಂದಿನ ಕ್ರಮದ ಬಗ್ಗೆ ಹೆಚ್ಚಿನ ಅಭಿಪ್ರಾಯ ಕೇಳಬಹುದಾಗಿದೆ. ತಮ್ಮ ಅವಗಾಹನೆಗಾಗಿ ಅಭಿಪ್ರಾಯದ ಪ್ರತಿಯೊಂದನ್ನು ಇದರೊಂದಿಗೆ ಲಗತ್ತಿಸಲಾಗಿದೆ. ಇದುವರೆಗೆ ಕಂಪನಿಯು ಆತನ ಕಾನೂನು ಅನುಸಾರದ ಪ್ರತಿನಿಧಿಗಳು ಅಥವಾ ಅವಲಂಬಿತರಿಂದ ಯಾವುದೇ ಕ್ಲೈಮ್ ಸ್ವೀಕರಿಸಿರುವುದಿಲ್ಲ.

iii. ವಾಣಿಜ್ಯ ತೆರಿಗೆ ಅಧಿಕಾರಿ, ವಾಣಿಜ್ಯ ತೆರಿಗೆ ಇಲಾಖೆ ಇವರು 2010-11 ರಿಂದ 2013-14ರ (ನವೆಂಬರ್ 2013ರವರೆಗೆ) ಆರ್ಥಿಕ ವರ್ಷಕ್ಕೆ 25ನೇ ನವೆಂಬರ್ 2013ರಂದು ಪರಿಶೀಲನೆ ನಡೆಸಿದರು ಹಾಗೂ ಹಿಂಬರಹದಲ್ಲಿ ತಿಳಿಸಿರುವ ಅಭಿಪ್ರಾಯಗಳಿಗೆ ಉತ್ತರಿಸಲು ಅವಕಾಶ ನೀಡಿ ಮಾರಾಟಗಾರರು ಪಾವತಿಸಿದ ಕಂಪನಿಯಿಂದ ಪಡೆದುಕೊಂಡ ಒಳ ಸೇರಿಕೆ ತೆರಿಗೆ ಜಮೆ (ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್)ಗೆ ಸಂಬಂಧಿಸಿದಂತೆ ದಿನಾಂಕ:26ನೇ ಮೇ 2014ರ ಹಿಂಬರಹ ನೀಡಿದರು. ಕಂಪನಿಯು ಸಂಬಂಧಿಸಿದ ಮಾರಾಟಗಾರರು ನೀಡಿದ ಉತ್ತರವನ್ನು ಸಲ್ಲಿಸಿದೆ. ವರ್ಷಾವಧಿಯಲ್ಲಿ ಸಿಟಿ ಒಪ್ಪಂದ 2010-11ರ ವರ್ಷಕ್ಕೆ ಲೆಕ್ಕಪರಿಶೋಧನೆ ನಡೆಸಲಾಗಿದ್ದು 2010-11ರ ವರ್ಷಾವಧಿಯಲ್ಲಿ ಕಂಪನಿಯು ಪಡೆದುಕೊಂಡ ಒಳ ಸೇರಿಕೆ ತೆರಿಗೆ ಜಮೆಗೆ (ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್) ಅವರ ಕಡೆಯಿಂದ ಮೌಲ್ಯವರ್ಧಿತ ತೆರಿಗೆ ಪಾವತಿಸುವಲ್ಲಿ ಮಾರಾಟಗಾರರು ತಪ್ಪಿತಸ್ಥರಾಗಿರುವುದರ ಪರಿಣಾಮ ರೂ.22,20,488ರ ಬಡ್ಡಿ ಮತ್ತು ದಂಡ ಶುಲ್ಕ ಸೇರಿದಂತೆ ರೂ.41,02,257 ಪಾವತಿಸಬೇಕೆಂದು 2003ರ ಕೆವಿಐಟಿ ಕಾಯ್ದೆಯ ಪ್ರಕರಣ 36 ಓದಿಕೊಂಡಂತೆ ಪ್ರಕರಣ 39(1)ಅನ್ವಯ ಆದೇಶ ನೀಡಿತು. ಕಂಪನಿಯು ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಮೇಲ್ಮನವಿಗಳು), ನಗರ ವಿಭಾಗ-1, ಬೆಂಗಳೂರು ಇವರ ಮುಂದೆ ಮೇಲ್ಮನವಿ ಸಲ್ಲಿಸಿತು. ಮತ್ತು ಪ್ರತಿಭಟನೆ ಮೇರೆ ರೂ.6,12,537/- ಪಾವತಿಸಿತು. ಒಟ್ಟಾರೆ ಮೊಬಲಗನ್ನು ಚಾಲ್ತಿ ಸ್ವತ್ತುಗಳಡಿಯಲ್ಲಿ ತೋರಿಸಲಾಗಿದ್ದು, ಅದರಂತೆ ಪುಸ್ತಕಗಳಲ್ಲಿ ಯಾವುದೇ ಏರ್ಪಾಡು ಮುಂದುವರಿಸಿಲ್ಲ.

iv. ಆಯವ್ಯಯ ಪಟ್ಟಿಯ ನಂತರ ದಿನಾಂಕ 29ನೇ ಜುಲೈ 2019ರ ತಗಾದೆ ನೋಟೀಸು ಸಂಖ್ಯೆ: 197709736ರ ಅನುಸಾರ ಇಲಾಖೆಯು 2014-15ರ ಆರ್ಥಿಕ ವರ್ಷಕ್ಕೆ ಅನುಕ್ರಮವಾಗಿ 2003ರ ಕೆವಿಎಟಿ ಕಾಯ್ದೆಯ ಪ್ರಕರಣ 3(1), 72(2) ಮತ್ತು 36(1)ರನ್ವಯ ಉದ್ದೇಶಿತ ಹೆಚ್ಚುವರಿ ಹೊಣೆಗಾರಿಕೆ ಮೇಲೆ ರೂ.27,126ರ 10% ದಂಡ ಶುಲ್ಕ ಮತ್ತು ರೂ.2,15,944/-ರ ಪ್ರತಿ ತಿಂಗಳ 1.5% ಬಡ್ಡಿಯೊಂದಿಗೆ ರೂ.2,71,258 ಹೆಚ್ಚುವರಿ ತೆರಿಗೆ ಹೊಣೆಗಾರಿಕೆಯನ್ನು ವಿಧಿಸಲು ಮತ್ತು ರೂ.10,30,023/-ರ ಮರು ಪಾವತಿಯ ಕ್ಲೈಮ್ ತಿರಸ್ಕರಿಸಲು ತನ್ಮೂಲಕ ಉದ್ದೇಶಿಸಿದೆ.

v. ಆಯವ್ಯಯ ಪಟ್ಟಿಯ ನಂತರ ದಿನಾಂಕ 10ನೇ ಏಪ್ರಿಲ್ 2019ರ ತಗಾದೆ ನೋಟೀಸು ಸಂಖ್ಯೆ:14263741 ರ ಅನ್ವಯ ಇಲಾಖೆಯು 2013-14ರ ಆರ್ಥಿಕ ವರ್ಷಕ್ಕೆ ಅನುಕ್ರಮವಾಗಿ 2003ರ ಕೆವಿಎಟಿ ಕಾಯ್ದೆಯ ಪ್ರಕರಣ 3(1), 3(2), 72(2) ಮತ್ತು 36(1) ರನ್ವಯ ಉದ್ದೇಶಿತ ಹೆಚ್ಚುವರಿ ಹೊಣೆಗಾರಿಕೆ ಮೇಲೆ ರೂ.72,62,792ರ ಪ್ರತಿ ತಿಂಗಳ ಶೇ.1.5ರ ಬಡ್ಡಿ ಮತ್ತು ರೂ.7,46,049ರ ಶೇ.10ರಷ್ಟು ದಂಡ ಶುಲ್ಕದೊಂದಿಗೆ ರೂ.74,60,493ರ ಹೆಚ್ಚುವರಿ ತೆರಿಗೆ ಹೊಣೆಗಾರಿಕೆಯನ್ನು ತನ್ಮೂಲಕ ಉದ್ದೇಶಿಸಿದೆ.

vi. ಕಂಪನಿಯು ಪ್ರತಿವಾದಿ 1 (ಕಾರ್ಯದರ್ಶಿ, ಪಶು ಸಂಗೋಪನೆ ಮತ್ತು ಮೀನುಗಾರಿಗೆ ಇಲಾಖೆ) ಪ್ರತಿವಾದಿ 2 (ಆಯುಕ್ತರು, ಪಶು ಸಂಗೋಪನೆ ಮತ್ತು ಮೀನುಗಾರಿಕೆಗಳ ಇಲಾಖೆ) ಪ್ರತಿವಾದಿ 3 (ವ್ಯವಸ್ಥಾಪಕ ನಿರ್ದೇಶಕರು, ಕಂಪನಿ) ವಿರುದ್ಧ ಶ್ರೀ ರಮೇಶ್ (ದೂರುದಾರರು) ಹೂಡಿದ್ದ ಮೊಕದ್ದಮೆಗೆ 16 ಜನವರಿ 2017ರಂದು ಘನ ಸಿವಿಲ್ ನ್ಯಾಯಾಲಯ, ಬೆಂಗಳೂರು ಇವರು ಹೊರಡಿಸಿದ ಆದೇಶ ಸ್ವೀಕರಿಸಿದೆ. ಸಿವಿಲ್ ನ್ಯಾಯಾಲಯವು ಎಲ್ಲಾ ಪ್ರತಿವಾದಿಗಳ ವಿರುದ್ಧ ಡಿಕ್ರಿ ಮಾಡಿ ಆದೇಶದ ದಿನಾಂಕದಿಂದ ನಾಲ್ಕು ತಿಂಗಳೊಳಗೆ ಸದರಿ ಮೊಬಲಗು ವಸೂಲು ಆಗುವವರೆಗೂ ಶೇ.9ರಂತೆ ಮುಂದಿನ ಬಡ್ಡಿ ಜೊತೆಗೆ ರೂ.2,82,13,003/- ಪಾವತಿಸಲು ಎಲ್ಲಾ ಪ್ರತಿವಾದಿಗಳು ಜಂಟಿಯಾಗಿ ಬಾಧ್ಯಸ್ಥರೆಂದು ಆದೇಶಿಸಿದೆ.

ಡಿಕ್ರಿದಾರರು ಎಂದರೆ ಮೆ॥ ಪ್ರಜ್ವಲ್ ಅಸೋಸಿಯೇಟ್ಸ್ ಮಾಲೀಕರಾದ ಶ್ರೀ ರಮೇಶ್ ಇವರು ಎಲ್ಲಾ ಪ್ರತಿವಾದಿಗಳಿಂದ ಡಿಕ್ರಿ ಆದ ಮೊಬಲಗು ವಸೂಲಿ ಮಾಡಲು ಜನವರಿ 2018ರ ತಿಂಗಳಿನಲ್ಲಿ ಜಾರಿ ಅರ್ಜಿ ಸಂಖ್ಯೆ: 147/2018 ಸಲ್ಲಿಸಿರುತ್ತಾರೆ. ಈ ಪ್ರಯುಕ್ತ ನ್ಯಾಯಾಲಯದ ಆದೇಶದ

ಅನುಸಾರ ಮೊಬಲಗನ್ನು ಬಿಡುಗಡೆ ಮಾಡಲು ಇತರೆ ಪ್ರತಿವಾದಿಗಳಿಗೆ ಕಂಪನಿಯು ಹಲವಾರು ಪತ್ರಗಳನ್ನು ಬರೆದಿದೆ. ನ್ಯಾಯಾಲಯದ ಆದೇಶದ ಅನುಸಾರ ಇತರೆ ಪ್ರತಿವಾದಿಗಳು ಡಿಕ್ರಿದಾರರಾದ ಮೆ|| ಪ್ರಜ್ವಲ್ ಅಸೋಸಿಯೇಟ್ಸ್ ಮಾಲೀಕರಾದ ಶ್ರೀ ರಮೇಶ್ ರವರಿಗೆ ರೂ.140.00 ಲಕ್ಷಗಳ ಮೊಬಲಗನ್ನು ನೇರವಾಗಿ ಬಿಡುಗಡೆ ಮಾಡಿದ್ದಾರೆ.

ಕಂಪನಿಯು ಈ ಬಗ್ಗೆ ಇತರೆ ಪ್ರತಿವಾದಿಗಳಿಂದ ದಿನಾಂಕ 23ನೇ ಮಾರ್ಚ್ 2018ರ ಪತ್ರವೊಂದನ್ನು ಸ್ವೀಕರಿಸಿದೆ. ಇತರೆ ಪ್ರತಿವಾದಿಗಳು 04ನೇ ಏಪ್ರಿಲ್ 2018ರಂದು ಕಂಪನಿಗೆ ರೂ.115.00 ಲಕ್ಷಗಳ ಬಾಕಿ ಮೊತ್ತವನ್ನು ಬಿಡುಗಡೆಗೊಳಿಸಿದ್ದಾರೆ. ತತ್ಪರಿಣಾಮವಾಗಿ ಕಂಪನಿಯು ಶೇ.10ರಂತೆ ಮತ್ತು ಶೇ.5 ರಂತೆ ಟಿಡಿಎಸ್ ಮತ್ತು ಏಜೆನ್ಸಿ ಕಮಿಷನ್ ಮುರಿದುಕೊಂಡ ನಂತರ 12ನೇ ಏಪ್ರಿಲ್ 2018ರಂದು ಒಂದು ಬದಿಯ ಯೂನಿಪೋಲ್ ಹೋರ್ಡಿಂಗ್ ಗಳನ್ನು ಸ್ಥಾಪಿಸುವ ಕಾಮಗಾರಿ ನಿರ್ವಹಿಸಿದ ಕಂಪನಿಯ ವ್ಯಾಪಾರ ಸಹವರ್ತಿಗಳಾದ ಮೆ|| ಪ್ರಜ್ವಲ್ ಅಸೋಸಿಯೇಟ್ಸ್ ಇವರಿಗೆ ರೂ.104.88 ಲಕ್ಷಗಳ ಮೊಬಲಗು ಬಿಡುಗಡೆ ಮಾಡಿದೆ. 24 ಹೋರ್ಡಿಂಗ್‌ಗಳನ್ನು ಸ್ಥಾಪಿಸಲು ಮತ್ತು ಸದರಿ 24 ಹೋರ್ಡಿಂಗ್‌ಗಳ ಸ್ಥಾಪನೆಗೆ ಸ್ಥಳಗಳನ್ನು ಸೂಚಿಸಲು ಕಾರ್ಯಾದೇಶ ನೀಡಿಕೆಗಾಗಿ ಘನ ನ್ಯಾಯಾಲಯದ ಆದೇಶ ಪಾಲನೆಗೆ ಸಂಬಂಧಿಸಿದಂತೆ ಆಯುಕ್ತರು, ಪಶು ಸಂಗೋಪನೆ ಮತ್ತು ಪಶುವೈದ್ಯ ಸೇವೆಗಳ ಇಲಾಖೆ ಇವರು 31ನೇ ಮೇ 2018ರ ಅವರ ಕಚೇರಿ ಕಾರ್ಯಾದೇಶದನ್ವಯ 24 ಹೋರ್ಡಿಂಗ್‌ಗಳನ್ನು ಸ್ಥಾಪಿಸಲು ತಿಳಿಸಿರುತ್ತಾರೆ ಮತ್ತು ಸದರಿ ಹೋರ್ಡಿಂಗ್‌ಗಳನ್ನು ಸ್ಥಾಪಿಸಲು ಸ್ಥಳಗಳನ್ನು ಸೂಚಿಸಿರುತ್ತಾರೆ. ಜೊತೆಗೆ ಪಾವತಿಗಾಗಿ ಸದರಿ 24 ಹೋರ್ಡಿಂಗ್‌ಗಳ ಸ್ಥಾಪನೆಗೆ ಬಿಲ್ ಸಲ್ಲಿಸುವಂತೆ ಕಂಪನಿಗೆ ತಿಳಿಸಿರುತ್ತಾರೆ. ಅದರಂತೆ ಕಂಪನಿಯು 24 ಹೋರ್ಡಿಂಗ್‌ಗಳನ್ನು ಸ್ಥಾಪಿಸಲು ಡಿಕ್ರಿದಾರರಿಗೆ (ಮೆ|| ಪ್ರಜ್ವಲ್ ಅಸೋಸಿಯೇಟ್ಸ್) ದಿನಾಂಕ 31ನೇ ಮೇ 2018ರ ಕಾರ್ಯಾದೇಶವನ್ನು ಕಂಪನಿ ನೀಡಿರುತ್ತದೆ. ಆರ್‌ಎಫ್‌ಎ 160/2019 (ಮೇಲಿನ ವಿಷಯಕ್ಕೆ ಸಂಬಂಧಿಸಿದ ಹೊಸ ಪ್ರಕರಣ). ಕಂಪನಿಯು ಪಾವತಿಗಾಗಿ ಆಯುಕ್ತರು, ಪಶುಸಂಗೋಪನೆ ಮತ್ತು ಪಶುವೈದ್ಯ ಸೇವೆಗಳ ಇಲಾಖೆ ಇವರಿಗೆ ರೂ.72/-ರ ಬಿಲ್ ಕಳುಹಿಸಿತು. ಆದಾಗ್ಯೂ, ಇಲಾಖೆಯ ಸದರಿ ಮೊಬಲಗನ್ನು ಬಿಡುಗಡೆ ಮಾಡಿತು. ಈ ಮಧ್ಯೆ ಡಿಕ್ರಿದಾರರು ತೀರ್ಪಿನನ್ವಯದ ಸಾಲಗಾರರನ್ನು ಬಂಧಿಸಲು ಮತ್ತು ಇರಿಸಿಕೊಳ್ಳಲು ಅರ್ಜಿಯೊಂದನ್ನು ಸಲ್ಲಿಸಿದರು. ಅದರಂತೆ ತೀರ್ಪಿನನ್ವಯದ ಸಾಲಗಾರರನ್ನು ಏಕೆ ಬಂಧಿಸಬಾರದು ಮತ್ತು ನ್ಯಾಯಾಲಯದ ಮುಂದೆ ಹಾಜರಾಗಲು ಆದೇಶಿಸಬಾರದು ಎಂಬ ಕಾರಣ ಕೇಳಿದ ನೋಟೀಸ್‌ನ್ನು ನ್ಯಾಯಾಲಯವು ಜಾರಿ ಮಾಡಿತು. ನ್ಯಾಯಾಲಯದ ಆದೇಶದಂತೆ ತೀರ್ಪಿನನ್ವಯದ ಎಲ್ಲಾ ಸಾಲಗಾರರು ನ್ಯಾಯಾಲಯದ ಮುಂದೆ ಹಾಜರಾದರು ಮತ್ತು ವಿಚಾರಣೆ ನಡೆಯುತ್ತಿದೆ. ಈ ನಡುವೆ 23.01.2019ರಂದು ಪಶು ಸಂಗೋಪನೆ ಮತ್ತು ಪಶು ವೈದ್ಯ ಸೇವೆಗಳ ಇಲಾಖೆಯು ಓಎಸ್ ಸಂಖ್ಯೆ:4946/2015ರಲ್ಲಿ ಹೊರಡಿಸಲಾದ ತೀರ್ಪು ಮತ್ತು ಡಿಕ್ರಿ ವಿರುದ್ಧ ಮೇಲ್ಮನವಿಯೊಂದನ್ನು ಸಲ್ಲಿಸಿತು. ಹಲವಾರು ವಿಚಾರಣೆಯ ನಂತರ ಘನ ನ್ಯಾಯಾಲಯವು ಇಲಾಖೆ ಡಿಕ್ರಿಯಾದ ಮೊಬಲಗಿಗಿಂತ ಮೀರಿ ಪಾವತಿಸಿದ ರೂ.56,387/- ಮತ್ತು ರೂ.32/-ರ ಪಾವತಿಸಬೇಕಾದ ಮೊಬಲಗಿನ ಪೈಕಿ ಬ್ಯಾಂಕ್ ಆಫ್ ಬರೋಡಾಗೆ ಡಿಕ್ರಿದಾರರು ಪಾವತಿಸಿದ ಬಡ್ಡಿ ಬಗ್ಗೆ ಕೆಳ ನ್ಯಾಯಾಲಯ ನೀಡಿದ ಐತೀರ್ಪಿನ ರೂ.29,58,003 ಮುರಿದುಕೊಳ್ಳಲು ಹಾಗೂ ಡಿಕ್ರಿದಾರರಿಗೆ ರೂ.41,85,610/- ಉಳಿಕೆ ಮೊಬಲಗನ್ನು ಪಾವತಿಸಲು ನಿರ್ದೇಶನ ನೀಡಿತು.ಜೊತೆಗೆ ಪಕ್ಷಗಳು ಅದರಂತೆ ವಿಷಯ ಇತ್ಯರ್ಥಪಡಿಸಿಕೊಳ್ಳಲು ಸಲಹೆ ನೀಡಿತು. 24.07.2019ರಂದು ಎಲ್ಲಾ ಪಕ್ಷಗಳು ಕರ್ನಾಟಕದ ಘನ ಉಚ್ಚ ನ್ಯಾಯಾಲಯ ನೀಡಿದ ಸಲಹೆಯನುಸಾರ ಇತ್ಯರ್ಥ ವರದಿಯ ಜಂಟಿ ಮೆಮೊ ಸಲ್ಲಿಸಿದವು. ಅದರಂತೆ ಘನ ನ್ಯಾಯಾಲಯವು ಪಶು ಸಂಗೋಪನೆ ಮತ್ತು ಪಶು ವೈದ್ಯ ಸೇವೆಗಳ ಇಲಾಖೆಯು ಸಲ್ಲಿಸಿದ್ದ ಮೇಲ್ಮನವಿಯನ್ನು ವಿಲೇವಾರಿ ಮಾಡಿದೆ. ಇತ್ಯರ್ಥದನ್ವಯ ವ್ಯವಸ್ಥಾಪಕ ನಿರ್ದೇಶಕರು, ಎಂಸಿ ಅಂಡ್ ಎ ಇವರು ಪಶುಸಂಗೋಪನೆ ಮತ್ತು ಪಶುವೈದ್ಯ ಸೇವೆಗಳ ಇಲಾಖೆ ಇವರಿಂದ ನ್ಯಾಯಾಲಯದ ಸಭಾಂಗಣದಲ್ಲಿ ರೂ.41,85,650/- ರ ಬ್ಯಾಂಕರ್ ಚೆಕ್ ಸ್ವೀಕರಿಸಿದ್ದಾರೆ. ಜೊತೆಗೆ ಕಂಪನಿಗೆ ಪಾವತಿಸಬೇಕಾದ ಕಮಿಷನ್ ಸಂಬಂಧದಲ್ಲಿ ಕರಾರಿನ ನಿಯಮಗಳಂತೆ ಬ್ಯಾಂಕರ್ ಚೆಕ್ ನಗದೀಕರಿಸಿಕೊಂಡ ನಂತರ ಆದೇಶದ ದಿನಾಂಕದಿಂದ ಹತ್ತು ದಿನಗಳೊಳಗೆ ಡಿಕ್ರಿದಾರರಿಗೆ ಪಾವತಿ ಬಿಡುಗಡೆ ಮಾಡಲು ಘನ ನ್ಯಾಯಾಲಯವು ಕಂಪನಿಗೆ ಆದೇಶಿಸಿದೆ. ಸಿದ್ಧ ಪರಿಶೀಲನೆಗಾಗಿ ನ್ಯಾಯಾಲಯ ಆದೇಶದ ಪ್ರತಿಯೊಂದನ್ನು ಇದರೊಂದಿಗೆ ಲಗತ್ತಿಸಲಾಗಿದೆ. ಘನ ಉಚ್ಚ ನ್ಯಾಯಾಲಯದ ಸದರಿ ಇತ್ಯರ್ಥ ಆದೇಶವನ್ನು ಜಾರಿ ಮೊಕದ್ದಮೆ ಸಂಖ್ಯೆ: 147/2018 ಅನ್ನು ಸಲ್ಲಿಸಲ್ಪಟ್ಟ ಕೆಳ ನ್ಯಾಯಾಲಯದ ಮುಂದೆ ಮಂಡಿಸಲಾಗುವುದು.

vii. 28.05.2019ರಂದು ಕಂಪನಿಯು ಅವರ ಕಕ್ಷಿದಾರರಿಂದ ಮೆ|| ಮಾನ್ಯುಮೆಂಟ್ಸ್ ಅಡ್ವರ್ಟೈಸರ್ಸ್ ಪ್ರೈವೇಟ್ ಲಿಮಿಟೆಡ್ ಇವರ ಪರವಾಗಿ ರೂ.57,18,240/- ಪಾವತಿಗಾಗಿ ವಕೀಲರಾದ ವಿ.ಬಿ.ಶಿವಕುಮಾರ್ ಇವರಿಂದ ಕಾನೂನು ಅನುಸಾರದ ನೋಟೀಸನ್ನು ಸ್ವೀಕರಿಸಿತು. ಸದರಿ ಕಾನೂನು ಅನುಸಾರದ ನೋಟೀಸಿನಲ್ಲಿ ರಿಟ್ ಅರ್ಜಿ ಸಂಖ್ಯೆ:478887/2018ರಲ್ಲಿ ಕರ್ನಾಟಕದ ಘನ ಉಚ್ಚ ನ್ಯಾಯಾಲಯವು ದಿನಾಂಕ:24.04.2019ರಂದು ಜಾರಿ ಮಾಡಿದ ಆದೇಶದ ಪ್ರತಿ ಲಗತ್ತಿಸಲಾಗಿತ್ತು. ಸದರಿ ರಿಟ್ ಅರ್ಜಿಯನ್ನು ರೂ.57,18,240/-ರ ವಸೂಲಾತಿಗಾಗಿ ಮೆ|| ಮಾನ್ಯುಮೆಂಟ್ಸ್ ಅಡ್ವರ್ಟೈಸರ್ಸ್ ಪ್ರೈವೇಟ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಉದ್ಯೋಗ ಮಿತ್ರ ಮತ್ತು ವ್ಯವಸ್ಥಾಪಕ ನಿರ್ದೇಶಕರು, ಮಾರ್ಕೆಟಿಂಗ್ ಕಮ್ಯುನಿಕೇಷನ್ಸ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ ಇವರ ವಿರುದ್ಧ ಸಲ್ಲಿಸಿದರು. ಸದರಿ ಆದೇಶದಲ್ಲಿ ನ್ಯಾಯಾಲಯವು ಆದೇಶದ ಪ್ರಮಾಣೀಕೃತ ಪ್ರತಿ ಸ್ವೀಕರಿಸಿದ ದಿನಾಂಕದಿಂದ ಎರಡು ತಿಂಗಳ ಅವಧಿಯೊಳಗೆ ಸಕಾರಣ ಆದೇಶದ ಮೂಲಕವಾಗಿ ರೂ.57,18,200/- ಮೊಬಲಗಿನ ಬಗ್ಗೆ ಅರ್ಜಿದಾರರ ಕ್ಲೈಮ್‌ನ್ನು ಪರಿಗಣಿಸಲು ಮತ್ತು ನಿರ್ಧರಿಸಲು ನಿರ್ದೇಶಿಸಲಾಗಿತ್ತು. ಆದರೆ ಕಂಪನಿಯು ಆದೇಶವನ್ನು ನ್ಯಾಯಾಲಯದಿಂದಾಗಲಿ ಅಥವಾ ಸರ್ಕಾರಿ ವಕೀಲರಿಂದಾಗಲಿ ಸ್ವೀಕರಿಸಲಿಲ್ಲ. ಜೊತೆಗೆ ಕಂಪನಿಯು ಹಾಜರಾಗಲು ಅಥವಾ ಆಕ್ಷೇಪಣೆ ಸಲ್ಲಿಸಲು ನ್ಯಾಯಾಲಯದ ನೋಟೀಸನ್ನು ಸ್ವೀಕರಿಸಲಿಲ್ಲ ಎಂಬುದನ್ನು ತಮ್ಮ ಗಮನಕ್ಕೆ ತರಲಾಗಿದೆ. ನ್ಯಾಯಾಲಯದ ಆದೇಶದಿಂದ ನ್ಯಾಯಾಲಯವು ಪ್ರತಿವಾದಿ ಕರ್ನಾಟಕ ಉದ್ಯೋಗ ಮಿತ್ರ ಮತ್ತು ಮಾರ್ಕೆಟಿಂಗ್ ಕಮ್ಯುನಿಕೇಷನ್ಸ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್‌ಗೆ ನೋಟೀಸು ನೀಡುವ ಅಗತ್ಯವಿಲ್ಲವೆಂದು ಭಾವಿಸಿರುತ್ತದೆ ಎಂದು ಕಂಡು ಬಂದಿದೆ. ಸದರಿ ಕಾಮಗಾರಿಯನ್ನು ನಿರ್ವಹಣೆ ಮಾಡಲು ಕಂಪನಿಯು ಕಾರ್ಯಾದೇಶವನ್ನು ನೀಡದಿರುವುದರಿಂದ ಕರ್ನಾಟಕ ಉದ್ಯೋಗ ಮಿತ್ರದಿಂದ ಪಾವತಿ ಬರುವವರೆಗೂ ಹೊಣೆಗಾರಿಕೆ ನಿರಾಕರಿಸಿ ಕಂಪನಿಯು ಕಾನೂನು ಅನುಸಾರದ ನೋಟೀಸಿಗೆ ಉತ್ತರ ಕಳುಹಿಸಿದೆ.

**ಸಿ. ಸಹಾಯಕ ಸಂಸ್ಥೆ-ಎಂಸಿಟಿಸಿಎಲ್:**

i. ಆದಾಯ ತೆರಿಗೆಯ ಉಪ ಆಯುಕ್ತರು (ಕರ ನಿರ್ಧರಣೆ) ವಿಶೇಷ ವಲಯ-4, ಬೆಂಗಳೂರು ಇವರು 1990-1991ರ ಕರ ನಿರ್ಧರಣೆ ವರ್ಷಕ್ಕೆ ಆದಾಯ ತೆರಿಗೆ ಮೇಲ್ಮನವಿ ನ್ಯಾಯಾಧೀಕರಣ, ಬೆಂಗಳೂರು ಇದರ ಆದೇಶಗಳ ವಿರುದ್ಧ ಘನ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿಗೆ ಅಪೀಲು ಸಲ್ಲಿಸಿರುವುದರಿಂದ ಹೆಚ್ಚುವರಿ ಆದಾಯ ತೆರಿಗೆಗೆ ರೂ.10,519 (ರೂ.10,519/-) ಸಂಭಾವ್ಯ ಹೊಣೆಗಾರಿಕೆ ಇರುತ್ತದೆ.

ii. ಎಂಎಸ್‌ಐಎಲ್, ಕೆಎಸ್‌ಐಐಡಿಸಿ ಮತ್ತು ಕರ್ನಾಟಕ ಸರ್ಕಾರದಿಂದ ಸಾಲಗಳ ಮೇಲೆ ಸಂಚಿತವಾಗಿರುವ ಬಡ್ಡಿಯನ್ನು ಏಪ್ರಿಲ್ 1999 ರಿಂದ ಸಾಲವೆಂದು ಒಪ್ಪಲಾಗಿದೆ. ಹಾಗಾಗಿ ಆಯವ್ಯಯ ಪಟ್ಟಿಯಲ್ಲಿ ಹೊಣೆಗಾರಿಕೆಯೆಂದು ಗುರುತಿಸಲಾಗಿಲ್ಲ. ಕಂಪನಿಯು ಮನ್ನಾ ಮಾಡಲು ಅವರನ್ನು ಕೋರಿದೆ. ಹೊಣೆಗಾರಿಕೆಯು ರೂ.1,21,17,203/-ಕ್ಕೆ (ರೂ.1,15,69,092/-) ಕಡಿಮೆ ಹೇಳಲಾಗಿದೆ.

## 49. ಇತರೆ ಟಿಪ್ಪಣಿಗಳು:

(ನಿರ್ದಿಷ್ಟ ಪಡಿಸಿರದಿರುವೆಡೆಯಲ್ಲಿ ಎಲ್ಲಾ ಮೊಬಲಗುಗಳು ರೂಪಾಯಿಯಲ್ಲಿವೆ)

**ಎ. ಮಾತೃ ಕಂಪನಿ**

i. **ಜಂಟಿ ಕಾರ್ಯನಿರತ ಒಪ್ಪಂದಗಳು:** ಕಂಪನಿಯು ವಾಯು ಮಾರ್ಗ ಸರಕು ವ್ಯವಹಾರ ನಡೆಸಲು ಹೆಚ್‌ಎಎಲ್ ಮತ್ತು ಕಾನ್‌ಕಾರ್‌ನೊಂದಿಗೆ ಜಂಟಿ ಕಾರ್ಯನಿರತ ಒಪ್ಪಂದಗಳನ್ನು ಮಾಡಿಕೊಂಡಿದೆ. ಎಂಎಸ್‌ಐಎಲ್ ಮತ್ತು ಕಾನ್‌ಕಾರ್ ಅನುಕ್ರಮವಾಗಿ 31ನೇ ಮಾರ್ಚ್ 2014 ಮತ್ತು 15ನೇ ಜನವರಿ 2011 ರಿಂದ ಜಂಟಿ ಕಾರ್ಯನಿರತ ಒಪ್ಪಂದದಿಂದ ಹಿಂದೆ ಸರಿದವು.

ಕಂಪನಿ ಗೃಹೇತರ ಕ್ಷೇತ್ರಕ್ಕೆ ಸೋಲಾರ್ ವಾಟರ್ ಹೀಟರ್‌ಗಳನ್ನು ಗುತ್ತಿಗೆ ನೀಡಲು ಇಎಸ್‌ಎಸ್‌ಪಿಎಲ್‌ನೊಂದಿಗೆ ಜಂಟಿ ಉದ್ಯಮ ಒಪ್ಪಂದವನ್ನು ಕೂಡ ಮಾಡಿಕೊಂಡಿದೆ.

ಮೇಲಿನ ಜಂಟಿ ಕಾರ್ಯನಿರತ/ಜಂಟಿ ಉದ್ಯಮ ಒಪ್ಪಂದಗಳು ತನ್ನ ವ್ಯವಹಾರ ಚಟುವಟಿಕೆಯನ್ನು ಕ್ರಿಯಾಶೀಲವಾಗಿ ನಡೆಸಲು ಸಂಪನ್ಮೂಲಗಳ ಸಂಗ್ರಹಣೆ ಗುರಿ ಹೊಂದಿದೆ ಮತ್ತು ಸ್ವತ್ತುಗಳ ಮಾಲೀಕತ್ವವು ಸಂಬಂಧಿತ ಪಕ್ಷಗಳ ಸುಪರ್ದಿನಲ್ಲಿವೆ.

| ವಿವರಗಳು | 2018-2019 | 2017-2018 |
|---|---|---|
| ಇಎಸ್‌ಎಸ್‌ಪಿಎಲ್ | 29,302/- | 27,276 /- |

ii. ಕಂಪನಿಯು ಸರ್ಕಾರಿ ನೌಕರರೊಂದಿಗೆ (ಬಾಡಿಗೆ ಖರೀದಿಗಳು) ಬಾಡಿಗೆ ಖರೀದಿ ಒಪ್ಪಂದ ಮಾಡಿಕೊಂಡಿದೆ ಮತ್ತು ವಾಹನಗಳು ಮತ್ತು ಗೃಹಬಳಕೆ ವಸ್ತುಗಳ ಸರಬರಾಜು ವ್ಯವಸ್ಥೆ ಮಾಡುತ್ತಿದೆ. ಬಾಡಿಗೆ ಖರೀದಿದಾರರಿಂದ ಬಡ್ಡಿ ಸೇರಿದಂತೆ ಬಾಕಿಯಿರುವ ಕಂತನ್ನು ಕಂತು 'ಖರೀದಿದಾರರೊಂದಿಗೆ ದಾಸ್ತಾನು' ಅಡಿಯಲ್ಲಿ ತೋರಿಸಲಾಗಿದೆ. ಬಾಡಿಗೆ ಖರೀದಿ ವ್ಯವಹಾರವನ್ನು ಜುಲೈ 2008ರಿಂದ ಸ್ಥಗಿತಗೊಳಿಸಲಾಗಿದೆ.

iii. ಜಂಟಿ ಉದ್ಯಮಗಳು ಮತ್ತು ಮುಂಗಡಗಳು/ಠೇವಣಿಗಳು ಸೇರಿದಂತೆ ಸಾದಿಲ್ವಾರು ಲೇಣೆದಾರರು, ಸಾದಿಲ್ವಾರು ಸಾಲಗಾರರು, ವ್ಯಾಪಾರ ಸಹವರ್ತಿಗಳ ಲೆಕ್ಕಪತ್ರಗಳಲ್ಲಿನ ಉಳಿಕೆಗಳು ದೃಢೀಕರಣ ಮತ್ತು ಹೊಂದಿಕೆಗೆ ಒಳಪಟ್ಟಿರುತ್ತದೆ. ನಿವ್ವಳ ಲಾಭ ಮತ್ತು ಸ್ವತ್ತುಗಳು/ಹೊಣೆಗಾರಿಕೆಗಳ ಮೇಲೆ ಅಂತಹ ಹೊಂದಾಣಿಕೆ ಮತ್ತು ದೃಢೀಕರಣ ಯಾವುದಾದರೂ ಇದ್ದಲ್ಲಿ ಅವುಗಳ ಫಲಶ್ರುತಿ ಪರಿಣಾಮವನ್ನು ಖಚಿತಗೊಳಿಸಲಾಗದು.

iv. ಆರ್ಥಿಕ ವರ್ಷ 2012-13 ಮತ್ತು ರೂ.41,49,600/- ಮತ್ತು ಆರ್ಥಿಕ ವರ್ಷ 2016-17ಕ್ಕೆ ರೂ.12,19,244ರ ಆದಾಯ ತೆರಿಗೆಯ ಬೇಡಿಕೆಯನ್ನು ಕಂಪನಿಯು ಪ್ರಶ್ನಿಸಿಲ್ಲ ಮತ್ತು ಈವರೆಗೆ ಪಾವತಿಸಿಲ್ಲ. ಆದಾಗ್ಯೂ, ಮೇಲಿನ ಮೊಬಲಗುಗಳಿಗೆ ಪ್ರಸಕ್ತ ಆರ್ಥಿಕ ವರ್ಷದಲ್ಲಿ ಏರ್ಪಾಡು ಮಾಡಲಾಗಿದೆ.

v. ಕಂಪನಿಯು 1997-98ರ ವರ್ಷಾವಧಿಯಲ್ಲಿ ಕರ್ನಾಟಕ ಸರ್ಕಾರದಿಂದ ರೂ.5,00,00,000/-(ರೂ.5,00,00,000/-) ಸಾಲವನ್ನು ಪಡೆದುಕೊಂಡಿತ್ತು . ಕಂಪನಿಯು 31.03.2004ರವರೆಗೆ ರೂ.5,27,42,466/- ಬಡ್ಡಿ ಒದಗಿಸಿದೆ. 2004-05ರ ಆರ್ಥಿಕ ವರ್ಷದಲ್ಲಿ ಕಂಪನಿಯು ರೂ.15,09,48,799/- ರ ಒಟ್ಟಾರೆಯಾದ ಮೇಲಿನ ಮೊಬಲಗನ್ನು ಈಕ್ವಿಟಿಯನ್ನಾಗಿ ಪರಿವರ್ತಿಸಲು ಕರ್ನಾಟಕ ಸರ್ಕಾರವನ್ನು ಕೋರಿತು. ಪ್ರಸ್ತಾವನೆಯನ್ನು ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯು ದಿನಾಂಕ:17.09.2004ರಂದು ಅನುಮೋದಿಸಿದೆ. ಪಿಂಚಣಿ ಸಣ್ಣ ಉಳಿತಾಯ ಸ್ವತ್ತು ನಿರ್ವಹಣೆ ನಿರ್ದೇಶನಾಲಯ ಇಲಾಖೆಯು ದಿನಾಂಕ:20.07.2012ರ ತನ್ನ ಪತ್ರದ ಮೂಲಕ ಕಂಪನಿಯ ಪ್ರಸ್ತಾವನೆಯನ್ನು ಅನುಮೋದಿಸಿತು. ಈ ಮೊಬಲಗನ್ನು 2017-18ರ ಆರ್ಥಿಕ ವರ್ಷಾ ಅವಧಿಯಲ್ಲಿ ಕರ್ನಾಟಕ ಸರ್ಕಾರದ ಪರವಾಗಿ ಷೇರು ಅರ್ಜಿ ಹಣದಿಂದ ರೂ.22,55,81,700/- (ಪ್ರತಿ ಷೇರಿಗೆ ರೂ.100/-ರಂತೆ 2255817 ಷೇರುಗಳು) ಮೌಲ್ಯದ ಷೇರು ಬಂಡವಾಳಕ್ಕೆ ವರ್ಗಾಯಿಸಲಾಯಿತು.

vi. ಇತರೆ ಹೊಣೆಗಾರಿಕೆಗಳಲ್ಲಿ ಆಮದಾದ ಸಿಮೆಂಟ್ ಸರಬರಾಜಿಗೆ ಕರಾರಿನ ಸಂಬಂಧದಲ್ಲಿ ವಿವಿಧ ಸರ್ಕಾರಿ ಇಲಾಖೆಗಳಿಂದ ಪಡೆಯಲಾದ ರೂ.2,10,46,347/- (ರೂ.2,10,46,347/-) ಮುಂಗಡಗಳೂ ಸೇರಿವೆ.

vii. ದಿನಾಂಕ 13.02.2003ರ ಆದೇಶದ ಅನುಸಾರ ಘನ ಸರ್ವೋಚ್ಚ ನ್ಯಾಯಾಲಯವು ಐದು ಮದ್ಯ ಉತ್ಪಾದಕರಿಂದ ಮಾಡಲಾದ ಮದ್ಯ ಮಾರಾಟದ ಮೇಲೆ ಕಮಿಷನ್ ಪಡೆಯಲು ಎಂಎಸ್‌ಐಎಲ್ ಅರ್ಹವೆಂದು ನಿರ್ದೇಶಿಸಿತು. ಕರ್ನಾಟಕದ ಘನ ಉಚ್ಚ ನ್ಯಾಯಾಲಯದಿಂದ ನೇಮಕವಾದ ಮತ್ತು

ಘನ ಸರ್ವೋಚ್ಚ ನ್ಯಾಯಾಲಯದಿಂದ ಎತ್ತಿ ಹಿಡಿದ ಆಂತಿಕ ಅಧಿಕಾರಿಯು ಸ್ಕೋಲ್ ಬ್ರೀವರೀಸ್ ಲಿಮಿಟೆಡ್ (ಈ ಹಿಂದೆ ಮೈಸೂರ್ ಬ್ರೀವರೀಸ್ ಲಿಮಿಟೆಡ್ ಎಂಬುದಾಗಿತ್ತು) ಇವರಿಂದ ರೂ.25.18 ಕೋಟಿಗಳು ಕಮಿಷನ್ ಬಾಕಿಯಿರುವುದಾಗಿ ಪರಿಮಾಣೀಕರಿಸಿದ್ದ ಟಿಪ್ಪಣಿ 2.ಡಿ (ii) ಬಿ ಯಲ್ಲಿ ತಿಳಿಸಿರುವಂತೆ ಲೆಕ್ಕ ನಿರ್ವಹಣ ನೀತಿಯನುಸಾರವಾಗಿ ನಗದೀಕರಣದ ಖಚಿತತೆ ಇಲ್ಲದ ಕಾರಣ ಲೆಕ್ಕ ಹಾಕಿರಲಿಲ್ಲ.

ಘನ ಸರ್ವೋಚ್ಚ ನ್ಯಾಯಾಲಯವು ತನ್ನ ದಿನಾಂಕ:13ನೇ ಫೆಬ್ರವರಿ 2003ರ ಆದೇಶದ ಅನುಸಾರ ಅಪೀಲುದಾರರು ಕಮಿಷನ್ ಸಂಗ್ರಹಿಸಿದ್ದು ಎಂಎಸ್‌ಐಎಲ್ ಗೆ ಪಾವತಿಸಿರದಿದ್ದಲ್ಲಿ ಅಪೀಲುದಾರರ ಲೆಕ್ಕಪತ್ರಗಳ ಪುಸ್ತಕಗಳನ್ನು ಪರಿಶೀಲಿಸಲು ಮತ್ತು ಹಾಗೆ ಪಡೆದುಕೊಂಡ ಕಮಿಷನ್ ಅನ್ನ ಅಪೀಲುದಾರರಾದ ಮೆ|| ಮೈಸೂರ್ ಬ್ರೀವರೀಸ್ ಲಿಮಿಟೆಡ್‌ನಿಂದ ವಸೂಲಿ ಮಾಡಲು ನಿರ್ದೇಶಿಸಿತು. ಜೊತೆಗೆ ನ್ಯಾಯಾಲಯವು ಪಕ್ಷಕಾರರ ನಡುವೆ ವಿವಾದವು ಇತ್ಯರ್ಥವಾಗದಿದ್ದಲ್ಲಿ ವಿವಾದವನ್ನು ಇತ್ಯರ್ಥಗೊಳಿಸಲು ಅಧಿಕಾರ ನೀಡಿದ ಅಧಿಕಾರಿಯಾಗಿ ಪ್ರಧಾನ ಕಾರ್ಯದರ್ಶಿಯವರಿಗಿಂತ ಕಡಿಮೆಯಿಲ್ಲದ ಶ್ರೇಣಿಯ ಹಾಗೂ ಕರ್ನಾಟಕ ಸರ್ಕಾರದಿಂದ ನೇಮಕವಾಗಬೇಕಾದ ಅಧಿಕೃತ ಅಧಿಕಾರಿಗೆ ವಹಿಸಬೇಕೆಂದು ಆದೇಶಿಸಿದೆ.

ಕರ್ನಾಟಕ ಘನ ಉಚ್ಚ ನ್ಯಾಯಾಲಯದ ನಿರ್ದೇಶನಗಳ ಅನುಸಾರ ಸಾಕಷ್ಟು ಅವಕಾಶಗಳನ್ನು ನೀಡಿ ನಡೆಸಿದ ನಡಾವಳಿಗನುಸಾರ ಎಂಎಸ್‌ಐಎಲ್ ಅಧಿಕೃತ ಅಧಿಕಾರಿಯು ಮೆ|| ಸ್ಕೋಲ್ ಬ್ರೀವರೀಸ್ (ಈ ಹಿಂದೆ ಮೆ|| ಮೈಸೂರ್‌ಬ್ರೀವರೀಸ್ ಲಿಮಿಟೆಡ್ ಎಂದಾಗಿತ್ತು) ಸಂಸ್ಥೆಯು ಎಂಎಸ್‌ಐಎಲ್‌ಗೆ ರೂ.25.18 ಕೋಟಿಗಳನ್ನು ಕಮಿಷನ್ ನೀಡಬೇಕಿದೆ ಎಂಬ ನಿರ್ಣಯಕ್ಕೆ ಬಂದಿದ್ದು, ಮೆ|| ಸ್ಕೋಲ್ ಬ್ರೀವರೀಸ್ (ಈ ಹಿಂದೆ ಮೆ|| ಮೈಸೂರ್ ಬ್ರೀವರೀಸ್ ಲಿಮಿಟೆಡ್) ಇವರು ಎಂಎಸ್‌ಐಎಲ್ ಸಂಸ್ಥೆಯ ಅಧಿಕೃತ ಅಧಿಕಾರಿಯು ಗುರುತಿಸಿರುವ ಅಂಶಗಳನ್ನು ವಿವಾದಗೊಳಿಸಿದೆ.

ಈ ನಿರ್ಣಯವನ್ನು ಮೆ|| ಸ್ಕೋಲ್ ಬ್ರೀವರೀಸ್ (ಈ ಹಿಂದೆ ಮೆ|| ಮೈಸೂರ್ ಬ್ರೀವರೀಸ್ ಲಿಮಿಟೆಡ್ ಎಂದಾಗಿತ್ತು) ಪ್ರಶ್ನಿಸಿದೆ. ಅಧಿಕೃತ ಅಧಿಕಾರಿಯ ಆದೇಶವನ್ನು ಸ್ಕೋಲ್ ಬ್ರೀವರೀಸ್ ಪ್ರಶ್ನಿಸಿರುವುದರಿಂದಾಗಿ ಕಮಿಷನ್ ಮೊಬಲಗನ್ನು ವಸೂಲು ಮಾಡಲು ಸಿಟಿ ಸಿವಿಲ್ ನ್ಯಾಯಾಲಯದಲ್ಲಿ ಸಿವಿಲ್ ಅರ್ಜಿಯೊಂದನ್ನು ಸಲ್ಲಿಸಲಾಗಿದೆ. ಕಂಪನಿ ಪರವಾಗಿ 04.06.2019ರಂದು ಪಿಡಬ್ಲ್ಯೂ 1ಮತ್ತು ಪಿಡಬ್ಲ್ಯೂ 3 ಇಬ್ಬರ ಪಾರ್ಟಿ ಸವಾಲು ಪೂರ್ಣಗೊಂಡಿದೆ. ಆದಾಗ್ಯೂ ಸಾಕ್ಷ್ಯವನ್ನು ಒದಗಿಸುವ ಬದಲು ಪ್ರತಿವಾದಿಗಳು ಮತ್ತೊಮ್ಮೆ ಪಿಡಬ್ಲ್ಯೂ 3ರವರನ್ನು ಪಾಟಿ ಸವಾಲಿಗೆ ಒಳಪಡಿಸುವುದರಿಂದ ಘನ ಉಚ್ಚ ನ್ಯಾಯಾಲಯದಿಂದ ಪ್ರಕ್ರಿಯೆಗಳಿಗೆ ಮಧ್ಯಂತರ ತಡೆ ತಂದಿದೆ. ಕಂಪನಿಯು ಉಚ್ಚ ನ್ಯಾಯಾಲಯದಲ್ಲಿ ವಕಾಲತ್ ಸಲ್ಲಿಸಿದ್ದು ಮತ್ತು ಆಗಸ್ಟ್ 2019ರ ಅವಧಿಯಲ್ಲಿ ಉತ್ತರ ಸಲ್ಲಿಸಿದ ನಂತರ ತಡೆಯಾಜ್ಞೆ ತೆರವು ಮಾಡಲು ಅರ್ಜಿಯನ್ನು ಸಲ್ಲಿಸಬೇಕಿದೆ.

viii. ಟಿಪ್ಪಣಿ 5ರಲ್ಲಿನ ಹೂಡಿಕೆಗಳು, ಫುಡ್ ಕರ್ನಾಟಕ ಲಿ.ನಲ್ಲಿ ಪ್ರತಿ ಷೇರಿಗೆ ರೂ.10/-ರಂತೆ 50,000 ಷೇರುಗಳನ್ನು ಒಳಗೊಂಡಿವೆ. ಕರ್ನಾಟಕ ಸರ್ಕಾರವು ತನ್ನ ಆದೇಶ ಸಂಖ್ಯೆ ಎಹೆಚ್‌ಡಿ 172 ಎಎಫ್‌ಟಿ 2010 ದಿನಾಂಕ:05.03.2011ರಲ್ಲಿ ಆ ಷೇರುಗಳನ್ನು ಕರ್ನಾಟಕ ರಾಜ್ಯ ಕೃಷಿ ಉತ್ಪನ್ನ ಸಂಸ್ಕರಣೆ ಮತ್ತು ರಫ್ತು ನಿಗಮಕ್ಕೆ ವರ್ಗಾಯಿಸಲು ಆದೇಶಿಸಿದೆ. ಇದನ್ನು ಕಂಪನಿಯ ನಿರ್ದೇಶಕರ ಮಂಡಳಿಯು ದಿನಾಂಕ:30.06.2011ರ ಸಭೆಯಲ್ಲಿ ಅನುಮೋದಿಸಲಾಗಿದೆ. ವರ್ಗಾವಣೆ ಬೆಲೆಯ ಅಂತಿಮಗೊಳಿಸುವಿಕೆಯ ಮೇರೆಗೆ ವರ್ಗಾವಣೆಯು ಬಾಕಿ ಇರುವುದು.

ix. ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ ಇಲ್ಲ (ಹಿಂದಿನ ವರ್ಷ ರೂ.20,11,291/-)

x. ಕಂಪನಿಯು 16 ಸಂಖ್ಯೆ ಚಿತ್ರಕಲೆ ಪೇಟಿಂಗ್‌ಗಳನ್ನು ಹೊಂದಿದ್ದು, ಅವುಗಳ ಮೌಲ್ಯವನ್ನು ಖಚಿತಪಡಿಸಿಕೊಂಡಿರುವುದಿಲ್ಲ.

xi. ಈ ಕೆಳಗೆ ತಿಳಿಸಿರುವವುಗಳ ಸಂಬಂಧದಲ್ಲಿ ಸಿಎಜಿ ಅಭಿಪ್ರಾಯಗಳ ಕುರಿತು ಕ್ರಮಕೈಗೊಂಡಿರುವುದಿಲ್ಲ..

ಎ) ಕರ್ನಾಟಕ ಭವನ ಯೋಜನೆಯ ಪೂರ್ಣಗೊಳಿಸುವಿಕೆಯಲ್ಲಿ ಉಂಟಾದ ವಿಳಂಬಕ್ಕಾಗಿ ಗುತ್ತಿಗೆದಾರರಿಂದ ಸಮಾಪನ ಹಾನಿ ಮೊತ್ತವನ್ನು ವಸೂಲಿ ಮಾಡಿರುವುದಿಲ್ಲ.

ಬಿ) ಬಿಸಿಡಬ್ಲ್ಯೂಡಬ್ಲ್ಯೂ ಸೆಸ್ ಕಾಯ್ದೆ 1996ರಡಿ ಪಾವತಿ ಮಾಡಲಾದ ಸೆಸ್ ಬಗ್ಗೆ ಗುತ್ತಿಗೆದಾರರಿಂದ ಸ್ವೀಕೃತಿ ಪಡೆದುಕೊಂಡಿರುವುದಿಲ್ಲ.

xiii. **ಸರ್ಕಾರದ ಅನುದಾನಗಳು:**

ಪ್ರಸಕ್ತ ವರ್ಷದಲ್ಲಿ ಕಂಪನಿಯು 3 ಜನ ಔಷಧಿ ಮಳಿಗೆಗಳನ್ನು ತೆರೆದಿದೆ. ಇವುಗಳು ಸರ್ಕಾರದ ಅನುದಾನಕ್ಕೆ ಅರ್ಹವಾಗಿವೆ. ಸ್ಥಿರಾಸ್ತಿಗಳಲ್ಲಿ ತೊಡಗಿಸಲು ರೂ.3,68,689/- ಅನುದಾನ ಸ್ವೀಕರಿಸಲಾಗಿದೆ. ಜೊತೆಗೆ ಕಂಪನಿಯು ಪ್ರತಿಯೊಂದು ಔಟ್‌ಲೆಟ್‌ಗೆ ರೂ.1 ಲಕ್ಷ ಮೌಲ್ಯದ ಉಚಿತ ಔಷಧಿ ದಾಸ್ತಾನನ್ನು ಪಡೆಯಲು ಕೂಡ ಅರ್ಹವಾಗಿದ್ದು ಅದನ್ನು ಪಡೆದಿಲ್ಲ. ಈ ಮೊಬಲಗನ್ನು ಸ್ವೀಕರಿಸಬಹುದಾದವೆಂದು ಕಂಪನಿಯ ಲೆಕ್ಕಾಚಾರ ಮಾಡಿಲ್ಲ. ಕಂಪನಿಯು ಹಿಂದಿನ ವರ್ಷದಲ್ಲಿ ತೆರೆದ ಔಟ್‌ಲೆಟ್‌ಗಳ ಬಗ್ಗೆ ಪ್ರಸಕ್ತ ವರ್ಷದಲ್ಲಿ ರೂ.26,55,639/- ಮೊಬಲಗನ್ನು ಕೂಡ ಸ್ವೀಕರಿಸಿದೆ.

xiv. **ಲೈಸೆನ್ಸ್ ಶುಲ್ಕಗಳ ಮೇಲೆ ಜಿಎಸ್‌ಟಿ-ಮದ್ಯ ವಿಭಾಗ:**

ಮದ್ಯ ವಿಭಾಗದಿಂದ ಏಪ್ರಿಲ್-ಅಕ್ಟೋಬರ್ 2018ರ ಅವಧಿಯಲ್ಲಿ ಲೈಸೆನ್ಸ್ ಶುಲ್ಕದ ಮೇಲೆ ಪಾವತಿಸಿದ ಜಿಎಸ್‌ಟಿ ಆಗಿ ರೂ.5,97,40,200/- ಮೊಬಲಗನ್ನು ಇತರೆ ಆಸ್ತಿಗಳು ಟಿಪ್ಪಣಿ ಸಂಖ್ಯೆ :8 ರಲ್ಲಿ ಸೇರಿಸಲಾಗಿದೆ.ಮೊತ್ತದ ಹಿಂಪಡೆಯುವಿಕೆ ಕ್ಲೇಮ್ (ಹಕ್ಕು)ಗೆ ಆದ್ಯತೆ ನೀಡಲಾಗಿದೆ.

xv. **ಹೊಂದಿಸಲಿರದ ಸಂಬಂಧಿತ ವ್ಯಕ್ತಿ ವ್ಯವಹಾರಗಳು:**

ಈ ಕೆಳಗೆ ತಿಳಿಸಿರುವ ಐಟಂಗಳನ್ನು ನಿವ್ವಳೀಕರಿಸಿದ ನಂತರ ಸರಿಹೊಂದಿಸಿರದ ಮೊಬಲಗನ್ನು ಇತರೆ ಸ್ವೀಕರಿಸಬಹುದಾವುಗಳು/ಇತರೆ ಪಾವತಿಸಬಹುದಾದವುಗಳು ಎಂದು ಪರಿಗಣಿಸಿದೆ.

| ವಿವರಗಳು | ಎಂಎಸ್‌ಐಎಲ್ ಪುಸ್ತಕಗಳನುಸಾರ ಮೊಬಲಗು | ಎಂಸಿಎ ಪುಸ್ತಕಗಳನುಸಾರ ಮೊಬಲಗು | ಸರಿಹೊಂದಿಸದ ಮೊಬಲಗು |
|---|---|---|---|
| ಎಂಸಿಎ ಪಾವತಿಸಬೇಕಾದುದು | 539,912 | 809,176 | (269,264) |
| ಎಂಸಿಎನಿಂದ ಸ್ವೀಕರಿಸಿದ ಬಾಡಿಗೆ | 364320 | – | 364320 |
| ಎಂಸಿಎ ನಿಂದ ಸ್ವೀಕರಿಸಿದ ಬಾಡಿಗೆ ಠೇವಣಿ | 200000 | – | 200000 |
| ಎಂಸಿಎ ನಿಂದ ಸ್ವೀಕರಿಸಿದ ಇಎಂಡಿ | 1652448 | 1137000 | 515448 |
| ಎಂಸಿಎನಿಂದ ಸ್ವೀಕರಿಸಿದ ಪಿಡಿಆರ್ | 120250 | 523987 | (403737) |

# ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್

## 31ನೇ ಮಾರ್ಚ್ 2019ಕ್ಕೆ ಕೊನೆಗೊಂಡ ವರ್ಷದ

## (ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ) ಸ್ವತಂತ್ರ ಲೆಕ್ಕಪತ್ರಗಳು

# ಸ್ವತಂತ್ರ ಲೆಕ್ಕ ಪರಿಶೋಧಕರ ಪರಿಷ್ಕೃತ ವರದಿ

**ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನ ಸದಸ್ಯರುಗಳಿಗೆ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಸ್ವತಂತ್ರ ಹಣಕಾಸಿನ ಹೇಳಿಕೆಗಳ ಲೆಕ್ಕ ಪರಿಶೋಧನೆ ಮೇಲಿನ ವರದಿ**

**ಅರ್ಹತಾ ಅಭಿಪ್ರಾಯ:**

ನಾವು ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನ ಇದರೊಡನಿರುವ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಸ್ವತಂತ್ರ ಹಣಕಾಸಿನ ಹೇಳಿಕೆಗಳ ಲೆಕ್ಕ ಪರಿಶೋಧನೆ ಮಾಡಿದ್ದೇವೆ. ಈ ಸ್ವತಂತ್ರ ಹಣಕಾಸಿನ ಹೇಳಿಕೆಗಳಲ್ಲಿ 31ನೇ ಮಾರ್ಚ್ 2019ರಂದು ಇದ್ದಂತೆ ಸ್ಥಿತಿ ವಿವರಣಾ ಪಟ್ಟಿ, ಈ ದಿನಾಂಕಕ್ಕೆ ಕೊನೆಗೊಂಡ ವರ್ಷದ ಲಾಭ ಮತ್ತು ನಷ್ಟದ ವಿವರ ಪಟ್ಟಿ, ನಗದು ಹರಿವಿನ ವಿವರ, ಈಕ್ವಿಟಿಯಲ್ಲಿನ ಬದಲಾವಣೆ ವಿವರ ಮತ್ತು ಹಣಕಾಸಿನ ಹೇಳಿಕೆಗಳಿಗೆ ಟಿಪ್ಪಣಿಗಳು, ಮಹತ್ತರವಾದ ಲೆಕ್ಕ ನಿರ್ವಹಣೆ ನೀತಿಗಳ ಸಾರಾಂಶ ಹಾಗೂ ಇತರೆ ವಿವರಣಾತ್ಮಕ ಮಾಹಿತಿಗಳನ್ನು ಒಳಗೊಂಡಿರುವುದು.

ನಮ್ಮ ಅಭಿಪ್ರಾಯದಂತೆ ಮತ್ತು ನಮಗೆ ತಿಳಿದಿರುವ ಮಾಹಿತಿ ಮತ್ತು ನಮಗೆ ನೀಡಿರುವ ವಿವರಣೆಗಳ ಅನುಸಾರ, ನಮ್ಮ ವರದಿಯ ''ಅರ್ಹತಾ ಅಭಿಪ್ರಾಯಗಳಿಗೆ ಆಧಾರ'' ಭಾಗದ ಅಡಿಯಲ್ಲಿ ವಿವರಿಸಿರುವ ವಿಚಾರಗಳಿಗೆ ಸಂಬಂಧಿಸಿದಂತೆ ಹೊರತಾಗಿ, ಮೇಲೆ ತಿಳಿಸಿರುವ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಸ್ವತಂತ್ರ ಹಣಕಾಸಿನ ಹೇಳಿಕೆಗಳು ಕಂಪನಿಗಳ ಕಾಯ್ದೆ, 2013ರ (''ಕಾಯ್ದೆ'') ಅನ್ವಯ ಅಗತ್ಯವಾದಂತೆ ರೀತಿಯಲ್ಲಿ ಮಾಹಿತಿಯನ್ನು ಮತ್ತು ಭಾರತದಲ್ಲಿ ಸಾಮಾನ್ಯವಾಗಿ ಅಂಗೀಕರಿಸಿರುವ ಲೆಕ್ಕ ನಿರ್ವಹಣೆಗೆ ಅನುಗುಣವಾಗಿ, 31ನೇ ಮಾರ್ಚ್ 2019ರಂದು ಇದ್ದಂತೆ ಕಂಪನಿಯ ವ್ಯವಹಾರಗಳ ಸ್ಥಿತಿಗತಿ ಮತ್ತು ಇದೇ ದಿನಾಂಕಕ್ಕೆ ಕೊನೆಗೊಂಡ ವರ್ಷದ ಇತರೆ ಸಮಗ್ರ ಆದಾಯ ಒಳಗೊಂಡಂತೆ ಲಾಭದ ಬಗ್ಗೆ, ನಗದು ಹರಿವು ಹಾಗೂ ಈಕ್ವಿಟಿಯಲ್ಲಿನ ಬದಲಾವಣೆಗಳ ಬಗ್ಗೆ ನೈಜ ಮತ್ತು ನ್ಯಾಯೋಚಿತ ಚಿತ್ರಣವನ್ನು ನೀಡುವುದು.

ಸಮ ದಿನಾಂಕದಂದು ನಿರ್ದೇಶಕರುಗಳ ಮಂಡಳಿ ಅಳವಡಿಸಿಕೊಂಡಿರುವಂತೆ ಹಣಕಾಸಿನ ಹೇಳಿಕೆಗಳ ಬಗ್ಗೆ ನಾವು ದಿನಾಂಕ 16ನೇ ಸೆಪ್ಟೆಂಬರ್ 2019ರಂದು ಲೆಕ್ಕ ಪರಿಶೋಧನಾ ವರದಿ ಒಂದನ್ನು('ಮೂಲ ವರದಿ') ಬೆಂಗಳೂರಿನಲ್ಲಿ ನೀಡಿರುವೆವು. ಭಾರತದ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್ ರವರ ಕಂಪನಿಗಳ ಕಾಯ್ದೆ, 2013ರ ಪ್ರಕರಣ 143(6)(ಎ) ಅನ್ವಯದ ಅಭಿಪ್ರಾಯದ ಅನುಸಾರ ನಾವು ಸದರಿ ಲೆಕ್ಕ ಪರಿಶೋಧನಾ ವರದಿಯನ್ನು ಪರಿಷ್ಕರಿಸಿದ್ದೇವೆ. ಸದರಿ ಪರಿಷ್ಕೃತ ವರದಿಯು ಕಂಪನಿಯ ಹಣಕಾಸಿನ ಹೇಳಿಕೆಗಳಲ್ಲಿನ ತಿಳಿಸಲಾಗಿರುವ ಅಂಕಿ-ಅಂಶಗಳ ಮೇಲೆ ಯಾವುದೇ ಪರಿಣಾಮ ಉಂಟು ಮಾಡುವುದಿಲ್ಲ. ಭಾರತದ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್‌ರವರ ಅಭಿಪ್ರಾಯಗಳನ್ನು ಪರಿಗಣಿಸಿ ಸೂಕ್ತವಾಗಿ ಪರಿಷ್ಕರಣೆ ಮಾಡಿರುವ ಈ ಲೆಕ್ಕ ಪರಿಶೋಧನೆ ವರದಿಯು ಮೂಲ ವರದಿಗೆ ಬದಲಾಗಿ ಆ ಸ್ಥಾನವನ್ನು ಪಡೆದಿದೆ.

ಮೂಲ ವರದಿಯ ದಿನಾಂಕದ ನಂತರದ ಘಟನಾವಳಿಗಳ ಬಗ್ಗೆ ನಮ್ಮ ಲೆಕ್ಕಪರಿಶೋಧನಾ ಕ್ರಮಾವಳಿಗಳು ಅರ್ಹತೆ ಹೊಂದಿದ ಅಭಿಪ್ರಾಯಕ್ಕೆ ಆಧಾರದ ಪ್ಯಾರಾಗ್ರಾಫ್‌ನ ಪಾಯಿಂಟ್ ನಂ.(ಸಿ) ಮತ್ತು (ಡಿ) ಯಲ್ಲಿ ವರದಿ ಮಾಡಿರುವಂತೆ ತಿದ್ದುಪಡಿಗೆ ಸಂಪೂರ್ಣವಾಗಿ ಸೀಮಿತವಾಗಿರುವುದು.

ಎ) ವ್ಯಾಪಾರದಿಂದ ಬರಬೇಕಾಗಿರುವುದು, ಮುಂಗಡಗಳು, ಗ್ರಾಹಕರಿಗೆ ಪಾವತಿ ಮಾಡಬೇಕಾಗಿರುವುದು ಮತ್ತು ಅವರಿಂದ ಪಡೆಯಬೇಕಾಗಿರುವ ಶಿಲ್ಕುಗಳನ್ನು ಸ್ಥಿತಿ ವಿವರಣಾ ಪಟ್ಟಿಯ ದಿನಾಂಕದಂದು ಇದ್ದಂತೆ ಸಮನ್ವಯತೆ ಮಾಡಿರುವುದಿಲ್ಲ ಅಥವಾ ಎದುರು ಪಕ್ಷಕಾರರುಗಳಿಂದ ಸ್ಥಿರೀಕರಣ ಪಡೆದಿರುವುದಿಲ್ಲ. ಸ್ಥಿತಿ ವಿವರಣಾ ಪಟ್ಟಿ ದಿನಾಂಕದಂದು ಇದ್ದಂತೆ ಈ ಲೆಕ್ಕಗಳ ವಾಹಕ ಮೊತ್ತಗಳ ಬಗ್ಗೆ ಸಾಕಷ್ಟು ಪ್ರಮಾಣದಲ್ಲಿ ಸೂಕ್ತವಾದ ಲೆಕ್ಕ ಪರಿಶೋಧನಾ ಪುರಾವೆ ಪಡೆಯಲು ನಮಗೆ ಸಾಧ್ಯವಾಗಿಲ್ಲ. ಇದರಿಂದಾಗಿ ಈ ಮೊತ್ತಗಳಿಗೆ ಯಾವುದೇ ಹೊಂದಾಣಿಕೆ ಮಾಡಬೇಕಾದ ಅಗತ್ಯತೆ ಇರುವುದೇ ಎಂಬುದನ್ನು ನಿರ್ಧರಣೆ ಮೂಡಲು ನಮಗೆ ಸಾಧ್ಯವಾಗಿಲ್ಲ. ಸದರಿ ಸಮನ್ವಯತೆ ಮಾಡದಿರುವಿಕೆಯಿಂದ ಅಥವಾ ಲೆಕ್ಕದ ಶಿಲ್ಕುಗಳ ಬಗ್ಗೆ ಸ್ಥಿರೀಕರಣೆ ಪಡೆಯದಿರುವುದರಿಂದ ಯಾವುದೇ ರೀತಿಯ ಹಣಕಾಸಿನ ಪರಿಣಾಮ ಉಂಟಾಗುವಿಕೆಯ ಅಂಶವನ್ನು ನಿರ್ಧರಣೆ ಮಾಡಲಾಗದು.

ಬಿ) ಮೆ।। ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್ ಸರ್ವೀಸ್ ಇವರಿಂದ 31ನೇ ಮಾರ್ಚ್ 2018ರಂದು ಪಡೆದಿರುವ ಕೆಲಸ ಪೂರ್ಣಗೊಳಿಸಿರುವಿಕೆ ಪ್ರಮಾಣ ಪತ್ರದ ಆಧಾರದ ಮೇಲೆ ನವಿ ಮುಂಬಯಿಯಲ್ಲಿನ ಕರ್ನಾಟಕ ಭವನ ನಿರ್ಮಾಣದ ಬಗ್ಗೆ ಮಾಡಿರುವ ರೂ.34,10,24,920/-ರ ಮೊತ್ತದ ಖರ್ಚನ್ನು ಕಂಪನಿ ಬಂಡವಾಳೀಕರಿಸಿದೆ. ಸ್ಥಿತಿ ವಿವರಣಾ ಪಟ್ಟಿಯ ದಿನಾಂಕದಂದು ಇದ್ದಂತೆ, ಬಂಡವಾಳೀಕರಿಸಿರುವ ಸ್ವತ್ತಿನ ವಾಹಕ ಮೊತ್ತದ ಬಗ್ಗೆ ಸಾಕಷ್ಟು ಪ್ರಮಾಣದಲ್ಲಿನ ಸೂಕ್ತವಾದ ಲೆಕ್ಕ ಪರಿಶೋಧನಾ ಪುರಾವೆ ಪಡೆಯಲು ನಮಗೆ ಸಾಧ್ಯವಾಗಿಲ್ಲ. ಇದರಿಂದಾಗಿ ಕಂಪನಿಯು ಪಾವತಿ ಮಾಡಿರದ ಬಿಲ್‌ಗಳನ್ನು ಇನ್ನೂ ಹೊಂದಿರುವುದರಿಂದ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಸ್ವತಂತ್ರ ಹಣಕಾಸಿನ ಹೇಳಿಕೆಗಳ ಮೇಲೆ ಇದು ಉಂಟು ಮಾಡುವ ಪರಿಣಾಮವನ್ನು ನಿರ್ಧರಣೆ ಮಾಡಲು ನಮಗೆ ಸಾಧ್ಯವಾಗಿಲ್ಲ.

ಸಿ) ನಗದು ಹರಿವಿನ ಹೇಳಿಕೆಯಲ್ಲಿ ಹಣಕಾಸಿನ ಚಟುವಟಿಕೆಗಳಿಂದ ಆದ ನಗದು ಹರಿಯುವಿಕೆಯ ಕಲಂ (ಸಿ)ನಲ್ಲಿ ತಿಳಿಸಿರುವ ರೂ.69,67,046/- ಮೊತ್ತದ ಬಡ್ಡಿ ಮತ್ತು ಖಾತರಿ ಕಮಿಷನ್ ಪಾವತಿ ಮಾಡಿರುವಿಕೆಯನ್ನು ಒಳಗೊಂಡ ಹಣಕಾಸಿನ ವೆಚ್ಚದಲ್ಲಿ ಆದಾಯ ತೆರಿಗೆ ಬಗ್ಗೆ ಪಾವತಿ ಮಾಡಿರುವ ಬಡ್ಡಿಯ ಮೊತ್ತ ರೂ.33,51,677/- ಸಹ ಒಳಗೊಂಡಿರುವುದು. ಇದು ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟ 7ರ ಅನುಸರಣೆ ಅನ್ವಯ ಇರುವುದಿಲ್ಲ. ಸದರಿ ಮೊತ್ತವನ್ನು ನಗದು ಹರಿಯುವಿಕೆಗಳ ಹೇಳಿಕೆಯ ಬಗ್ಗೆಗಿನ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಅನ್ವಯ ನಗದು

ಹರಿಯುವಿಕೆ ಹೇಳಿಕೆಯಲ್ಲಿನ ಕಾರ್ಯಾಚರಣೆ ನಗದು ಹರಿಯುವಿಕೆ ಅಡಿಯಲ್ಲಿ ತಿಳಿಸಬೇಕಾಗಿತ್ತು .

ಡಿ) ಪಾಯಿಂಟ್ ನಂ.1.2 (ಜೆ) ರಲ್ಲಿನ ಸ್ವತ್ತು , ಸ್ಥಾವರ ಮತ್ತು ಉಪಕರಣದ ಬಗ್ಗೆಗಿನ ಲೆಕ್ಕ ನಿರ್ವಹಣೆ ನೀತಿಯ ವಿಚಾರವಾಗಿ ಚರ್ಚೆ ಮಾಡುವಾಗ, ವಿವಿಧ ಆಸ್ತಿಗಳ ಉಪಯುಕ್ತತೆ ಅವಧಿಯು ಕಂಪನಿಗಳ ಕಾಯ್ದೆ, 2013ರ ಪರಿಚ್ಛೇದ-II ರಲ್ಲಿ ವಿವರಿಸಿರುವ ರೀತಿಯಲ್ಲಿಯೇ ಇರುವುದೆಂದು ತಿಳಿಸಲಾಗಿದೆ. ಆದರೆ ಮದ್ಯ ಮಾರಾಟ ಮಳಿಗೆಗಳಲ್ಲಿನ ಪೀಠೋಪಕರಣ ಮತ್ತು ಅಳವಡಿಕೆಗಳ ಉಪಯುಕ್ತತೆ ಅವಧಿಯು 5 ವರ್ಷಗಳಾಗಿರುವುದೆಂದು ನಿರ್ಧರಣೆ ಮಾಡಿದೆ. ಇದು ಕಂಪನಿಗಳ ಕಾಯ್ದೆ, 2013ರ ಪರಿಚ್ಛೇದ-II ರ ಅನುಸರಣೆಗೆ ಹೊಂದಿಕೆಯಾಗುವುದಿಲ್ಲ.

ಕಾಯ್ದೆಯ ಪ್ರಕರಣ 143(10) ರ ಅನ್ವಯ ನಿಗದಿಪಡಿಸಿರುವಂತೆ ಲೆಕ್ಕಪರಿಶೋಧನೆಯ ಮಾನದಂಡಗಳ (ಎಸ್ಎಗಳು) ಅನುಸಾರ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಸ್ವತಂತ್ರ ಹಣಕಾಸಿನ ಹೇಳಿಕೆಗಳ ಬಗ್ಗೆ ನಾವು ನಮ್ಮ ಲೆಕ್ಕ ಪರಿಶೋಧನೆ ಮಾಡಿದ್ದೇವೆ. ಸದರಿ ಮಾನದಂಡಗಳ ಅನ್ವಯದಂತೆ ನಮ್ಮ ಹೊಣೆಗಾರಿಕೆಗಳನ್ನು ನಮ್ಮ ವರದಿಯ ಹಣಕಾಸಿನ ಹೇಳಿಕೆಗಳ ಲೆಕ್ಕ ಪರಿಶೋಧನೆ ಬಗ್ಗೆ ಲೆಕ್ಕಪರಿಶೋಧಕರು ಹೊಂದಿರುವ ಜವಾಬ್ದಾರಿಗಳ ವಿಭಾಗದಲ್ಲಿ ಇನ್ನೂ ವಿವರವಾಗಿ ತಿಳಿಸಲಾಗಿದೆ.

ಕಾಯ್ದೆಯ ಉಪಬಂಧಗಳು ಮತ್ತು ಇದರಡಿಯಲ್ಲಿನ ನಿಯಮಗಳ ಅನ್ವಯ ಹಣಕಾಸಿನ ಹೇಳಿಕೆಗಳ ಬಗ್ಗೆ ನಮ್ಮ ಲೆಕ್ಕಪರಿಶೋಧನೆಗೆ ಸಂಬಂಧಿಸಿದ ನೈತಿಕ ಅಗತ್ಯತೆಗಳ ಜೊತೆಗೆ ಭಾರತದ ಲೆಕ್ಕ ಪರಿಶೋಧಕರ ಸಂಸ್ಥೆ ಹೊರಡಿಸಿರುವ ನೈತಿಕ ಸಂಹಿತೆಗಳ ಅನುಸಾರ ನಾವು ಸ್ವತಂತ್ರರು. ಸದರಿ ಕಂಪನಿಗೆ ನಾವು ಸಂಬಂಧಿಸಿರುವುದಿಲ್ಲ. ನಾವು ಸದರಿ ಅಗತ್ಯತೆಗಳು ಮತ್ತು ನೈತಿಕ ಸಂಹಿತೆಗಳ ಅನುಸಾರ ನಾವು ನಮ್ಮ ಇತರೆ ನೈತಿಕ ಜವಾಬ್ದಾರಿಗಳನ್ನು ಈಡೇರಿಸಿದ್ದೇವೆ. ನಾವು ಪಡೆದುಕೊಂಡಿರುವ ಲೆಕ್ಕಪರಿಶೋಧನೆ ಪುರಾವೆಯು, ನಮ್ಮ ಅರ್ಹತಾ ಅಭಿಪ್ರಾಯಕ್ಕೆ ಆಧಾರ ಒದಗಿಸಲು ಸಾಕಷ್ಟಾಗಿರುವುದು ಮತ್ತು ಸೂಕ್ತವಾಗಿರುವುದೆಂದು ನಾವು ನಂಬಿದ್ದೇವೆ.

## ಹಣಕಾಸಿನ ಹೇಳಿಕೆಗಳು ಮತ್ತು ಇದರ ಮೇಲಿನ ಲೆಕ್ಕಪರಿಶೋಧಕರ ವರದಿ ಹೊರತಾದ ಮಾಹಿತಿ

ಕಂಪನಿಯ ನಿರ್ದೇಶಕರ ಮಂಡಳಿಯು ಇತರೆ ಮಾಹಿತಿ ವಿಚಾರವಾಗಿ ಜವಾಬ್ದಾರರಾಗಿರುವುದು. ಆಡಳಿತ ಮಂಡಳಿಯ ಚರ್ಚೆ ಮತ್ತು ವಿಶ್ಲೇಷಣೆಯಲ್ಲಿ ಒಳಗೊಂಡಿರುವ ಮಾಹಿತಿ, ಮಂಡಳಿಯ ವರದಿಯ ಅನುಬಂಧಗಳು ಸೇರಿದಂತೆ ಮಂಡಳಿಯ ವರದಿ, ಕಾರ್ಪೋರೇಟ್ ಆಡಳಿತ ಮತ್ತು ಷೇರುದಾರರ ಮಾಹಿತಿಯು ಇತರೆ ಮಾಹಿತಿಯಲ್ಲಿ ಸೇರಿರುವುದು. ಆದರೆ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಸ್ವತಂತ್ರ ಹಣಕಾಸಿನ ಹೇಳಿಕೆಗಳು ಮತ್ತು ಇದರ ಮೇಲಿನ ನಮ್ಮ ಲೆಕ್ಕಪರಿಶೋಧಕರ ವರದಿ ಇದರಲ್ಲಿ ಸೇರಿರುವುದಿಲ್ಲ.

ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಸ್ವತಂತ್ರ ಹಣಕಾಸಿನ ಹೇಳಿಕೆಗಳ ಮೇಲಿನ ನಮ್ಮ ಅಭಿಪ್ರಾಯವು ಇತರೆ ಮಾಹಿತಿಯನ್ನು ಒಳಪಡಿಸಿಕೊಂಡಿರುವುದಿಲ್ಲ. ಹಾಗಾಗಿ ಇದರ ಬಗ್ಗೆ ನಾವು ಯಾವುದೇ ರೀತಿಯ ಆಶ್ವಾಸನೆಯುಳ್ಳ ತೀರ್ಮಾನ ತಿಳಿಸುವುದಿಲ್ಲ.

ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಸ್ವತಂತ್ರ ಹಣಕಾಸಿನ ಹೇಳಿಕೆಗಳ ನಮ್ಮ ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ ಇತರೆ ಮಾಹಿತಿಯನ್ನು ಓದುವುದು ನಮ್ಮ ಜವಾಬ್ದಾರಿಯಾಗಿರುವುದು. ಹೀಗೆ ಓದುವಾಗ, ಅಂತಹ ಇತರೆ ಮಾಹಿತಿಯು ಸ್ವತಂತ್ರ ಹಣಕಾಸಿನ ಹೇಳಿಕೆಗಳಿಗೆ ಅಥವಾ ಲೆಕ್ಕಪರಿಶೋಧನೆಯಲ್ಲಿ ಪಡೆದಿರುವ ನಮ್ಮ ಜ್ಞಾನಕ್ಕೆ ವಾಸ್ತವವಾಗಿ ವಿರುದ್ಧವಾಗಿರುವುದೇ ಅಥವಾ ವಾಸ್ತವಿಕವಾಗಿ ತಪ್ಪಾಗಿ ತಿಳಿಸಿರುವುದಾಗಿ ಕಂಡುಬರುವುದೇ ಎಂಬುದನ್ನು ಪರಿಗಣಿಸುವೆವು. ನಾವು ಮಾಡಿರುವ ಕಾರ್ಯದ ಆಧಾರದ ಮೇಲೆ ಸದರಿ ಇತರೆ ಮಾಹಿತಿಯು ವಾಸ್ತವಿಕವಾಗಿ ತಪ್ಪು ಹೇಳಿಕೆಯಾಗಿರುವುದೆಂದು ನಾವು ತೀರ್ಮಾನಕ್ಕೆ ಬರುವೆವು ಮತ್ತು ಈ ಅಂಶವನ್ನು ನಾವು ವರದಿ ಮಾಡಬೇಕಾಗುವುದು. ಇದಲ್ಲದೆ, ಈ ವಿಚಾರವಾಗಿ ನಾವು ವರದಿ ಮಾಡುವುದೇನೂ ಇರುವುದಿಲ್ಲ.

## ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಸ್ವತಂತ್ರ ಹಣಕಾಸಿನ ಹೇಳಿಕೆಗಳ ಬಗ್ಗೆ ಆಡಳಿತ ಮಂಡಳಿಯ ಜವಾಬ್ದಾರಿಗಳು:

ಕಂಪನಿಗಳ (ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟಗಳು) ನಿಯಮಗಳು, 2015 ಓದಿಕೊಂಡಂತೆ ಕಾಯ್ದೆಯ ಪ್ರಕರಣ 133ರ ಅಡಿಯಲ್ಲಿ ನಿರ್ದಿಷ್ಟಪಡಿಸಿರುವಂತೆ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟಗಳು **("Ind As')** ಒಳಗೊಂಡಂತೆ, ಭಾರತದಲ್ಲಿ ಸಾಮಾನ್ಯವಾಗಿ ಅಂಗೀಕರಿಸಿರುವ ಲೆಕ್ಕ ನಿರ್ವಹಣೆ ನೀತಿಗಳ ಅನುಸಾರ, ಇತರೆ ಸಮಗ್ರ, ಆದಾಯ, ನಗದು ಹರಿವು ಮತ್ತು ಕಂಪನಿಯ ಈಕ್ವಿಟಿಯಲ್ಲಿನ ಬದಲಾವಣೆಗಳು ಸೇರಿದಂತೆ ಕಂಪನಿಯ ಹಣಕಾಸಿನ ಸ್ಥಿತಿ, ಹಣಕಾಸಿನ ಕಾರ್ಯಕ್ಷಮತೆಯ ಬಗ್ಗೆ ನೈಜ ಮತ್ತು ನ್ಯಾಯೋಚಿತ ಚಿತ್ರಣ ನೀಡುವ ಸದರಿ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಸ್ವತಂತ್ರ ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸುವ ಸಂಬಂಧದಲ್ಲಿ ಕಾಯ್ದೆಯ ಪ್ರಕರಣ 134(5) ರಲ್ಲಿ ತಿಳಿಸಿರುವ ವಿಚಾರಗಳಿಗೆ ಕಂಪನಿಯ ನಿರ್ದೇಶಕರ ಮಂಡಳಿ ಜವಾಬ್ದಾರಿಯಾಗಿರುವುದು. ಈ ಜವಾಬ್ದಾರಿಯಲ್ಲಿ ಕಂಪನಿಯ ಆಸ್ತಿಗಳ ರಕ್ಷಣೆ ಮಾಡಲು ಮತ್ತು ವಂಚನೆಗಳು ಮತ್ತು ಇತರೆ ಅಕ್ರಮಗಳನ್ನು ತಡೆಗಟ್ಟುವುದು ಮತ್ತು ಪತ್ತೆಹಚ್ಚುವುದು, ಸೂಕ್ತವಾದ ಲೆಕ್ಕ ನಿರ್ವಹಣೆ ನೀತಿಗಳನ್ನು ಆಯ್ಕೆ ಮಾಡುವುದು ಮತ್ತು ಅನ್ವಯಿಸುವುದು; ಸೂಕ್ತವಾದ ಮತ್ತು ನ್ಯಾಯಸಮ್ಮತವಾದ ತೀರ್ಪುಗಳು ಮತ್ತು ಅಂದಾಜುಗಳನ್ನು ಮಾಡುವುದು; ನೈಜ ಮತ್ತು ನ್ಯಾಯೋಚಿತ ಚಿತ್ರಣ ನೀಡುವ ಮತ್ತು ವಂಚನೆ ಅಥವಾ ತಪ್ಪಿನ ಪ್ರಯುಕ್ತ ವಾಸ್ತವಿಕವಾಗಿ ತಪ್ಪು ಹೇಳಿಕೆಗಳಿಲ್ಲದೆ ಮುಕ್ತವಾಗಿರುವ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಸ್ವತಂತ್ರ ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸಲು ಮತ್ತು ನಿರೂಪಿಸಲು ಸೂಕ್ತವಾದ ಲೆಕ್ಕ ನಿರ್ವಹಣೆ ದಾಖಲೆಗಳು ನಿಖರವಾಗಿರುವ ಮತ್ತು ಪರಿಪೂರ್ಣವಾಗಿರುವ ಬಗ್ಗೆ ಖಾತರಿಪಡಿಸಿಕೊಳ್ಳಲು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿರುವ ಸಾಕಷ್ಟು ಮಟ್ಟದ ಆಂತರಿಕ ಹಣಕಾಸಿನ

MSIL

ನಿಯಂತ್ರಣಗಳ ವಿನ್ಯಾಸ, ಅನುಷ್ಠಾನ ಮತ್ತು ನಿರ್ವಹಣೆಯೂ ಸಹ ಒಳಗೊಂಡಿರುವುದು.

ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸುವಲ್ಲಿ, ಕಂಪನಿಯನ್ನು ಪರಿಸಮಾಪ್ತಿಗೊಳಿಸಲು ಅಥವಾ ಕಾರ್ಯಾಚರಣೆಗಳನ್ನು ಸ್ಥಗಿತಗೊಳಿಸಲು, ಅಥವಾ ಹೀಗೆ ಮಾಡದೆ ಯಾವುದೇ ಪರ್ಯಾಯವಾದ ವಾಸ್ತವಿಕ ಅವಕಾಶವಿಲ್ಲವೆಂಬುದಾಗಿ ಆಡಳಿತ ಮಂಡಳಿ ಅಪೇಕ್ಷಿಸಿರದ ಹೊರತಾಗಿ, ಮುಂದುವರಿಯುತ್ತಿರುವ ಸಂಸ್ಥೆಯಾಗಿ ಮುಂದುವರಿಯಲು ಕಂಪನಿ ಹೊಂದಿರುವ ಸಾಮರ್ಥ್ಯ ನಿರ್ಧರಣೆ ಮಾಡುವುದು, ಮುಂದುವರಿಯುತ್ತಿರುವ ಸಂಸ್ಥೆಗೆ ಸಂಬಂಧಿಸಿದ ವಿಚಾರಗಳನ್ನು ಅನ್ವಯವಾಗುವಂತೆ ಪ್ರಕಟಿಸುವುದು ಮತ್ತು ಮುಂದುವರಿಯುತ್ತಿರುವ ಸಂಸ್ಥೆ ಆಧಾರದ ಲೆಕ್ಕ ನಿರ್ವಹಣೆ ವಿಧಾನ ಬಳಸುವುದಕ್ಕೆ ನಿರ್ದೇಶಕರ ಮಂಡಳಿ ಜವಾಬ್ದಾರಿಯಾಗಿರುವುದು.

ಕಂಪನಿಯ ಹಣಕಾಸಿನ ವರದಿಗಾರಿಕೆಯ ಪ್ರಕ್ರಿಯೆಯನ್ನು ಅವಲೋಕನ ಮಾಡುವ ಜವಾಬ್ದಾರಿಯನ್ನು ಸಹ ನಿರ್ದೇಶಕರ ಮಂಡಳಿ ಹೊಂದಿರುವುದು.

**ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಸ್ವತಂತ್ರ ಹಣಕಾಸಿನ ಹೇಳಿಕೆಗಳ ಲೆಕ್ಕ ಪರಿಶೋಧನೆ ಮಾಡಲು ಲೆಕ್ಕ ಪರಿಶೋಧಕರು ಹೊಂದಿರುವ ಜವಾಬ್ದಾರಿಗಳು:**

ಹಣಕಾಸಿನ ಹೇಳಿಕೆಗಳು ವಂಚನೆ ಅಥವಾ ತಪ್ಪುಗಳಿಂದಾಗಿ ವಾಸ್ತವಿಕ ತಪ್ಪು ಹೇಳಿಕೆಗಳಿಲ್ಲದೆ ಸಂಪೂರ್ಣವಾಗಿ ಮುಕ್ತವಾಗಿರುವುದೇ ಎಂಬುದರ ಬಗ್ಗೆ ಸೂಕ್ತವಾದ ಭರವಸೆ ಪಡೆಯುವುದು ಮತ್ತು ನಮ್ಮ ಅಭಿಪ್ರಾಯ ಒಳಗೊಂಡಿರುವ ಲೆಕ್ಕ ಪರಿಶೋಧಕರ ವರದಿ ಒಂದನ್ನು ನೀಡುವುದು ನಮ್ಮ ಧ್ಯೇಯವಾಗಿರುವುದು. ಸೂಕ್ತವಾದ ಭರವಸೆಯು ಉನ್ನತ ಮಟ್ಟದ ಭರವಸೆಯಾಗಿರುವುದು. ಆದರೆ ಎಸ್‌ಎಗಳ ಅನುಸಾರ ನಡೆಸಿದ ಲೆಕ್ಕ ಪರಿಶೋಧನೆಯು ಯಾವಾಗಲೂ ವಾಸ್ತವಿಕ ತಪ್ಪು ಹೇಳಿಕೆಗಳಿದ್ದಾಗ ಅವುಗಳನ್ನು ಪತ್ತೆ ಹಚ್ಚುವುದು ಎಂಬ ಬಗ್ಗೆ ಖಾತರಿಯಾಗಿರುವುದಿಲ್ಲ. ತಪ್ಪು ಹೇಳಿಕೆಗಳು ವಂಚನೆ ಅಥವಾ ತಪ್ಪಿನಿಂದ ಉಂಟಾಗಬಹುದು. ಅವು ಪ್ರತ್ಯೇಕವಾಗಿಯಾಗಲಿ ಅಥವಾ ಒಟ್ಟಾರೆಯಾಗಿಯಾಗಲಿ, ಸದರಿ ಹಣಕಾಸಿನ ಹೇಳಿಕೆಗಳ ಆಧಾರದ ಮೇಲೆ ಬಳಕೆದಾರರು ತೆಗೆದುಕೊಂಡ ಆರ್ಥಿಕ ನಿರ್ಧಾರಗಳ ಮೇಲೆ ಪ್ರಭಾವ ಬೀರಬಹುದು ಎಂಬುದಾಗಿ ಸಕಾರಣವಾಗಿ ನಿರೀಕ್ಷೆ ಮಾಡಿದಾಗ ಮಾತ್ರ ಅವುಗಳನ್ನು ವಾಸ್ತವಿಕ ಎಂಬುದಾಗಿ ಪರಿಗಣಿಸಲಾಗುವುದು.

**ಗುಣಮಟ್ಟದ ಲೆಕ್ಕ ನಿರ್ವಹಣೆಗಳ ಅನುಸಾರ ಲೆಕ್ಕ ಪರಿಶೋಧನೆ ಜೊತೆಗೆ, ನಾವು ಲೆಕ್ಕಪರಿಶೋಧನೆ ಕಾರ್ಯದ ಉದ್ದಕ್ಕೂ ವೃತ್ತಿದಾಯಕ ತೀರ್ಪುಗಳನ್ನು ಮಾಡುವೆವು ಮತ್ತು ವೃತ್ತಿದಾಯಕ ಸಂಶಯವನ್ನು ಪಡುವೆವು ಹಾಗೂ ನಾವು:**

★ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಹಣಕಾಸು ಹೇಳಿಕೆಗಳಲ್ಲಿ, ವಂಚನೆ ಅಥವಾ ತಪ್ಪಿನಿಂದ ವಾಸ್ತವಿಕ ತಪ್ಪು ಹೇಳಿಕೆಗಳು ಉಂಟಾಗುವ ಅಪಾಯಗಳನ್ನು ಗುರುತಿಸುತ್ತೇವೆ ಮತ್ತು ನಿರ್ಧರಣೆ ಮಾಡುತ್ತೇವೆ. ಇಂತಹ ಅಪಾಯಗಳನ್ನು ಪತ್ತೆ ಹಚ್ಚಲು ಸಹಕಾರಿಯಾದ ಲೆಕ್ಕ ಪರಿಶೋಧನಾ ಕ್ರಮಾವಳಿಗಳನ್ನು ರೂಪಿಸುತ್ತೇವೆ ಮತ್ತು ಲೆಕ್ಕಪರಿಶೋಧನೆ ಮಾಡುತ್ತೇವೆ, ಮತ್ತು ನಮ್ಮ ಅಭಿಪ್ರಾಯಕ್ಕೆ ಆಧಾರ ಒದಗಿಸಲು ಸಾಕಷ್ಟು ಮತ್ತು ಸೂಕ್ತವಾದ ಲೆಕ್ಕಪರಿಶೋಧನೆ ಪುರಾವೆ ಪಡೆಯುತ್ತೇವೆ. ವಂಚನೆಯಿಂದ ಉಂಟಾದ ವಾಸ್ತವಿಕ ತಪ್ಪು ಹೇಳಿಕೆಯನ್ನು ಪತ್ತೆ ಹಚ್ಚದಿರುವ ಅಪಾಯವು, ತಪ್ಪಿನಿಂದ ಉಂಟಾಗುವ ಅಪಾಯಕ್ಕಿಂತ ದೊಡ್ಡದಾಗಿರುತ್ತದೆ. ವಂಚನೆಯಲ್ಲಿ ಒಳಸಂಚು, ನಕಲು, ಉದ್ದೇಶಪೂರ್ವಕವಾಗಿ ಬಿಡುವುದು, ತಪ್ಪು ಪ್ರಾತಿನಿಧ್ಯತೆಗಳು ಒಳಗೊಂಡಿರುವವು ಅಥವಾ ಆಂತರಿಕ ನಿಯಂತ್ರಣಕ್ಕೂ ಸಿಗದೆ ನುಸುಳಿಕೊಳ್ಳುವವು. ಆದ್ದರಿಂದ ತಪ್ಪಿನಿಂದ ಉಂಟಾಗುವ ಅಪಾಯಕ್ಕಿಂತ, ವಂಚನೆಯಿಂದ ಉಂಟಾಗುವ ಅಪಾಯ ದೊಡ್ಡದು.

★ ಪ್ರಸ್ತುತ ಸಂದರ್ಭಗಳಿಗೆ ಸೂಕ್ತವಾದ ಲೆಕ್ಕಪರಿಶೋಧನಾ ಕ್ರಮಾವಳಿಗಳನ್ನು ರೂಪಿಸಲು ಲೆಕ್ಕಪರಿಶೋಧನೆಗೆ ಸೂಕ್ತವಾದ ಆಂತರಿಕ ನಿಯಂತ್ರಣದ ಕಲ್ಪನೆಯೊಂದನ್ನು ಪಡೆಯುತ್ತೇವೆ. ಕಾಯ್ದೆಯ ಪ್ರಕರಣ 143(3) (i)ರ ಅನ್ವಯ ನಾವು ಕಂಪನಿಯು ಸಾಕಷ್ಟು ಮಟ್ಟದ ಆಂತರಿಕ ಹಣಕಾಸಿನ ನಿಯಂತ್ರಣಗಳ ವ್ಯವಸ್ಥೆ ಹೊಂದಿರುವುದೇ ಮತ್ತು ಅಂತಹ ನಿಯಂತ್ರಣಗಳು ಪರಿಣಾಮಕಾರಿಯಾಗಿ ಕಾರ್ಯಾಚರಣೆಯಾಗುತ್ತಿರುವವೇ ಎಂಬುದರ ಬಗ್ಗೆ ನಮ್ಮ ಅಭಿಪ್ರಾಯ ತಿಳಿಸಲು ಕೂಡ ಜವಾಬ್ದಾರರಾಗಿರುತ್ತೇವೆ.

★ ಬಳಸಲಾಗಿರುವ ಲೆಕ್ಕ ನಿರ್ವಹಣಾ ನೀತಿಗಳ ಸೂಕ್ತತೆ ಮತ್ತು ಆಡಳಿತ ಮಂಡಳಿ ಮಾಡಿರುವ ಲೆಕ್ಕ ನಿರ್ವಹಣೆ ಅಂದಾಜುಗಳು ಮತ್ತು ಮಾಡಿರುವ ಸಂಬಂಧಪಟ್ಟ ಪ್ರಕಟಣೆಗಳ ತರ್ಕಬದ್ಧತೆಗಳ ಮೌಲ್ಯಮಾಪನ ಮಾಡುವೆವು.

★ ಆಡಳಿತ ಮಂಡಳಿಯು ಮುಂದುವರಿಯುತ್ತಿರುವ ಸಂಸ್ಥೆಯ ಆಧಾರದ ಲೆಕ್ಕ ನಿರ್ವಹಣೆ ವಿಧಾನ ಬಳಕೆ ಮಾಡಿರುವ ಸೂಕ್ತತೆಯನ್ನು ನಿರ್ಧರಿಸುವೆವು, ಮತ್ತು ಪಡೆದುಕೊಂಡಿರುವ ಲೆಕ್ಕ ಪರಿಶೋಧನೆ ಪುರಾವೆ ಆಧಾರದ ಮೇಲೆ ಕಂಪನಿಯು ಮುಂದುವರಿಯುತ್ತಿರುವ ಸಂಸ್ಥೆಯಾಗಿ ಮುಂದುವರಿಯಲು ಸಾಮರ್ಥ್ಯ ಹೊಂದಿರುವ ಬಗ್ಗೆ ಮಹತ್ತರವಾದ ಸಂಶಯ ಉಂಟು ಮಾಡುವ ಘಟನಾವಳಿಗಳು ಅಥವಾ ಪರಿಸ್ಥಿತಿಗಳಿಗೆ ಸಂಬಂಧಿಸಿದಂತೆ ವಾಸ್ತವಿಕ ಅನಿಶ್ಚಿತತೆ ಇರುವುದೇ ಎಂಬುದನ್ನು ನಿರ್ಧರಿಸುತ್ತೇವೆ. ಒಂದು ವೇಳೆ ವಾಸ್ತವಿಕ ಅನಿಶ್ಚಿತತೆ ಇರುವುದಾಗಿ ನಾವು ನಿರ್ಧರಿಸಿದ್ದೇ ಆದಲ್ಲಿ, ಹಣಕಾಸಿನ ಹೇಳಿಕೆಗಳಲ್ಲಿ ತಿಳಿಸಿರುವ ಸಂಬಂಧಪಟ್ಟ ಪ್ರಕಟಣೆಗಳ ಬಗ್ಗೆ ನಮ್ಮ ಲೆಕ್ಕ ಪರಿಶೋಧಕರ ವರದಿಯಲ್ಲಿ ನಾವು ಗಮನ ಸೆಳೆಯಬೇಕಾಗುವುದು ಅಥವಾ ಅಂತಹ ಪ್ರಕಟಣೆಗಳು ಸಾಕಷ್ಟು ಪ್ರಮಾಣದಲ್ಲಿಲ್ಲದಿದ್ದರೆ, ನಮ್ಮ ಅಭಿಪ್ರಾಯ ಮಾರ್ಪಾಡು ಮಾಡಬೇಕಾಗುವುದು. ನಮ್ಮ ತೀರ್ಮಾನಗಳು ನಮ್ಮ ಲೆಕ್ಕಪರಿಶೋಧಕರ ವರದಿ ದಿನಾಂಕದವರೆಗೆ

MSIL

ಪಡೆದುಕೊಂಡ ನಮ್ಮ ಲೆಕ್ಕ ಪರಿಶೋಧನಾ ಪುರಾವೆ ಮೇಲೆ ಆಧಾರಿತವಾಗಿರುವುದು. ಆದರೂ, ಮುಂದಿನ ಘಟನಾವಳಿಗಳು ಅಥವಾ ಪರಿಸ್ಥಿತಿಗಳು ಕಂಪನಿಯು ಮುಂದುವರಿಯುತ್ತಿರುವ ಸಂಸ್ಥೆಯಾಗಿ ಮುಂದುವರಿಯುವುದನ್ನು ಸ್ಥಗಿತಗೊಳ್ಳುವಂತೆ ಮಾಡಬಹುದಾಗಿರುತ್ತದೆ.

★ ಪ್ರಕಟಗೊಳಿಸಿರುವ ಅಂಶಗಳೂ ಸೇರಿದಂತೆ, ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಹಣಕಾಸು ಹೇಳಿಕೆಗಳ ಒಟ್ಟಾರೆ ನಿರೂಪಣೆ, ಸ್ವರೂಪ ಮತ್ತು ವಿಷಯಗಳ ಮೌಲ್ಯಮಾಪನ, ಮತ್ತು ನ್ಯಾಯೋಚಿತ ನಿರೂಪಣೆಯ ರೀತಿಯಲ್ಲಿ ಒಳಪಟ್ಟಿರುವ ವ್ಯವಹಾರಗಳು ಮತ್ತು ಘಟನೆಗಳನ್ನು ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಸ್ವತಂತ್ರ ಹಣಕಾಸು ವಿವರಗಳು ನಿರೂಪಿಸುವವೆ ಎಂಬುದನ್ನು ಮೌಲ್ಯಮಾಪನ ಮಾಡುವೆವು.

ವಾಸ್ತವಿಕವಾಗಿ ಸ್ವತಂತ್ರ ಹಣಕಾಸಿನ ಹೇಳಿಕೆಗಳಲ್ಲಿನ ತಪ್ಪು ಹೇಳಿಕೆಗಳ ಬೃಹತ್ ಅಂಶವು ಪ್ರತ್ಯೇಕವಾಗಿ ಅಥವಾ ಒಟ್ಟಾರೆಯಾಗಿ ಹಣಕಾಸಿನ ಹೇಳಿಕೆಗಳ ಸೂಕ್ತವಾದ ತಿಳುವಳಿಕೆಯುಳ್ಳ ಬಳಕೆದಾರರ ಆರ್ಥಿಕ ತೀರ್ಮಾನಗಳ ಮೇಲೆ ಪ್ರಭಾವ ಬೀರುವ ಸಂಭವವಿರುತ್ತದೆ. (i) ನಮ್ಮ ಲೆಕ್ಕಪರಿಶೋಧನೆ ಕಾರ್ಯದ ವ್ಯಾಪ್ತಿಯನ್ನು ಯೋಜನೆ ಮಾಡಲು ಮತ್ತು ನಮ್ಮ ಕಾರ್ಯದ ಫಲಿತಾಂಶಗಳನ್ನು ಮೌಲ್ಯಮಾಪನ ಮಾಡಲು; ಮತ್ತು (ii) ಹಣಕಾಸಿನ ಹೇಳಿಕೆಗಳಲ್ಲಿನ ಯಾವುದೇ ಗುರುತಿಸಲ್ಪಟ್ಟ ತಪ್ಪು ಹೇಳಿಕೆಗಳ ಪರಿಣಾಮವನ್ನು ಮೌಲ್ಯಮಾಪನ ಮಾಡಲು ಪ್ರಮಾಣಿತ ವಾಸ್ತವತೆ ಮತ್ತು ಪ್ರಮಾಣಿತ ಅಂಶಗಳನ್ನು ನಾವು ಪರಿಗಣಿಸುತ್ತೇವೆ.

ಇತರೆ ವಿಚಾರಗಳ ಜೊತೆಗೆ, ಲೆಕ್ಕ ಪರಿಶೋಧನೆಯ ಯೋಜಿತ ವ್ಯಾಪ್ತಿ ಮತ್ತು ಸಮಯ ಮತ್ತು ನಮ್ಮ ಲೆಕ್ಕಪರಿಶೋಧನೆ ಕಾರ್ಯದ ಅವಧಿಯಲ್ಲಿ ನಾವು ಗುರುತಿಸಿದ ಆಂತರಿಕ ನಿಯಂತ್ರಣದಲ್ಲಿನ ಯಾವುದೇ ಮಹತ್ತರವಾದ ಕೊರತೆಗಳೂ ಸೇರಿದಂತೆ, ಕಂಡು ಬಂದ ಮಹತ್ತರವಾದ ಲೆಕ್ಕಪರಿಶೋಧನಾ ಅಂಶಗಳ ಬಗ್ಗೆ ಆಡಳಿತದ ಹೊಣೆ ಹೊತ್ತಿರುವವರಿಗೆ ನಾವು ತಿಳಿಸುವೆವು.

ನಮ್ಮ ಸ್ವಾತಂತ್ರ್ಯದ ವಿಚಾರವಾಗಿ ಸಂಬಂಧಪಟ್ಟ ನೈತಿಕ ಅಗತ್ಯತೆಗಳನ್ನು ನಾವು ಅನುಸರಿಸಿರುವ ಒಂದು ವಿವರ ಪಟ್ಟಿಯನ್ನು ಆಡಳಿತದ ಜವಾಬ್ದಾರಿ ಹೊಂದಿರುವವರಿಗೆ ನೀಡುವೆವು, ಮತ್ತು ನಮ್ಮ ಸ್ವಾತಂತ್ರ್ಯಕ್ಕೆ ಸಂಬಂಧಿಸಿದ್ದು, ಮತ್ತು ಎಲ್ಲಿ ಅನ್ವಯವಾಗುವುದು, ಸಂಬಂಧಿಸಿದ ಸುರಕ್ಷತೆಗಳೇನು ಎಂಬುದನ್ನು ನಾವು ಸೂಕ್ತವಾಗಿ ಭಾವಿಸಿದ ವಿಚಾರಗಳನ್ನು ಮತ್ತು ಎಲ್ಲಾ ಸಂಬಂಧಗಳನ್ನು ಅವರಿಗೆ ತಿಳಿಸುವೆವು.

## ಇತರೆ ಕಾನೂನು ಮತ್ತು ನಿಯಂತ್ರಣ ಅಗತ್ಯತೆಗಳ ಮೇಲಿನ ವರದಿ:

1. ಕಂಪನಿಗಳ ಕಾಯ್ದೆ, 2013ರ ಪ್ರಕರಣ 143ರ ಉಪ ಪ್ರಕರಣ (11) ರ ಅನ್ವಯ ಕೇಂದ್ರ ಸರ್ಕಾರ ಹೊರಡಿಸಿರುವ ಕಂಪನಿಗಳ (ಲೆಕ್ಕ ಪರಿಶೋಧಕರ ವರದಿ) ಆದೇಶ, 2016 (''ಆದೇಶ'') ರ ಅನ್ವಯ ಅಗತ್ಯವಾದಂತೆ, ಆದೇಶದ ಪ್ಯಾರಾಗ್ರಾಫ್‌ಗಳು 3 ಮತ್ತು 4ರಲ್ಲಿ ನಿರ್ದಿಷ್ಟವಾಗಿ ತಿಳಿಸಿರುವ ವಿಷಯಗಳ ಬಗ್ಗೆ ''ಅನುಬಂಧ-ಎ'' ರಲ್ಲಿ ಅನ್ವಯವಾಗುವ ಪ್ರಮಾಣದವರೆಗೆ ವಿವರಣೆ ಒಂದನ್ನು ನಾವು ನೀಡಿದ್ದೇವೆ.

## 2. ಕಾಯ್ದೆಯ ಪ್ರಕರಣ 143(3)ರ ಅನ್ವಯ ಅಗತ್ಯವಾದಂತೆ ನಾವು ವರದಿ ಮಾಡುವುದೇನೆಂದರೆ;

(ಎ) ನಾವು ನಮ್ಮ ಲೆಕ್ಕ ಪರಿಶೋಧನೆಯ ಉದ್ದೇಶಕ್ಕಾಗಿ ಅಗತ್ಯವೆಂದು ನಮಗೆ ತಿಳಿದುಬಂದ ಮತ್ತು ನಾವು ನಂಬಿರುವಂತೆ ನಾವು ಎಲ್ಲಾ ಮಾಹಿತಿ ಮತ್ತು ವಿವರಣೆಗಳನ್ನು ಕೇಳಿ ಪಡೆದುಕೊಂಡಿದ್ದೇವೆ.

(ಬಿ) ಮೇಲಿನ ಅರ್ಹತಾ ಅಭಿಪ್ರಾಯಕ್ಕೆ ಆಧಾರದ ಪ್ಯಾರಾಗ್ರಾಫ್‌ನಲ್ಲಿ ವಿವರಿಸಿರುವ ವಿಚಾರದ ಸಾಧ್ಯನೀಯ ಪರಿಣಾಮಗಳ ಹೊರತಾಗಿ, ನಮ್ಮ ಅಭಿಪ್ರಾಯದಲ್ಲಿ, ಆ ಪುಸ್ತಕಗಳನ್ನು ನಾವು ಪರಿಶೀಲನೆ ಮಾಡಿದಾಗ ನಮಗೆ ಕಂಡು ಬಂದಂತೆ ಕಂಪನಿಯು ಕಾನೂನಿನ ಅನ್ವಯ ಅಗತ್ಯವಾದಂತೆ ಸೂಕ್ತವಾದ ಲೆಕ್ಕದ ಪುಸ್ತಕಗಳನ್ನು ಇಟ್ಟಿದೆ.

(ಸಿ) ಸದರಿ ವರದಿಯಲ್ಲಿ ಪ್ರಸ್ತಾಪಿಸಿರುವ ಸ್ಥಿತಿ ವಿವರಣಾ ಪಟ್ಟಿ, ಇತರೆ ಸಮಗ್ರ ಆದಾಯ ಸೇರಿದಂತೆ ಲಾಭ ಮತ್ತು ನಷ್ಟದ ವಿವರ, ನಗದು ಹರಿಯುವಿಕೆ ವಿವರ ಮತ್ತು ಈಕ್ವಿಟಿಯಲ್ಲಿನ ಬದಲಾವಣೆಗಳ ವಿವರ ಲೆಕ್ಕದ ಪುಸ್ತಕಗಳ ಅನುಸಾರ ಇರುವುದು;

(ಡಿ) ಮೇಲೆ ತಿಳಿಸಿರುವ ಅರ್ಹತಾ ಅಭಿಪ್ರಾಯಕ್ಕೆ ಆಧಾರದ ಪ್ಯಾರಾಗ್ರಾಫ್ ನಲ್ಲಿ ವಿವರಿಸಿರುವ ವಿಚಾರಗಳ ಸಾಧ್ಯನೀಯ ಪರಿಣಾಮಗಳ ಹೊರತಾಗಿ ನಮ್ಮ ಅಭಿಪ್ರಾಯದಲ್ಲಿ ಮೇಲೆ ತಿಳಿಸಿರುವ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಸ್ವತಂತ್ರ ಹಣಕಾಸಿನ ಹೇಳಿಕೆಗಳು. ಕಾಯ್ದೆಯ ಪ್ರಕರಣ 133 ಜೊತೆಗೆ ಇದರಡಿಯಲ್ಲಿ ಹೊರಡಿಸಿರುವ ಸಂಬಂಧಪಟ್ಟ ನಿಯಮ ಓದಿಕೊಂಡಂತೆ, ಅದರಲ್ಲಿ ನಿರ್ದಿಷ್ಟವಾಗಿ ತಿಳಿಸಿರುವ ಲೆಕ್ಕ ನಿರ್ವಹಣೆ ಗುಣಮಟ್ಟಗಳ ಅನುಸಾರ ಇರುವುದು.

(ಇ) ನಮ್ಮ ಅಭಿಪ್ರಾಯದಲ್ಲಿ, ಮೇಲೆ ತಿಳಿಸಿರುವ ಅರ್ಹತಾ ಅಭಿಪ್ರಾಯಕ್ಕೆ ಆಧಾರದ ಭಾಗದಲ್ಲಿ ವಿವರಿಸಿರುವ ವಿಷಯಗಳು ಕಂಪನಿಯ ಕಾರ್ಯಾಚರಣೆ ಮೇಲೆ ವ್ಯತಿರಿಕ್ತ ಪರಿಣಾಮ ಉಂಟು ಮಾಡದಿರಬಹುದು.

(ಎಫ್) ಸರ್ಕಾರದ ಕಂಪನಿಯಾಗಿರುವುದರಿಂದ, ನೇಮಕವಾಗಿದ್ದ ಯಾವುದೇ ನಿರ್ದೇಶಕರು ಆ ಹುದ್ದೆಯಿಂದ ಅನರ್ಹರಾಗಿರುವರೆ ಎಂಬುವ ವಿಚಾರಕ್ಕೆ ಸಂಬಂಧಿಸಿದ ಕಂಪನಿಗಳ ಕಾಯ್ದೆ, 2013ರ ಪ್ರಕರಣ 164(2) ಕಂಪನಿಗೆ ಅನ್ವಯವಾಗುವುದಿಲ್ಲ.

(ಜಿ) 31ನೇ ಮಾರ್ಚ್ 2019ಕ್ಕೆ ಕೊನೆಗೊಂಡ ವರ್ಷದ ಕಂಪನಿಯ ಸ್ವತಂತ್ರ ಹಣಕಾಸಿನ ವಿವರಗಳ ಬಗ್ಗೆ ನಮ್ಮ ಲೆಕ್ಕಪರಿಶೋಧನೆ ಜೊತೆಗೆ, 31ನೇ ಮಾರ್ಚ್ 2019ರಂದು ಇದ್ದಂತೆ ಕಂಪನಿಯ ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ

ಲೆಕ್ಕಪರಿಶೋಧನೆಯನ್ನು ಸಹ ನಾವು ಮಾಡಿದ್ದೇವೆ ಮತ್ತು ''ಅನುಬಂಧ-ಬಿ'' ಅನ್ವಯದ ನಮ್ಮ ವರದಿಯು ಅರ್ಹತಾ ಅಭಿಪ್ರಾಯ ತಿಳಿಸುವುದು;

(ಎಚ್) ಕಾಯ್ದೆಯ ಪ್ರಕರಣ 197ರ ಉಪಬಂಧಗಳು ಕಂಪನಿಗೆ ಅನ್ವಯವಾಗುವುದಿಲ್ಲವಾದ್ದರಿಂದ, ಕಾಯ್ದೆಯ ಪ್ರಕರಣ 197(16) ರ ಅನ್ವಯ ವರದಿಗಾರಿಕೆಯ ಅಗತ್ಯತೆಗಳು ಅನ್ವಯವಾಗುವುದಿಲ್ಲ.

(ಐ) ಕಂಪನಿಗಳ (ಲೆಕ್ಕಪರಿಶೋಧನೆ ಮತ್ತು ಲೆಕ್ಕಪರಿಶೋಧಕರು) ನಿಯಮಗಳು, 2014ರ ನಿಯಮ 11 ಅನುಸಾರ ಲೆಕ್ಕಪರಿಶೋಧಕರ ವರದಿಯಲ್ಲಿ ಸೇರ್ಪಡೆ ಮಾಡಬೇಕಾಗಿದ್ದ ಇತರೆ ವಿಚಾರಗಳ ಸಂಬಂಧದಲ್ಲಿ, ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗೆ ಗೊತ್ತಿರುವ ಮಾಹಿತಿ ಅನ್ವಯ ಮತ್ತು ನಮಗೆ ನೀಡಿರುವ ವಿವರಣೆಗಳ ಅನುಸಾರ ತಿಳಿಸುವುದೇನೆಂದರೆ:

i. ಕಂಪನಿಯು ತನ್ನ ಹಣಕಾಸಿನ ಪರಿಸ್ಥಿತಿ ಮೇಲೆ ಇತ್ಯರ್ಥವಾಗದೆ ಉಳಿದಿರುವ ವಿವಾದಗಳಿಂದ ಉಂಟಾಗುವ ಪರಿಣಾಮವನ್ನು ಕಂಪನಿ ತಿಳಿಸಿದೆ-ಹಣಕಾಸು ವಿವರಗಳ ಟಿಪ್ಪಣಿ 49 ನೋಡಿ.

ii. ಹೂಡಿಕೆದಾರರ ಶಿಕ್ಷಣಕ್ಕೆ ಮತ್ತು ರಕ್ಷಣೆ ನಿಧಿಗೆ ಕಂಪನಿಯಿಂದ ವರ್ಗಾವಣೆ ಮಾಡಬೇಕಾಗಿರುವ ಯಾವುದೇ ಮೊತ್ತಗಳಿರುವುದಿಲ್ಲ.

3. ಕಂಪನಿಗೆ ಅನ್ವಯವಾಗುವ ಕಾಯ್ದೆಯ ಪ್ರಕರಣ 143(5)ರ ಅನ್ವಯ ಅಗತ್ಯವಾದಂತೆ, ಭಾರತದ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್ ರವರು ಹೊರಡಿಸಿರುವ ನಿರ್ದೇಶನಗಳ ಮೇಲಿನ ಅಭಿಪ್ರಾಯಗಳನ್ನು ಅನುಬಂಧವಾಗಿ ಲಗತ್ತಿಸಿದೆ. (ಅನುಬಂಧ-ಸಿ ನೋಡಿ)

**ಆಭರ್ಣ ಮತ್ತು ಅನಂತನ್**
**ಚಾರ್ಟರ್ಡ್ ಅಕೌಂಟೆಂಟ್ಸ್ ಪರವಾಗಿ**
**ಸಂಸ್ಥೆ ನೋಂದಣಿ ಸಂ.000003ಎಸ್**
**ಸಹಿ/-**
**(ಆಭರ್ಣ ಭಾಸ್ಕರ್)**
**ಪಾಲುದಾರರು, ಸದಸ್ಯತ್ವ ಸಂ.025145**

**ಸ್ಥಳ: ಬೆಂಗಳೂರು**
**ದಿನಾಂಕ:29.09.2019**

MSIL

## ಸ್ವತಂತ್ರ ಲೆಕ್ಕಪರಿಶೋಧಕರ ವರದಿಗೆ 'ಅನುಬಂಧ-ಎ'

31ನೇ ಮಾರ್ಚ್ 2019ಕ್ಕೆ ಕೊನೆಗೊಂಡ ವರ್ಷದ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟಗಳ ಸ್ವತಂತ್ರ ಹಣಕಾಸಿನ ಹೇಳಿಕೆಗಳ ಬಗ್ಗೆ ಕಂಪನಿಯ ಸದಸ್ಯರುಗಳಿಗೆ ನೀಡಿರುವ ಸ್ವತಂತ್ರ ಲೆಕ್ಕಪರಿಶೋಧಕರ ವರದಿಗೆ ಉಲ್ಲೇಖಿತ ಅನುಬಂಧದ ಬಗ್ಗೆ ನಾವು ವರದಿ ಮಾಡುವುದೇನೆಂದರೆ:

1(ಎ) ಕಂಪನಿಯು ಸ್ಥಿರಾಸ್ತಿಗಳ ಸಂಬಂಧದ ಅಂಕಿ ಅಂಶಗಳನ್ನು ವಿದ್ಯುನ್ಮಾನವಾಗಿ ನಿರ್ವಹಣೆ ಮಾಡಿದೆ.

(ಬಿ) ಸ್ಥಿರಾಸ್ತಿಗಳ ಎಲ್ಲಾ ಬಾಬ್ತುಗಳನ್ನು ಹಂತ ಹಂತವಾದ ರೀತಿಯಲ್ಲಿ ಒಳಪಡಿಸಿಕೊಳ್ಳಲು ಕಂಪನಿಯು ಪರಿಶೀಲನೆಯ ಪ್ರೋಗ್ರಾಂ ಒಂದನ್ನು ಹೊಂದಿದೆ. ಇದು ನಮ್ಮ ಅಭಿಪ್ರಾಯದಲ್ಲಿ, ಕಂಪನಿಯ ಗಾತ್ರ ಮತ್ತು ಅದರ ಆಸ್ತಿಗಳ ಸ್ವರೂಪಕ್ಕೆ ಸಂಬಂಧಿಸಿದಂತೆ ಸೂಕ್ತವಾಗಿದೆ. ಪ್ರೋಗ್ರಾಂನ ಅನುಸಾರ ಈ ವರ್ಷದಲ್ಲಿ ಕೆಲವು ಸ್ಥಿರಾಸ್ತಿಗಳನ್ನು ಪರಿಶೀಲನೆ ಮಾಡಿದೆ ಮತ್ತು ನಮಗೆ ತಿಳಿಸಿರುವಂತೆ ಈ ವರ್ಷದಲ್ಲಿ ನಡೆಸಿದ ಸದರಿ ಪರಿಶೀಲನೆಯಲ್ಲಿ ಯಾವುದೇ ವಾಸ್ತವಿಕ ವ್ಯತ್ಯಾಸಗಳು ಕಂಡು ಬಂದಿರುವುದಿಲ್ಲ. ಲೆಕ್ಕದ ಪುಸ್ತಕಗಳಲ್ಲಿ ತಿಳಿಸಿರುವಂತೆ ಸ್ಥಿರಾಸ್ತಿಗಳ ಮೌಲ್ಯದೊಡನೆ ನಡೆಸಿದ ಭೌತಿಕ ಪರಿಶೀಲನೆ ವರದಿಯನ್ನು ನಮ್ಮ ಪರಿಶೀಲನೆಗೆ ಒದಗಿಸಿರುವುದಿಲ್ಲ.

(ಸಿ) ನಮಗೆ ಒದಗಿಸಿದ ಮಾಹಿತಿ ಮತ್ತು ನೀಡಿದ ವಿವರಣೆಗಳ ಅನುಸಾರ, ನಾವು ನಿರ್ವಹಣೆ ಮಾಡಿರುವ ದಾಖಲೆಗಳು ಮತ್ತು ನಮಗೆ ಒದಗಿಸಿದ ವರ್ಗಾವಣೆ ಪತ್ರಗಳ ಪರಿಶೀಲನೆ ಆಧಾರದ ಮೇಲೆ ನಾವು ವರದಿ ಮಾಡುವುದೇನೆಂದರೆ, ಮುಕ್ತ ಹಿಡುವಳಿಯದಾಗಿರುವ ಸ್ಥಿರಾಸ್ತಿಗಳಾದ ಜಮೀನು ಮತ್ತು ಕಟ್ಟಡಗಳ ಹಕ್ಕು ಪತ್ರಗಳು ಸ್ಥಿತಿ ವಿವರಣಾ ಪಟ್ಟಿಯ ದಿನಾಂಕದಂದು ಇದ್ದಂತೆ ಕಂಪನಿಯ ಹೆಸರಿನಲ್ಲಿರುವವು. ಗುತ್ತಿಗೆ ಮೇಲೆ ಪಡೆದಿರುವ ಮತ್ತು ಹಣಕಾಸಿನ ಹೇಳಿಕೆಗಳಲ್ಲಿ ಆಸ್ತಿ, ಸ್ಥಾವರ ಮತ್ತು ಉಪಕರಣ ಎಂಬುದಾಗಿ ತಿಳಿಸಿರುವ ಜಮೀನಿನ ಸ್ಥಿರಾಸ್ತಿಗಳ ಸಂಬಂಧದಲ್ಲಿ ಗುತ್ತಿಗೆ ಕರಾರುಪತ್ರಗಳು ಕಂಪನಿಯ ಹೆಸರಿನಲ್ಲಿರುವವು. ಕರಾರುಪತ್ರದಲ್ಲಿ ಕಂಪನಿಯು ಗುತ್ತಿಗೆ ಪಡೆದಿರುವದಾಗಿರುವುದು. ಈ ಕೆಳಕಂಡ ಆಸ್ತಿಗಳಿಗೆ ಸಂಬಂಧಿಸಿದ ಹಕ್ಕುಪತ್ರಗಳನ್ನು ನಮ್ಮ ಪರಿಶೀಲನೆಗೆ ಒದಗಿಸಿರುವುದಿಲ್ಲ.

| ಮುಕ್ತ ಹಿಡುವಳಿ ಸ್ವತ್ತು | |
|---|---|
| **ಸ್ವತ್ತಿನ ಹೆಸರು** | **ಸ್ವತ್ತಿನ ಸ್ಥಳ** |
| ಎಂಎಸ್ಐಎಲ್ ಹೌಸ್– ಕನ್ನಿಂಗ್ ಹ್ಯಾಂ ರಸ್ತೆ | ಕನ್ನಿಂಗ್ ಹ್ಯಾಂ ರಸ್ತೆ, ಬೆಂಗಳೂರು |
| ಒಬೆರಾಯ್ ಅಪಾರ್ಟ್‌ಮೆಂಟ್ | ನವದೆಹಲಿ |
| ಶಿವ್‌ರಾಜ್ ಮೋಟಾರ್ಸ್ ಲಿ. ಸ್ವತ್ತು | ಚೆನ್ನೈ |
| ಕೆ.ಟಿ. ಅಪಾರ್ಟ್‌ಮೆಂಟ್ | ಬೆಂಗಳೂರು |
| ಮುಂಬೈ ಪಾಲಿ ರಸ್ತೆ, ಬಾಂದ್ರ ಸ್ವತ್ತು | ಬಾಂದ್ರ ಮುಂಬೈ |

| | |
|---|---|
| ಅರುಣ್ ಕಮರ್ಷಿಯಲ್ ಪ್ರೀಮಿಸಸ್ ಕೋ-ಆಪರೇಟಿವ್ ಸೊಸೈಟಿ | ಮುಂಬೈ |
| ಗುತ್ತಿಗೆ ಹಿಡುವಳಿ ಸ್ವತ್ತು | |
| **ಸ್ವತ್ತಿನ ಹೆಸರು** | **ಸ್ವತ್ತಿನ ಸ್ಥಳ** |
| ವರ್ಲ್ಡ್ ಟ್ರೇಡ್ ಸೆಂಟರ್-ಮುಂಬೈ ಶಾಪ್-3 | ಮುಂಬೈ |
| ಬೆಂಗಳೂರು ಏರ್ ಕಾರ್ಗೋ ಕಾಂಪ್ಲೆಕ್ಸ್ | ಬೆಂಗಳೂರು |

2. ನಮಗೆ ಒದಗಿಸಿರುವ ಮಾಹಿತಿ ಮತ್ತು ನೀಡಿರುವ ವಿವರಣೆಗಳ ಅನ್ವಯ, ಕಂಪನಿ ಹೊಂದಿರುವ ತಪಶೀಲು ಸರಕು ಮತ್ತು ಗುತ್ತಿಗೆದಾರರಲ್ಲಿ ಮತ್ತು ಇತರೆ ವ್ಯಕ್ತಿಗಳಲ್ಲಿ ಇರುವ ಇತರೆ ದಾಸ್ತಾನುಗಳನ್ನು ಈ ವರ್ಷದ ಅವಧಿಯಲ್ಲಿ ಸೂಕ್ತವಾದ ಅಂತರಗಳಲ್ಲಿ ಆಡಳಿತ ಮಂಡಳಿ ಭೌತಿಕ ಪರಿಶೀಲನೆ ಮಾಡಿದೆ. ಸದರಿ ಪರಿಶೀಲನೆಯ ಅವಧಿಯಲ್ಲಿ ಯಾವುದೇ ವ್ಯತ್ಯಾಸ ಕಂಡುಬಂದಿರುವುದಿಲ್ಲ.

3. ನಮಗೆ ಒದಗಿಸಿರುವ ಮಾಹಿತಿ ಮತ್ತು ನೀಡಿರುವ ವಿವರಣೆಗಳ ಅನುಸಾರ, ಕಂಪನಿಗಳು, ಸಂಸ್ಥೆಗಳು, ಸೀಮಿತ ಹೊಣೆಗಾರಿಕೆಯ ಪಾಲುದಾರಿಕೆ ಸಂಸ್ಥೆಗಳು ಅಥವಾ ಕಾಯ್ದೆಯ ಪ್ರಕರಣ 189ರ ಅನ್ವಯ ನಿರ್ವಹಣೆ ಮಾಡಿರುವ ರಿಜಿಸ್ಟರ್‌ನಲ್ಲಿ ಒಳಪಟ್ಟಿರುವ ಇತರೆ ವ್ಯಕ್ತಿಗಳಿಗೆ ಭದ್ರತೆಯುಳ್ಳ ಅಥವಾ ಭದ್ರತೆಯಿಲ್ಲದ ಯಾವುದೇ ಸಾಲಗಳನ್ನು ಕಂಪನಿ ನೀಡಿರುವುದಿಲ್ಲ. ಹಾಗಾಗಿ, ಆದೇಶದ ಪ್ಯಾರಾಗ್ರಾಫ್ 3(iii) (ಎ) (ಬಿ) ಮತ್ತು (ಸಿ)ನ ಉಪಬಂಧಗಳು ಕಂಪನಿಗೆ ಅನ್ವಯವಾಗುವುದಿಲ್ಲ.

4. ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗೆ ಒದಗಿಸಿರುವ ಮಾಹಿತಿ ಮತ್ತು ನೀಡಿರುವ ವಿವರಣೆಗಳ ಅನುಸಾರ ಕಂಪನಿಗಳ ಕಾಯ್ದೆ 2013ರ ಪ್ರಕರಣಗಳು 185 ಮತ್ತು 186ರ ಉಪಬಂಧಗಳ ಅನ್ವಯ ಕಂಪನಿಯು ಯಾವುದೇ ಸಾಲಗಳನ್ನು ನೀಡಿರುವುದಿಲ್ಲ ಅಥವಾ ಯಾವುದೇ ಹೂಡಿಕೆಗಳನ್ನು ಮಾಡಿರುವುದಿಲ್ಲ ಅಥವಾ ಯಾವುದೇ ಖಾತರಿ ಅಥವಾ ಭದ್ರತೆ ನೀಡಿರುವುದಿಲ್ಲ.

5. ಕಂಪನಿಯು ಈ ವರ್ಷದ ಅವಧಿಯಲ್ಲಿ ಠೇವಣಿಗಳನ್ನು ಅಂಗೀಕರಿಸಿರುವುದಿಲ್ಲ ಮತ್ತು 31ನೇ ಮಾರ್ಚ್ 2019ರಂದು ಇದ್ದಂತೆ ಯಾವುದೇ ಕೇಳದಿರುವ ಠೇವಣಿಗಳನ್ನು ಹೊಂದಿರುವುದಿಲ್ಲ. ಆದ್ದರಿಂದಾಗಿ ಆದೇಶದ ಕಲಂ 3 (v) ಕಂಪನಿಗೆ ಅನ್ವಯವಾಗುವುದಿಲ್ಲ.

6. ನಮಗೆ ಒದಗಿಸಿರುವ ಮಾಹಿತಿ ಮತ್ತು ನೀಡಿರುವ ವಿವರಣೆಗಳ ಅನುಸಾರ, ತಿದ್ದುಪಡಿಯಾದಂತೆ ಕಂಪನಿಗಳ (ವೆಚ್ಚದ ದಾಖಲೆಗಳು ಮತ್ತು ಲೆಕ್ಕಪರಿಶೋಧನೆ) ನಿಯಮಗಳು, 2014ರ ಅನ್ವಯ ಮತ್ತು ಕಂಪನಿಗಳ ಕಾಯ್ದೆ, 2013ರ ಪ್ರಕರಣ 148(1)ರ ಅನ್ವಯ ಕೇಂದ್ರ ಸರ್ಕಾರ ನಿಗದಿಪಡಿಸಿರುವಂತೆ ವೆಚ್ಚದ ದಾಖಲೆಗಳನ್ನು ಕಂಪನಿ ನಿರ್ವಹಣೆ ಮಾಡಬೇಕಾಗಿರುವುದಿಲ್ಲ.

MSIL

7(ಎ) ನಮಗೆ ಒದಗಿಸಿದ ಮಾಹಿತಿ ಮತ್ತು ನಮಗೆ ನೀಡಿದ ವಿವರಣೆಗಳ ಅನ್ವಯ ಮತ್ತು ದಾಖಲೆಗಳನ್ನು ನಾವು ಪರಿಶೀಲನೆ ಮಾಡಿದ ಆಧಾರದ ಮೇಲೆ, ನಮ್ಮ ಅಭಿಪ್ರಾಯದಲ್ಲಿ, ಭವಿಷ್ಯ ನಿಧಿ, ಕಾರ್ಮಿಕರ ರಾಜ್ಯ ವಿಮೆ, ಆದಾಯ ತೆರಿಗೆ, ಸರಕು ಮತ್ತು ಸೇವಾ ತೆರಿಗೆ, ಮಾರಾಟ ತೆರಿಗೆ, ಸೇವಾ ತೆರಿಗೆ, ಸೀಮಾ ಸುಂಕ, ಅಬಕಾರಿ ಸುಂಕ, ಮೌಲ್ಯವರ್ಧಿತ ತೆರಿಗೆಗಳು, ಸೆಸ್ ಮತ್ತು ಇತರೆ ಶಾಸನಬದ್ಧ ಬಾಕಿಗಳೂ ಸೇರಿದಂತೆ ವಿವಾದ ರಹಿತವಾದ ಶಾಸನಬದ್ಧ ಬಾಕಿಗಳನ್ನು ಸೂಕ್ತವಾದ ಪ್ರಾಧಿಕಾರಿಯವರಿಗೆ ಕಂಪನಿ ಸಾಮಾನ್ಯವಾಗಿ ನಿಯಮಿತವಾಗಿ ಸಂದಾಯ ಮಾಡಿದೆ.

(ಬಿ) ನಮಗೆ ಒದಗಿಸಿರುವ ಮಾಹಿತಿ ಮತ್ತು ನೀಡಿರುವ ವಿವರಣೆಗಳ ಅನುಸಾರ, ಭವಿಷ್ಯ ನಿಧಿ, ಕಾರ್ಮಿಕರ ರಾಜ್ಯ ವಿಮೆ, ಆದಾಯ ತೆರಿಗೆ, ಮಾರಾಟ ತೆರಿಗೆ, ಸೇವಾ ತೆರಿಗೆ, ಸೀಮಾ ಸುಂಕ, ಅಬಕಾರಿ ಸುಂಕ, ಮೌಲ್ಯವರ್ಧಿತ ತೆರಿಗೆ, ಸರಕು ಮತ್ತು ಸೇವಾ ತೆರಿಗೆ, ಸೆಸ್ ಮತ್ತು ಯಾವುದೇ ಇತರೆ ಶಾಸನಬದ್ಧ ಬಾಕಿಗಳ ಸಂಬಂಧದಲ್ಲಿ ಪಾವತಿ ಮಾಡಬೇಕಿರುವ ವಿವಾದರಹಿತ ಮೊತ್ತಗಳು 31ನೇ ಮಾರ್ಚ್ 2019ರಂದು ಇದ್ದಂತೆ ಅವುಗಳನ್ನು ಪಾವತಿ ಮಾಡಬೇಕಾಗಿದ್ದ ದಿನಾಂಕದಿಂದ ಆರು ತಿಂಗಳುಗಳಿಗಿಂತ ಹೆಚ್ಚಿನ ಅವಧಿಗೆ ಬಾಕಿಯಿರುವುದಿಲ್ಲ.

(ಸಿ) ನಮಗೆ ಒದಗಿಸಿರುವ ಮಾಹಿತಿ ಮತ್ತು ನೀಡಿರುವ ವಿವರಣೆಗಳ ಅನುಸಾರ ಕೆಳಗೆ ವಿವರಿಸಿರುವವುಗಳು ಹೊರತಾಗಿ ಯಾವುದೇ ವಿವಾದದ ಪ್ರಯುಕ್ತ ಸೂಕ್ತವಾದ ಪ್ರಾಧಿಕಾರಿಗಳಿಗೆ ಪಾವತಿ ಮಾಡದಿರುವ ಆದಾಯ ತೆರಿಗೆ, ಸೀಮಾ ಸುಂಕ, ಮಾರಾಟ ತೆರಿಗೆ, ಅಬಕಾರಿ ಸುಂಕ, ಸೇವಾ ತೆರಿಗೆ, ಸರಕು ಮತ್ತು ಸೇವಾ ತೆರಿಗೆ ಮತ್ತು ಮೌಲ್ಯವರ್ಧಿತ ತೆರಿಗೆಯ ಯಾವುದೇ ಬಾಕಿಗಳಿರುವುದಿಲ್ಲ.

| ಕ್ರ. ಸಂ. | ಕಾಯ್ದೆ ಹೆಸರು | ಬಾಕಿಗಳ ಸ್ವರೂಪ | ಮೊತ್ತವು ಸಂಬಂಧಿಸಿರುವ ಅವಧಿ | ಮೊತ್ತ ರೂ. ಕೋಟಿ ಗಳಲ್ಲಿ | ವಿವಾದ ಇತ್ಯರ್ಥವಾಗದೆ ಉಳಿದಿರುವ ವೇದಿಕೆ |
|---|---|---|---|---|---|
| 1. | ಹಣಕಾಸು ಕಾಯ್ದೆ, 1994 | ಸೇವಾ ತೆರಿಗೆ | 2005-06 ಮತ್ತು 2006-07 | 0.38 | ಸೀಮಾಸುಂಕ ಅಬಕಾರಿ ಮತ್ತು ಸೇವಾ ತೆರಿಗೆ ಮೇಲ್ಮನವಿ ನ್ಯಾಯಾಧೀಕರಣ |
| 2. | ಹಣಕಾಸು ಕಾಯ್ದೆ, 1994 | ಸೇವಾ ತೆರಿಗೆ | 2002-03 ಮತ್ತು 2003-04 | 0.06 | ಸೀಮಾಸುಂಕ ಅಬಕಾರಿ ಮತ್ತು ಸೇವಾ ತೆರಿಗೆ ಮೇಲ್ಮನವಿ ನ್ಯಾಯಾಧೀಕರಣ |
| 3. | ಹಣಕಾಸು ಕಾಯ್ದೆ, 1994 | ಸೇವಾ ತೆರಿಗೆ | 2007-08 ಮತ್ತು 2008-09 | 0.26 | ಸೀಮಾಸುಂಕ ಅಬಕಾರಿ ಮತ್ತು ಸೇವಾ ತೆರಿಗೆ ಮೇಲ್ಮನವಿ ನ್ಯಾಯಾಧೀಕರಣ |
| 4. | ಹಣಕಾಸು ಕಾಯ್ದೆ, 1994 | ಸೇವಾ ತೆರಿಗೆ | 2013-14 ರಿಂದ 2014-15ರವರೆಗೆ | 0.39 | ಸೀಮಾಸುಂಕ ಅಬಕಾರಿ ಮತ್ತು ಸೇವಾ ತೆರಿಗೆ ಮೇಲ್ಮನವಿ ನ್ಯಾಯಾಧೀಕರಣ |
| 5. | ಹಣಕಾಸು ಕಾಯ್ದೆ, 1994 | ಸೇವಾ ತೆರಿಗೆ | 2015-16 | 0.67 | ಆಯುಕ್ತರು (ಎಲ್‌ಟಿಯು) |
| 6. | ಆದಾಯ ತೆರಿಗೆ ಕಾಯ್ದೆ, 1961 | ಆದಾಯ ತೆರಿಗೆ ಮೂಲದಲ್ಲೇ ತೆರಿಗೆ ಸಂಗ್ರಹ | 1995-96 ರಿಂದ 2000-01ರವರೆಗೆ | 20.05 | ಸರ್ವೋಚ್ಚ ನ್ಯಾಯಾಲಯ |
| | | ಆದಾಯ ತೆರಿಗೆ ಮೂಲದಲ್ಲೇ ತೆರಿಗೆ ಸಂಗ್ರಹ | 2001-02 ರಿಂದ 2003-04ರವರೆಗೆ | 10.17 | ಉಚ್ಚ ನ್ಯಾಯಾಲಯ, ಬೆಂಗಳೂರು |
| | | ಆದಾಯ ತೆರಿಗೆ ಮೂಲದಲ್ಲೇ ತೆರಿಗೆ ಸಂಗ್ರಹದ ಮೇಲಿನ ಬಡ್ಡಿ | 1994-95 ರಿಂದ 1999-2000 ರವರೆಗೆ | 30.67 | ಸರ್ವೋಚ್ಚ ನ್ಯಾಯಾಲಯ |
| 7. | ಆದಾಯ ತೆರಿಗೆ ಕಾಯ್ದೆ, 1961 | ಆದಾಯ ತೆರಿಗೆ ಕಾಯ್ದೆ ಅನ್ವಯ ಅವಕಾಶ ನಿರಾಕರಣೆ | ಆರ್ಥಿಕ ವರ್ಷ 2010-11 | 3.42 | ಸಿಐಟಿ (ಮೇಲ್ಮನವಿಗಳು) |
| 8. | ಆದಾಯ ತೆರಿಗೆ ಕಾಯ್ದೆ, 1961 | ಆದಾಯ ತೆರಿಗೆ ಕಾಯ್ದೆ ಅನ್ವಯ ಅವಕಾಶ ನಿರಾಕರಣೆ | ಆರ್ಥಿಕ ವರ್ಷ 2015-16 | 0.19 | ಸಿಐಟಿ (ಮೇಲ್ಮನವಿಗಳು) |

8. ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗೆ ಒದಗಿಸಿರುವ ಮಾಹಿತಿ ಮತ್ತು ನೀಡಿರುವ ವಿವರಣೆಗಳನುಸಾರ, ಕಂಪನಿಯು ಬ್ಯಾಂಕುಗಳಿಂದ ಯಾವುದೇ ಸಾಲಗಳನ್ನು ಪಡೆದಿರುವುದಿಲ್ಲ. ಆದ್ದರಿಂದ ಸದರಿ ಕಲಂನ ಉಪಬಂಧಗಳು ಕಂಪನಿಗೆ ಅನ್ವಯವಾಗುವುದಿಲ್ಲ. ಕಂಪನಿಯು ಯಾವುದೇ ಡಿಬೆಂಚರುಗಳನ್ನು ನೀಡಿರುವುದಿಲ್ಲ.

9. ಕಂಪನಿಯು ಈ ವರ್ಷದ ಅವಧಿಯಲ್ಲಿ ಪ್ರಾರಂಭಿಕ ಸಾರ್ವಜನಿಕ ಕೊಡುಗೆ ಅಥವಾ ನಂತರದ ಸಾರ್ವಜನಿಕ ಕೊಡುಗೆ (ಋಣಪತ್ರಗಳೂ ಸೇರಿದಂತೆ) ಮತ್ತು ಅವಧಿ ಸಾಲಗಳ ಮೂಲಕ ಯಾವುದೇ ಹಣ ಸಂಗ್ರಹಿಸಿರುವುದಿಲ್ಲ. ಆದ್ದರಿಂದಾಗಿ ಆದೇಶದ ಪ್ಯಾರಾಗ್ರಾಫ್ 3 (ix) ಅನ್ವಯವಾಗುವುದಿಲ್ಲ.

10. ನಮಗೆ ಒದಗಿಸಿರುವ ಮಾಹಿತಿ ಮತ್ತು ನೀಡಿರುವ ವಿವರಣೆಗಳ ಅನುಸಾರ ಕಂಪನಿಯು ಯಾವುದೇ ವಾಸ್ತವಿಕ ವಂಚನೆಯನ್ನು ಮಾಡಿರುವುದು ಅಥವಾ ಕಂಪನಿಯ ಅಧಿಕಾರಿಗಳು ಅಥವಾ ನೌಕರರು ಕಂಪನಿಗೆ ಯಾವುದೇ ವಂಚನೆ ಮಾಡಿರುವುದು ಈ ವರ್ಷದ ಅವಧಿಯಲ್ಲಿ ಕಂಡುಬಂದಿರುವುದಿಲ್ಲ ಅಥವಾ ವರದಿಯಾಗಿಲ್ಲ.

11. ಸರ್ಕಾರದ ಕಂಪನಿಯಾಗಿರುವುದರಿಂದ, ವ್ಯವಸ್ಥಾಪನಾ ಅಧಿಕಾರಿಗಳಿಗೆ ಸಂಭಾವನೆಯ ವಿಚಾರಕ್ಕೆ ಸಂಬಂಧಿಸಿದಂತೆ ಕಾಯ್ದೆಯ ಪರಿಚ್ಛೇದ-v ಒದಿಕೊಂಡಂತೆ ಪ್ರಕರಣ 197ರ ಉಪಬಂಧಗಳು ಅನ್ವಯವಾಗುವುದಿಲ್ಲ.

12. ಕಂಪನಿಯು ನಿಧಿ ಕಂಪನಿಯಾಗಿರುವುದಿಲ್ಲ. ಆದ್ದರಿಂದ ಆದೇಶದ ಕಲಂ 3 (xii) ರ ಉಪಬಂಧಗಳು ಕಂಪನಿಗೆ ಅನ್ವಯವಾಗುವುದಿಲ್ಲ.

13. ನಮಗೆ ಒದಗಿಸಿರುವ ಮಾಹಿತಿ ಮತ್ತು ನೀಡಿರುವ ವಿವರಣೆಗಳ ಅನುಸಾರ ಮತ್ತು ನಾವು ಕಂಪನಿಯ ದಾಖಲೆಗಳನ್ನು ಪರಿಶೀಲನೆ ಮಾಡಿದ ಆಧಾರದ ಮೇಲೆ, ಸಂಬಂಧಪಟ್ಟ ವ್ಯಕ್ತಿಗಳ ಜೊತೆಗಿನ ವ್ಯವಹಾರವು ಕಾಯ್ದೆಯ ಪ್ರಕರಣಗಳು 177 ಮತ್ತು 188 ಅನ್ನು ಎಲ್ಲಿ ಅನ್ವಯವಾಗುವುದೊ ಅದರಂತೆ, ಅನುಸರಣೆ ಮಾಡಲಾಗಿದೆ ಮತ್ತು ಅನ್ವಯವಾಗುವ ಲೆಕ್ಕ ನಿರ್ವಹಣೆ ಮಾನದಂಡಗಳನ್ವಯ ಅಗತ್ಯವಾದಂತೆ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಸ್ವತಂತ್ರ ಹಣಕಾಸಿನ ಹೇಳಿಕೆಗಳಲ್ಲಿ ಅಂತಹ ವ್ಯವಹಾರಗಳ ವಿವರಗಳನ್ನು ತಿಳಿಸಲಾಗಿದೆ.

14. ಈ ವರ್ಷದ ಅವಧಿಯಲ್ಲಿ ಕಂಪನಿಯು ಷೇರುಗಳ ಯಾವುದೇ ಆದ್ಯತೆಯ ಹಂಚಿಕೆ ಅಥವಾ ಖಾಸಗಿಯವರಿಗೆ ನೀಡಿರುವುದಿಲ್ಲ ಅಥವಾ ಪೂರ್ಣವಾಗಿ ಅಥವಾ ಭಾಗಶಃವಾಗಿ ಪರಿವರ್ತಿಸಬಹುದಾದ ಡಿಬೆಂಚರುಗಳನ್ನು ನೀಡಿರುವುದಿಲ್ಲ. ಆದ್ದರಿಂದಾಗಿ ಆದೇಶದ ಕಲಂ 3(xiv)ಕಂಪನಿಗೆ ಅನ್ವಯವಾಗುವುದಿಲ್ಲ.

15. ನಮಗೆ ಒದಗಿಸಿರುವ ಮಾಹಿತಿ ಮತ್ತು ನೀಡಿರುವ ವಿವರಣೆಗಳ ಅನುಸಾರ ಮತ್ತು ಕಂಪನಿಯ ದಾಖಲೆಗಳನ್ನು ನಾವು ಪರಿಶೀಲನೆ ಮಾಡಿದ ಆಧಾರದ ಮೇಲೆ ತಿಳಿಸುವುದೇನೆಂದರೆ ಕಂಪನಿಯು ನಿರ್ದೇಶಕರ ಜೊತೆ ಅಥವಾ ಇವರಿಗೆ ಸಂಬಂಧಪಟ್ಟ ವ್ಯಕ್ತಿಗಳ ಜೊತೆ ನಗದೇತರ ವ್ಯವಹಾರಗಳನ್ನು ನಡೆಸಿರುವುದಿಲ್ಲ. ಆದ್ದರಿಂದಾಗಿ ಆದೇಶದ ಪ್ಯಾರಾಗ್ರಾಫ್ 3 (xv) ಅನ್ವಯವಾಗುವುದಿಲ್ಲ.

16. ಭಾರತೀಯ ರಿಸರ್ವ್ ಬ್ಯಾಂಕ್ ಕಾಯ್ದೆ, 1934ರ ಪ್ರಕರಣ 45-1ಎ ಅನ್ವಯ ಕಂಪನಿಯು ನೋಂದಣಿ ಮಾಡಿಸಬೇಕಾದ ಅಗತ್ಯವಿರುವುದಿಲ್ಲ.

**ಆಭರ್ಣ ಮತ್ತು ಅನಂತನ್**
**ಚಾರ್ಟರ್ಡ್ ಅಕೌಂಟೆಂಟ್ಸ್ ಪರವಾಗಿ**
**ಸಂಸ್ಥೆ ನೋಂದಣಿ ಸಂ.000003ಎಸ್**
**ಸಹಿ/-**
**(ಆಭರ್ಣ ಭಾಸ್ಕರ್)**
**ಪಾಲುದಾರರು,**
**ಸದಸ್ಯತ್ವ ಸಂ.025145**

ಸ್ಥಳ: ಬೆಂಗಳೂರು
ದಿನಾಂಕ:29.09.2019

# ಸ್ವತಂತ್ರ ಲೆಕ್ಕಪರಿಶೋಧಕರ ವರದಿಗೆ ''ಅನುಬಂಧ-ಬಿ''

### ಕಂಪನಿಗಳ ಕಾಯ್ದೆ, 2013ರ ('ಕಾಯ್ದೆ') ಪ್ರಕರಣ 143ರ ಉಪ ಪ್ರಕರಣ 3 ರ ಕಲಂ(i)ರ ಅನ್ವಯ ಆಂತರಿಕ ಹಣಕಾಸಿನ ನಿಯಂತ್ರಣಗಳ ಬಗ್ಗೆ ವರದಿ

31ನೇ ಮಾರ್ಚ್ 2019ಕ್ಕೆ ಕೊನೆಗೊಂಡ ವರ್ಷದ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಸ್ವತಂತ್ರ ಹಣಕಾಸಿನ ಹೇಳಿಕೆಗಳ ನಮ್ಮ ಲೆಕ್ಕಪರಿಶೋಧನೆ ಜೊತೆಗೆ ಸದರಿ ದಿನಾಂಕದಂದು ಇದ್ದಂತೆ ಮೈಸೂರ್ ಸೇಲ್ಸ್ ಇಂಟರ್ ನ್ಯಾಷನಲ್ ಲಿಮಿಟೆಡ್ ('ಕಂಪನಿ') ಕಂಪನಿಯ ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಲೆಕ್ಕ ಪರಿಶೋಧನೆಯನ್ನು ನಾವು ಮಾಡಿದ್ದೇವೆ.

### ಆಂತರಿಕ ಹಣಕಾಸಿನ ನಿಯಂತ್ರಣಗಳ ಬಗ್ಗೆ ಆಡಳಿತ ಮಂಡಳಿಯ ಜವಾಬ್ದಾರಿ:

ಕಂಪನಿಯ ಆಡಳಿತ ಮಂಡಳಿಯು, 'ಭಾರತದ ಚಾರ್ಟರ್ಡ್ ಅಕೌಂಟೆಂಟ್ಸ್ ಸಂಸ್ಥೆ (''ಐಸಿಎಐ'') ಹೊರಡಿಸಿರುವ ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಲೆಕ್ಕಪರಿಶೋಧನೆಯ ಬಗ್ಗೆಗಿನ ಮಾರ್ಗದರ್ಶಿ ಟಿಪ್ಪಣಿಯಲ್ಲಿ ತಿಳಿಸಿರುವ ಆಂತರಿಕ ನಿಯಂತ್ರಣದ ಅಗತ್ಯ ಅಂಶಗಳನ್ನು ಪರಿಗಣಿಸಿ ಕಂಪನಿ ರೂಪಿಸಿರುವ ಹಣಕಾಸಿನ ವರದಿಗಾರಿಕೆ ಮಾನದಂಡದ ಮೇಲಿನ ಆಂತರಿಕ ನಿಯಂತ್ರಣ' ದ ಆಧಾರದ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣಗಳನ್ನು ರೂಪಿಸುವ ಮತ್ತು ನಿರ್ವಹಣೆ ಮಾಡುವ ಜವಾಬ್ದಾರಿ ಹೊಂದಿರುವುದು. ಈ ಜವಾಬ್ದಾರಿಗಳಲ್ಲಿ ಕಂಪನಿಗಳ ಕಾಯ್ದೆ, 2013ರ ಅನ್ವಯ ಅಗತ್ಯವಾದಂತೆ ಕಂಪನಿಯ ನೀತಿಗಳ ಅನುಸರಣೆ, ತನ್ನ ಆಸ್ತಿಗಳ ಸಂರಕ್ಷಣೆ ಮಾಡುವಿಕೆ, ವಂಚನೆಗಳು ಮತ್ತು ತಪ್ಪುಗಳ ತಡೆಯುವಿಕೆ ಮತ್ತು ಪತ್ತೆ ಹಚ್ಚುವಿಕೆ, ಲೆಕ್ಕನಿರ್ವಹಣೆ ದಾಖಲೆಗಳ ನಿಖರತೆ ಮತ್ತು ಪರಿಪೂರ್ಣತೆ, ಮತ್ತು ವಿಶ್ವಾಸನೀಯವಾದ ಹಣಕಾಸಿನ ಮಾಹಿತಿಯನ್ನು ಸಕಾಲಿಕವಾಗಿ ಸಿದ್ಧಪಡಿಸುವಿಕೆಯೂ ಒಳಗೊಂಡಂತೆ, ತನ್ನ ವ್ಯವಹಾರವನ್ನು ಕ್ರಮಬದ್ಧವಾಗಿ ಮತ್ತು ಸಮರ್ಥವಾಗಿ ನಡೆಸುವಿಕೆಯನ್ನು ಖಾತರಿಪಡಿಸಲು ಪರಿಣಾಮಕಾರಿಯಾಗಿ ಕಾರ್ಯಾಚರಣೆಯಾಗುವ ಸಾಕಷ್ಟು ಮಟ್ಟದ ಆಂತರಿಕ ಹಣಕಾಸಿನ ನಿಯಂತ್ರಣಗಳನ್ನು ವಿನ್ಯಾಸಪಡಿಸುವುದು, ಅನುಷ್ಠಾನ ಮಾಡುವುದು ಮತ್ತು ನಿರ್ವಹಣೆ ಮಾಡುವುದು ಒಳಗೊಂಡಿರುವುದು.

### ಲೆಕ್ಕ ಪರಿಶೋಧಕರ ಜವಾಬ್ದಾರಿ:

ನಮ್ಮ ಲೆಕ್ಕಪರಿಶೋಧನೆಯ ಆಧಾರದ ಮೇಲೆ ಹಣಕಾಸಿನ ವರದಿಗಾರಿಕೆ ಮೇಲಿನ ಕಂಪನಿಯ ಆಂತರಿಕ ಹಣಕಾಸಿನ ನಿಯಂತ್ರಣಗಳ ಬಗ್ಗೆ ಅಭಿಪ್ರಾಯ ತಿಳಿಸುವುದು ನಮ್ಮ ಜವಾಬ್ದಾರಿಯಾಗಿರುವುದು. ಕಂಪನಿಗಳ ಕಾಯ್ದೆ, 2013ರ ಪ್ರಕರಣ 143(10)ರ ಅನ್ವಯ ನಿಗದಿಪಡಿಸಿರುವ ಲೆಕ್ಕ ಪರಿಶೋಧನೆಯ ಮಾನದಂಡಗಳು ಮತ್ತು ಭಾರತದ ಚಾರ್ಟರ್ಡ್ ಅಕೌಂಟೆಂಟ್ಸ್ ಸಂಸ್ಥೆ ಹೊರಡಿಸಿರುವ ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣದ ಲೆಕ್ಕಪರಿಶೋಧನೆ ಮೇಲಿನ ಮಾರ್ಗದರ್ಶಿ ಟಿಪ್ಪಣಿ ('ಮಾರ್ಗದರ್ಶಿ ಟಿಪ್ಪಣಿ') ಅನುಸಾರ ಆಂತರಿಕ ಹಣಕಾಸಿನ ನಿಯಂತ್ರಣಗಳ ಲೆಕ್ಕಪರಿಶೋಧನೆಗೆ ಅನ್ವಯವಾಗುವ ಪ್ರಮಾಣದವರೆಗೆ ನಾವು ನಮ್ಮ ಲೆಕ್ಕಪರಿಶೋಧನೆ ಕಾರ್ಯವನ್ನು ನಡೆಸಿದ್ದೇವೆ. ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳು ಸಾಕಷ್ಟು ಮಟ್ಟದಲ್ಲಿರುವುದೇ ಮತ್ತು ನಿರ್ವಹಣೆ ಮಾಡಲಾಗಿರುವುದೇ ಹಾಗೂ ಸದರಿ ನಿಯಂತ್ರಣಗಳು ಎಲ್ಲಾ ವಾಸ್ತವಿಕ ವಿಚಾರಗಳ ಸಂಬಂಧ ಪರಿಣಾಮಕಾರಿಯಾಗಿ ಕಾರ್ಯಾಚರಣೆಯಾಗುತ್ತಿರುವುವೇ ಎಂಬ ಬಗ್ಗೆ ಸೂಕ್ತವಾದ ಭರವಸೆ ಪಡೆಯಲು ನಾವು ನೈತಿಕ ಅಗತ್ಯತೆಗಳನ್ನು ಅನುಸರಿಸಿ ಲೆಕ್ಕಪರಿಶೋಧನೆ ನಡೆಸಲು ಯೋಜನೆ ಮಾಡಬೇಕು ಮತ್ತು ಲೆಕ್ಕ ಪರಿಶೋಧನೆ ನಡೆಸಬೇಕೆಂದು ಸದರಿ ಗುಣಮಟ್ಟಗಳು ಮತ್ತು ಮಾರ್ಗದರ್ಶಿ ಟಿಪ್ಪಣಿಗಳು ತಿಳಿಸುತ್ತವೆ.

ಹಣಕಾಸಿನ ವರದಿಗಾರಿಕೆಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ವ್ಯವಸ್ಥೆಯು ಸಾಕಷ್ಟು ಪ್ರಮಾಣದಲ್ಲಿರುವುದೇ ಎಂಬುದರ ಬಗ್ಗೆ ಮತ್ತು ಅವುಗಳ ಕಾರ್ಯಾಚರಣೆ ಪರಿಣಾಮಗಳ ಬಗ್ಗೆ ಲೆಕ್ಕಪರಿಶೋಧನಾ ಪುರಾವೆ ಪಡೆಯಲು ಕ್ರಮಾವಳಿಗಳನ್ನು ಅನುಸರಿಸುವ ಕಾರ್ಯವು ನಮ್ಮ ಲೆಕ್ಕಪರಿಶೋಧನೆಯಲ್ಲಿ ಒಳಗೊಂಡಿರುವುದು. ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಬಗ್ಗೆ ನಮ್ಮ ಲೆಕ್ಕಪರಿಶೋಧನೆಯಲ್ಲಿ ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಅರ್ಥವಂತಿಕೆ ಪಡೆಯುವುದು, ಇರುವ ಭೌತಿಕ ದೌರ್ಬಲ್ಯದ ಅಪಾಯ ನಿರ್ಧರಣೆ ಮಾಡುವುದು, ನಿರ್ಧರಣೆ ಮಾಡಿದ ಅಪಾಯದ ಆಧಾರದ ಮೇಲೆ ಆಂತರಿಕ ನಿಯಂತ್ರಣದ ವಿನ್ಯಾಸ ಮತ್ತು ಕಾರ್ಯಾಚರಣೆ ಪರಿಣಾಮವನ್ನು ಪರೀಕ್ಷಿಸುವುದು ಮತ್ತು ಮೌಲ್ಯಮಾಪನವೂ ಸಹ ಒಳಗೊಂಡಿರುವುದು. ಆಯ್ಕೆ ಮಾಡಿದ ಕ್ರಮಾವಳಿಗಳು, ವಂಚನೆ ಅಥವಾ ತಪ್ಪಿನ ಪ್ರಯುಕ್ತ ಭಾರತೀಯ ಲೆಕ್ಕ ನಿರ್ವಹಣೆ ಸ್ವತಂತ್ರ ಹಣಕಾಸಿನ ಹೇಳಿಕೆಗಳಲ್ಲಿ ಉಂಟಾಗುವ ಭೌತಿಕ ತಪ್ಪು ಹೇಳಿಕೆಯ ಅಪಾಯದ ನಿರ್ಧರಣೆ ಸೇರಿದಂತೆ ಲೆಕ್ಕಪರಿಶೋಧಕರು ಮಾಡುವ ತೀರ್ಮಾನಗಳ ಮೇಲೆ ಅವಲಂಬಿತವಾಗಿರುತ್ತದೆ.

ನಾವು ಪಡೆದಿರುವ ಲೆಕ್ಕಪರಿಶೋಧನೆ ಪುರಾವೆ ಹಣಕಾಸಿನ ವರದಿಗಾರಿಕೆ ಮೇಲಿನ ಕಂಪನಿಯ ಆಂತರಿಕ ಹಣಕಾಸಿನ ನಿಯಂತ್ರಣಗಳ ವ್ಯವಸ್ಥೆ ಬಗ್ಗೆ ನಮ್ಮ ಲೆಕ್ಕಪರಿಶೋಧನೆ ಅಭಿಪ್ರಾಯಕ್ಕೆ ಆಧಾರ ಒದಗಿಸಲು ಸಾಕಷ್ಟಿರುವುದು ಮತ್ತು ಸೂಕ್ತವಾಗಿರುವುದು.

### ಹಣಕಾಸಿನ ವರದಿ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಅರ್ಥ:

ಕಂಪನಿಯ ಹಣಕಾಸಿನ ವರದಿಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣವು ಸಾಮಾನ್ಯವಾಗಿ ಅಂಗೀಕಾರವಾಗಿರುವ ಲೆಕ್ಕ ನಿರ್ವಹಣೆ ನೀತಿಗಳ ಅನುಸಾರ ಬಾಹ್ಯ ಉದ್ದೇಶಗಳಿಗಾಗಿ ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸುವುದು ಮತ್ತು ಹಣಕಾಸಿನ ವರದಿಯ ವಿಶ್ವಾಸಾರ್ಹತೆ ಬಗ್ಗೆ ಸೂಕ್ತವಾದ ಆಶ್ವಾಸನೆ ಒದಗಿಸಲು ರೂಪಿಸಿರುವ ಒಂದು ಪ್ರಕ್ರಿಯೆ ಆಗಿದೆ. ಕಂಪನಿಯ ಹಣಕಾಸಿನ ವರದಿಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣದಲ್ಲಿ ಒಳಪಡುವ ನೀತಿಗಳು ಮತ್ತು ಕ್ರಮಾವಳಿಗಳು ಈ

ಕೆಳಕಂಡಂತಿರುವವು:

1) ಕಂಪನಿಯ ವ್ಯವಹಾರಗಳನ್ನು ಮತ್ತು ಆಸ್ತಿಗಳ ಸ್ಥಾನಮಾನವನ್ನು ಸೂಕ್ತವಾದ ವಿವರಣೆಗಳೊಡನೆ ನಿಖರವಾಗಿ ಮತ್ತು ಅತ್ಯುತ್ತಮವಾಗಿ ನಿರೂಪಿಸುವ ದಾಖಲೆಗಳ ನಿರ್ವಹಣೆ.

2) ಸಾಮಾನ್ಯವಾಗಿ ಅಂಗೀಕರಿಸಲ್ಪಟ್ಟಿರುವ ಲೆಕ್ಕ ನಿರ್ವಹಣೆ ನೀತಿಗಳ ಅನುಸಾರ ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸಲು ಅನುಮತಿ ನೀಡಲು ಅಗತ್ಯವಾದಂತೆ ವ್ಯವಹಾರವನ್ನು ದಾಖಲು ಮಾಡಲಾಗಿದೆ, ಮತ್ತು ಕಂಪನಿಯ ಸ್ವೀಕರಣೆ ಮತ್ತು ಖರ್ಚುಗಳನ್ನು ಕಂಪನಿಯ ಆಡಳಿತ ಮಂಡಳಿ ಮತ್ತು ನಿರ್ದೇಶಕರು ನೀಡಿರುವ ಅಧಿಕಾರಗಳ ಅನುಸಾರ ಮಾತ್ರ ಮಾಡಲಾಗುತ್ತಿದೆ ಎಂಬುದಕ್ಕೆ ಸೂಕ್ತವಾದ ಭರವಸೆ ನೀಡಿಕೆ; ಮತ್ತು

3) ಹಣಕಾಸಿನ ಹೇಳಿಕೆಗಳ ಮೇಲೆ ವಾಸ್ತವಿಕವಾಗಿ ಪರಿಣಾಮ ಬೀರಬಹುದಾದ ಕಂಪನಿಯ ಸ್ವತ್ತುಗಳ ಅನಧಿಕೃತ ಸ್ವಾಧೀನತೆ ಉಪಯೋಗ ಅಥವಾ ವಿಲೇವಾರಿ ತಡೆ ಅಥವಾ ಸಕಾಲಿಕವಾಗಿ ಪತ್ತೆ ಹಚ್ಚುವಿಕೆ ಬಗ್ಗೆ ಸೂಕ್ತ ಭರವಸೆ ಒದಗಿಸುವುದು.

**ಹಣಕಾಸಿನ ವರದಿಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಅಂತರ್ಗತ ಮಿತಿಗಳು:**

ಹಣಕಾಸಿನ ವರದಿಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳಲ್ಲಿನ ಅಂತರ್ಗತ ಮಿತಿಗಳಿಂದಾಗಿ ಮೋಸ ಅಥವಾ ಅಸಮರ್ಪಕ ಆಡಳಿತವು ನಿಯಂತ್ರಣಗಳನ್ನು ದಾಟಿ ಹೋಗುವ ತಪ್ಪು ಅಥವಾ ವಂಚನೆಯ ಪ್ರಯುಕ್ತ ವಾಸ್ತವಿಕ ತಪ್ಪು ಹೇಳಿಕೆಗಳು ಉಂಟಾಗುವ ಸಾಧ್ಯತೆಗಳಿರುತ್ತವೆ. ಇವುಗಳನ್ನು ಪತ್ತೆ ಹಚ್ಚುವುದು ಸಾಧ್ಯವಾಗುವುದಿಲ್ಲ. ಹಣಕಾಸಿನ ವರದಿಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಯಾವುದೇ ಮೌಲ್ಯಮಾಪನವನ್ನು ಮುಂದಿನ ಅವಧಿಗಳಿಗೆ ಅನ್ವಯಿಸಿದರೆ ಅದು ಪರಿಸ್ಥಿತಿಯ ಬದಲಾವಣೆಗಳ ಪ್ರಯುಕ್ತ ಹಣಕಾಸಿನ ವರದಿಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣವು ಕೊರತೆಯಾಗುವ ಅಪಾಯಕ್ಕೆ ಒಳಪಟ್ಟಿರುತ್ತದೆ ಅಥವಾ ನೀತಿಗಳು ಅಥವಾ ಕ್ರಮಾವಳಿಗಳ ಅನುಸರಣೆ ಪ್ರಮಾಣ ಕ್ಷೀಣಿಸಬಹುದಾಗಿರುತ್ತದೆ.

**ಅರ್ಹತಾ ಅಭಿಪ್ರಾಯಕ್ಕೆ ಆಧಾರ:**

ನಮಗೆ ನೀಡಿರುವ ಮಾಹಿತಿ ಮತ್ತು ವಿವರಣೆಗಳನುಸಾರ ಮತ್ತು ನಾವು ನಿರ್ವಹಿಸಿದ ಲೆಕ್ಕಪರಿಶೋಧನೆ ಆಧಾರದ ಮೇಲೆ ದಿನಾಂಕ: 31.03.2019 ರಂದಿನಂತೆ ಈ ಕೆಳಕಂಡ ವಾಸ್ತವಿಕ ದೌರ್ಬಲ್ಯಗಳನ್ನು ಗುರುತಿಸಲಾಗಿದೆ.

ಎ) ಕಂಪನಿಯು ನಿಯತಕಾಲಿಕ ಆಧಾರದ ಮೇಲೆ ಬಾಹ್ಯ ಶಿಲ್ಕುಗಳ ಸ್ಥಿರೀಕರಣ ಪಡೆದುಕೊಳ್ಳಲು ಸೂಕ್ತವಾದ ಆಂತರಿಕ ನಿಯಂತ್ರಣ ವ್ಯವಸ್ಥೆ ಹೊಂದಿರುವುದಿಲ್ಲ. ಇದರಿಂದಾಗಿ ಲೆಕ್ಕಗಳ ಪುಸ್ತಕದಲ್ಲಿ ನಿಖರವಲ್ಲದ ಆಸ್ತಿಗಳು ಮತ್ತು ಹೊಣೆಗಾರಿಕೆಗಳನ್ನು ತಿಳಿಸಲು ಕಾರಣವಾಗುವುದು.

ಬಿ) ಕೆಲವು ಸ್ಥಿರಾಸ್ತಿಯ ಹಕ್ಕುಪತ್ರಗಳು ಕಂಪನಿಯಲ್ಲಿ ಲಭ್ಯವಿರುವುದಿಲ್ಲ.

'ವಾಸ್ತವಿಕ ದೌರ್ಬಲ್ಯವು' ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳಲ್ಲಿನ ಕೊರತೆ ಅಥವಾ ಕೊರತೆಗಳ ಸಂಯೋಜನೆ ಆಗಿರುವುದು. ಆದ್ದರಿಂದ ಕಂಪನಿಯ ವಾರ್ಷಿಕ ಅಥವಾ ಮಧ್ಯಂತರ ಹಣಕಾಸಿನ ಹೇಳಿಕೆಗಳ ವಾಸ್ತವಿಕ ತಪ್ಪು ಹೇಳಿಕೆಯ ಸಕಾರಣವಾದ ಸಾಧ್ಯತೆಯನ್ನು ಸಕಾಲಿಕ ಆಧಾರದ ಮೇಲೆ ತಡೆಯಲು ಅಥವಾ ಪತ್ತೆ ಹಚ್ಚಲು ಸಾಧ್ಯವಾಗದು.

**ಅರ್ಹತಾ ಅಭಿಪ್ರಾಯ**

ನಮ್ಮ ಅಭಿಪ್ರಾಯದಲ್ಲಿ, ನಿಯಂತ್ರಣ ಮಾನದಂಡಗಳ ಧ್ಯೇಯಗಳನ್ನು ಸಾಧಿಸುವ ಬಗ್ಗೆ ಮೇಲೆ ವಿವರಿಸಿರುವ ವಾಸ್ತವಿಕ ದೌರ್ಬಲ್ಯದ ಸಾಧ್ಯನೀಯ ಪರಿಣಾಮಗಳ ಹೊರತಾಗಿ, ಭಾರತದ ಲೆಕ್ಕ ಪರಿಶೋಧಕರ ಸಂಸ್ಥೆ ಹೊರಡಿಸಿರುವ ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಮೇಲಿನ ಮಾರ್ಗದರ್ಶಿ ಟಿಪ್ಪಣಿಯಲ್ಲಿ ತಿಳಿಸಿರುವ ಆಂತರಿಕ ನಿಯಂತ್ರಣದ ಅಗತ್ಯ ಅಂಶಗಳನ್ನು ಪರಿಗಣಿಸಿ ಕಂಪನಿಯು ಎಲ್ಲಾ ವಾಸ್ತವಿಕ ವಿಚಾರಗಳಲ್ಲಿ ಹಣಕಾಸಿನ ವರದಿಗಾರಿಕೆ ಮೇಲಿನ ಸಾಕಷ್ಟು ಪ್ರಮಾಣದಲ್ಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳನ್ನು ನಿರ್ವಹಣೆ ಮಾಡಿದೆ ಮತ್ತು 31ನೇ ಮಾರ್ಚ್ 2019ರಂದು ಇದ್ದಂತೆ ಸದರಿ ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿರುವವು.

ಕಂಪನಿಯ ಸ್ವತಂತ್ರ ಹಣಕಾಸಿನ ಹೇಳಿಕೆಗಳ ಬಗ್ಗೆ 31ನೇ ಮಾರ್ಚ್ 2019 ರಂದು ನಡೆಸಿದ ನಮ್ಮ ಲೆಕ್ಕ ಪರಿಶೋಧನೆಯಲ್ಲಿ ಅಳವಡಿಸಿಕೊಳ್ಳಬೇಕಾದ ಲೆಕ್ಕ ಪರಿಶೋಧನೆ ಪರೀಕ್ಷೆಗಳ ಸ್ವರೂಪ, ಸಮಯ ಮತ್ತು ಪ್ರಮಾಣವನ್ನು ನಿರ್ಧರಣೆ ಮಾಡುವಾಗ ಮೇಲೆ ಗುರುತಿಸಿರುವ ಮತ್ತು ತಿಳಿಸಿರುವ ವಾಸ್ತವಿಕ ದೌರ್ಬಲ್ಯವನ್ನು ನಾವು ಪರಿಗಣಿಸಿದ್ದೇವೆ. ಈ ವಾಸ್ತವಿಕ ದೌರ್ಬಲ್ಯವು ಕಂಪನಿಯ ಸ್ವತಂತ್ರ ಹಣಕಾಸಿನ ಹೇಳಿಕೆಗಳ ಬಗ್ಗೆಗಿನ ನಮ್ಮ ಅಭಿಪ್ರಾಯದ ಮೇಲೆ ಪರಿಣಾಮ ಬೀರಿದೆ. ಸ್ವತಂತ್ರ ಹಣಕಾಸಿನ ಹೇಳಿಕೆಗಳ ಬಗ್ಗೆ ಅರ್ಹತಾ ಅಭಿಪ್ರಾಯವನ್ನು ನಾವು ನೀಡಿದ್ದೇವೆ.

**ಮೆ|| ಆಭರ್ಣ ಮತ್ತು ಅನಂತನ್**
**ಚಾರ್ಟರ್ಡ್ ಅಕೌಂಟೆಂಟ್ಸ್ ಪರವಾಗಿ**
**ಸಂಸ್ಥೆ ನೋಂದಣಿ ಸಂ.000003ಎಸ್**
**ಸಹಿ/-**
**(ಆಭರ್ಣ ಭಾಸ್ಕರ್)**
**ಪಾಲುದಾರರು,**
**ಸದಸ್ಯತ್ವ ಸಂ.025145**

ಸ್ಥಳ: ಬೆಂಗಳೂರು
ದಿನಾಂಕ:16.09.2019

## ಸ್ವತಂತ್ರ ಲೆಕ್ಕಪರಿಶೋಧಕರ ವರದಿಗೆ ''ಅನುಬಂಧ-ಸಿ''

**ಭಾರತೀಯ ಕಂಪ್ಟ್ರೋಲರ್ ಮತ್ತು ಮಹಾ ಲೆಕ್ಕ ಪರಿಶೋಧಕರು ಹೊರಡಿಸಿರುವ ನಿರ್ದೇಶನಗಳಿಗೆ ಸಂಬಂಧಪಟ್ಟಂತೆ ಕಂಪನಿಗಳ ಕಾಯ್ದೆ 2013ರ ಸೆಕ್ಷನ್ 143(5)ರಡಿ ವರದಿ:**

| ಕ್ರ. ಸಂ. | ನಿರ್ದೇಶನಗಳು | ಅನುಸರಣೆ |
|---|---|---|
| 1 | ಎಲ್ಲಾ ಲೆಕ್ಕ ನಿರ್ವಹಣಾ ವ್ಯವಹಾರಗಳ ಕಾರ್ಯವಿಧಾನವನ್ನು ಆದಾಯ ತೆರಿಗೆ (ಐಟಿ) ವ್ಯವಸ್ಥೆಯ ಮುಖಾಂತರ ನಡೆಸಲು ಕಂಪನಿಯ ಬಳಿ ಅಂತಹ ವ್ಯವಸ್ಥೆ ಇದೆಯೇ? ಹೌದಾದಲ್ಲಿ, ಲೆಕ್ಕ ನಿರ್ವಹಣಾ ವ್ಯವಹಾರ ಪ್ರಕ್ರಿಯೆಯನ್ನು ಐಟಿ ವ್ಯವಸ್ಥೆಯ ಹೊರಗೆ ನಿರ್ವಹಿಸುವುದರಿಂದ ಹಣಕಾಸು ಪರಿಣಾಮಗಳೊಂದಿಗೆ, ಲೆಕ್ಕ ನಿರ್ವಹಣೆಯ ಸಮಗ್ರತೆ ಮೇಲೆ ಉಂಟಾಗುವ ಪರಿಣಾಮಗಳು ಯಾವುದಾದರೂ ಇದ್ದಲ್ಲಿ ಅವುಗಳನ್ನು ತಿಳಿಸಬಹುದು. | ಕಂಪನಿಯು ತನ್ನ ಎಲ್ಲಾ ಲೆಕ್ಕ ನಿರ್ವಹಣಾ ವ್ಯವಹಾರಗಳನ್ನು ಐಟಿ ವ್ಯವಸ್ಥೆಯ ಮುಖಾಂತರ ಮಾತ್ರ ನಿರ್ವಹಿಸುತ್ತಿದೆ. ಆದರೆ ವಿಭಿನ್ನ ಬಗೆಯ ವ್ಯವಹಾರಗಳಾದ ಚಿಟ್ಸ್, ಪಾನೀಯ, ಕಾಗದ ವಿಭಾಗದಂತಹ ವ್ಯವಹಾರಗಳಿಗೆ ವಿಭಿನ್ನ ಬಗೆಯ ಸಾಫ್ಟ್‌ವೇರ್ ಬಳಸುತ್ತಿದೆ.<br>ಉಳಿದೆಲ್ಲ ವಿಭಾಗಗಳಿಗೆ ಟ್ಯಾಲಿ ವಿಧಾನವನ್ನು ಕಂಪನಿಯ, ಲೆಕ್ಕ ನಿರ್ವಹಣ ವ್ಯವಹಾರಗಳಲ್ಲಿ ಬಳಸುತ್ತಿದೆ. |
| 2 | ಹಾಲಿಯಿರುವ ಯಾವುದೇ ಸಾಲವನ್ನು ಪುನರ್ ರೂಪಿಸಲಾಗಿದೆಯೇ ಅಥವಾ ಸಾಲ ಮರುಪಾವತಿ ಮಾಡಲು ಕಂಪನಿಯ ಅಸಮರ್ಥತೆಯ ಪ್ರಯುಕ್ತ, ಸಾಲ ನೀಡಿರುವವರು ಕಂಪನಿಗೆ ಋಣ/ಸಾಲ/ಬಡ್ಡಿ ಇತ್ಯಾದಿಯನ್ನು ಮನ್ನಾ/ವಜಾ ಮಾಡಿರುವ ಸಂದರ್ಭಗಳಿರುವವೆ? ಹೌದಾದಲ್ಲಿ ಅದರಿಂದ ಉಂಟಾಗುವ ಹಣಕಾಸಿನ ಪರಿಣಾಮ ತಿಳಿಸಿ. | ಈ ಸಂಸ್ಥೆಯು ಯಾವುದೇ ಸಾಲವನ್ನು ಪಡೆದಿರುವುದಿಲ್ಲ. |
| 3 | ಕೇಂದ್ರ/ರಾಜ್ಯ ಏಜೆನ್ಸಿಗಳಿಂದ ನಿರ್ದಿಷ್ಟ ಯೋಜನೆಗಳಿಗಾಗಿ ಪಡೆಯಲಾದ/ಪಡೆಯಬೇಕಾಗಿರುವ ಹಣವನ್ನು ಯೋಜನೆಗಳಿಗಾಗಿ ಗೊತ್ತುಪಡಿಸಿದ ಷರತ್ತು ಮತ್ತು ನಿಬಂಧನೆಗಳಾನುಸಾರ ಸರಿಯಾದ ರೀತಿಯಲ್ಲಿ ಬಳಸಿದ್ದಕ್ಕಾಗಿ ಲೆಕ್ಕ ನಿರ್ವಹಿಸಲಾಗಿದೆಯೇ?<br>ವ್ಯತ್ಯಾಸ ಮಾಡಿರುವ ಸಂದರ್ಭಗಳ ಪಟ್ಟಿ ಮಾಡಿ. | ಹೌದು, ನಮಗೆ ನೀಡಿರುವ ಮಾಹಿತಿ ಮತ್ತು ವಿವರಣೆಯನುಸಾರ ಮತ್ತು ದಾಖಲೆಗಳ ಪರಿಶೀಲನೆಯ ಆಧಾರದಲ್ಲಿ ಕೇಂದ್ರ/ರಾಜ್ಯ ಏಜೆನ್ಸಿಗಳಿಂದ ನಿರ್ದಿಷ್ಟ ಯೋಜನೆಗಳಿಗಾಗಿ ಪಡೆಯಲಾಗಿರುವ ಹಣಗಳ ಬಗ್ಗೆ ಸೂಕ್ತ ರೀತಿಯಲ್ಲಿ ಲೆಕ್ಕ ನಿರ್ವಹಿಸಲಾಗಿದೆ ಮತ್ತು ಉಪಯೋಗಿಸಲಾಗಿದೆ. |
| **ಹೆಚ್ಚುವರಿ ಕಂಪನಿ ನಿರ್ದಿಷ್ಟ ನಿರ್ದೇಶನಗಳು** | | |
| 4 | ಎ) ಗಣಕೀಕೃತ ಪರಿಸರದಲ್ಲಿನ ಉಸ್ತುವಾರಿ ವ್ಯವಸ್ಥೆ ಬಗ್ಗೆ ಮತ್ತು ದಾಸ್ತಾನುಗಳ ಭೌತಿಕ ಉಸ್ತುವಾರಿ ಪರಿಶೀಲನೆ ವಿಧಾನದ ಪರಿಣಾಮದ ಬಗ್ಗೆ ಅಭಿಪ್ರಾಯ | ದಾಸ್ತಾನುಗಳನ್ನು ಗಣಕೀಕೃತ ಪರಿಸರದಲ್ಲಿ ಲೆಕ್ಕ ಹಾಕಲಾಗಿದೆ ಮತ್ತು ಸಂಬಂಧಿತ ಲೆಕ್ಕಪರಿಶೋಧಕರು ಅದನ್ನು ನಿಯತಕಾಲಿಕವಾಗಿ ದೃಢೀಕರಿಸುವರು. |
| 5 | ಎ) ಕಂಪನಿಯು ತನ್ನ ಮಾರಾಟ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಬಾಕಿ ಮೊತ್ತಗಳ ವಸೂಲಾತಿಗೆ ಪರಿಣಾಮಕಾರಿ ವ್ಯವಸ್ಥೆ ಹೊಂದಿದೆಯೇ? ಮತ್ತು ಆ ಮೇರೆಗೆ ಬಾಕಿ ಇರುವ ಮೊತ್ತ ಹಾಗೂ ವಸೂಲಿಗಳು ಕುರಿತು ಲೆಕ್ಕಪತ್ರಗಳ ಪುಸ್ತಕಗಳಲ್ಲಿ ಸರಿಯಾದ ರೀತಿಯಲ್ಲಿ ದಾಖಲಿಸಲಾಗಿದೆಯೇ? | ಶೇ.93.50ರಷ್ಟು ಮಾರಾಟಗಳು ನಗದು ಆಧಾರದ ಮೇಲೆ ನಡೆಯುತ್ತಿದೆ. (ಪಾನೀಯ ವಿಭಾಗ) ಕಂಪನಿಯು ಇನ್ನುಳಿದ ವಿಭಾಗಗಳ ಮಾರಾಟ ಚಟುವಟಿಕೆಗಳಿಗೆ ಮತ್ತು ಚಿಟ್ ವ್ಯವಹಾರಗಳಿಗೆ ಸಂಬಂಧಿಸಿದಂತೆ ಪರಿಣಾಮಕಾರಿ ವಸೂಲಾತಿ ವ್ಯವಸ್ಥೆ ಹೊಂದಿದೆ ಮತ್ತು ದಾಖಲೆಗಳನ್ನು ಗಣಕೀಕೃತ ಪರಿಸರದಲ್ಲಿ ನಿರ್ವಹಿಸಲಾಗಿದೆ. |
| | ಬಿ) ಕಂಪನಿಯು ಭೌತಿಕ ಪರಿಶೀಲನೆ, ದಾಸ್ತಾನುಗಳ ಮೌಲ್ಯಮಾಪನ ಮಾರಾಟವಾಗದ ಬಾಬ್ತುಗಳ ನಿರ್ವಹಣೆ ಮತ್ತು ಭೌತಿಕ ಪರಿಶೀಲನೆಯ ವೇಳೆ ಕಂಡು ಬಂದ ಕೊರತೆ/ ಅತಿ ಹೆಚ್ಚುವರಿಯ ಪರಿಣಾಮದ ಲೆಕ್ಕಚಾರಗಳ ಬಗ್ಗೆ ಪರಿಣಾಮಕಾರಿ ವ್ಯವಸ್ಥೆ ಹೊಂದಿದೆಯೇ? | ಕಂಪನಿಯ ಆಂತರಿಕ ಲೆಕ್ಕಪರಿಶೋಧಕರಿಂದ ದಾಸ್ತಾನುಗಳ ಭೌತಿಕ ಪರಿಶೀಲನೆಯ ಬಗ್ಗೆ ಪರಿಣಾಮಕಾರಿ ವ್ಯವಸ್ಥೆ ಇರುವುದು.<br>ಕೊರತೆ/ಅತಿ ಹೆಚ್ಚುವರಿ ಪರಿಣಾಮಗಳ ಲೆಕ್ಕಚಾರದ ಬಗ್ಗೆ ಪುಸ್ತಕಗಳಲ್ಲಿ ಸರಿಯಾದ ರೀತಿಯಲ್ಲಿ ನಿರ್ವಹಿಸಲಾಗಿದೆ.<br>ಪಾನೀಯ ವಿಭಾಗವನ್ನು ಹೊರತುಪಡಿಸಿ ದಾಸ್ತಾನುಗಳ ಮೌಲ್ಯ ಮಾಪನ ಹಾಲಿ ವ್ಯವಸ್ಥೆಯಲ್ಲಿ ವ್ಯವಸ್ಥಿತವಾಗಿ ಬಿಂಬಿತವಾಗಿಲ್ಲ. ಏಕೆಂದರೆ ದಾಸ್ತಾನುಗಳ ಲೆಕ್ಕಚಾರವನ್ನು ದಾಸ್ತಾನು ರಿಜಿಸ್ಟಾರ್ ಮುಖಾಂತರ ನಿರ್ವಹಿಸಿರುವುದಿಲ್ಲ. |

| | | |
|---|---|---|
| | ಸಿ) ಐಆರ್‌ಆರ್ ಮತ್ತು ಮರುಪಾವತಿ ಅವಧಿ ಸೇರಿದಂತೆ ಪ್ರಮುಖ ಬಂಡವಾಳ ವೆಚ್ಚ/ವಿಸ್ತರಣೆಯ ವೆಚ್ಚ ಸೌಲಭ್ಯ ವಿಶ್ಲೇಷಣೆಯನ್ನು ಪರಿಶೀಲಿಸಿ. | ಪರಿಶೀಲನೆಯ ಅವಧಿಗೆ ಸಂಬಂಧಿಸಿದಂತೆ ಆ ಅವಧಿಯಲ್ಲಿ ಪ್ರಮುಖ ಬಂಡವಾಳೀಕರಣ ಉಂಟಾಗಿರುವುದಿಲ್ಲ. ಆದಾಗ್ಯೂ ನವಿ ಮುಂಬಯಿಯಲ್ಲಿನ ಕರ್ನಾಟಕ ಭವನಕ್ಕಾಗಿ ರೂ.34.10 ಕೋಟಿ ಬಂಡವಾಳೀಕರಣವು 2017-18ನೇ ಸಾಲಿನಲ್ಲಿ ಉಂಟಾಗಿದೆ. ವರದಿಯ ದಿನಾಂಕದಂದಿನಂತೆ ಬಾಡಿಗೆ ಆದಾಯವು ಇನ್ನೂ ' ಆರಂಭವಾಗಿರುವುದಿಲ್ಲ. |
| | ಡಿ) ಲೆಕ್ಕಪರಿಶೋಧನೆಗೊಂಡ ಸಂಸ್ಥೆಯು ತನ್ನ ಕಾರ್ಯಾಚರಣೆಗಳನ್ನು ಸಂಪೂರ್ಣವಾಗಿ ಅಥವಾ ಭಾಗಶಃವಾಗಿ ಗಣಕೀಕೃತಗೊಳಿಸಿದ್ದರೆ ಲೆಕ್ಕಹಾಕಿ ಮತ್ತು ವರದಿ ಮಾಡಿ.<br>ಕಂಪನಿಯಲ್ಲಿ ಎಷ್ಟು ಪ್ರಮಾಣದ ಡಾಟಾ ಮಾಹಿತಿಯು ವಿದ್ಯುನ್ಮಾನ ನಮೂನೆಯಲ್ಲಿ ಇರುವುದು. ಲೆಕ್ಕ ನಿರ್ವಹಣೆ, ಮಾರಾಟ ಸಿಬ್ಬಂದಿ ಮಾಹಿತಿ, ವೇತನ ಪಟ್ಟಿ, ಸರಕುಗಳು, ತಪಶೀಲುಗಳು ಮುಂತಾದ ಕ್ಷೇತ್ರಗಳ ಪೈಕಿ ಯಾವುಗಳನ್ನು ಗಣಕೀಕೃತ ಮಾಡಲಾಗಿದೆ. ಅಂತೆಯೇ ಕಂಪನಿಯು ಡಾಟಾ/ಸಾಫ್ಟ್‌ವೇರ್/ಹಾರ್ಡ್‌ವೇರ್‌ಗಳ ಕುರಿತು ಸರಿಯಾದ ಭದ್ರತಾ ನೀತಿ ರೂಪಿಸಿದೆಯೇ? | ಕಂಪನಿಯು ತನ್ನ ಎಲ್ಲ ಲೆಕ್ಕ ನಿರ್ವಹಣಾ ವ್ಯವಹಾರಗಳನ್ನು ದೈನಂದಿನ ಆಧಾರದಲ್ಲಿ ಐಟಿ ವ್ಯವಸ್ಥೆಯ ಮುಖಾಂತರ ನಿರ್ವಹಿಸುತ್ತಿದೆ.<br><br>ಕಂಪನಿಯು ಡಾಟಾ/ಸಾಫ್ಟ್‌ವೇರ್/ಹಾರ್ಡ್‌ವೇರ್‌ಗಳ ಕುರಿತು ಸೂಕ್ತ ಭದ್ರತಾ ನೀತಿ ಹೊಂದಿವೆ.<br><br>ಲೆಕ್ಕ ನಿರ್ವಹಣೆ, ವೇತನ ಪಟ್ಟಿ, ಮಾರಾಟ ಸಿಬ್ಬಂದಿ ಮಾಹಿತಿ ಮುಂತಾದವುಗಳನ್ನು ಸಂಪೂರ್ಣವಾಗಿ ಗಣಕೀಕೃತಗೊಳಿಸಲಾಗಿದೆ. |

**ಆಭರ್ಣ ಮತ್ತು ಅನಂತನ್**
**ಚಾರ್ಟರ್ಡ್ ಅಕೌಂಟೆಂಟ್ಸ್ ಪರವಾಗಿ**
**ಸಂಸ್ಥೆ ನೋಂದಣಿ ಸಂ.000003ಎಸ್**
**ಸಹಿ/-**
**(ಆಭರ್ಣ ಭಾಸ್ಕರ್)**
**ಪಾಲುದಾರರು,**
**ಸದಸ್ಯತ್ವ ಸಂ.025145**

ಸ್ಥಳ: ಬೆಂಗಳೂರು
ದಿನಾಂಕ:29.09.2019

**ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್**

**2018-19ರ ವರ್ಷದ ಶಾಸನಬದ್ಧ ಲೆಕ್ಕ ಪರಿಶೋಧಕರ ವರದಿಯಲ್ಲಿನ ಆರೋಪಕ್ಕೆ ಉತ್ತರಗಳು (ಪರಿಷ್ಕೃತ ಲೆಕ್ಕ ಪರಿಶೋಧನಾ ವರದಿ ಪುಟ ಸಂಖ್ಯೆ: 1 ಮತ್ತು 2 ರಲ್ಲಿನ ಅರ್ಹತಾ ಅಭಿಪ್ರಾಯಕ್ಕೆ ಆಧಾರ ನೋಡಿ)**

<table>
<tr><th></th><th>ಲೆಕ್ಕಪರಿಶೋಧನೆ ಆಕ್ಷೇಪಣೆ</th><th>ಕಂಪನಿಯ ಉತ್ತರಗಳು</th><th>ಟೀಕೆ</th></tr>
<tr><td>ಎ</td><td>ಸ್ಥಿತಿ ವಿವರಣಾ ಪಟ್ಟಿಯ ದಿನಾಂಕದಂತೆ ಕಂಪನಿಯು ವಹಿವಾಟು ನಡೆಸಿದ ವ್ಯಕ್ತಿಗಳಿಂದ/ ವ್ಯಾಪರದ ಸ್ವೀಕೃತಾರ್ಹ, ಮುಂಗಡಗಳು, ಪಾವತಿಸಬೇಕಾಗಿರುವ, ಬರಬೇಕಾಗಿರುವ ಮುಂಗಡಗಳ ಬಾಕಿ ಮೊತ್ತದ ಬಗ್ಗೆ ಕಂಪನಿಯು ಮರು ಹೊಂದಾಣಿಕೆ ಮಾಡಿಕೊಂಡಿರುವುದಾಗಲಿ ಅಥವಾ ದೃಢೀಕರಿಸಿರುವುದಾಗಲಿ ಮಾಡಿರುವುದಿಲ್ಲ. ಇದರಿಂದಾಗಿ ನಮಗೆ ಸಾಕಷ್ಟು ಸರಿಯಾದ ಲೆಕ್ಕಪರಿಶೋಧನಾ ಸಾಕ್ಷ್ಯಾಧಾರವು ಕಂಪನಿಯ ಲೆಕ್ಕಪತ್ರಗಳಲ್ಲಿ ಸದರಿ ಮೊತ್ತವು ಪ್ರಸ್ತಾಪವಾಗಿರುವ ಬಗ್ಗೆ ಸ್ಥಿತಿ ವಿವರಣಾ ಪಟ್ಟಿಯ ದಿನಾಂಕದಂದಿನಂತೆ ತಿಳಿದುಬರುವುದಿಲ್ಲ. ಈ ವಿವರಗಳ ಅನುಪಸ್ಥಿತಿಯಲ್ಲಿ ಸದರಿ ಮೊತ್ತಗಳ ಮರು ಹೊಂದಾಣಿಕೆಯಾಗಿರುವುದನ್ನು ಖಚಿತಗೊಳಿಸಲು ಸಾಧ್ಯವಾಗುತ್ತಿಲ್ಲ. ಈ ಮರು ಹೊಂದಾಣಿಕೆಯಾಗಿಲ್ಲದ ಅಥವಾ ದೃಢಪಟ್ಟಿಲ್ಲದ ಲೆಕ್ಕಪತ್ರದಿಂದ ಉಂಟಾಗುವ ಹಣಕಾಸು ಪರಿಣಾಮವನ್ನು ನಿರ್ಧರಿಸಲು ಸಾಧ್ಯವಾಗುತ್ತಿಲ್ಲ.</td><td>ಕಂಪನಿಯು ದಿನಾಂಕ:31.03.2019ರಂದಿನಂತೆ ವಿವಿಧ ಸಾಲಗಾರರೂ, ಋಣಭಾರಿಗಳ ಮತ್ತು ಜಂಟಿ ಉದ್ಯಮಗಳೂ ಸೇರಿದಂತೆ ವಾಣಿಜ್ಯ ಪಾಲುದಾರರ ಖಾತೆಯಲ್ಲಿನ ಬಾಕಿ ಬಗ್ಗೆ ದೃಢೀಕರಣವನ್ನು ಕಳುಹಿಸಿಕೊಟ್ಟಿದೆ ಮತ್ತು ಮುಂಗಡಗಳು/ ಠೇವಣಿಗಳ ಬಗ್ಗೆ ನಾವು ಭಾಗಶಃ ದೃಢೀಕರಣವನ್ನು ಸ್ವೀಕರಿಸಿರುತ್ತೇವೆ.</td><td></td></tr>
<tr><td>ಬಿ</td><td>ಕಂಪನಿಯು ನವಿ ಮುಂಬಾಯಿಯಲ್ಲಿ ನಿರ್ಮಿಸಲಾದ ಕರ್ನಾಟಕ ಭವನ ಕ್ಕಾಗಿ ಉಂಟಾದ ವೆಚ್ಚದ ಮೊತ್ತ ರೂ.34,10,24,920.00ಗಳನ್ನು ಮೆ॥ ಪ್ರೊಜೆಕ್ಟ್ ಮ್ಯಾನೇಜ್‌ಮೆಂಟ್ ಸರ್ವೀಸ್ ರವರಿಂದ ದಿನಾಂಕ:31.03.2018ರಂದು ಸ್ವೀಕರಿಸಲಾದ ಕಾಮಗಾರಿ ಪೂರ್ಣಗೊಂಡ ಪ್ರಮಾಣಪತ್ರ ಆಧರಿಸಿ ಬಂಡವಾಳೀಕರಿಸಿದೆ. ಆದರೆ ನಮಗೆ ಈ ಬಗ್ಗೆ ಸ್ಥಿತಿ ವಿವರಣಾ ಪಟ್ಟಿಯ ದಿನಾಂಕದಂದಿನಂತೆ ಅಗತ್ಯವಾದ ಸೂಕ್ತ ಲೆಕ್ಕಪತ್ರ ವಿವರಗಳು ಪಡೆದುಕೊಳ್ಳಲು ಸಾಧ್ಯವಾಗಿಲ್ಲ. ಈ ಮಾಹಿತಿಯ ಅನುಪಸ್ಥಿತಿಯಲ್ಲಿ ವಿಶಿಷ್ಟ ಭಾರತೀಯ ಲೆಕ್ಕಪತ್ರ ಪದ್ಧತಿಯ ಮೇಲೆ ಈ ಕ್ರಮದಿಂದ ಉಂಟಾಗುವ ಪರಿಣಾಮದ ಕುರಿತು ನಿರ್ಧರಿಸಲು ಸಾಧ್ಯವಾಗಿಲ್ಲ. ಏಕೆಂದರೆ ಕಂಪನಿಯು ಪಾವತಿಯಾಗದ ಬಿಲ್ಲುಗಳನ್ನು ಇನ್ನೂ ಇಟ್ಟುಕೊಂಡಿದೆ.</td><td>ಕಂಪನಿಯು ನವಿ ಮುಂಬಾಯಿಯಲ್ಲಿ ಕರ್ನಾಟಕ ಭವನದ ನಿರ್ಮಾಣಕ್ಕಾಗಿ ಉಂಟಾದ ವೆಚ್ಚ ರೂ.34,10,24,920/-ಗಳನ್ನು ಮೆ॥ ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್ ಸರ್ವೀಸ್ ಇವರಿಂದ ದಿನಾಂಕ:31.03.2018ರಂದು ಕಾಮಗಾರಿ ಪೂರ್ಣಗೊಂಡ ಪ್ರಮಾಣ ಪತ್ರ ಸ್ವೀಕರಿಸಿದ್ದರ ಮೇರೆಗೆ ಬಂಡವಾಳ ಹೂಡಿಕೆಯನ್ನಾಗಿ ಮಾಡಿಕೊಂಡಿದೆ.<br><br>ಈ ಸಂಬಂಧ ಪ್ರಸಕ್ತ 2019-20ನೇ ಆರ್ಥಿಕ ವರ್ಷದಲ್ಲಿ ಕಂಪನಿಯು ಕೆಳಕಂಡ ಬಿಲ್ಲುಗಳನ್ನು ಸ್ವೀಕರಿಸಿದೆ.<br><br><table><tr><th>ವಿವರಗಳು</th><th>ಮೊತ್ತ ರೂ.ಗಳಲ್ಲಿ</th></tr><tr><td>ಎ. ಮೆ॥ ಹಿತೇನ್ ಸೇಥಿ ಅಂಡ್ ಅಸೋಸಿಯೇಟ್ಸ್ (ವಾಸ್ತುಶಿಲ್ಪಿ ಶುಲ್ಕ)</td><td>27,02,578/-</td></tr><tr><td>ಬಿ. ಮೆ॥ ಅಪೆಕ್ಸ್ ಮ್ಯಾನೇಜ್ ಮೆಂಟ್ ಕನ್ಸಲ್ಟನ್ಸ್ ಸರ್ವೀಸಸ್ (ಮೇಲುಸ್ತುವಾರಿ ವೆಚ್ಚ)</td><td>35,28,200/-</td></tr><tr><td>ಸಿ. ಮೆ॥ ಎಕೋಶೈನ್ ಫೆಸಿಲಿಟಿ ಸೆಲ್ಯೂಷನ್ಸ್ (ಭದ್ರತಾ ಸೇವಾ ವೆಚ್ಚ)</td><td>13,14,020/-</td></tr><tr><td>ಒಟ್ಟು ಬಾಕಿ ಬಿಲ್ಲುಗಳು</td><td>75,44,798/-</td></tr></table><br>ಸದರಿ ಯೋಜನೆ ಬಗ್ಗೆ ವ್ಯಕ್ತಿಯು ಸಲ್ಲಿಸಿರುವ ಮೇಲೆ ತಿಳಿಸಿರುವ ಬಿಲ್ಲುಗಳ ಬಗ್ಗೆ ಸಂಬಂಧಪಟ್ಟ ವಿಭಾಗದಿಂದ ಲೆಕ್ಕಪತ್ರ ವಿಭಾಗ ಕೆಲವು ಸ್ಪಷ್ಟನೆಯನ್ನು ಕೇಳಿದೆ. ತೃಪ್ತಿಕರವಾದ ಸ್ಪಷ್ಟನೆ ಮತ್ತು ಶಿಫಾರಸ್ಸು ಪಡೆದ ನಂತರ ಚಾಲ್ತಿ ಹಣಕಾಸಿನ ವರ್ಷ 2019-20ರಲ್ಲಿ ಲೆಕ್ಕಗಳ ಪುಸ್ತಕಗಳಲ್ಲಿ ವಾಸ್ತವಿಕ ಖರ್ಚನ್ನು ಲೆಕ್ಕ ಮಾಡಲಾಗುವುದು.</td><td></td></tr>
</table>

| | | | |
|---|---|---|---|
| ಸಿ | ಪರಿಚ್ಛೇದ (ಸಿ) ಅಡಿ ಹಣಕಾಸು ಚಟುವಟಿಕೆಗಳಿಂದ ನಗದು ಚಲಾವಣೆ ಹೇಳಿಕೆಯಲ್ಲಿ ಪಾವತಿ ಮಾಡಲಾದ ಬಡ್ಡಿ ಮತ್ತು ಜಾಮೀನು ಕಮೀಷನ್ ಮೊತ್ತವನ್ನೊಳಗೊಂಡ ಆರ್ಥಿಕ ವೆಚ್ಚವೆಂದು ರೂ.69,67,046/-ಗಳೆಂದು ವರದಿ ಮಾಡಲಾಗಿದೆ. ಈ ನಗದು ಚಲಾವಣೆ ಹೇಳಿಕೆಯಲ್ಲಿ ಆದಾಯ ತೆರಿಗೆಗಾಗಿ ಪಾವತಿ ಮಾಡಲಾದ ಬಡ್ಡಿ ಮೊತ್ತ ರೂ.33,51,677/- ಗಳನ್ನು ಸೇರಿದೆ. ಇದು ಭಾರತೀಯ ಲೆಕ್ಕಪತ್ರ ಪದ್ಧತಿ (Ind AS) ಅನುಗುಣವಾಗಿರುವುದಿಲ್ಲ. ಆದ್ದರಿಂದ ಈ ಮೊತ್ತವನ್ನು ಭಾರತೀಯ ಲೆಕ್ಕಪತ್ರ ಪದ್ಧತಿ (Ind AS) -7 ನಗದು ಚಲಾವಣೆ ಹೇಳಿಕೆಯನುಸಾರ ನಗದು ಚಲಾವಣೆ ಹೇಳಿಕೆಯಲ್ಲಿ ಕಾರ್ಯಕರ್ತರಿಗೆ ನಗದು ಚುನಾವಣೆಯಡಿ ನಮೂದಿಸಬೇಕು. | ಈ ಬಗ್ಗೆ ಲೆಕ್ಕಪರಿಶೋಧಕ ತಂಡವು ಮಾಡಿರುವ ಪರಿಶೀಲನೆಯನ್ನು ಕಂಪನಿಯು ಅಂಗೀಕರಿಸಿದೆ ಮತ್ತು ಈ ಬಗ್ಗೆ ಅಗತ್ಯ ಮಾರ್ಪಾಟುಗಳನ್ನು ವಾರ್ಷಿಕ ವರದಿಯಲ್ಲಿ ಮಾಡಲಾಗುವುದು. ರೂ.33,51,677/-ಗಳನ್ನು ಆದಾಯ ತೆರಿಗೆ ಸಂಬಂಧಿತ ಪಾವತಿ ಎಂದು ಭಾರತೀಯ ಲೆಕ್ಕಪತ್ರ ಪದ್ಧತಿ -07ರ ನಗದು ಚಲಾವಣೆ ಹೇಳಿಕೆಯನುಸಾರ ಕಾರ್ಯಾಚರಣೆ ನಗದು ಚಲಾವಣೆಯಡಿ ತಮ್ಮ ನಗದು ಚಲಾವಣೆ ಹೇಳಿಕೆಯಲ್ಲಿ ನಮೂದಿಸಲಾಗುವುದು. | |
| ಡಿ | ಆಸ್ತಿ ಸ್ಥಾವರ ಮತ್ತು ಉಪಕರಣಗಳ ಕುರಿತು ಲೆಕ್ಕಪತ್ರ ವಿಧಾನದ ನೀತಿ ಕುರಿತು ಚರ್ಚಿಸುತ್ತಿರುವಾಗ ಕ್ರ.ಸಂ.1.2(i)ರಲ್ಲಿ ಕಂಪನಿಗಳ ಕಾಯ್ದೆ-2013ರ ಷೆಡ್ಯೂಲ್-2ರಲ್ಲಿ ಗೊತ್ತುಪಡಿಸಿರುವಂತೆ ವಿವಿಧ ಆಸ್ತಿಗಳ ಉಪಯುಕ್ತ ಜೀವಿತಾವಧಿಯನ್ನು ನಮೂದಿಸಲಾಗಿದೆ. ಆದರೆ ಮದ್ಯ ಮಾರಾಟ ಮಳಿಗೆಗಳಲ್ಲಿನ ಪೀಠೋಪಕರಣಗಳು ಮತ್ತು ಅಳವಡಿಕೆಗಳು ಉಪಯುಕ್ತ ಜೀವಿತಾವಧಿಯನ್ನು 5 ವರ್ಷ ಎಂದು ಲೆಕ್ಕ ಹಾಕಲಾಗಿದೆ. ಇದು ಕಂಪನಿಗಳ ಕಾಯ್ದೆ-2013ಕ್ಕೆ ಇರುವ ಷೆಡ್ಯೂಲ್-2 ಕ್ಕೆ ಅನುಗುಣವಾಗಿರುವುದಿಲ್ಲ. | ಮದ್ಯ ಮಾರಾಟ ಮಳಿಗೆಗಳಲ್ಲಿ ಅಳವಡಿಸಲಾಗಿರುವ ಪೀಠೋಪಕರಣ ಹಾಗೂ ಅಳವಡಿಕೆಗಳು ಉಪಯುಕ್ತ ಜೀವಿತಾವಧಿಯನ್ನು 5 ವರ್ಷಗಳಾಗುವುದೆಂದು ಅಂದಾಜಿಸಲಾಗಿದೆ. ಈ ಬಗ್ಗೆ ಲೆಕ್ಕಪರಿಶೋಧಕರ ಅಭಿಪ್ರಾಯವನ್ನು ಪರಿಗಣಿಸಿದೆ ಮತ್ತು ಸರಿಯಾದ ಹೇಳಿಕೆಯನ್ನು ಪ್ರಸಕ್ತ 2019-20ರ ಆಸ್ತಿ ಸ್ಥಾವರ ಮತ್ತು ಉಪಕರಣಗಳ ಲೆಕ್ಕಪತ್ರ ವಿಧಾನ ನೀತಿಯಲ್ಲಿ ದಾಖಲು ಮಾಡಲಾಗುವುದು. | |

## 2019ರ ಮಾರ್ಚ್ 31ಕ್ಕೆ ಕೊನೆಗೊಂಡ ವರ್ಷಕ್ಕಾಗಿ ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್, ಬೆಂಗಳೂರು ಇದರ ಸ್ವತಂತ್ರ ಹಣಕಾಸಿನ ಹೇಳಿಕೆಗಳ ಬಗ್ಗೆ 2013ರ ಕಂಪನಿಗಳ ಕಾಯ್ದೆಯ ಪ್ರಕರಣ 143(6)(ಬಿ)ರ ಅನ್ವಯ ಭಾರತದ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್‌ರವರ ಟೀಕೆಗಳು

2013ರ ಕಂಪನಿಗಳ ಕಾಯ್ದೆಯಡಿಯಲ್ಲಿ (ಕಾಯ್ದೆ) ನಿಗದಿಪಡಿಸಿರುವ ಹಣಕಾಸು ವರದಿ ಚೌಕಟ್ಟಿನ ಅನುಸಾರ **31ನೇ ಮಾರ್ಚ್ 2019ಕ್ಕೆ** ಕೊನೆಗೊಂಡ ವರ್ಷಕ್ಕೆ **ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್, ಬೆಂಗಳೂರು** ಇದರ ಹಣಕಾಸು ಹೇಳಿಕೆಗಳ ಸಿದ್ಧಪಡಿಸುವಿಕೆಯು ಕಂಪನಿಯ ಆಡಳಿತ ವರ್ಗದ ಜವಾಬ್ದಾರಿಯಾಗಿದೆ. ಕಾಯ್ದೆಯ ಪ್ರಕರಣ 139(5)ರನ್ವಯ ಭಾರತದ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್ ಇವರಿಂದ ನೇಮಕಗೊಂಡ ಶಾಸನಬದ್ಧ ಲೆಕ್ಕಪರಿಶೋಧಕರು ಕಾಯ್ದೆಯ ಪ್ರಕರಣ 143(10)ರ ಅನ್ವಯ ನಿಗದಿಪಡಿಸಿರುವ ಲೆಕ್ಕಪರಿಶೋಧನೆ ಬಗ್ಗೆಗಿನ ಗುಣಮಟ್ಟದ ಅನುಸಾರ ಸ್ವತಂತ್ರ ಲೆಕ್ಕಪರಿಶೋಧನೆ ಆಧಾರದ ಮೇಲೆ, ಕಾಯ್ದೆಯ ಪ್ರಕರಣ 143ರ ಅನ್ವಯ ಸದರಿ ಹಣಕಾಸಿನ ಹೇಳಿಕೆಗಳ ಬಗ್ಗೆ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದಕ್ಕೆ ಹೊಣೆಯಾಗಿರುತ್ತಾರೆ. **ದಿನಾಂಕ 29ನೇ ಸೆಪ್ಟೆಂಬರ್ 2019ರ** ಅವರ ಪರಿಷ್ಕೃತ ಲೆಕ್ಕಪರಿಶೋಧನೆ ವರದಿಯಂತೆ ಅವರಿಂದ ಇದನ್ನು ಕೈಗೊಳ್ಳಲಾಗಿದೆಯೆಂದು ಹೇಳಲಾಗಿದೆ. ಸದರಿ ವರದಿಯು **ದಿನಾಂಕ 16ನೇ ಸೆಪ್ಟೆಂಬರ್ 2019ರ** ನಮ್ಮ ಈ ಮೊದಲಿನ ಲೆಕ್ಕಪರಿಶೋಧನೆ ವರದಿಯನ್ನು ರದ್ದು ಮಾಡಿರುವುದು.

ಭಾರತದ ಕಂಪ್ಟ್ರೋಲರ್ ಅಂಡ್ ಆಡಿಟರ್ ಜನರಲ್ ಪರವಾಗಿ, ನಾನು **31ನೇ ಮಾರ್ಚ್ 2019ಕ್ಕೆ** ಕೊನೆಗೊಂಡ ವರ್ಷದ **''ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್, ಬೆಂಗಳೂರು''ನ** ಹಣಕಾಸು ಹೇಳಿಕೆಗಳ ಕಾಯ್ದೆಯ ಸೆಕ್ಷನ್ 143(6)(ಎ) ಅಡಿಯಲ್ಲಿ ಪೂರಕ ಲೆಕ್ಕಪರಿಶೋಧನೆ ಮಾಡಿದ್ದೇನೆ. ಈ ಪೂರಕ ಲೆಕ್ಕಪರಿಶೋಧನೆಯನ್ನು ಶಾಸನಬದ್ಧ ಲೆಕ್ಕಪರಿಶೋಧಕರ ಕಾರ್ಯಾಚರಣೆ ಕಾಗದ ಪತ್ರಗಳನ್ನು ಬಳಸದೆ ಸ್ವತಂತ್ರವಾಗಿ ನಡೆಸಲಾಗಿದೆ ಮತ್ತು ಶಾಸನಬದ್ಧ ಲೆಕ್ಕಪರಿಶೋಧಕರ ಮತ್ತು ಕಂಪನಿಯ ಸಿಬ್ಬಂದಿ ವಿಚಾರಣೆಗಳಿಗೆ ಮತ್ತು ಕೆಲವು ಆಯ್ದ ಲೆಕ್ಕಪತ್ರಗಳ ದಾಖಲೆಗಳ ಪರಿಶೀಲನೆಗೆ ಸೀಮಿತವಾಗಿರುತ್ತದೆ.

ಪೂರಕ ಲೆಕ್ಕಪರಿಶೋಧನೆ ಅವಧಿಯಲ್ಲಿ ತಿಳಿಸಿದ ನನ್ನ ಕೆಲವು ಲೆಕ್ಕಪರಿಶೋಧನೆ ಅಭಿಪ್ರಾಯಕ್ಕೆ ಒತ್ತು ನೀಡಲು **'ಶಾಸನಬದ್ಧ ಲೆಕ್ಕಪರಿಶೋಧಕರ ವರದಿ'**ಯಲ್ಲಿ ಮಾಡಿರುವ ಪರಿಷ್ಕರಣೆಗಳ ಹಿನ್ನೆಲೆಯಲ್ಲಿ ಇದರ ಮೇಲೆ ಅಥವಾ ಶಾಸನಬದ್ಧ ಲೆಕ್ಕಪರಿಶೋಧಕರ ವರದಿಗೆ ಪೂರಕವಾಗಿ ಕಾಯ್ದೆಯ ಪ್ರಕರಣ 143(6)(ಬಿ) ಅನ್ವಯ ನಾನು ಯಾವುದೇ ಹೆಚ್ಚಿನ ಟೀಕೆಗಳನ್ನು ಮಾಡುವುದಿಲ್ಲ.

**ಭಾರತದ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್‌ರವರ**
**ಪರವಾಗಿ ಮತ್ತು ಹೆಸರಿನಲ್ಲಿ**
**ಸಹಿ/-**
**(ಅನುಪ್ ಫ್ರಾನ್ಸಿಸ್ ಡಂಗ್‌ಡಂಗ್)**
**ಅಕೌಂಟೆಂಟ್ ಜನರಲ್**
**(ಆರ್ಥಿಕ ಮತ್ತು ಕಂದಾಯ ವಲಯ ಆಡಿಟ್)**
**ಕರ್ನಾಟಕ, ಬೆಂಗಳೂರು**

**ಬೆಂಗಳೂರು**
**ದಿನಾಂಕ : 30.09.2019**

MSIL

## ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್
## 31ನೇ ಮಾರ್ಚ್ 2019ರಂದು ಇದ್ದಂತೆ ಸ್ಥಿತಿ ವಿವರಣಾ ಪಟ್ಟಿ

**(ಎಲ್ಲಾ ಮೊತ್ತಗಳು ನಿರ್ದಿಷ್ಟಪಡಿಸದ ಹೊರತು ರೂಪಾಯಿಗಳಲ್ಲಿರುತ್ತವೆ)**

| ಕ್ರ. ಸಂ. | ವಿವರ | ಟಿಪ್ಪಣಿ ಸಂಖ್ಯೆ | 31ನೇ ಮಾರ್ಚ್ 2019ರಂದು ಇದ್ದಂತೆ | 31ನೇ ಮಾರ್ಚ್ 2018ರಂದು ಇದ್ದಂತೆ | 1ನೇ ಏಪ್ರಿಲ್ 2017ರಂದು ಇದ್ದಂತೆ |
|---|---|---|---|---|---|
| ಎ. | **ಆಸ್ತಿಗಳು** | | | | |
| | **ಚಾಲ್ತಿಯೇತರ ಆಸ್ತಿಗಳು** | | | | |
| | (ಎ) ಸ್ವತ್ತು, ಸ್ಥಾವರ ಮತ್ತು ಉಪಕರಣ | 2 | 447,294,548 | 334,473,541 | 177,822,917 |
| | (ಬಿ) ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ | 2 | | 2,011,291 | 340,240,465 |
| | (ಸಿ) ಹೂಡಿಕೆ ಸ್ವತ್ತು | 3 | 348,175,143 | 358,562,122 | 100,768,626 |
| | (ಡಿ) ಇತರೆ ಅಗೋಚರ ಆಸ್ತಿಗಳು | 4 | 1,165,954 | 2,435,956 | 3,668,740 |
| | (ಇ) ಹಣಕಾಸಿನ ಆಸ್ತಿಗಳು | | | | |
| | (i) ಹೂಡಿಕೆಗಳು | 5 | 299,802,985 | 290,012,900 | 336,136,227 |
| | (ii) ಇತರೆ ಹಣಕಾಸಿನ ಆಸ್ತಿಗಳು | 6 | 670,806,310 | 712,229,029 | 466,342,444 |
| | (ಎಫ್) ಮುಂದೂಡಿದ ತೆರಿಗೆ ಆಸ್ತಿಗಳು | 7 | 86,580,199 | 97,113,310 | 97,635,097 |
| | (ಜಿ) ಇತರೆ ಚಾಲ್ತಿಯೇತರ ಆಸ್ತಿಗಳು | 8 | 103,226,002 | 9,434,486 | 9,434,486 |
| | **ಒಟ್ಟು ಚಾಲ್ತಿಯೇತರ ಆಸ್ತಿಗಳು** | | **1,957,051,141** | **1,806,272,635** | **1,532,049,002** |
| | **ಚಾಲ್ತಿ ಆಸ್ತಿಗಳು** | | | | |
| | (ಎ) ತಪಶೀಲುಗಳು | 9 | 856,788,168 | 1,193,636,213 | 901,280,863 |
| | (ಬಿ) ಹಣಕಾಸಿನ ಆಸ್ತಿಗಳು | | | | |
| | (i) ವ್ಯಾಪಾರದಿಂದ ಬರಬೇಕಾಗಿರುವುದು | 10 | 512,722,574 | 216,627,525 | 141,620,843 |
| | (ii) ನಗದು ಮತ್ತು ನಗದು ಸಮಾನಗಳು | 11 | 770,432,515 | 724,375,747 | 836,504,258 |
| | (iii) ಮೇಲಿನ (ii) ಹೊರತಾಗಿ ಬ್ಯಾಂಕ್ ಶಿಲ್ಕುಗಳು | 12 | 1,295,160,231 | 1,260,954,846 | 1,272,885,863 |
| | (iv) ಇತರೆ ಹಣಕಾಸಿನ ಆಸ್ತಿಗಳು | 6 | 1,061,505,919 | 1,164,270,253 | 1,106,434,045 |
| | (ಸಿ) ಇತರೆ ಚಾಲ್ತಿ ಆಸ್ತಿಗಳು | 8 | 246,893,793 | 333,073,726 | 246,518,757 |
| | **ಒಟ್ಟು ಚಾಲ್ತಿ ಆಸ್ತಿಗಳು** | | **4,743,503,200** | **4,892,938,310** | **4,505,244,629** |
| | **ಒಟ್ಟು ಆಸ್ತಿಗಳು** | | **6,700,554,341** | **6,699,210,945** | **6,037,293,631** |

MSIL

| ಕ್ರ. ಸಂ. | ವಿವರ | ಟಿಪ್ಪಣಿ ಸಂಖ್ಯೆ | 31ನೇ ಮಾರ್ಚ್ 2019ರಂದು ಇದ್ದಂತೆ | 31ನೇ ಮಾರ್ಚ್ 2018ರಂದು ಇದ್ದಂತೆ | 1ನೇ ಏಪ್ರಿಲ್2017 ರಂದು ಇದ್ದಂತೆ |
|---|---|---|---|---|---|
| ಬಿ | **ಈಕ್ವಿಟಿ ಮತ್ತು ಹೊಣೆಗಾರಿಕೆಗಳು** | | | | |
| | **ಈಕ್ವಿಟಿ** | | | | |
| | (ಎ) ಈಕ್ವಿಟಿ ಷೇರು ಬಂಡವಾಳ | 13 | 427,347,700 | 427,347,700 | 201,766,000 |
| | (ಬಿ) ಇತರೆ ಈಕ್ವಿಟಿ | 14 | 3,120,847,491 | 2,922,967,588 | 3,117,263,609 |
| | (ಸಿ) ಷೇರು ವಾರಂಟಿಗಳಿಗೆ ಪ್ರತಿಯಾಗಿ ಸ್ವೀಕರಿಸಲಾದ ಹಣ | | | | |
| | **ಒಟ್ಟು ಈಕ್ವಿಟಿ** | | **3,548,195,191** | **3,350,315,288** | **3,319,029,609** |
| | **ಹೊಣೆಗಾರಿಕೆಗಳು** | | | | |
| | ಚಾಲ್ತಿಯೇತರ ಹೊಣೆಗಾರಿಕೆಗಳು | | | | |
| | (ಎ) ಹಣಕಾಸಿನ ಹೊಣೆಗಾರಿಕೆಗಳು | | | | |
| | (i) ಸಾಲಗಳು | 15 | | | |
| | (ii) ಇತರೆ ಹಣಕಾಸಿನ ಹೊಣೆಗಾರಿಕೆಗಳು | 16 | 539,719,642 | 577,247,361 | 534,146,325 |
| | (ಬಿ) ಮುಂದೂಡಿದ ತೆರಿಗೆ ಹೊಣೆಗಾರಿಕೆಗಳು | 7 | | | |
| | (ಸಿ) ವ್ಯವಸ್ಥೆಗಳು | 17 | 106,420,330 | 95,347,088 | 104,546,813 |
| | (ಡಿ) ಇತರೆ ಚಾಲ್ತಿಯೇತರ ಹೊಣೆಗಾರಿಕೆಗಳು | 18 | 8,774,064 | 9,536,546 | 8,092,547 |
| | **ಒಟ್ಟು ಚಾಲ್ತಿಯೇತರ ಹೊಣೆಗಾರಿಕೆಗಳು** | | **654,914,036** | **682,130,995** | **646,785,685** |
| | **ಚಾಲ್ತಿ ಹೊಣೆಗಾರಿಕೆಗಳು** | | | | |
| | **(ಎ) ಹಣಕಾಸು ಹೊಣೆಗಾರಿಕೆಗಳು** | | | | |
| | (i) ಸಾಲಗಳು | 19 | | | |
| | (ii) ವ್ಯಾಪಾರ ಸಂಬಂಧ ಪಾವತಿ ಮಾಡಬೇಕಾಗಿರುವುದು | 20 | 899,187,329 | 993,738,702 | 349,639,406 |
| | (iii) ಇತರ ಹಣಕಾಸು ಹೊಣೆಗಾರಿಕೆಗಳು | 16 | 1,006,020,249 | 973,586,813 | 993,127,878 |
| | (ಬಿ) ವ್ಯವಸ್ಥೆಗಳು | 17 | 445,290,761 | 542,392,385 | 619,836,522 |
| | (ಸಿ) ಇತರೆ ಚಾಲ್ತಿ ಹೊಣೆಗಾರಿಕೆಗಳು | 18 | 146,946,775 | 157,046,762 | 108,874,531 |
| | **ಒಟ್ಟು ಚಾಲ್ತಿ ಹೊಣೆಗಾರಿಕೆಗಳು** | | **2,497,445,114** | **2,666,764,662** | **2,071,478,337** |
| | **ಒಟ್ಟು ಹೊಣೆಗಾರಿಕೆಗಳು** | | **3,152,359,150** | **3,348,895,657** | **2,718,264,022** |
| | **ಒಟ್ಟು ಈಕ್ವಿಟಿ ಮತ್ತು ಹೊಣೆಗಾರಿಕೆಗಳು** | | **6,700,554,341** | **6,699,210,945** | **6,037,293,631** |

ಮಹತ್ತರ ಲೆಕ್ಕ ನಿರ್ವಹಣಾ ನೀತಿಗಳು ಮತ್ತು ಇತರೆ ವಿವರಣಾತ್ಮಕ ಮಾಹಿತಿ ಟಿಪ್ಪಣಿ-1

ಮೇಲೆ ಉಲ್ಲೇಖಿಸಿರುವ ಒಡಗೂಡಿದ ಟಿಪ್ಪಣಿಗಳು ಹಣಕಾಸು ಹೇಳಿಕೆಗಳ ಅವಿಭಾಜ್ಯ ಅಂಗವಾಗಿರುತ್ತದೆ.

ಸಮದಿನಾಂಕ ನಮ್ಮ ವರದಿಯನುಸಾರ
ಆಭರ್ಣ ಅಂಡ್ ಅನಂತನ್
**ಚಾರ್ಟರ್ಡ್ ಅಕೌಂಟೆಂಟ್ಸ್ ಇವರ ಪರವಾಗಿ**
**ಸಂಸ್ಥೆ ನೋಂದಣಿ ಸಂಖ್ಯೆ 000003ಎಸ್**
ಸಹಿ/-
**(ಆಭರ್ಣ ಭಾಸ್ಕರ್)**
ಪಾಲುದಾರರು
ಸದಸ್ಯತ್ವ ಸಂಖ್ಯೆ: 025145
ಯುಡಿಐಎನ್ ಸಂಖ್ಯೆ :19025145ಎಎಎಎಜೆ9669
ಸ್ಥಳ : ಬೆಂಗಳೂರು
ದಿನಾಂಕ:16.09.2019

ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿ.ನ
ನಿರ್ದೇಶಕರ ಮಂಡಳಿ ಪರವಾಗಿ ಮತ್ತು ಹೆಸರಿನಲ್ಲಿ

ಸಹಿ/-
ಸುಬ್ರಮಣ್ಯ
ಮುಖ್ಯ ಹಣಕಾಸು ಅಧಿಕಾರಿ
ಪಾನ್ ಸಂಖ್ಯೆ :ಎಎಕ್ಸ್‌ಪಿಎನ್7506ಕೆ

ಸಹಿ/-
ಶ್ರೀದೇವಿ ಬಿ.ಎಸ್
ಕಂಪನಿ ಕಾರ್ಯದರ್ಶಿ
ಪಾನ್ ಸಂಖ್ಯೆ :ಎಎಫ್‌ಎನ್‌ಪಿಎನ್1525ಎಂ

ಸಹಿ/-
ಹೆಚ್.ಪಿ. ಪ್ರಕಾಶ್
ವ್ಯವಸ್ಥಾಪಕ ನಿರ್ದೇಶಕರು
ಡಿನ್ ಸಂಖ್ಯೆ :06688928

ಸಹಿ/-
ಗೌರವ್ ಗುಪ್ತ
ಅಧ್ಯಕ್ಷರು
ಡಿನ್ ಸಂಖ್ಯೆ :02184763

MSIL

## ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್
## 31ನೇ ಮಾರ್ಚ್ 2019ಕ್ಕೆ ಕೊನೆಗೊಂಡ ವರ್ಷದ ಲಾಭ ಮತ್ತು ನಷ್ಟದ ವಿವರಣಾ ಪಟ್ಟಿ

(ಎಲ್ಲಾ ಮೊತ್ತಗಳು ನಿರ್ದಿಷ್ಟಪಡಿಸದ ಹೊರತು ರೂಪಾಯಿಗಳಲ್ಲಿರುತ್ತವೆ)

| ಕ್ರ. ಸಂ. | ವಿವರ | ಟಿಪ್ಪಣಿ ಸಂಖ್ಯೆ | 31ನೇ ಮಾರ್ಚ್ 2019ಕ್ಕೆ ಕೊನೆಗೊಂಡ ವರ್ಷದಲ್ಲಿ | 31ನೇ ಮಾರ್ಚ್ 2018ಕ್ಕೆ ಕೊನೆಗೊಂಡ ವರ್ಷದಲ್ಲಿ |
|---|---|---|---|---|
| I | ಕಾರ್ಯಾಚರಣೆಗಳಿಂದ ಬಂದ ಆದಾಯ | 21 | 18,198,170,400 | 15,675,116,322 |
| II | ಇತರೆ ಆದಾಯ | 22 | 225,082,273 | 188,561,955 |
| **III** | **ಒಟ್ಟು ಆದಾಯ (I+II)** | | **18,423,252,673** | **15,863,678,277** |
| **IV** | **ಖರ್ಚುಗಳು:** | | | |
| | ಬಳಸಿರುವ ಸಾಮಗ್ರಿಗಳ ಬೆಲೆ | 23 | 139,087,755 | 74,548,319 |
| | ವ್ಯಾಪಾರದ ಸರಕಿನ ಖರೀದಿ | 32 | 15,909,024,439 | 14,202,139,609 |
| | ಸಿದ್ಧಪಡಿಸಿದ ಸರಕುಗಳ ತಪಶೀಲಿನಲ್ಲಿ ಬದಲಾವಣೆಗಳು, ಪ್ರಗತಿಯಲ್ಲಿರುವ ಕಾಮಗಾರಿಗಳು ಮತ್ತು ವ್ಯಾಪಾರಿ ಸರಕು | 24 | 280,913,174 | (219,211,554) |
| | ನೌಕರರ ಸೌಲಭ್ಯ ವೆಚ್ಚಗಳು | 25 | 241,173,043 | 264,770,604 |
| | ಹಣಕಾಸಿನ ವೆಚ್ಚಗಳು | 26 | 13,517,921 | 10,442,675 |
| | ಸವಕಳಿ ಮತ್ತು ಅಮಾರ್ಟೈಸೇಷನ್ ಖರ್ಚುಗಳು | 27 | 72,180,274 | 34,185,195 |
| | ಇತರೆ ಖರ್ಚುಗಳು | 28 | 1,416,963,726 | 1,280,196,401 |
| | **ಒಟ್ಟು ಖರ್ಚುಗಳು (IV)** | | **18,072,860,332** | **15,647,071,249** |
| V | **ಅಸಾಧಾರಣ ಐಟಂಗಳು ಮತ್ತು ತೆರಿಗೆಗೆ ಮುನ್ನ ಲಾಭ (III-IV)** | | 350,392,341 | 216,607,028 |
| VI | ಅಸಾಧಾರಣ ಐಟಂಗಳು | 29 | 1,283,154 | 1,283,154 |
| VII | ತೆರಿಗೆಗೆ ಮುನ್ನ ಲಾಭ (V-VI) | | 349,109,187 | 215,323,874 |
| VIII | **ತೆರಿಗೆ ಖರ್ಚುಗಳು:** | | | |
| | (1) ಚಾಲ್ತಿ ತೆರಿಗೆ | 33 | 110,000,000 | 93,976,982 |
| | (2) ಹಿಂದಿನ ವರ್ಷಗಳ ತೆರಿಗೆ | | 5,368,844 | |
| | (3) ಮುಂದೂಡಿದ ತೆರಿಗೆ | | 10,533,111 | 521,787 |
| | **ಒಟ್ಟು ತೆರಿಗೆ ಖರ್ಚುಗಳು** | | **125,901,955** | **94,498,769** |
| **IX** | **ಮುಂದುವರಿಯುತ್ತಿರುವ ಕಾರ್ಯಾಚರಣೆಗಳಿಂದ ಬಂದ ವರ್ಷದ ಲಾಭ (VII-VIII)** | | **223,207,232** | **120,825,105** |
| | **ಸ್ಥಗಿತವಾದ ಕಾರ್ಯಾಚರಣೆಗಳು** | | | |
| | ಸ್ಥಗಿತವಾದ ಕಾರ್ಯಾಚರಣೆಗಳಿಂದ ಬಂದ ವರ್ಷದ ತೆರಿಗೆ ಪಾವತಿಗೆ ಮುನ್ನಿನ ಲಾಭ /(ನಷ್ಟ) | 30 | (811,308) | (1,043,887) |
| | ಸ್ಥಗಿತಗೊಂಡ ಕಾರ್ಯಾಚರಣೆಗಳಿಂದ ತೆರಿಗೆ ಆದಾಯ (ಖರ್ಚು) | | | |
| | ಸ್ಥಗಿತಗೊಂಡ ಕಾರ್ಯಾಚರಣೆಗಳಿಂದ ವರ್ಷದಲ್ಲಿ ಆದ ಲಾಭ/(ನಷ್ಟ) | | (811,308) | (1,043,887) |

| ಕ್ರ. ಸಂ. | ವಿವರ | ಟಿಪ್ಪಣಿ ಸಂಖ್ಯೆ | 31ನೇ ಮಾರ್ಚ್ 2019ಕ್ಕೆ ಕೊನೆಗೊಂಡ ವರ್ಷದಲ್ಲಿ | 31ನೇ ಮಾರ್ಚ್ 2018ಕ್ಕೆ ಕೊನೆಗೊಂಡ ವರ್ಷದಲ್ಲಿ |
|---|---|---|---|---|
| | **ಇತರೆ ಸಮಗ್ರ ಆದಾಯ** | | | |
| | ಎ. i) ಲಾಭ ಅಥವಾ ನಷ್ಟಕ್ಕೆ ಮರು ವರ್ಗೀಕರಿಸಲಾಗದ ಐಟಂಗಳು | 31 | | |
| | ನಿರೂಪಿತ ಸೌಲಭ್ಯದ ವಿಮಾಗಣನ ಲಾಭಗಳು/(ನಷ್ಟಗಳು) | | (34,306,030) | (19,475,900) |
| | ಈಕ್ವಿಟಿ ಸಾಧನಗಳಲ್ಲಿನ ನ್ಯಾಯೋಚಿತ ಮೌಲ್ಯಮಾಪನ | | 9,790,088 | (46,120,329) |
| | ii) ಲಾಭ ಅಥವಾ ನಷ್ಟಕ್ಕೆ ಮರು ವರ್ಗೀಕರಿಸಲಾಗದ ಐಟಂಗಳಿಗೆ ಸಂಬಂಧಿಸಿದಂತೆ ಆದಾಯ ತೆರಿಗೆ | | | |
| | ಬಿ. i) ಲಾಭ ಅಥವಾ ನಷ್ಟಕ್ಕೆ ಮರು ವರ್ಗೀಕರಿಸಲಾದ ಬಾಬ್ತುಗಳು | | | |
| | ii) ಲಾಭ ಅಥವಾ ನಷ್ಟಕ್ಕೆ ಮರು ವರ್ಗೀಕರಿಸಲಾದ ಐಟಂಗಳಿಗೆ ಸಂಬಂಧಿಸಿದಂತೆ ಆದಾಯ ತೆರಿಗೆ | | | |
| X | **ಒಟ್ಟು ಇತರೆ ಸಮಗ್ರ ಆದಾಯ** (ಎ(i-ii)+ (ಬಿ(i-ii) | | **(24,515,942)** | **(65,596,229)** |
| XI | **ವರ್ಷದ ಒಟ್ಟು ಸಮಗ್ರ ಆದಾಯ** | | **197,879,982** | **54,184,989** |
| XII | **ಈಕ್ವಿಟಿ ಷೇರು ಒಂದರ ಗಳಿಕೆ** | | | |
| | ನಿರಂತರ ಕಾರ್ಯಾಚರಣೆಯ ಷೇರು ಒಂದರ ಗಳಿಕೆಗಳು | | | |
| | ಈಕ್ವಿಟಿ ಧಾರಕರುಗಳಿಗೆ ಅನ್ವಯ ಮಾಡಬಹುದಾದ ಮುಂದುವರಿದ ಕಾರ್ಯಾಚರಣೆಗಳಿಂದ ಬಂದ ಲಾಭದ ಆಧಾರದ ಮೇಲೆ ಲೆಕ್ಕ ಹಾಕಿದ ಮೂಲ ಮೊತ್ತ | | 52.42 | 28.27 |
| | ಈಕ್ವಿಟಿ ಧಾರಕರುಗಳಿಗೆ ಅನ್ವಯ ಮಾಡಬಹುದಾದ ಮುಂದುವರಿದ ಕಾರ್ಯಾಚರಣೆಗಳಿಂದ ಬಂದ ಲಾಭದ ಆಧಾರದ ಮೇಲೆ ಲೆಕ್ಕ ಹಾಕಿದ ದ್ರವೀಕೃತ ಮೊತ್ತ | | 52.42 | 28.27 |
| | **ಸ್ಥಗಿತಗೊಂಡ ಕಾರ್ಯಾಚರಣೆ ಬಗ್ಗೆ ಷೇರು ಒಂದರ ಗಳಿಕೆ** | | | |
| | ಈಕ್ವಿಟಿ ಧಾರಕರುಗಳಿಗೆ ಅನ್ವಯಿಸಬಹುದಾದ ಸ್ಥಗಿತಗೊಂಡ ಕಾರ್ಯಾಚರಣೆಗಳಿಂದ ಬಂದ ಲಾಭದ ಆಧಾರದ ಮೇಲೆ ಲೆಕ್ಕಾಚಾರ ಮಾಡಿದ ಮೂಲ ಮೊತ್ತ | | (0.19) | (0.24) |
| | ಈಕ್ವಿಟಿ ಧಾರಕರುಗಳಿಗೆ ಅನ್ವಯಿಸಬಹುದಾದ ಸ್ಥಗಿತಗೊಂಡ ಕಾರ್ಯಾಚರಣೆಗಳಿಂದ ಬಂದ ಲಾಭದ ಆಧಾರದ ಮೇಲೆ ಲೆಕ್ಕಾಚಾರ ಮಾಡಿದ ದ್ರವೀಕೃತ ಮೊತ್ತ | | (0.19) | (0.24) |
| | **ಮುಂದುವರಿದ ಮತ್ತು ಸ್ಥಗಿತಗೊಂಡ ಕಾರ್ಯಾಚರಣೆಗಳಿಂದ ಷೇರು ಒಂದರ ಗಳಿಕೆಗಳು** | | | |
| | (ಎ) ಈಕ್ವಿಟಿ ಧಾರಕರುಗಳಿಗೆ ಅನ್ವಯಿಸಬಹುದಾದ ವರ್ಷದ ಲಾಭದ ಆಧಾರದ ಮೇಲೆ ಲೆಕ್ಕಾಚಾರ ಮಾಡಿದ ಮೂಲ ಮೊತ್ತ | | 52.23 | 28.02 |
| | (ಬಿ) ಈಕ್ವಿಟಿ ಧಾರಕರುಗಳಿಗೆ ಅನ್ವಯಿಸಬಹುದಾದ ವರ್ಷದ ಲಾಭದ ಆಧಾರದ ಮೇಲೆ ಲೆಕ್ಕಾಚಾರ ಮಾಡಿದ ದ್ರವೀಕೃತ ಮೊತ್ತ | | 52.23 | 28.02 |

ಮಹತ್ತರ ಲೆಕ್ಕ ನಿರ್ವಹಣಾ ನೀತಿಗಳು ಮತ್ತು ಇತರೆ ವಿವರಣಾತ್ಮಕ ಮಾಹಿತಿ ಟಿಪ್ಪಣಿ-1

ಮೇಲೆ ಉಲ್ಲೇಖಿಸಿರುವ ಒಡಗೂಡಿದ ಟಿಪ್ಪಣಿಗಳು ಹಣಕಾಸು ಹೇಳಿಕೆಗಳ ಅವಿಭಾಜ್ಯ ಅಂಗವಾಗಿರುತ್ತದೆ.

ಸಮದಿನಾಂಕ ನಮ್ಮ ವರದಿಯನುಸಾರ
ಆಭರ್ಣ ಅಂಡ್ ಅನಂತನ್
**ಚಾರ್ಟರ್ಡ್ ಅಕೌಂಟೆಂಟ್ಸ್ ಇವರ ಪರವಾಗಿ**
**ಸಂಸ್ಥೆ ನೋಂದಣಿ ಸಂಖ್ಯೆ 000003ಎಸ್**
ಸಹಿ/-
**(ಆಭರ್ಣ ಭಾಸ್ಕರ್)**
ಪಾಲುದಾರರು
ಸದಸ್ಯತ್ವ ಸಂಖ್ಯೆ: 025145
ಯುಡಿಐಎನ್ ಸಂಖ್ಯೆ :19025145ಎಎಎಎಜೆ9669
ಸ್ಥಳ : ಬೆಂಗಳೂರು
ದಿನಾಂಕ:16.09.2019

ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿ.ನ
ನಿರ್ದೇಶಕರ ಮಂಡಳಿ ಪರವಾಗಿ ಮತ್ತು ಹೆಸರಿನಲ್ಲಿ

ಸಹಿ/-
ಸುಬ್ರಮಣ್ಯ
ಮುಖ್ಯ ಹಣಕಾಸು ಅಧಿಕಾರಿ
ಪಾನ್ ಸಂಖ್ಯೆ :ಎಎಕ್ಸ್‌ಪಿಎನ್7506ಕೆ

ಸಹಿ/-
ಶ್ರೀದೇವಿ ಬಿ.ಎಸ್
ಕಂಪನಿ ಕಾರ್ಯದರ್ಶಿ
ಪಾನ್ ಸಂಖ್ಯೆ :ಎಫ್‌ಎನ್‌ಪಿಎನ್1525ಎಂ

ಸಹಿ/-
ಹೆಚ್.ಪಿ. ಪ್ರಕಾಶ್
ವ್ಯವಸ್ಥಾಪಕ ನಿರ್ದೇಶಕರು
ಡಿನ್ ಸಂಖ್ಯೆ :06688928

ಸಹಿ/-
ಗೌರವ್ ಗುಪ್ತ
ಅಧ್ಯಕ್ಷರು
ಡಿನ್ ಸಂಖ್ಯೆ :02184763

## ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್
## 31ನೇ ಮಾರ್ಚ್ 2019ಕ್ಕೆ ಕೊನೆಗೊಂಡ ವರ್ಷದ ನಗದು ಹರಿವಿನ ವಿವರ
**(ಎಲ್ಲಾ ಮೊತ್ತಗಳು ನಿರ್ದಿಷ್ಟಪಡಿಸದ ಹೊರತು ರೂಪಾಯಿಗಳಲ್ಲಿರುತ್ತವೆ)**

| ವಿವರಗಳು | 31ನೇ ಮಾರ್ಚ್ 2019ಕ್ಕೆ ಕೊನೆಗೊಂಡ ವರ್ಷದಲ್ಲಿ | 31ನೇ ಮಾರ್ಚ್ 2018ಕ್ಕೆ ಕೊನೆಗೊಂಡ ವರ್ಷದಲ್ಲಿ |
|---|---|---|
| **ಎ. ಕಾರ್ಯಾಚರಣೆ ಚಟುವಟಿಕೆಗಳಿಂದ ಬಂದ ನಗದು ಹರಿಯುವಿಕೆ** | | |
| ಲಾಭ ಮತ್ತು ನಷ್ಟದ ವಿವರಗಳನ್ವಯ ತೆರಿಗೆ ಮತ್ತು ಅಸಾಧಾರಣ ಬಾಬ್ತುಗಳ ಮುನ್ನ ಲಾಭ | 348,297,879 | 214,279,987 |
| ಕೆಳಕಂಡವುಗಳಿಗೆ ಹೊಂದಾಣಿಕೆ: | | |
| ಸವಕಳಿ ಮತ್ತು ಅಮಾರ್ಟೈಜೇಷನ್ | 72,180,274 | 34,185,195 |
| ರದ್ದುಪಡಿಸಿದ ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ | 2,011,291 | |
| ರದ್ದುಪಡಿಸಿದ ಹೂಡಿಕೆಗಳು | | 3,000 |
| ನೌಕರರ ಸೌಲಭ್ಯ ಯೋಜನೆಯ ಪುನರ್‌ಮಾಪನ (ನಿರೂಪಿತ ಸೌಲಭ್ಯ ಯೋಜನೆಗಳಲ್ಲಿನ ಲಾಭಗಳು/(ನಷ್ಟಗಳು) ಸೇರಿದಂತೆ) | (34,306,030) | (18,636,610) |
| ಲಾಭಾಂಶದ ಆದಾಯ | (581,900) | (4,442,894) |
| ಸ್ಥಿರಾಸ್ತಿಗಳ ಮಾರಾಟಗಳಿಂದ ನಷ್ಟ (ನಿವ್ವಳ) | 16,421 | (161,962) |
| ಬಡ್ಡಿ ಆದಾಯ | (107,791,214) | (115,309,207) |
| ಪಾವತಿ ಮಾಡಿದ ಬಡ್ಡಿ ಮತ್ತು ಖಾತ್ರಿ ಕಮಿಷನ್ | 6,967,046 | 3,561,871 |
| ಹೂಡಿಕೆ ಸ್ವತ್ತಿನಿಂದ ಬಂದ ಕಾರ್ಯಾಚರಣೆ ಗುತ್ತಿಗೆ ಬಾಡಿಗೆ | (39,262,895) | (33,355,812) |
| ಹೂಡಿಕೆಗಳ ಮಾರಾಟದ ಮೇಲಿನ ನಷ್ಟ/(ಲಾಭ) | (29,302) | (27,276) |
| **ಕಾರ್ಯನಿರತ ಬಂಡವಾಳದ ಬದಲಾವಣೆಯ ಮುನ್ನ ಕಾರ್ಯಾಚರಣೆಯ ಲಾಭ** | **247,501,570** | **80,096,293** |
| **ಕಾರ್ಯನಿರತ ಬಂಡವಾಳದಲ್ಲಿ ಬದಲಾವಣೆಗಳು** | | |
| **ಹೆಚ್ಚಳ / (ಇಳಿಕೆ) ಗೆ ಹೊಂದಾಣಿಕೆಗಳು** | | |
| ವ್ಯಾಪಾರ ಮತ್ತು ಇತರೆ ಸ್ವೀಕಾರಗಳು | (296,095,049) | (75,006,682) |
| ತಪಶೀಲುಗಳು | 336,848,045 | (292,355,350) |
| ಇತರೆ ಆಸ್ತಿಗಳು | 49,660,841 | (119,700,439) |
| ಇತರೆ ಹಣಕಾಸಿನ ಆಸ್ತಿಗಳು | 81,235,633 | (294,322,096) |
| ವ್ಯಾಪಾರದ ಸಂಬಂಧ ಪಾವತಿ ಮಾಡಬೇಕಾದ್ದು | (94,551,373) | 644,099,296 |
| ಇತರೆ ಹೊಣೆಗಾರಿಕೆಗಳು | (10,862,469) | 49,616,230 |
| ಇತರೆ ಹಣಕಾಸಿನ ಹೊಣೆಗಾರಿಕೆಗಳು | (5,094,283) | 23,559,971 |
| ವ್ಯವಸ್ಥೆಗಳು | (86,028,382) | (86,643,862) |
| **ಕಾರ್ಯಾಚರಣೆಯಿಂದ ಉತ್ಪತ್ತಿಯಾದ ನಗದು** | 222,614,533 | (70,656,639) |
| ಪಾವತಿ ಮಾಡಿದ ತೆರಿಗೆ | 172,641,265 | 60,831,512 |
| **ಕಾರ್ಯಾಚರಣೆ ಚಟುವಟಿಕೆಗಳಿಂದ ಉತ್ಪತ್ತಿಯಾದ ನಿವ್ವಳ ನಗದು** | **49,973,268** | **(131,488,151)** |

MSIL

| ವಿವರಗಳು | 31ನೇ ಮಾರ್ಚ್ 2019ಕ್ಕೆ ಕೊನೆಗೊಂಡ ವರ್ಷದಲ್ಲಿ | 31ನೇ ಮಾರ್ಚ್ 2018ಕ್ಕೆ ಕೊನೆಗೊಂಡ ವರ್ಷದಲ್ಲಿ |
|---|---|---|
| **ಬಿ. ಹೂಡಿಕೆ ಚಟುವಟಿಕೆಗಳಿಂದ ಬಂದ ನಗದು ಹರಿವು** | | |
| **(1) ನಗದೇತರ ಹೂಡಿಕೆಗಳ ಚಟುವಟಿಕೆಗಳು** | | |
| ಸ್ಥಿರಾಸ್ತಿಗಳ ಮಾರಾಟದ ಪರಿಣಾಮವಾಗಿ ಲೆಕ್ಕ ಹಾಕಿದ ಹೆಚ್ಚುವರಿ ಸವಕಳಿಯ ಹಿಂಪಡೆತ | | (5,701) |
| ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಯ ಬಂಡವಾಳೀಕರಣ | | 338,229,176 |
| ii) **ಇತರ ಹೂಡಿಕೆ ಚಟುವಟಿಕೆಗಳು** | | |
| ಬಂಡವಾಳ ಮುಂಗಡಗಳು ಸೇರಿದಂತೆ ಸ್ಥಿರಾಸ್ತಿಗಳ ಖರೀದಿ | (173,892,423) | (447,562,243) |
| ಸರ್ಕಾರಿ ಅನುದಾನ | 368,089 | |
| ನಗದು ಮತ್ತು ನಗದು ಸಮಾನಗಳ ಹೊರತುಪಡಿಸಿ ಬ್ಯಾಂಕ್ ಶಿಲ್ಕುಗಳು | (34,205,385) | 11,931,017 |
| ಸ್ಥಿರಾಸ್ತಿಗಳ ಮಾರಾಟದಿಂದ ಬಂದ ಹಣ | 163,613 | 333,379 |
| ಹೂಡಿಕೆಗಳ (ಖರೀದಿ) / ಮಾರಾಟ | 29,302 | 27,276 |
| ಹೂಡಿಕೆ ಆದಾಯ (ಹೂಡಿಕೆ ಸ್ವತ್ತಿನ ಮೇಲಿನ ಬಾಡಿಗೆ ಆದಾಯ) | 39,262,895 | 33,355,812 |
| ಸ್ವೀಕರಿಸಿದ ಬಡ್ಡಿ | 170,742,634 | 105,908,509 |
| ಸ್ವೀಕರಿಸಿದ ಲಾಭಾಂಶ | 581,900 | 4,442,894 |
| **ಹೂಡಿಕೆ ಚಟುವಟಿಕೆಗಳಲ್ಲಿ ಬಳಸಲಾದ ನಿವ್ವಳ ನಗದು** | **3,050,625** | **46,660,119** |
| **ಸಿ. ಹಣಕಾಸು ನೀಡಿಕೆ ಚಟುವಟಿಕೆಗಳಿಂದ ಬಂದ ನಗದು ಹರಿವು** | | |
| i) ನಗದೇತರ ಹಣಕಾಸು ನೀಡಿಕೆ ಚಟುವಟಿಕೆಗಳು | | |
| ಷೇರು ಬಂಡವಾಳ ನೀಡಿಕೆಯಿಂದ ಬಂದ ಹಣ | | 225,581,700 |
| ಹಿಂದಿರುಗಿಸಿದ ಷೇರು ಅರ್ಜಿ ಹಣ | (79) | (225,581,700) |
| (ii) ಇತರೆ ಹಣಕಾಸು ಚಟುವಟಿಕೆಗಳು | | |
| ಹಣಕಾಸು ವೆಚ್ಚ (ಬಡ್ಡಿ ಮತ್ತು ಖಾತರಿ ಕಮಿಷನ್ ಪಾವತಿ ಮಾಡಿರುವುದು) | (6,967,046) | (3,561,871) |
| ಪಾವತಿ ಮಾಡಿದ ಲಾಭಾಂಶ | | (20,176,600) |
| ಪಾವತಿ ಮಾಡಿದ ಲಾಭಾಂಶ ವಿತರಣೆ ತೆರಿಗೆ | | (3,562,008) |
| **ಹಣಕಾಸು ಚಟುವಟಿಕೆಗಳಲ್ಲಿ ಬಳಸಲಾದ ನಿವ್ವಳ ನಗದು** | **(6,967,125)** | **(27,300,479)** |

| | | |
|---|---|---|
| **ನಗದು ಮತ್ತು ನಗದಿಗೆ ಸಮಾನದಲ್ಲಿನ ನಿವ್ವಳ (ಇಳಿಕೆ)/ಹೆಚ್ಚಳ (ಎ+ಬಿ+ಸಿ)** | **46,056,768** | **(112,128,511)** |
| **ಸಮಂಜಸತೆ** | | |
| ವರ್ಷದ ಆರಂಭದಲ್ಲಿದ್ದಂತೆ ನಗದು ಮತ್ತು ನಗದು ಸಮಾನಗಳು | 724,375,747 | 836,504,258 |
| ವರ್ಷಾಂತ್ಯದಲ್ಲಿದ್ದಂತೆ ನಗದು ಮತ್ತು ನಗದು ಸಮಾನಗಳು | 770,432,515 | 724,375,747 |
| **ನಗದು ಮತ್ತು ನಗದು ಸಮಾನಗಳಲ್ಲಿನ ನಿವ್ವಳ ಹೆಚ್ಚಳ/(ಇಳಿಕೆ)** | 770,432,515 | 724,375,747 |

MSIL

**ಕೆಳಕಂಡವುಗಳನ್ನು ಒಳಗೊಂಡ ನಗದು ಮತ್ತು ನಗದು ಸಮಾನಗಳು**

| ವಿವರಗಳು | 31ನೇ ಮಾರ್ಚ್ 2019 ರಂದು ಇದ್ದಂತೆ | 31ನೇ ಮಾರ್ಚ್ 2018ರಂದು ಇದ್ದಂತೆ |
|---|---|---|
| **ಬ್ಯಾಂಕ್‌ಗಳಲ್ಲಿ ನ ಶಿಲ್ಕುಗಳು** | | |
| ಚಾಲ್ತಿ ಖಾತೆಗಳಲ್ಲಿ | 359,027,436 | 622,182,319 |
| ಮೂಲ ಪಕ್ವತೆ ಅವಧಿ 3 ತಿಂಗಳಿಗಿಂತಲೂ ಕಡಿಮೆ ಇರುವ ಠೇವಣಿ ಖಾತೆಗಳಲ್ಲಿ | 295,707,176 | 51,648,850 |
| ಕೈಯಲ್ಲಿರುವ ನಗದು | 115,172,115 | 50,267,887 |
| ವರ್ಗಾವಣೆಯಲ್ಲಿ ಸಂದಾಯಗಳು | 525,788 | 276,691 |
| ನಗದು ಮತ್ತು ನಗದು ಸಮಾನಗಳು(ಟಿಪ್ಪಣಿ-12 ನೋಡಿ) | | |
| **ನಗದು ಹರಿಯುವಿಕೆ ಹೇಳಿಕೆಯಲ್ಲಿ ನ ನಗದು ಮತ್ತು ನಗದು ಸಮಾನಗಳು** | **770,432,515** | **724,375,747** |

**ಈ ನಗದು ಚಲಾವಣೆ ಹೇಳಿಕೆಯು ಲಗತ್ತಿಸಲಾದ ನಮ್ಮ ವರದಿಯನ್ನು ಉಲ್ಲೇಖಿಸಿದೆ**

ಸಮದಿನಾಂಕ ನಮ್ಮ ವರದಿಯನುಸಾರ
ಆಭರ್ಣ ಅಂಡ್ ಅನಂತನ್
**ಚಾರ್ಟರ್ಡ್ ಅಕೌಂಟೆಂಟ್ಸ್ ಇವರ ಪರವಾಗಿ**
**ಸಂಸ್ಥೆ ನೋಂದಣಿ ಸಂಸ್ಥೆ 000003ಎಸ್**
ಸಹಿ/-
**(ಆಭರ್ಣ ಭಾಸ್ಕರ್)**
ಪಾಲುದಾರರು
ಸದಸ್ಯತ್ವ ಸಂಖ್ಯೆ: 025145
ಯುಡಿಐಎನ್ ಸಂಖ್ಯೆ :19025145ಎಎಎಎಜೆ9669
ಸ್ಥಳ : ಬೆಂಗಳೂರು
ದಿನಾಂಕ:16.09.2019

ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿ.ನ
ನಿರ್ದೇಶಕರ ಮಂಡಳಿ ಪರವಾಗಿ ಮತ್ತು ಹೆಸರಿನಲ್ಲಿ

ಸಹಿ/-
ಸುಬ್ರಮಣ್ಯ
ಮುಖ್ಯ ಹಣಕಾಸು ಅಧಿಕಾರಿ
ಪಾನ್ ಸಂಖ್ಯೆ :ಎಎಕ್ಸ್‌ಪಿಎನ್7506ಕೆ

ಸಹಿ/-
ಶ್ರೀದೇವಿ ಬಿ.ಎನ್
ಕಂಪನಿ ಕಾರ್ಯದರ್ಶಿ
ಪಾನ್ ಸಂಖ್ಯೆ :ಎಎಫ್‌ಎನ್‌ಪಿಎನ್1525ಎಂ

ಸಹಿ/-
ಹೆಚ್.ಪಿ. ಪ್ರಕಾಶ್
ವ್ಯವಸ್ಥಾಪಕ ನಿರ್ದೇಶಕರು
ಡಿನ್ ಸಂಖ್ಯೆ :06688928

ಸಹಿ/-
ಗೌರವ್ ಗುಪ್ತ
ಅಧ್ಯಕ್ಷರು
ಡಿನ್ ಸಂಖ್ಯೆ :02184763

## ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್
## ಮಹತ್ತರ ಲೆಕ್ಕ ನಿರ್ವಹಣಾ ನೀತಿಗಳು ಮತ್ತು ಇತರ ವಿವರಣಾತ್ಮಕ ಮಾಹಿತಿಯ ಸಾರಾಂಶ:

### 1. ಕಂಪನಿ ಅವಲೋಕನ ಮತ್ತು ಮಹತ್ತರ ಲೆಕ್ಕ ನಿರ್ವಹಣೆ ನೀತಿಗಳು

### 1.1 ಕಂಪನಿ ಅವಲೋಕನ

ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ ಕಂಪನಿಯು ಕರ್ನಾಟಕ ಸರ್ಕಾರದ ಒಂದು ಪ್ರಮುಖ ಉದ್ಯಮವಾಗಿರುವುದು. ಇದು ವಿವಿಧ ಉತ್ಪನ್ನಗಳು ಮತ್ತು ಸೇವೆಗಳ ವ್ಯವಹಾರ ನಡೆಸುತ್ತಿರುವುದು. ಇದು ಒಂದು ವ್ಯಾಪಾರ ಸಂಸ್ಥೆಯಾಗಿ 1966ರಲ್ಲಿ ಪ್ರಾರಂಭವಾಗಿದೆ. ಕಂಪನಿಯ ನೋಂದಾಯಿತ ಕಚೇರಿಯು ಬೆಂಗಳೂರು, ಕರ್ನಾಟಕ, ಭಾರತದಲ್ಲಿ ಇದೆ. ಈ ಕಂಪನಿಯು ಪ್ರಾರಂಭವಾದ ಸಮಯದಿಂದ ಪ್ರಮುಖ ಮಾರಾಟ ಶಕ್ತಿಯಾಗಿ ರಾಷ್ಟ್ರಮಟ್ಟದಲ್ಲಿ ತನ್ನ ಅಸ್ತಿತ್ವವನ್ನು ಸ್ಥಾಪಿಸಿದೆ. ಇದು ಕರ್ನಾಟಕದಾದ್ಯಂತ ಕಚೇರಿಗಳ ವ್ಯಾಪಕ ಜಾಲಬಂಧ ಹೊಂದಿರುವುದರ ಜೊತೆಗೆ, ದೇಶದಲ್ಲಿನ ಕೆಲವು ಪ್ರಮುಖ ಸ್ಥಳಗಳಲ್ಲಿಯೂ ಕಚೇರಿಗಳನ್ನು ಹೊಂದಿದೆ. ಭಾರತದಲ್ಲಿ ತಯಾರಾದ ವಿದೇಶಿ ಮದ್ಯದ ವ್ಯಾಪಾರ ಮತ್ತು ವ್ಯವಹಾರ, ಚಿಟ್ ಫಂಡ್‌ಗಳನ್ನು ನಡೆಸುವುದು, ಕಾಗದದ ಉತ್ಪನ್ನಗಳ ತಯಾರಿಕೆ ಮತ್ತು ಮಾರಾಟ ಮತ್ತು ಆಮದಾದ ಮರಳಿನ ವ್ಯಾಪಾರ, ಫಾರ್ಮಸ್ಯೂಟಿಕಲ್, ಕೈಗಾರಿಕೆ ಮತ್ತು ಗ್ರಾಹಕರ ಉತ್ಪನ್ನಗಳ ಮಾರಾಟ ವ್ಯವಹಾರವನ್ನು ನಡೆಸುತ್ತಿರುವುದು.

### 1.2 ಮಹತ್ತರವಾದ ಲೆಕ್ಕ ನಿರ್ವಹಣೆ ನೀತಿಗಳು :

### ಎ. ಅನುಸರಣೆ ಹೇಳಿಕೆ :

ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯ (ಎಂಸಿಎ) ಕಂಪನಿಗಳ (ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟ) ನಿಯಮಗಳು, 2015 ಓದಿಕೊಂಡಂತೆ, ಕಂಪನಿಗಳ ಕಾಯ್ದೆ 2013ರ ಪ್ರಕರಣ 133ರ ಅನ್ವಯ ಪ್ರಕಟಿಸಿರುವಂತೆ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟಗಳ ಅನ್ವಯ ಕಂಪನಿಯ ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸಿದೆ.

31ನೇ ಮಾರ್ಚ್ 2019ಕ್ಕೆ ಕೊನೆಗೊಂಡ ವರ್ಷದ ಹಣಕಾಸು ಹೇಳಿಕೆಗಳನ್ನು ನಿರ್ದೇಶಕರ ಮಂಡಳಿಯು ದಿ.16ನೇ ಸೆಪ್ಟೆಂಬರ್ 2019ರಂದು ಅಧಿಕೃತಗೊಳಿಸಿದೆ ಮತ್ತು ನೀಡಲು ಅನುಮೋದಿಸಿದೆ.

### ಬಿ. ಹಣಕಾಸು ಹೇಳಿಕೆಗಳ ಸಿದ್ಧಪಡಿಸುವಿಕೆಗೆ ಆಧಾರ:

ನ್ಯಾಯೋಚಿತ ಮೌಲ್ಯಗಳಲ್ಲಿ ಮಾಪನ ಮಾಡಿರುವ ಕೆಲವು ಹಣಕಾಸಿನ ಆಸ್ತಿಗಳು ಮತ್ತು ಹೊಣೆಗಾರಿಕೆಗಳ ಹೊರತಾಗಿ, ಹಣಕಾಸಿನ ಹೇಳಿಕೆಗಳನ್ನು ಮುಂದುವರೆಯುತ್ತಿರುವ ಸಂಸ್ಥೆ ಆಧಾರದ ಮೇಲೆ ಐತಿಹಾಸಿಕ ವೆಚ್ಚದ ಅನ್ವಯ ಸಿದ್ಧಪಡಿಸಲಾಗಿದೆ.

ಐತಿಹಾಸಿಕ ವೆಚ್ಚ ಸಾಮಾನ್ಯವಾಗಿ ಸರಕುಗಳು ಮತ್ತು ಸೇವೆಗಳ ವಿನಿಮಯಕ್ಕಾಗಿ ನೀಡುವ ಬೆಲೆಯ ನ್ಯಾಯೋಚಿತ ಪರಿಗಣನೆ ಯಾಗಿರುತ್ತದೆ.

ನ್ಯಾಯೋಚಿತ ಮೌಲ್ಯವು ಒಂದು ಆಸ್ತಿಯ ಮಾರಾಟದಿಂದ ಬರುವ ಬೆಲೆ ಅಥವಾ ಗಣನೆಯ ದಿನಾಂಕದಂದು ಮಾರುಕಟ್ಟೆ ಪಾಲುದಾರರ ನಡುವೆ ನಡೆಯುವ ಕ್ರಮಬದ್ಧ ವಹಿವಾಟುಗಳಲ್ಲಿ ಋಣಭಾರದ ವರ್ಗಾವಣೆಗಾಗಿ ಸಂದಾಯ ಮಾಡುವ ಮೊತ್ತವಾಗಿರುತ್ತದೆ. ಸದರಿ ಬೆಲೆಯು ನೇರವಾಗಿ ಒಳಪಡಿಸಬಹುದಾಗಿರುವುದು ಅಥವಾ ಇನ್ನೊಂದು ಮೌಲ್ಯಮಾಪನ ತಂತ್ರದ ಮೂಲಕ ಅಂದಾಜು ಮಾಡುವುದೋ ಅಥವಾ ಬಿಡುವುದನ್ನು ಪರಿಗಣಿಸಲಾಗದು. ಒಂದು ಆಸ್ತಿಯ ಅಥವಾ ಹೊಣೆಗಾರಿಕೆಯ ನ್ಯಾಯೋಚಿತ ಬೆಲೆಯ ಮೌಲ್ಯಮಾಪನ ಮಾಡುವಾಗ ಕಂಪನಿ ಆಸ್ತಿ ಅಥವಾ ಹೊಣೆಗಾರಿಕೆ ಅಂದಾಜು ಲೆಕ್ಕಾಚಾರಕ್ಕಾಗಿ ಅನುಸರಿಸುವ ಲಕ್ಷಣಗಳನ್ನೇ ಒಂದು ವೇಳೆ ಮಾರುಕಟ್ಟೆ ಪಾಲುದಾರರು ಅನುಸರಿಸುತ್ತಿದ್ದಲ್ಲಿ ಕಂಪನಿಯು ಅವುಗಳನ್ನು ವಹಿವಾಟು ದಿನದಂದು ಗಣನೆಗೆ ತೆಗೆದುಕೊಳ್ಳುವುದು. ನ್ಯಾಯೋಚಿತ ಮೌಲ್ಯವನ್ನು ಗಣನೆಗಾಗಿ ಮತ್ತು/ಅಥವಾ ಬಹಿರಂಗಪಡಿಸುವ ಉದ್ದೇಶಕ್ಕಾಗಿ ಈ ಹಣಕಾಸು ಹೇಳಿಕೆಗಳಲ್ಲಿ ಷೇರು ಆಧಾರಿತ ಪಾವತಿ ವಹಿವಾಟುಗಳನ್ನು ಹೊರತುಪಡಿಸಿ ಆ ಲಕ್ಷಣಗಳ ಆಧಾರದ ಮೇಲೆ ನಿರ್ಧರಿಸಲಾಗುವುದು. ಏಕೆಂದರೆ ಷೇರು ಆಧಾರಿತ ಪಾವತಿ ವಹಿವಾಟುಗಳು ಭಾರತೀಯ ಲೆಕ್ಕ ನಿರ್ವಹಣಾ ಗುಣಮಟ್ಟಗಳು 102 ಷೇರು ಆಧಾರಿತ ಪಾವತಿ ವ್ಯಾಪ್ತಿಯಲ್ಲಿ ಬರುತ್ತವೆ. ಗುತ್ತಿಗೆ (ಲೀಸಿಂಗ್) ವಹಿವಾಟುಗಳು ಭಾರತೀಯ ಲೆಕ್ಕ ನಿರ್ವಹಣಾ ಗುಣಮಟ್ಟಗಳು 17ರ ವ್ಯಾಪ್ತಿಯೊಳಗೆ ಬರುತ್ತವೆ ಮತ್ತು ಅಳತೆ ಮಾಪನಗಳು ನ್ಯಾಯೋಚಿತ ಮೌಲ್ಯದೊಂದಿಗೆ ಕೆಲವು ಸಾಮ್ಯತೆಗಳನ್ನು ಹೊಂದಿರುತ್ತವೆ. ಆದರೆ ಅವುಗಳ ಭಾರತೀಯ ಲೆಕ್ಕ ನಿರ್ವಹಣಾ ಗುಣಮಟ್ಟಗಳು-2 ಗಳಲ್ಲಿನ ನಿವ್ವಳ ಲಭಿಸಬಹುದಾದ ಮೌಲ್ಯ ಭಾರತೀಯ ಲೆಕ್ಕ ನಿರ್ವಹಣಾ ಗುಣಮಟ್ಟಗಳು 36ರಲ್ಲಿನ ಒಟ್ಟು ಆಸ್ತಿಗಳು ಅಥವಾ ಬಳಕೆಯಲ್ಲಿರುವ ಮೌಲ್ಯದಂತೆ ನ್ಯಾಯೋಚಿತ ಮೌಲ್ಯಗಳಾಗಿರುವುದಿಲ್ಲ.

ಇದರೊಂದಿಗೆ ಹಣಕಾಸು ವರದಿಗಾರಿಕೆ ಉದ್ದೇಶಕ್ಕಾಗಿ ನ್ಯಾಯೋಚಿತ ಮೌಲ್ಯಮಾಪನಗಳನ್ನು ಹಂತ (ಮಟ್ಟ) 1,2 ಅಥವಾ 3 ಗಳೆಂದು ವಸ್ತುಗಳು ಯಾವ ಹಂತದ ನ್ಯಾಯೋಚಿತ ಮೌಲ್ಯಮಾಪನಗಳಿಗೆ ಸೇರ್ಪಡೆಗೊಳ್ಳುವುವು ಎಂಬುದರ ಆಧಾರದ ಮೇಲೆ ವಿಂಗಡಿಸಲಾಗಿದೆ ಮತ್ತು ವಸ್ತುಗಳ ಪ್ರಾಮುಖ್ಯತೆಯು ಒಟ್ಟಾರೆಯಾಗಿ ಯಾವ ನ್ಯಾಯೋಚಿತ ಮೌಲ್ಯಮಾಪಕಗಳಿಗೆ ಅನ್ವಯಿಸುತ್ತವೆ ಎಂಬುದರ ಆಧಾರದಲ್ಲಿ ಮಾಡಲಾಗಿದೆ. ಅವುಗಳನ್ನು ಕೆಳಕಂಡಂತೆ ವಿವರಿಸಲಾಗಿದೆ.

ಹಂತ-1 : ಸಕ್ರಿಯ ಮಾರುಕಟ್ಟೆಗಳಲ್ಲಿ ಹಣಕಾಸು ಸಾಧನಗಳಿಗೆ ನಮೂದಿತ ದರಗಳು (ಹೊಂದಾಣಿಕೆ ಮಾಡಿರದ್ದು)

ಹಂತ-2: ಸಕ್ರಿಯ ಮಾರುಕಟ್ಟೆಯಲ್ಲಿ ವ್ಯಾಪಾರಕ್ಕಿಡದಿರುವ ಹಣಕಾಸು ಸಾಧನಗಳ ನ್ಯಾಯೋಚಿತ ಬೆಲೆಯನ್ನು ಸಂಸ್ಥೆಯ ನಿರ್ದಿಷ್ಟ ಅಂದಾಜುಗಳ ಮೇಲೆ ಎಷ್ಟು ಸಾಧ್ಯವೋ ಅಷ್ಟು ಕಡಿಮೆ ಅವಲಂಬಿತವಾಗುವ ಅಂತರ್ಗತಗೊಳ್ಳಬಹುದಾದ ಮಾರುಕಟ್ಟೆ ಮಾಹಿತಿಗಳನ್ನು ಗರಿಷ್ಠ ಪ್ರಮಾಣದಲ್ಲಿ ಬಳಸುವ ಮೌಲ್ಯಮಾಪನ ತಂತ್ರಗಳನ್ನು ಉಪಯೋಗಿಸುವ ಮೂಲಕ ನಿರ್ಧರಿಸಲಾಗುತ್ತದೆ.

ಹಂತ-3: ಅಂತರ್ಗತಗೊಳ್ಳಬಹುದಾದ ಮಾರುಕಟ್ಟೆ ಮಾಹಿತಿಗಳನ್ನು ಆಧರಿಸಿರದ ಆಸ್ತಿಗಳು ಅಥವಾ ಹೊಣೆಗಾರಿಕೆ ಸಲಕರಣೆಗಳು. (ಅಂತರ್ಗತವಾಗದಿರುವ ಸಲಕರಣೆಗಳು)

### ಸಿ. ಅಂದಾಜುಗಳ ಬಳಕೆ :

ಹಣಕಾಸಿನ ಹೇಳಿಕೆಗಳ ದಿನಾಂಕದಲ್ಲಿದ್ದಂತೆ ಆಸ್ತಿಗಳು ಮತ್ತು ಹೊಣೆಗಾರಿಕೆಗಳ ತಿಳಿಸಲ್ಪಟ್ಟಿರುವ ಶಿಲ್ಕುಗಳ ಮೇಲೆ ಮತ್ತು ಅನುಷಂಗಿಕ ಹೊಣೆಗಾರಿಕೆಗಳಿಗೆ ಸಂಬಂಧಿಸಿದ ಪ್ರಕಟಣೆಗಳ ಮೇಲೆ ಹಾಗೂ ಸದರಿ ಅವಧಿಯಲ್ಲಿನ ಆದಾಯ ಮತ್ತು ಖರ್ಚುಗಳ ತಿಳಿಸಲಾದ ಮೊತ್ತಗಳ ಮೇಲೆ ಪರಿಣಾಮ ಉಂಟು ಮಾಡುವ ಅಂದಾಜುಗಳು ಮತ್ತು ಊಹೆಗಳನ್ನು ಕಂಪನಿಯ ಆಡಳಿತ ಮಂಡಳಿಯು ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸುವ ವೇಳೆಯಲ್ಲಿ ಮಾಡಬೇಕಾಗುತ್ತದೆ. ಈ ಅಂದಾಜುಗಳು ಆಡಳಿತ ಮಂಡಳಿಯು ಚಾಲ್ತಿ ಘಟನಾವಳಿಗಳು ಮತ್ತು ಕ್ರಮಗಳ ಬಗ್ಗೆ ಹೊಂದಿರುವ ಪರಿಜ್ಞಾನದ ಮೇಲೆ ಆಧಾರಿತವಾದವುಗಳಾಗಿದ್ದರೂ, ಮುಂದಿನ ಅವಧಿಗಳಲ್ಲಿ ಆಸ್ತಿಗಳು ಅಥವಾ ಹೊಣೆಗಾರಿಕೆಗಳ ವಾಹಕ ಮೊತ್ತಗಳಿಗೆ ವಾಸ್ತವಿಕ ಹೊಂದಾಣಿಕೆ ಮಾಡಬೇಕಾಗಿ ಬಂದ ಸಂದರ್ಭದಲ್ಲಿ ಸದರಿ ಊಹೆಗಳು ಮತ್ತು ಅಂದಾಜುಗಳ ಬಗ್ಗೆ ಅನಿಶ್ಚಿತತೆ ತಲೆದೋರುವುದು. ಅಂದಾಜುಗಳಲ್ಲಿ ಸೂಕ್ತ ಮಾರ್ಪಾಟುಗಳನ್ನು ಮಾಡಲಾಗಿದೆ. ಏಕೆಂದರೆ ಆಡಳಿತ ಮಂಡಳಿಯು ಅಂದಾಜುಗಳನ್ನು ಮಾಡಿದ ಸನ್ನಿವೇಶಗಳಲ್ಲಿನ ಬದಲಾವಣೆ ಬಗ್ಗೆ ಎಚ್ಚರ ವಹಿಸುತ್ತದೆ. ಸಂಕೀರ್ಣ ಮತ್ತು ವಿಷಯಾತ್ಮಕ ತೀರ್ಪುಗಳನ್ನು ಒಳಗೊಂಡ ಮಹತ್ತರ ಲೆಕ್ಕ ನಿರ್ವಹಣೆ ಅಂದಾಜುಗಳಿಗೆ ಅಗತ್ಯವಿರುವ ಲೆಕ್ಕ ನಿರ್ವಹಣ ನೀತಿಗಳ ಅನ್ವಯಿಕೆಯನ್ನು ಮತ್ತು ಈ ಹಣಕಾಸು ಹೇಳಿಕೆಗಳಲ್ಲಿ ಊಹೆಗಳ ಬಳಕೆಯನ್ನು ಟಿಪ್ಪಣಿ 1.3 ಮತ್ತು 1.4ರಲ್ಲಿ ಬಹಿರಂಗಪಡಿಸಿದೆ.

### ಡಿ. ಕಂಪನಿ ಅಳವಡಿಸಿಕೊಂಡಿರುವ ತಿದ್ದುಪಡಿಯಾದ ಗುಣಮಟ್ಟಗಳು

ಭಾರತೀಯ ಲೆಕ್ಕನಿರ್ವಹಣಾ ಗುಣಮಟ್ಟಗಳು ಐಎನ್‌ಡಿ-ಎಎಸ್ 115-ಗ್ರಾಹಕರೊಂದಿಗಿನ ಗುತ್ತಿಗೆಗಳಿಂದ ಬಂದ ಆದಾಯ: ಎಂಸಿಎಯು ಐಎನ್‌ಡಿ-ಎಎಸ್ 115-ಗ್ರಾಹಕರೊಂದಿಗಿನ ಗುತ್ತಿಗೆಗಳಿಂದ ಆದಾಯ ಎಂಬ ಮಾನದಂಡವನ್ನು ದಿ: 01.04.2018 ರಿಂದ ಕಡ್ಡಾಯವಾಗಿ ಸಂಪೂರ್ಣವಾಗಿ ಪೂರ್ವಾನ್ವಯ ಅಥವಾ ಭಾಗಶಃ ಪೂರ್ವಾನ್ವಯವಾಗುವಂತೆ ಪ್ರಕಟಣೆ ಹೊರಡಿಸಿದೆ. ಸಂಸ್ಥೆಗೆ ಆದಾಯ ಗುರುತಿಸುವುದಕ್ಕಾಗಿ ಗ್ರಾಹಕರಿಗೆ ವಾಗ್ದಾನ ಮಾಡಿದ ಸರಕುಗಳು ಅಥವಾ ಸೇವೆಯನ್ನು ತಾನು ನಿರೀಕ್ಷಿಸಿದ ನಿಗದಿತ ಮೊತ್ತದಲ್ಲಿ ವರ್ಗಾಯಿಸುವುದನ್ನು ತೋರಿಸಲು ಗುಣಮಟ್ಟ ಬೇಕಾಗುತ್ತದೆ. ಅದು ಗ್ರಾಹಕರೊಂದಿಗಿನ ಗುತ್ತಿಗೆಗಳಿಂದ ಉಂಟಾಗುವ ಆದಾಯಕ್ಕೆ ಅನ್ವಯಿಸುವಂತೆ 5 ಹೊಸ ಕ್ರಮ ಮಾದರಿಯನ್ನು ರೂಪಿಸುತ್ತದೆ.

ಭಾರತೀಯ ಲೆಕ್ಕ ನಿರ್ವಹಣಾ ಗುಣಮಟ್ಟಗಳು 115 ಅನುಸಾರ ಸಂಸ್ಥೆಯು ಸದರಿ ಗುಣಮಟ್ಟಗಳನ್ನು ದಿನಾಂಕ:01.04.2017ರಿಂದ ಪೂರ್ವಾನ್ವಯವಾಗುವಂತೆ ಜಾರಿಗೊಳಿಸಿದೆ. ಹೊಸ ಗುಣಮಟ್ಟಗಳ ಪರಿಣಾಮ ಕುರಿತು ಹಣಕಾಸು ಹೇಳಿಕೆಗಳ ಟಿಪ್ಪಣಿ 21ರಲ್ಲಿ ತಿಳಿಸಲಾಗಿದೆ. ಹೊಸ ಲೆಕ್ಕ ನಿರ್ವಹಣಾ ನೀತಿಯನ್ನು ಅನ್ವಯಿಸಲು ಆಡಳಿತ ಮಂಡಳಿಯು ಕೆಳಕಂಡ ನಿರ್ಣಯಗಳನ್ನು ಕೈಗೊಳ್ಳಬೇಕಾಗುತ್ತದೆ.

#### ತೃಪ್ತಿದಾಯಕ ಕಾರ್ಯ ದಕ್ಷತೆ ಅಗತ್ಯತೆಗಳು

ಸಂಸ್ಥೆಯು ಗ್ರಾಹಕರೊಂದಿಗೆ ತನ್ನ ಗುತ್ತಿಗೆಗಳ ಕುರಿತು ಕಾರ್ಯನಿರ್ವಹಣಾ ಅಗತ್ಯತೆಗಳು ಆದಾಯವನ್ನು ಮಾನ್ಯ ಮಾಡುವ ಒಂದು ಸೂಕ್ತ ವಿಧಾನದ ನಿರ್ಧಾರಕ್ಕಾಗಿ ಮುಂಬರುವ ಅವಧಿ ಅಥವಾ ಒಂದು ನಿರ್ದಿಷ್ಟ ಸಮಯಕ್ಕೆ ತೃಪ್ತಿಕರವಾಗಿವೆಯೇ? ಎಂಬುದನ್ನು ನಿರ್ಣಯಿಸಲು ಲೆಕ್ಕಾಚಾರ ಮಾಡಬೇಕಾಗುವುದು. ಸಂಸ್ಥೆಯು ಮಾರಾಟ ಮತ್ತು ಖರೀದಿ ಕುರಿತು ಗ್ರಾಹಕರೊಂದಿಗೆ ಮಾಡಿಕೊಂಡಿರುವ ಒಪ್ಪಂದ ಮತ್ತು ಗ್ರಾಹಕರಿಗೆ ಭೌತಿಕ ರೂಪದ (Real Estate) ಆಸ್ತಿ ಒದಗಿಸಲು ಸಂಬಂಧಿತ ಕಾನೂನುಗಳ ಉಪಬಂಧಗಳು ಮತ್ತು ನಿಯಮಗಳಡಿ ಗ್ರಾಹಕರೊಂದಿಗೆ ಒಡಂಬಡಿಕೆ ಮಾಡಿಕೊಂಡ ಆಧಾರದಲ್ಲಿ ಲೆಕ್ಕಾಚಾರ ಮಾಡಿದೆ. ಸಂಸ್ಥೆಯು ಪರ್ಯಾಯ ಮಾರ್ಗದ ಬಳಕೆಯೊಂದಿಗೆ ಕಂಪನಿಗೆ ಆಸ್ತಿಯನ್ನು ಸೃಜಿಸುವುದಿಲ್ಲ ಮತ್ತು ಸಾಮಾನ್ಯವಾಗಿ ಕಾರ್ಯನಿರ್ವಹಣೆ ಪೂರ್ಣಗೊಂಡ ದಿನಾಂಕಕ್ಕೆ ಹಣ ಪಾವತಿ ಮಾಡುವುದನ್ನು ಜಾರಿಗೊಳಿಸುವ ಹಕ್ಕು ಹೊಂದಿದೆ. ಇಂತಹ ಸನ್ನಿವೇಶಗಳಲ್ಲಿ ಕಂಪನಿ ಮುಂಬರುವ ಅವಧಿ ಗಳಲ್ಲಿ ಆದಾಯವನ್ನು ಗುರುತಿಸುತ್ತದೆ. ಇದು ಒಂದು ನಿರ್ದಿಷ್ಟ ಸಮಯಕ್ಕೆ ಆದಾಯವನ್ನು ಗುರುತಿಸುವ ಪ್ರಕರಣವಾಗಿರುವುದಿಲ್ಲ.

#### ವಹಿವಾಟು ಬೆಲೆಗಳ ನಿರ್ಧರಣೆ

ಕಂಪನಿ ತನ್ನ ಗ್ರಾಹಕರೊಂದಿಗಿನ ಪ್ರತಿಯೊಂದು ಗುತ್ತಿಗೆಗೆ ಸಂಬಂಧಿಸಿದಂತೆ ವಹಿವಾಟು ಬೆಲೆಗಳ ನಿರ್ಧಣೆ ಮಾಡಬೇಕಾಗುತ್ತದೆ. ಈ ರೀತಿ ಮಾಡುವುದರಿಂದ ಗುತ್ತಿಗೆಯಲ್ಲಿ ರಿಯಾಯಿತಿಗಳು ಅಥವಾ ದಂಡಗಳಂತಹ ಕ್ರಮಗಳಿಂದ ದರಗಳಲ್ಲಿ ಯಾವುದಾದರೂ ವ್ಯತ್ಯಾಸವಾಗುವುದರ ಪರಿಣಾಮವನ್ನು ಊಹಿಸುತ್ತದೆ. ಅಲ್ಲದೆ ಗುತ್ತಿಗೆ ವ್ಯವಹಾರದಲ್ಲಿ ಯಾವುದಾದರೂ ಮಹತ್ತರ ಹಣಕಾಸು ಅಂಶ ಮತ್ತು ನಗದು ರಹಿತ ಪರಿಗಣನಾ ಅಂಶಗಳು ಇರುವುದರ ಬಗ್ಗೆ ಪರಿಶೀಲಿಸಿದಂತಾಗುತ್ತದೆ. ವ್ಯತ್ಯಾಸವಾಗಬಹುದಾದ

ಅಂಶಗಳ ನಿರ್ಧರಣೆಯಿಂದ ಕಂಪನಿ ಭಾರತೀಯ ಲೆಕ್ಕ ನಿರ್ವಹಣಾ ಗುಣಮಟ್ಟಗಳು 115ರಲ್ಲಿರುವಂತೆ ಬಹುನಿರೀಕ್ಷಿತ ಮೊತ್ತ ವಿಧಾನವನ್ನು ಬಳಸುತ್ತದೆ. ಇದರಲ್ಲಿ ವಹಿವಾಟು ಬೆಲೆಯನ್ನು ಪರಿಗಣನಾ ಸಾಧ್ಯತಾ ಮೊತ್ತಗಳ ವ್ಯಾಪ್ತಿಯಲ್ಲಿ ಏಕ ಬಹು ನಿರೀಕ್ಷಿತ ಮೊತ್ತದ ಅನುಸರಣೆಯೊಂದಿಗೆ ನಿರ್ಧರಣೆ ಮಾಡಲಾಗುವುದು.

**ಗ್ರಾಹಕರೊಂದಿಗಿನ ಗುತ್ತಿಗೆಗಳಲ್ಲಿ ನಿಯಂತ್ರಣ ವರ್ಗಾವಣೆ:**

ಕಂಪನಿ ಕಾಲದ ಒಂದು ಹಂತದಲ್ಲಿ ಕಾರ್ಯನಿರ್ವಹಣಾ ಅಗತ್ಯತೆಗಳು ತೃಪ್ತಿದಾಯಕವಾಗಿವೆ ಎಂದು ನಿರ್ಧರಣೆ ಮಾಡುವ ಪ್ರಕರಣಗಳಲ್ಲಿ ಆಸ್ತಿಗಳ ಮೇಲೆ ನಿಯಂತ್ರಣವೇ ಗುತ್ತಿಗೆಯ ವಿಷಯವಾಗಿದ್ದಲ್ಲಿ ಆದಾಯವನ್ನು ಮಾನ್ಯ ಮಾಡಲಾಗುವುದು ಮತ್ತು ಗುತ್ತಿಗೆಯನ್ನು ಗ್ರಾಹಕರಿಗೆ ವರ್ಗಾಯಿಸಲಾಗುವುದು. ಸ್ಥಿರಾಸ್ತಿಗಳ ಮಾರಾಟಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಅಂದರೆ ಸಾಮಾನ್ಯವಾಗಿ ಸದರಿ ಘಟಕವು ಮಾರಾಟ ಒಪ್ಪಂದದ ಮೂಲಕ ನೋಂದಣಿಯಾಗಿದ್ದು ಮತ್ತು ಹಣ ಸಂಗ್ರಹದ ಕಾನೂನು ಪಾಲನೆ ಹಕ್ಕು ಒಳಗೊಂಡಿರುವ ಸಂದರ್ಭದಲ್ಲೂ ಇದನ್ನು ಆನುಸರಿಸಲಾಗುವುದು.

**(ಡಿ) ಕಂಪನಿ ಅಳವಡಿಸಿಕೊಂಡಿರುವ ತಿದ್ದುಪಡಿಯಾದ ಗುಣಮಟ್ಟಗಳು: (ಮುಂದುವರಿದದ್ದು)**

ಭಾರತೀಯ ಲೆಕ್ಕ ನಿರ್ವಹಣಾ ಗುಣಮಟ್ಟಗಳು 115ರ ಅನ್ವಯಿಕೆಯು ಹೆಚ್ಚುವರಿಯಾಗಿ ಕೆಳಕಂಡ ಅಂದಾಜೀಕರಣ ವಿಧಾನಕ್ಕೆ ದಾರಿಯಾಗಿದೆ.

ಗ್ರಾಹಕರೊಂದಿಗಿನ ಗುತ್ತಿಗೆಗಳಲ್ಲಿ ಕಾರ್ಯನಿರ್ವಹಣಾ ಅಗತ್ಯತೆಗಳಿಗೆ ವಹಿವಾಟು ಬೆಲೆಯ ಹಂಚಿಕೆ.

ಕ್ರಯಪತ್ರಗಳ ಮೂಲಕದ ನೋಂದಾಯಿತ ಗುತ್ತಿಗೆಗಳಿಗೆ ಯೋಜನೆ ಪೂರ್ಣಗೊಂಡಿರದ ಸಂದರ್ಭದಲ್ಲಿ ಆದಾಯವನ್ನು ಅಂತಹ ಗುತ್ತಿಗೆಗಳಿಂದ ಮುಂಬರುವ ಅವಧಿಗೆ ಮಾನ್ಯ ಮಾಡಲಾಗುವುದು. ಕಂಪನಿ ವಹಿವಾಟು ಬೆಲೆ ಕಾರ್ಯನಿರ್ವಹಣಾ ಅಗತ್ಯತೆಗಳಿಗೆ ಹಂಚಿಕೆಯಲ್ಲಿ ಒಳ ಅಂಶಗಳ (Input) ವಿಧಾನವನ್ನು ಆಯ್ಕೆ ಮಾಡಿಕೊಂಡಿದೆ. ಈ ವಿಧಾನದಲ್ಲಿ ಆದಾಯವನ್ನು ಮುಂದಿನ ಅವಧಿಗೆ ಮಾನ್ಯ ಮಾಡಲಾಗುವುದು. ಕಂಪನಿ ಈ ಒಳ ಅಂಶಗಳ (Input) ವಿಧಾನವನ್ನು ಅಳವಡಿಸಿಕೊಂಡಿರುವುದು ವಾಸ್ತವವಾಗಿ ಗಳಿಸಿರುವ ಆದಾಯದ ನಿರ್ಧರಣೆಗೆ ಅತ್ಯಂತ ಸೂಕ್ತ ವಿಧಾನವಾಗಿದ್ದು, ಈ ವಿಧಾನದಲ್ಲಿ ಕಾರ್ಯ ನಿರ್ವಹಣಾ ಅಗತ್ಯತೆಗಳ ತೃಪ್ತಿಗಾಗಿ ಕಂಪನಿಯ ಶ್ರಮ ಅಥವಾ ಪ್ರಯತ್ನಗಳ ಆಧಾರದಲ್ಲಿ ಗಳಿಕೆಯನ್ನು ಗುರುತಿಸಲಾಗುತ್ತಿದೆ. ಕಂಪನಿಯು ಇನ್‌ಪುಟ್ ವಿಧಾನ ಅಳವಡಿಸಿಕೊಳ್ಳುವ ಮೂಲಕ ಯೋಜನೆ ಕಾರ್ಯ ಪೂರ್ಣಗೊಳಿಸಲು ತಗಲುವ ವೆಚ್ಚವನ್ನು ಲೆಕ್ಕ ಹಾಕುವುದು. ಇದು ಗುರುತಿಸಬಹುದಾದ ಆದಾಯದ ನಿರ್ಧರಣೆಗೆ ಸಹಕಾರಿಯಾಗುವುದು. ಈ ಅಂದಾಜುಗಳು ಮೂಲ ಸೌಕರ್ಯಗಳ ಪೂರೈಕೆ, ಯೋಜನಾ ಸಲಹೆಗಾರರು, ಮೌಲ್ಯಮಾಪನ ಮಾಡಿರುವಂತೆ ಗುತ್ತಿಗೆದಾರರಿಂದ ಬರಬಹುದಾದ ಹಕ್ಕು ಬೇಡಿಕೆಗಳು ಮತ್ತು ಗ್ರಾಹಕರಿಗೆ ಗುತ್ತಿಗೆಯ ಇನ್ನಿತರ ಅಗತ್ಯತೆಗಳನ್ನು ಪೂರೈಸಲು ತಗಲುವ ವೆಚ್ಚ ಒಳಗೊಂಡಿರುವುದು.

**ಭಾರತೀಯ ಲೆಕ್ಕ ನಿರ್ವಹಣಾ ಗುಣಮಟ್ಟಗಳು 21-ವಿದೇಶಿ ವಿನಿಮಯ ದರಗಳಲ್ಲಿ ಬದಲಾವಣೆಯ ಪರಿಣಾಮಗಳು:**

ಎಂಸಿಎಯು ಕಂಪನಿಗಳ (ಭಾರತೀಯ ಲೆಕ್ಕ ನಿರ್ವಹಣಾ ಗುಣಮಟ್ಟಗಳು) ತಿದ್ದುಪಡಿ ನಿಯಮಗಳು 2018 ಅನುಬಂಧ-ಬಿ (Appendix-B) ಒಳಗೊಂಡಿರುವಂತೆ. ಸದರಿ ನಿಯಮಗಳು ಕಡ್ಡಾಯವಾಗಿ ದಿನಾಂಕ: 01.04. 2018ರಿಂದ ಅನ್ವಯವಾಗುತ್ತವೆ ಎಂದು ತಿಳಿಸಿ ಸೂಚನೆ ಪ್ರಕಟಣೆಯನ್ನು ಹೊರಡಿಸಿದೆ. ಈ ತಿದ್ದುಪಡಿಯು ವಿದೇಶಿ ಹಣದಲ್ಲಿ (Currency) ಮುಂಗಡಗಳ ಸ್ವೀಕೃತಿ ಅಥವಾ ಪಾವತಿ ಸೇರಿದಂತೆ ವಹಿವಾಟುಗಳ ಲೆಕ್ಕ ನಿರ್ವಹಣೆ ಬಗ್ಗೆ ಸ್ಪಷ್ಟಪಡಿಸುತ್ತದೆ. ಅನುಬಂಧವು ವಿನಿಮಯದಿಂದ ನಿರ್ಧರಣೆಗಾಗಿ ವಹಿವಾಟು ನಡೆದ ದಿನಾಂಕವನ್ನು ವಿವರಿಸುತ್ತವೆ. ಅಂದರೆ ಅದು ಹಣ ರಹಿತ ಪೂರ್ವ ಪಾವತಿ ಆಸ್ತಿ ಅಥವಾ ಮುಂದೂಡಿದ ಆದಾಯ ಋಣದ ಆರಂಭಿಕ ಮಾನ್ಯತೆಯ ದಿನಾಂಕವಾಗಿರುತ್ತದೆ. ಒಂದು ವೇಳೆ ಮುಂಗಡದ ಹಲವಾರು ಹಣ ಸ್ವೀಕೃತಿ ಅಥವಾ ಪಾವತಿಗಳು ಇದ್ದಲ್ಲಿ ಪ್ರತಿ ಸ್ವೀಕೃತಿ ಅಥವಾ ಪಾವತಿ ಕುರಿತು ವಹಿವಾಟಿನ ಒಂದು ದಿನಾಂಕವನ್ನು ನಮೂದಿಸಲಾಗುತ್ತದೆ. ಕಂಪನಿಯು ಪ್ರಸ್ತುತ ಹೊಸ ಮಾನದಂಡಗಳ ಅಗತ್ಯತೆಗಳ ಕುರಿತು ಮತ್ತು ಹಣಕಾಸು ಹೇಳಿಕೆಗಳ ಮೇಲೆ ಆಗುವ ಪರಿಣಾಮ ಕುರಿತು ಮೌಲ್ಯೀಕರಣ ಮಾಡುತ್ತಿದೆ.

**(ಇ) ಕಂಪನಿಯಿಂದ ಇನ್ನೂ ಜಾರಿಯಾಗದ ಮತ್ತು ಮೊದಲೇ ಅಳವಡಿಸಿಕೊಂಡಿರದ ಗುಣಮಟ್ಟಗಳು:**

ಹಣಕಾಸು ಹೇಳಿಕೆಗಳಿಗೆ ಸೂಕ್ತವೆಂದು ನಿರೀಕ್ಷಿಸಲಾದ ಹೊಸ ಗುಣಮಟ್ಟಗಳ ಮಾಹಿತಿ, ತಿದ್ದುಪಡಿಗಳು ಮತ್ತು ವ್ಯಾಖ್ಯಾನಗಳ ಕುರಿತು ಮಾಹಿತಿಯನ್ನು ಕೆಳಗೆ ವಿವರಿಸಲಾಗಿದೆ.

**ಭಾರತೀಯ ಲೆಕ್ಕ ನಿರ್ವಹಣಾ ಗುಣಮಟ್ಟಗಳು 23-ಸಾಲದ ವೆಚ್ಚಗಳು:**

ಈ ತಿದ್ದುಪಡಿಗಳು ಸಂಸ್ಥೆಯು ಸಾಮಾನ್ಯ ಸಾಲಗಳ ಮೇಲೆ ಬಂಡವಾಳೀಕರಣ ದರ ಲೆಕ್ಕ ಹಾಕುವಾಗ ಸಾಮಾನ್ಯವಾಗಿ ತರುವ ಸಾಲಗಳಲ್ಲಿ ಒಂದು ವೇಳೆ ಯಾವುದಾದರೂ ನಿರ್ದಿಷ್ಟ ಸಾಲಕ್ಕೆ ಸಂಬಂಧಿತ ಆಸ್ತಿ ಉದ್ದೇಶಿತ ಬಳಕೆಗಾಗಿ ಅಥವಾ ಮಾರಾಟಕ್ಕಾಗಿ ಸಿದ್ಧವಾಗಿರುವ ನಂತರ ಬಾಕಿ ಉಳಿದಿದ್ದಲ್ಲಿ ಅಂತಹ ಸಾಲವು ನಿಧಿಯ ಭಾಗವಾಗಿ ಪರಿಣಮಿಸುತ್ತದೆ ಎಂದು ಸ್ಪಷ್ಟಪಡಿಸುತ್ತವೆ. ಈ ತಿದ್ದುಪಡಿಯು ವಾರ್ಷಿಕ ಅವಧಿಯ ಆರಂಭದ ದಿನಾಂಕ: 01.04.2019 ರಂದು ಅಥವಾ ತದನಂತರದಿಂದ ಅನ್ವಯಗೊಂಡು ಜಾರಿಗೆ ಬರುತ್ತವೆ. ಕಂಪನಿ ಈ ತಿದ್ದುಪಡಿಯಿಂದ ಯಾವುದೇ ಪರಿಣಾಮ ನಿರೀಕ್ಷಿಸುವುದಿಲ್ಲ.

### ಭಾರತೀಯ ಲೆಕ್ಕ ನಿರ್ವಹಣಾ ಗುಣಮಟ್ಟಗಳು 116-ಗುತ್ತಿಗೆಗಳು:

ದಿನಾಂಕ:30ನೇ ಮಾರ್ಚ್ 2019ರಂದು ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯವು ಭಾರತೀಯ ಲೆಕ್ಕ ನಿರ್ವಹಣಾ ಗುಣಮಟ್ಟಗಳು 116-ಗುತ್ತಿಗೆಗಳು ಕುರಿತು ಪ್ರಕಟಣೆ ಹೊರಡಿಸಿದೆ. ಈ ಭಾರತೀಯ ಲೆಕ್ಕ ನಿರ್ವಹಣಾ ಗುಣಮಟ್ಟಗಳು, 116ಗಳು ಹಾಲಿ ಜಾರಿಯಲ್ಲಿರುವ ಗುತ್ತಿಗೆ ಗುಣಮಟ್ಟ, ಭಾರತೀಯ ಲೆಕ್ಕ ನಿರ್ವಹಣಾ ಗುಣಮಟ್ಟಗಳು-17, ಗುತ್ತಿಗೆಗಳು ಮತ್ತು ಸಂಬಂಧಿತ ವ್ಯಾಖ್ಯಾನಗಳು ಇವುಗಳ ಬದಲಿಗೆ ಜಾರಿಗೆ ಬರುವುವು. ಈ ಗುಣಮಟ್ಟವು ಗುತ್ತಿಗೆಯಲ್ಲಿ ಬರುವ ಎರಡೂ ಗುಂಪಿನವವರಿಗಾಗಿ (ಅಂದರೆ ಗುತ್ತಿಗೆದಾರರ ಮತ್ತು ಗುತ್ತಿಗೆ ನೀಡುವವರು) ಗುತ್ತಿಗೆಯ ಮಾನ್ಯತೆಗಾಗಿ, ಮಾಪನಕ್ಕಾಗಿ, ಪ್ರಸ್ತುತ ಪಡಿಸುವುದಕ್ಕಾಗಿ ಮತ್ತು ಬಹಿರಂಗಪಡಿಸುವುದಕ್ಕಾಗಿ ತಾತ್ವಿಕ ನಿಯಮಗಳನ್ನು ರೂಪಿಸುತ್ತದೆ. ಭಾರತೀಯ ಲೆಕ್ಕ ನಿರ್ವಹಣಾ ಗುಣಮಟ್ಟಗಳು 116 ಏಕ ಗುತ್ತಿಗೆದಾರನ (ಗುತ್ತಿಗೆ ಪಡೆಯುವವರು) ಲೆಕ್ಕ ನಿರ್ವಹಣಾ ಮಾದರಿಯನ್ನು ಪರಿಚಯಿಸುತ್ತದೆ. ಒಳಪಟ್ಟಿರುವ ಆಸ್ತಿಯು ಕಡಿಮೆ ಮೌಲ್ಯದಾಗಿರದಿದ್ದರೆ ಗುತ್ತಿಗೆದಾರ ಎಲ್ಲ ಗುತ್ತಿಗೆಗಳಲ್ಲಿನ ಆಸ್ತಿ ಮತ್ತು ಋಣಭಾರಗಳನ್ನು 12 ತಿಂಗಳುಗಳಿಗೂ ಹೆಚ್ಚಿನ ಅವಧಿಯಲ್ಲಿ ಮಾನ್ಯ ಮಾಡಬೇಕಾಗುವುದು. ಪ್ರಸ್ತುತದಲ್ಲಿ ಕಾರ್ಯಾಚರಣೆ ಗುತ್ತಿಗೆ ಖರ್ಚುಗಳನ್ನು ಲಾಭ ಮತ್ತು ನಷ್ಟದ ವಿವರಣೆಗೆ ವಿಧಿಸಲಾಗಿದೆ. ಗುಣಮಟ್ಟವು ಗುತ್ತಿಗೆದಾರರು ಇನ್ನೂ ಹೆಚ್ಚಿನ ಮಾಹಿತಿಯನ್ನು ಘೋಷಿಸಿಕೊಳ್ಳಬೇಕಾಗುವ ಅಗತ್ಯತೆಯನ್ನು ಸಹ ಒಳಗೊಂಡಿರುತ್ತದೆ. ಭಾರತೀಯ ಲೆಕ್ಕ ನಿರ್ವಹಣಾ ಗುಣಮಟ್ಟ 116 ವಿಧಾನವು ಗುತ್ತಿಗೆ ನೀಡಿದವರ ಭಾರತೀಯ ಲೆಕ್ಕ ನಿರ್ವಹಣಾ ಗುಣಮಟ್ಟ 17ರ ಲೆಕ್ಕ ನಿರ್ವಹಣಾ ಅಗತ್ಯತೆಗಳನ್ನು ವಿಸ್ತೃತವಾಗಿ ಮುಂದುವರೆಸಿಕೊಂಡು ಹೋಗುತ್ತದೆ. 'ಭಾರತೀಯ ಲೆಕ್ಕ ನಿರ್ವಹಣಾ ಗುಣಮಟ್ಟ 116ರ ಅನ್ವಯಿಕ ದಿನಾಂಕವು ವಾರ್ಷಿಕ ಅವಧಿಯ ಆರಂಭದ ದಿನಾಂಕ:01.04.2019ರಂದು ಅಥವಾ ತದನಂತರದಿಂದ ಜಾರಿಗೆ ಬರುವುದು. ಕಂಪನಿಯು ಈ ಹೊಸ ಗುಣಮಟ್ಟದ ಅಗತ್ಯತೆಗಳನ್ನು ಮತ್ತು ಹಣಕಾಸು ಹೇಳಿಕೆಗಳ ಮೇಲೆ ಅದರಿಂದುಂಟಾಗುವ ಪರಿಣಾಮದ ಕುರಿತು ಮೌಲ್ಯಮಾಪನ ಮಾಡುತ್ತಿದೆ.

### ಭಾರತೀಯ ಲೆಕ್ಕ ನಿರ್ವಹಣಾ ಗುಣಮಟ್ಟ 12, ಆದಾಯ ತೆರಿಗೆಗಳು:

ದಿನಾಂಕ 30ನೇ ಮಾರ್ಚ್ 2019ರಂದು ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯವು ಭಾರತೀಯ ಲೆಕ್ಕ ನಿರ್ವಹಣಾ ಗುಣಮಟ್ಟಗಳು-12, ಆದಾಯ ತೆರಿಗೆಗಳು ವಿಧಾನಕ್ಕೆ ಸಂಬಂಧಿಸಿದ ಮಾರ್ಗದರ್ಶಿಗಳಿಗೆ ತಿದ್ದುಪಡಿಗಳನ್ನು ಪ್ರಕಟಿಸಿದೆ. ಈ ತಿದ್ದುಪಡಿಗಳು 'ಲಾಭಾಂಶ ವಿತರಣಾ ತೆರಿಗೆಗಳ ಲೆಕ್ಕಚಾರಕ್ಕೆ ಸಂಬಂಧಿಸಿವೆ. ಈ ತಿದ್ದುಪಡಿಯು ಸಂಸ್ಥೆಯೊಂದು ತನ್ನ ಲಾಭ ಅಥವಾ ನಷ್ಟದಲ್ಲಿ ಇತರ ಸಮಗ್ರ ಆದಾಯ ಅಥವಾ ಈಕ್ವಿಟಿ ಇವುಗಳನುಸಾರ ಸಂಸ್ಥೆಯು ಮೂಲತಃ ಸದರಿ ಹಿಂದಿನ ವಹಿವಾಟುಗಳನ್ನು ಅಥವಾ ಘಟನೆಗಳನ್ನು ಮಾನ್ಯ ಮಾಡಿರುವುದೋ ಅವುಗಳ ಲಾಭಾಂಶದಿಂದ ಉಂಟಾಗುವ ಆದಾಯ ತೆರಿಗೆ ಪರಿಣಾಮಗಳನ್ನು ಮಾನ್ಯ ಮಾಡಬೇಕೆಂದು ಸ್ಪಷ್ಟಪಡಿಸುತ್ತದೆ.

ಈ ತಿದ್ದುಪಡಿಯ ಅನ್ವಯಿಕ ದಿನಾಂಕವು ವಾರ್ಷಿಕ ಅವಧಿಯ ಆರಂಭದ ದಿನಾಂಕ:01.04.2019ರಂದು ಅಥವಾ ತದನಂತರದಿಂದ ಜಾರಿಗೆ ಬರುವುದು. ಈ ತಿದ್ದುಪಡಿಯಿಂದ ತನ್ನ ಸ್ವತಂತ್ರ ಹಣಕಾಸು ಹೇಳಿಕೆಗಳಿಗೆ ಯಾವುದೇ ರೀತಿಯ ಪರಿಣಾಮ ಬೀರಲಾರದೆಂದು ಕಂಪನಿ ನಿರೀಕ್ಷಿಸಿದೆ.

### ಭಾರತೀಯ ಲೆಕ್ಕ ನಿರ್ವಹಣಾ ಗುಣಮಟ್ಟಗಳು 12, ಅನುಬಂಧ-ಸಿ-ಆದಾಯ ತೆರಿಗೆ ಪರಿಗಣನೆಗಳ ಮೇಲಿನ ಅನಿಶ್ಚಿತತೆ:

ದಿನಾಂಕ 30ನೇ ಮಾರ್ಚ್ 2019ರಂದು ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯವು 'ಭಾರತೀಯ ಲೆಕ್ಕ ನಿರ್ವಹಣಾ ಗುಣಮಟ್ಟಗಳು 12, ಅಪೆಂಡಿಕ್ಸ್-ಸಿ-ಆದಾಯ ತೆರಿಗೆ ಪರಿಗಣನೆಗಳ ಮೇಲೆ ಅನಿಶ್ಚಿತತೆ' ಕುರಿತು ಸೂಚನಾ ಪ್ರಕಟಣೆಯನ್ನು ಹೊರಡಿಸಿದೆ. ಇವುಗಳನ್ನು ತೆರಿಗೆ ವಿಧಿಸಬಹುದಾದ ಲಾಭಗಳು (ಅಥವಾ ನಷ್ಟಗಳು), ತೆರಿಗೆ ಆಧಾರಗಳು, ಬಳಕೆಯಾಗದ ತೆರಿಗೆ ನಷ್ಟಗಳು, ಬಳಕೆಯಾಗದ ತೆರಿಗೆ ಜಮೆ ಮತ್ತು ತೆರಿಗೆ ದರಗಳ ಕುರಿತು ಭಾರತೀಯ ಲೆಕ್ಕ ನಿರ್ವಹಣಾ ಗುಣಮಟ್ಟಗಳು 12 ರಡಿ ಆದಾಯ ತೆರಿಗೆ ಪರಿಗಣನೆಗಳ ಮೇಲೆ ಅನಿಶ್ಚಿತತೆ ಉಂಟಾದ ಸಂದರ್ಭದಲ್ಲಿ ಅವುಗಳ ನಿರ್ಧರಣೆಗಾಗಿ ಅನ್ವಯಿಸಲಾಗುವುದು.

ಈ ಅಪೆಂಡಿಕ್ಸ್ ಅನುಸಾರ ಕಂಪನಿಗಳು ಪ್ರತಿ ತೆರಿಗೆ ಪರಿಗಣನೆ ಅಥವಾ ತೆರಿಗೆ ಪರಿಗಣನೆಗಳ ಸಮೂಹವನ್ನು ಒಪ್ಪಿಕೊಳ್ಳುವ ಸಂಭವನೀಯ ಸೂಕ್ತ ತೆರಿಗೆ ಪ್ರಾಧಿಕಾರವನ್ನೂ ನಿರ್ಧರಿಸಬೇಕಾಗುತ್ತದೆ. ತೆರಿಗೆ ಪರಿಗಣನೆಯು ಕಂಪನಿಗಳು ಆದಾಯ ತೆರಿಗೆ ರಿಟರ್ನ್ ಸಲ್ಲಿಸುವಾಗ ಬಳಸಿರುವ ಅಥವಾ ಬಳಸಲು ಯೋಜಿಸಿರುವ ಪ್ರಕರಣಗಳಲ್ಲಿ ಲೆಕ್ಕ ಹಾಕುವ ಬಹು ನಿರೀಕ್ಷಿತ ಮೊತ್ತ ಅಥವಾ ತೆರಿಗೆ ಪರಿಗಣನೆಯ ನಿರೀಕ್ಷಿತ ಮೌಲ್ಯವನ್ನು ತೆರಿಗೆ ವಿಧಿಸಬಹುದಾದ ಲಾಭ (ತೆರಿಗೆ ನಷ್ಟ), ತೆರಿಗೆ ಆಧಾರಗಳು, ಬಳಕೆಯಾಗದ ತೆರಿಗೆ ನಷ್ಟಗಳು, ಬಳಕೆಯಾಗದ ತೆರಿಗೆ ಸಾಲಗಳು ಮತ್ತು ತೆರಿಗೆ ದರಗಳನ್ನು ನಿರ್ಧರಣೆ ಮಾಡುವಾಗ ಪರಿಗಣಿಸಬೇಕಾಗುವುದು. ಭಾರತೀಯ ಲೆಕ್ಕ ನಿರ್ವಹಣಾ ಗುಣಮಟ್ಟಗಳು-12 ಅಪೆಂಡಿಕ್ಸ್ -ಸಿ ನಿಯಮಗಳು ವಾರ್ಷಿಕ ಅವಧಿ ಪ್ರಾರಂಭವಾಗುವ ದಿನಾಂಕ:01.04.2019ರಂದು ಅಥವಾ ಆನಂತರದಿಂದ ಜಾರಿಗೆ ಬರುತ್ತವೆ. ಕಂಪನಿಯು ಹೊಸ ಗುಣಮಟ್ಟಗಳ ಅಗತ್ಯತೆಗಳ ಮತ್ತು ಹಣಕಾಸು ಹೇಳಿಕೆಗಳ ಮೇಲೆ ಪರಿಣಾಮ ಕುರಿತು ಮೌಲ್ಯೀಕರಣ ಮಾಡುತ್ತಿದೆ.

### ಭಾರತೀಯ ಲೆಕ್ಕ ನಿರ್ವಹಣಾ ಗುಣಮಟ್ಟಗಳು-19ಕ್ಕೆ ತಿದ್ದುಪಡಿ: ಯೋಜನಾ ತಿದ್ದುಪಡಿ, ಮೊಟಕುಗೊಳಿಸುವಿಕೆ ಅಥವಾ ಇತ್ಯರ್ಥತೆ:

ದಿನಾಂಕ:30ನೇ ಮಾರ್ಚ್ 2019ರಂದು ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯವು ಭಾರತೀಯ ಲೆಕ್ಕ ನಿರ್ವಹಣಾ

ಗುಣಮಟ್ಟಗಳು-19ಕ್ಕೆ ತಿದ್ದುಪಡಿಗಳನ್ನು ಹೊರಡಿಸಿದೆ. ಈ ತಿದ್ದುಪಡಿಗಳು ನೌಕರರ ಸೌಲಭ್ಯಗಳು ಕುರಿತಂತೆ ಯೋಜನಾ ತಿದ್ದುಪಡಿಗಳು, ಮೊಟಕುಗೊಳಿಸುವಿಕೆ ಮತ್ತು ಇತ್ಯರ್ಥತೆ ಸಂಬಂಧಿಸಿದಂತೆ ಇರುವುವು.

**ಒಂದು ಸಂಸ್ಥೆಗೆ ಅಗತ್ಯವಾದ ತಿದ್ದುಪಡಿಗಳು:**

★ ಯೋಜನಾ ತಿದ್ದುಪಡಿ, ಮೊಟಕುಗೊಳಿಸುವಿಕೆ ಅಥವಾ ಇತ್ಯರ್ಥತೆಯ ನಂತರ ಉಳಿದ ಬಾಕಿ ಅವಧಿಗಾಗಿ ಹಾಲಿ ಸೇವಾ ವೆಚ್ಚ ಮತ್ತು ನಿವ್ವಳ ಬಡ್ಡಿ ನಿರ್ಧರಣೆಗಾಗಿ ಸಕಾಲಿಕಗೊಳಿಸಿದ ಅಂದಾಜುಗಳನ್ನು ಬಳಸುವುದಕ್ಕೆ; ಮತ್ತು

★ ಇತ್ಯರ್ಥದ ಮೇಲಿನ ಲಾಭ ಅಥವಾ ನಷ್ಟದಲ್ಲಿ ಹಿಂದಿನ ಸೇವಾ ವೆಚ್ಚ ಅಥವಾ ಲಾಭ ಅಥವಾ ನಷ್ಟದ ಭಾಗವಾಗಿ, ಹೆಚ್ಚುವರಿಯಲ್ಲಿ ಯಾವುದೇ ಕಡಿತ, ಈ ಹೆಚ್ಚುವರಿಯನ್ನು ಆಸ್ತಿ ಮಿತಿಯ ಪರಿಣಾಮದಿಂದಾಗಿ, ಈ ಹಿಂದೆ ಮಾನ್ಯ ಮಾಡದಿದ್ದರೂ ಸಹ ಮಾನ್ಯ ಮಾಡುವುದು.

ಭಾರತೀಯ ಲೆಕ್ಕ ನಿರ್ವಹಣಾ ಗುಣಮಟ್ಟಗಳು 19, ಯೋಜನಾ ತಿದ್ದುಪಡಿ, ಮೊಟಕುಗೊಳಿಸುವಿಕೆ ಅಥವಾ ಇತ್ಯರ್ಥತೆಗಳ ಜಾರಿ ದಿನಾಂಕ ವಾರ್ಷಿಕ ಅವಧಿಯ ಪ್ರಾರಂಭದ ದಿನಾಂಕ ಏಪ್ರಿಲ್ 1, 2019ರಂದು ಅಥವಾ ತದನಂತರದಿಂದ ಅನ್ವಯವಾಗುತ್ತವೆ. ಕಂಪನಿ ಹೊಸ ಗುಣಮಟ್ಟಗಳ ಅಳವಡಿಕೆಯ ಅಗತ್ಯತೆಗಳ ಬಗ್ಗೆ ಮತ್ತು ಹಣಕಾಸು ಹೇಳಿಕೆಗಳ ಮೇಲೆ ಅವುಗಳ ಪರಿಣಾಮ ಕುರಿತು ಮೌಲ್ಯಮಾಪನ ಮಾಡುತ್ತಿದೆ.

**ಎಫ್. ಚಾಲ್ತಿಗೆ ಪ್ರತಿಯಾಗಿ ಚಾಲ್ತಿಯೇತರ ವರ್ಗೀಕರಣ:**

ಕಂಪನಿಯು ತನ್ನ ಆಸ್ತಿ ಮತ್ತು ಹೊಣೆಗಾರಿಕೆಗಳನ್ನು ಸ್ಥಿತಿ ವಿವರಣಾ ಪಟ್ಟಿಯಲ್ಲಿ ಚಾಲ್ತಿ/ಚಾಲ್ತಿಯೇತರ ವಗೀಕರಣದ ಆಧಾರದಲ್ಲಿ ಪ್ರಸ್ತುತಪಡಿಸುತ್ತದೆ.

(i) ಒಂದು ಆಸ್ತಿಯು ಈ ಕೆಳಕಂಡಂತ್ತಿದ್ದರೆ ಆಗ ಅದನ್ನು ಚಾಲ್ತಿ ಆಸ್ತಿ ಎಂದು ವರ್ಗೀಕರಣ ಮಾಡಲಾಗುತ್ತದೆ;

★ ನಗದು ಆದಾಯ ನಿರೀಕ್ಷಿಸುವುದು ಅಥವಾ ಮಾರಾಟ ಮಾಡಲು ಉದ್ದೇಶಿಸಿರುವುದು ಅಥವಾ ಸಾಮಾನ್ಯ ಕಾರ್ಯಾಚರಣೆ ಆವರ್ತದಲ್ಲಿ ಬಳಸಲ್ಪಡುವುದು.

★ ಪ್ರಧಾನವಾಗಿ ವಾಣಿಜ್ಯೋದ್ದೇಶಕ್ಕಾಗಿ ಹೊಂದಿರುವುದು.

★ ವರದಿಯ ಅವಧಿಯ ನಂತರ 12 ತಿಂಗಳೊಳಗಾಗಿ ನಗದಾಗುವುದೆಂದು ನಿರೀಕ್ಷಿಸುವುದು. ಅಥವಾ

★ ವರದಿ ಅವಧಿಯ ನಂತರ ಕನಿಷ್ಠ 12 ತಿಂಗಳಲ್ಲಿ ವಿನಿಮಯ ಗೊಳಿಸುವುದಕ್ಕೆ ಅಥವಾ ಹೊಣೆಗಾರಿಕೆ ಇತ್ಯರ್ಥಗೊಳಿಸಲು ಬಳಸಲು ಯಾವುದೇ ನಿರ್ಬಂಧ ಇರದ ನಗದು ಅಥವಾ ನಗದು ಸಮಾನವಾದುದು.

(ii) ಇನ್ನುಳಿದ ಎಲ್ಲ ಆಸ್ತಿಗಳನ್ನು ಚಾಲ್ತಿಯೇತರ ಎಂದು ವರ್ಗೀಕರಣ ಮಾಡಲಾಗಿದೆ.

(iii) ಒಂದು ಹೊಣೆಗಾರಿಕೆಯನ್ನು ಅದು ಕೆಳಕಂಡಂತಿದ್ದಾಗ ಚಾಲ್ತಿ ಎಂದು ವರ್ಗೀಕರಣ ಮಾಡಲಾಗುತ್ತದೆ:

★ ಅದು ಸಾಮಾನ್ಯ ಕಾರ್ಯಾಚರಣೆಯ ವಿಧಾನದಲ್ಲಿ ಇತ್ಯರ್ಥ ಗೊಳಿಸಲಾಗುವುದೆಂದು ನಿರೀಕ್ಷಿಸಿರುವುದು;

★ ಅದನ್ನು ಪ್ರಧಾನವಾಗಿ ವಾಣಿಜ್ಯೋದ್ದೇಶಕ್ಕಾಗಿ ಹೊಂದಿರುವುದು.

★ ವರದಿ ಅವಧಿಯ ನಂತರ 12 ತಿಂಗಳೊಳಗಾಗಿ ಇತ್ಯರ್ಥ ಗೊಳಿಸಬೇಕಾಬೇಕಾಗಿರುವುದು, ಅಥವಾ

★ ವರದಿಯ ಅವಧಿಯ ನಂತರ ಕನಿಷ್ಠ 12 ತಿಂಗಳವರೆಗೆ ಹೊಣೆಗಾರಿಕೆಯ ಇತ್ಯರ್ಥವನ್ನು ಮುಂದೂಡಲು ಬೇಷರತ್ ಹಕ್ಕು ಇಲ್ಲದಿರುವುದು.

iv) ಇನ್ನುಳಿದ ಎಲ್ಲ ಹೊಣೆಗಾರಿಕೆಗಳನ್ನು ಚಾಲ್ತಿಯೇತರ ಎಂದು ವರ್ಗೀ ಕರಣ ಮಾಡಲಾಗಿದೆ.

(v) ಮುಂದೂಡಿದ ತೆರಿಗೆ ಆಸ್ತಿಗಳು ಮತ್ತು ಹೊಣೆಗಾರಿಕೆಗಳನ್ನು ಚಾಲ್ತಿಯೇತರ ಆಸ್ತಿಗಳು ಮತ್ತು ಹೊಣೆಗಾರಿಕೆಗಳೆಂದು ವರ್ಗೀಕರಿಸಲಾಗಿದೆ.

ಕಂಪನಿ ತನ್ನ ಆಸ್ತಿಗಳನ್ನು ಚಾಲ್ತಿ ಮತ್ತು ಚಾಲ್ತಿಯೇತರ ಆಸ್ತಿಗಳೆಂದು ವರ್ಗೀಕರಣ ಮಾಡುವ ಉದ್ದೇಶದಿಂದ ಕಾರ್ಯಾಚರಣೆ ಆವರ್ತನವನ್ನು ಒಂದು ವರ್ಷ ಎಂದು ದೃಢೀಕರಿಸಿದೆ. ಇದನ್ನು ಸೇವೆಯ ಸ್ವರೂಪ ಮತ್ತು ಅಭಿವೃದ್ಧಿಯ ಉದ್ದೇಶಕ್ಕಾಗಿ ಆಸ್ತಿಯ ಸ್ವಾಧೀನಪಡಿಸಿಕೊಳ್ಳಲಾದ ಹಾಗೂ ಅವುಗಳಿಂದ ಲಭ್ಯವಾಗ ಬಹುದಾದ ನಗದು ಅಥವಾ ನಗದು ಸಮಾನಗಳ ನಡುವಿನ ಸಮಯಗಳ ಆಧಾರದ ಮೇಲೆ ಮಾಡಲಾಗಿದೆ. ಇದು ಕಂಪನಿ 12 ತಿಂಗಳುಗಳೆಂದು ಪರಿಗಣಿಸಿರುವ ಯೋಜನೆ ಮತ್ತು ಇನ್ನಿತರ ಎಲ್ಲ ಆಸ್ತಿಗಳು ಮತ್ತು ಹೊಣೆಗಾರಿಕೆಗಳಿಗೆ ಸಂಬಂಧಿಸಿದೆ.

**ಜಿ. ವಿದೇಶಿ ಹಣದ ವಹಿವಾಟು:**

**ಕಾರ್ಯಾಚರಣೆ ಮತ್ತು ನಿರೂಪಣೆ ಹಣ:**

ಹಣಕಾಸು ಹೇಳಿಕೆಗಳನ್ನು ಭಾರತೀಯ ರೂಪಾಯಿಗಳಲ್ಲಿ (ರೂ.) ಪ್ರಸ್ತುತಪಡಿಸಲಾಗಿದೆ. ಇದು ಕಂಪನಿಯ ಕಾರ್ಯಾಚರಣೆಯಲ್ಲಿರುವ ಮತ್ತು ಪ್ರಸ್ತುತಪಡಿಸುವಿಕೆ ಹಣವೂ ಕೂಡ ಆಗಿದೆ. ಎಲ್ಲ ಮೊತ್ತಗಳು ನಿರ್ದಿಷ್ಟವಾಗಿ ಬೇರೆ ರೀತಿಯಲ್ಲಿ ಗುರುತಿಸದ ಹೊರತು ಹತ್ತಿರದ ಪೂರ್ಣ ರೂಪಾಯಿಗಳಲ್ಲಿ ವರದಿ ಮಾಡಲಾಗಿದೆ.

ಎ) **ಆರಂಭದ ಮಾನ್ಯತೆ:** ವಿದೇಶಿ ಹಣದ ವಹಿವಾಟುಗಳನ್ನು ಚಾಲನೆಯಲ್ಲಿರುವ ಹಣ (Currency) ದಲ್ಲಿ ದಾಖಲಿಸಲಾಗಿದೆ. ಇದನ್ನು ವಹಿವಾಟಿನ ದಿನಾಂಕದಂದು ಚಾಲನಾ ಹಣ ಮತ್ತು ವಿದೇಶಿ ಹಣಗಳ ನಡುವಿನ ವಿನಿಮಯ ದರ ಅನುಸರಿಸಿ ದಾಖಲಿಸಲಾಗಿದೆ.

ಬಿ) **ಪರಿವರ್ತನೆ:** ವಿದೇಶಿ ಹಣದ ಹಣಕಾಸಿನ ಅಂಶಗಳನ್ನು ವಹಿವಾಟಿನ ದಿನಾಂಕದಂದು ಮುಕ್ತಾಯ ದರವನ್ನು ಪರಿಗಣನೆಗೆ ತೆಗೆದುಕೊಂಡು ಚಾಲನಾ ಹಣಕ್ಕೆ ಪರಿವರ್ತಿಸಲಾಗಿದೆ. ಹಣಕಾಸೇತರ ಅಂಶಗಳನ್ನು ವಿದೇಶಿ ಹಣದಲ್ಲೇ ನಮೂದಿಸಲಾಗಿದ್ದು, ಈ ಅಂಶಗಳು ಐತಿಹಾಸಿಕ ಬೆಲೆ ಹೊಂದಿದ್ದು, ಆ ಬಗ್ಗೆ ವಹಿವಾಟು ದಿನಾಂಕದಂದು ಇದ್ದ ವಿದೇಶಿ ವಿನಿಮಯ ದರವನ್ನು ಪರಿಗಣಿಸಿ ವರದಿ ಮಾಡಲಾಗಿದೆ ಮತ್ತು ನ್ಯಾಯೋಚಿತ ಮೌಲ್ಯ ಹೊಂದಿರುವ ಹಣಕಾಸೇತರ ಸಾಮಗ್ರಿಗಳು ಅಥವಾ ಇದೇ ರೀತಿಯಲ್ಲಿ ವಿದೇಶಿ ಹಣದಲ್ಲಿ ಮೌಲ್ಯಮಾಪನ ಮಾಡಿರುವ ಸಾಮಗ್ರಿಗಳನ್ನು ಅವುಗಳ ಮೌಲ್ಯನಿರ್ಧರಣೆ ಮಾಡುವ ಅವಧಿಯಲ್ಲಿ ಚಾಲನೆಯಲ್ಲಿದ್ದ ವಿನಿಮಯ ದರವನ್ನು ಪರಿಗಣಿಸಿ ಮೌಲ್ಯ ನಿರ್ಧರಣೆ ಮಾಡಲಾಗಿದೆ.

ವಿನಿಮಯ ದರದಲ್ಲಿ ವರದಿ ಮಾಡುವ ದಿನಾಂಕದಂದು ಇದ್ದಂತೆ ಹಣಕಾಸು ಸಾಮಗ್ರಿಗಳ ಇತ್ಯರ್ಥ ಅಥವಾ ಮರು ವ್ಯಾಖ್ಯಾನಕ್ಕೆ ಸಂಬಂಧಿಸಿದಂತೆ ಕಂಡು ಬರುವ ವ್ಯತ್ಯಾಸಗಳನ್ನು ಅಂದರೆ ಈ ಸಾಮಗ್ರಿಗಳ ಮೌಲ್ಯವನ್ನು ಮೊದಲು ದಾಖಲು ಮಾಡಿದಾಗ ಇದ್ದ ವಿನಿಮಯ ದರ ಮತ್ತು ವರದಿ ಮಾಡುವ ದಿನಾಂಕದಂದು ಇದ್ದ ವಿನಿಮಯ ದರಗಳ ನಡುವಿನ ವ್ಯತ್ಯಾಸವನ್ನು ಗುರುತಿಸಲಾಗಿದೆ ಮತ್ತು ಆ ಕುರಿತು ಸದರಿ ವಸ್ತುಗಳು ಇದ್ದ ವರ್ಷದ ಲಾಭ ಅಥವಾ ನಷ್ಟದ ಹೇಳಿಕೆಯಲ್ಲಿ ನಮೂದಿಸಲಾಗಿದೆ.

**ಹೆಚ್) ಆದಾಯ ಗುರುತಿಸುವಿಕೆ:** ಕಂಪನಿಯು ಭಾರತೀಯ ಲೆಕ್ಕ ನಿರ್ವಹಣಾ ಗುಣಮಟ್ಟಗಳು 115 ಅನ್ನು ದಿನಾಂಕ:01.04.2018ರಿಂದ ಅಳವಡಿಸಿ ಕೊಂಡಿದೆ. ಆದರೆ ಭಾರತೀಯ ಲೆಕ್ಕ ನಿರ್ವಹಣಾ ಗುಣಮಟ್ಟಗಳು 115ರ ಪ್ರಕಾರ ಸದರಿ ಗುಣಮಟ್ಟವನ್ನು ಪೂರ್ವಾನ್ವಯವಾಗಿ ದಿನಾಂಕ:01.04.2017ರಿಂದಲೇ ಅಳವಡಿಸಿಕೊಂಡಿದೆ. ಮತ್ತು ಆ ಮೇರೆಗೆ ದಿನಾಂಕ: 31.03.2018ರಂದು ಮುಕ್ತಾಯಗೊಂಡ ಹಿಂದಿನ ಆರ್ಥಿಕ ಸಾಲಿನ ಹಣಕಾಸು ಹೇಳಿಕೆಯನ್ನು ಮರು ನಿರೂಪಿಸಲಾಗಿದೆ. ಕಂಪನಿ ತನ್ನ ಸ್ವತಂತ್ರ ಹಣಕಾಸು ಹೇಳಿಕೆಗಳನ್ನು ರೂಪಿಸುವಾಗ ಕೆಳಕಂಡ ಲೆಕ್ಕ ನಿರ್ವಹಣಾ ನೀತಿಯನ್ನು ಅನುಸರಿಸಿದೆ:

**ಗ್ರಾಹಕರೊಂದಿಗಿನ ಗುತ್ತಿಗೆಗಳಿಂದ ಬಂದ ಆದಾಯ**

ಕಂಪನಿಯು ಭಾರತೀಯ ಲೆಕ್ಕ ನಿರ್ವಹಣಾ ಗುಣಮಟ್ಟ 115ರಲ್ಲಿ ಗೊತ್ತುಪಡಿಸಲಾದ ಕೆಳಕಂಡ 5 ಹಂತಗಳ ಮಾದರಿಯನ್ನು ಆಧರಿಸಿ ಗ್ರಾಹಕರೊಂದಿಗಿನ ಗುತ್ತಿಗೆಗಳಿಂದ ಬಂದ ಆದಾಯವನ್ನು ಮಾನ್ಯ ಮಾಡಿದೆ.

**ಹಂತ:1 ಗ್ರಾಹಕರೊಂದಿಗಿನ ಗುತ್ತಿಗೆ(ಗಳು) ಯನ್ನು ಗುರುತಿಸುವುದು:**

ಒಂದು ಗುತ್ತಿಗೆಯನ್ನು ಇಬ್ಬರು ಅಥವಾ ಅದಕ್ಕೂ ಹೆಚ್ಚಿನ ವ್ಯಕ್ತಿಗಳ ನಡುವೆ ಉಂಟಾದ ಒಪ್ಪಂದವೆಂದು ನಿರೂಪಿಸಿದ್ದು, ಅದು ಜಾರಿಗೊಳಿಸಬಹುದಾದ ಹಕ್ಕು ಮತ್ತು ಬಾಧ್ಯತೆಗಳನ್ನು ಸೃಜಿಸುತ್ತದೆ ಮತ್ತು ಪ್ರತಿಯೊಂದು ಗುತ್ತಿಗೆಯು ಪೂರೈಸಬೇಕಾಗಿರುವ ಅರ್ಹತೆ, ಮಾನದಂಡವನ್ನು ರೂಪಿಸುತ್ತದೆ ಎಂದು ವ್ಯಾಖ್ಯಾನಿಸಲಾಗುತ್ತದೆ.

**ಹಂತ:2 –** ಗುತ್ತಿಗೆಯಲ್ಲಿ ಕಾರ್ಯನಿರ್ವಹಣಾ ದಕ್ಷತೆಗಳನ್ನು ಗುರುತಿಸುವುದು: ಒಂದು ಕಾರ್ಯ ನಿರ್ವಹಣಾ ದಕ್ಷತೆ ಬಾಧ್ಯತೆಯು ಗ್ರಾಹಕರೊಂದಿಗಿನ ಒಂದು ಗುತ್ತಿಗೆಯಲ್ಲಿ ಸರಕು ಅಥವಾ ಸೇವೆಯನ್ನು ಗ್ರಾಹಕರಿಗೆ ವರ್ಗಾವಣೆ ಮಾಡುವುದಾಗಿ ಆಶ್ವಾಸನೆ.

**ಹಂತ: 3 –** ವಹಿವಾಟಿನ ಬೆಲೆ ನಿರ್ಧರಣೆ: ತಾನು ವಚನವಿತ್ತಂತೆ ಗ್ರಾಹಕರಿಗೆ ವರ್ಗಾವಣೆ ಮಾಡುವ ಸರಕುಗಳು ಅಥವಾ ಸೇವೆಗೆ ವಿನಿಮಯವಾಗಿ ಪಡೆಯಲರ್ಹವಾದುದೆಂದು ಪರಿಗಣಿಸುವ ಮೊತ್ತವಾಗಿರುತ್ತದೆ. ಇದು ಮೂರನೇ ವ್ಯಕ್ತಿಯ ಪರವಾಗಿ ಪಡೆದ ಮೊತ್ತವನ್ನು ಹೊರತುಪಟ್ಟಿರುತ್ತದೆ.

**ಹಂತ: 4 –** ಗುತ್ತಿಗೆಯಲ್ಲಿ ಕಾರ್ಯನಿರ್ವಹಣಾ ಬಾಧ್ಯತೆಗೆ ಹಂಚಿಕೆ ಮಾಡಲಾದ ವಹಿವಾಟು ಬೆಲೆ: ಒಂದು ಗುತ್ತಿಗೆಯಲ್ಲಿ ಒಂದಕ್ಕಿಂತ ಹೆಚ್ಚು ಕಾರ್ಯನಿರ್ವಹಣಾ ಬಾಧ್ಯತೆ ಇದ್ದಲ್ಲಿ ಕಂಪನಿ ತಾನು ತೃಪ್ತಿಕರವಾಗಿ ನಿರ್ವಹಿಸುವ ಪ್ರತಿ ಕಾರ್ಯ ನಿರ್ವಹಣಾ ಬಾಧ್ಯತೆಗೆ ವಿನಿಮಯವಾಗಿ ಪಡೆಯಲರ್ಹವೆಂದು ಪರಿಗಣಿಸುವ ಮೊತ್ತದಲ್ಲಿ ಪ್ರತಿ ಕಾರ್ಯನಿರ್ವಹಣ ಬಾಧ್ಯತೆಗೆ ವಹಿವಾಟು ಬೆಲೆಯನ್ನು ಹಂಚಿಕೆ ಮಾಡುವುದು.

**ಹಂತ: 5 –** ಸಂಸ್ಥೆಯು ಕಾರ್ಯನಿರ್ವಹಣಾ ಬಾಧ್ಯತೆಯನ್ನು ತೃಪ್ತಿಕರವಾಗಿ ಪೂರೈಸಿದಾಗ ಆದಾಯವನ್ನು ಮಾನ್ಯ ಮಾಡುವುದು:

ಕೆಳಕಂಡ ಯಾವುದಾದರೊಂದು ಮಾನದಂಡವನ್ನು ಪೂರೈಸಿದಲ್ಲಿ ಕಂಪನಿ ಕಾರ್ಯನಿರ್ವಹಣಾ ಬಾಧ್ಯತೆಯನ್ನು ತೃಪ್ತಿಪಡಿಸುವುದು ಮತ್ತು ಕಾಲಾನಂತರ ಆದಾಯವನ್ನು ಮಾನ್ಯ ಮಾಡುತ್ತದೆ.

(1) ಕಂಪನಿ ನಿರ್ವಹಿಸುತ್ತಾ ಪೂರೈಸಿದ ಕಾರ್ಯ ನಿರ್ವಹಣೆಯಿಂದ ಗ್ರಾಹಕನು ಪ್ರಯೋಜನ ಬಳಸಿಕೊಳ್ಳುವುದು ಮತ್ತು ಉಪಯೋಗವನ್ನು ಏಕಕಾಲಕ್ಕೆ ಬಳಸಿಕೊಳ್ಳುವುದು ಅಥವಾ

(2) ಕಂಪನಿಯ ಕಾರ್ಯನಿರ್ವಹಣೆಯು ಗ್ರಾಹಕನಿಗೆ ಆಸ್ತಿ ಸೃಜಿಸುವುದು ಅಥವಾ ಗ್ರಾಹಕನ ನಿಯಂತ್ರಣದಲ್ಲಿರುವ ಆಸ್ತಿಯನ್ನು ಹೆಚ್ಚಿಸುವುದು. ಅದು ಆಸ್ತಿಯ ಸೃಷ್ಟಿ ಅಥವಾ ವೃದ್ಧಿ ಎಂದು ಪರಿಗಣಿತ ಅಥವಾ

(3) ಕಂಪನಿಯ ಕಾರ್ಯ ನಿರ್ವಹಣೆಯು ಕಂಪನಿಗೆ ಪರ್ಯಾಯ ಬಳಕೆಯಾಗಿ ಒಂದು ಆಸ್ತಿಯನ್ನು ಸೃಜಿಸದಿದ್ದರೆ ಮತ್ತು ಸಂಸ್ಥೆಯು ಕಾರ್ಯನಿರ್ವಹಣೆ ಪೂರ್ಣಗೊಂಡ ದಿನಾಂಕಕ್ಕೆ ಹಣ ಪಾವತಿಗೆ ಜಾರಿಗೊಳಿಸಬೇಕಾದ ಹಕ್ಕು ಹೊಂದಿದ್ದರೆ ಕಾರ್ಯನಿರ್ವಹಣಾ ಬಾಧ್ಯತೆಗಳಿಗೆ ಮೇಲ್ಕಂಡ ಯಾವುದಾದರೊಂದು ಷರತ್ತು ಪೂರೈಸದಿದ್ದಲ್ಲಿ ಯಾವ ಸಮಯದಲ್ಲಿ ಕಾರ್ಯನಿರ್ವಹಣ ಬಾಧ್ಯತೆಯನ್ನು ತೃಪ್ತಿಪಡಿಸಲಾಗುವುದೋ ಆಗ ಆದಾಯವನ್ನು ಮಾನ್ಯ ಮಾಡಲಾಗುವುದು.

ಕಂಪನಿ ವಚನವಿತ್ತಂತೆ ಸರಕುಗಳನ್ನು ಅಥವಾ ಸೇವೆಗಳನ್ನು ತಲುಪಿಸುವ ಮೂಲಕ ಕಾರ್ಯನಿರ್ವಹಣ ಬಾಧ್ಯತೆಯನ್ನು ತೃಪ್ತಿಕರವಾಗಿ ಪೂರೈಸಿದಾಗ ಅದು ಕಾರ್ಯನಿರ್ವಹಣೆಯಿಂದ ಗಳಿಸಿದ ಪರಿಗಣಿತ

ಮೊತ್ತ ಆಧಾರಿತ ಗುತ್ತಿಗೆ ಆಸ್ತಿಯನ್ನು ಸೃಷ್ಟಿಸುತ್ತದೆ. ಗ್ರಾಹಕರಿಂದ ಸ್ವೀಕರಿಸಲ್ಪಟ್ಟ ಪರಿಗಣಿತ ಮೊತ್ತವು ಮಾನ್ಯ ಮಾಡಿದ ಮೊತ್ತಕ್ಕಿಂತ ಹೆಚ್ಚಾಗಿದ್ದಲ್ಲಿ ಅದು ಗುತ್ತಿಗೆ ಬಾಧ್ಯತೆಗೆ ಅವಕಾಶವಾಗುತ್ತದೆ.

ಆದಾಯವನ್ನು ಒಡಂಬಡನಾತ್ಮಕವಾಗಿ ವ್ಯಾಖ್ಯಾನಿಸಲಾದ ಹಣ ಪಾವತಿ ಷರತ್ತುಗಳನ್ನು ಗಣನೆಗೆ ತೆಗೆದುಕೊಂಡು ಮತ್ತು ತೆರಿಗೆ ಮತ್ತು ಕರಗಳನ್ನು ಹೊರತುಪಡಿಸಿ ಸ್ವೀಕರಿಸಲಾದ ಅಥವಾ ಸ್ವೀಕಾರಾರ್ಹ ಪರಿಗಣಿತ ಮೊತ್ತದ ನ್ಯಾಯೋಚಿತ ಮೌಲ್ಯಕ್ಕನುಗುಣವಾಗಿ ಲೆಕ್ಕ ಹಾಕಲಾಗಿದೆ.

**ಬಾಡಿಗೆ ಆದಾಯ:**

ಬಾಡಿಗೆಗಳಿಂದ ಬರುವ ಆದಾಯವನ್ನು ಗುತ್ತಿಗೆ ಅವಧಿಯಲ್ಲಿ ನೇರ ಮಾರ್ಗದ ಆಧಾರದಲ್ಲಿ ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಆದಾಯವೆಂದು ಗುರುತಿಸಲಾಗುತ್ತದೆ. ಬಾಡಿಗೆಯಲ್ಲಿ ನಿಗದಿತ ಹೆಚ್ಚಳವನ್ನು ಕಂಪನಿಯ ನಿರೀಕ್ಷಿತ ಹಣದುಬ್ಬರದ ವೆಚ್ಚದಲ್ಲಿ ಕಂಪನಿ ಪರಿಹಾರ ಒದಗಿಸುತ್ತದೆ. ಒಂದು ವೇಳೆ ಯಾವುದಾದರೂ ಉಪ ಗುತ್ತಿಗೆಯಿದ್ದಲ್ಲಿ ಅದರಿಂದ ಬರುವ ಬಾಡಿಗೆ ಆದಾಯವನ್ನು ಸಹ ಇದೇ ರೀತಿಯಲ್ಲಿ ಪರಿಗಣಿಸಲಾಗುವುದು ಮತ್ತು ಅದನ್ನು ಇತರ ಆದಾಯದಡಿ ಸೇರಿಸಲಾಗಿದೆ.

**ಲಾಭಾಂಶದ ಆದಾಯ:**

ಲಾಭಾಂಶದಿಂದ ಬರುವ ಆದಾಯವನ್ನು ಕಂಪನಿ ಹಣ ಸ್ವೀಕರಿಸುವ ಹಕ್ಕು ಸ್ಥಾಪಿತವಾದಾಗ ಮಾನ್ಯ ಮಾಡಲಾಗಿದೆ. ಲಾಭಾಂಶದೊಂದಿಗೆ ಸಮ್ಮಿಳಿತಗೊಂಡ ಆರ್ಥಿಕ ಲಾಭಗಳು ಕಂಪನಿಗೆ ಸೇರುವುದು ಮತ್ತು ಲಾಭಾಂಶದ ಮೊತ್ತವನ್ನು ವಿಶ್ವಾಸಾರ್ಹವಾಗಿ ಲೆಕ್ಕಹಾಕಲಾಗುವುದು.

**ಬಡ್ಡಿ ಆದಾಯ:**

ಒಂದು ಹಣಕಾಸು ಆಸ್ತಿಯಿಂದ ಬರುವ ಬಡ್ಡಿ ಆದಾಯವನ್ನು ಯಾವಾಗ ಅದರ ಆರ್ಥಿಕ ಲಾಭಗಳು ಕಂಪನಿಗೆ ಸೇರಬಹುದಾಗಿದ್ದಲ್ಲಿ ಮಾನ್ಯ ಮಾಡಲಾಗಿದೆ ಮತ್ತು ಆದಾಯದ ಮೊತ್ತವನ್ನು ವಿಶ್ವಾಸಾರ್ಹವಾಗಿ ಲೆಕ್ಕ ಹಾಕಬಹುದಾಗಿದೆ. ಬಾಕಿ ಇರುವ ಅಸಲು ಮೊತ್ತಕ್ಕೆ ಜಾರಿಯಲ್ಲಿರುವ ಬಡ್ಡಿ ದರವನ್ನು ಅನ್ವಯಿಸಿದನ್ನು ಅನುಸರಿಸಿ ಅವಧಿ ಅನುಪಾತಾಧಾರಿತದಲ್ಲಿ ಬಡ್ಡಿಯು ಸಂಚಯವಾಗುತ್ತದೆ. ವಿಳಂಬಿತ ಸ್ವೀಕೃತಿಗಳು, ರದ್ದತಿ/ಮುಟ್ಟುಗೋಲಾದ ಆದಾಯಗಳ ಮೇಲಿನ ಬಡ್ಡಿ ಮತ್ತು ಗ್ರಾಹಕರಿಂದ ವರ್ಗಾವಣೆ ಶುಲ್ಕಗಳನ್ನು ಅಂತಿಮ ಸಂಗ್ರಹಣೆ ಸಂಶಯಾತ್ಮಕವಾಗಿರುವ ಪ್ರಕರಣಗಳನ್ನು ಹೊರತುಪಡಿಸಿ ಸಂಚಯ ಆಧಾರಿತದಲ್ಲಿ ಪರಿಗಣಿಸಲಾಗಿದೆ.

**ಆದಾಯದ ಇತರ ಬಾಬ್ತುಗಳನ್ನು ಸ್ವೀಕೃತಿ ಹಕ್ಕು ಉಂಟಾದಾಗ ಗುರುತಿಸಲಾಗಿದೆ:**

**ನಗದು ಆಧಾರದ ಮೇಲೆ ಆದಾಯ ಗುರುತಿಸುವಿಕೆ**

ನಗದು ಆಧಾರಿತ ವಹಿವಾಟುಗಳಾಗಿದ್ದು, ಆದರೆ ಅವುಗಳ ನಗದೀಕರಣ ಅನಿಶ್ಚಿತ ಎಂದು ಪರಿಗಣಿತ ಕೆಳಕಂಡ ಬಾಬ್ತುಗಳನ್ನು ಹೊರತುಪಡಿಸಿ ಸಂಚಯ ಆಧಾರಿತದಲ್ಲಿ ಆದಾಯವನ್ನು ಗುರುತಿಸಿದೆ.

**ಚಿಟ್ ಕಾರ್ಯಾಚರಣೆ**

ಚಿಟ್ ಕಾರ್ಯಾಚರಣೆಯಿಂದ ಬರುವ ಎಲ್ಲ ರೀತಿಯ ಆದಾಯಗಳು ನಗದು ಆಧಾರಿತವಾಗಿವೆ.

**ಹೈರ್ ಪರ್ಚೇಸ್ (ಕಂತು ಖರೀದಿ)**

ಹೈರ್ ಪರ್ಚೇಸ್ ಮಾರಾಟಗಳ ಮೇಲಿನ ಬಡ್ಡಿ ಆದಾಯವನ್ನು ನಗದು ಆಧಾರದಲ್ಲಿ ಪರಿಗಣಿಸಲಾಗಿದೆ.

ಕರ ಸಾಲ/ಜಾರಿಯಲ್ಲಿರುವ ವಿದೇಶಿ ವಾಣಿಜ್ಯ ನೀತಿಯ ವಿವಿಧ ಉತ್ತೇಜನ ಯೋಜನೆಗಳಡಿ ವಿನಾಯಿತಿ, ತೆರಿಗೆ ಸಾಲ, ಸಮೀಕ್ಷಾ ಕೊರತೆಯಿಂದಾಗಿ ಕಸ್ಟಮ್ ಸುಂಕದ ಹಿಂಪಾವತಿ/ಸೇವಾ ತೆರಿಗೆ/ ಮಾರಾಟ ತೆರಿಗೆ/ವ್ಯಾಟ್/ಜಿಎಸ್‌ಟಿ ಮತ್ತು ಅವುಗಳ ಮೇಲಿನ ಬಡ್ಡಿ ಇತ್ಯಾದಿ.

- ★ ಅವಧಿ ಮೀರಿದ ವಸೂಲಾತಿಗಳ ಮೇಲಿನ ಬಡ್ಡಿ
- ★ ಪೂರೈಕೆದಾರರು/ಖಾತರಿದಾರರು ಸಮಾಪ್ತಿಗೊಂಡ ಹಾನಿಗಳು.

**ಐ) ಸರಕುಗಳ ತಪಶೀಲುಗಳು:**

ಈ ಸರಕುಗಳನ್ನು ನಿವ್ವಳ ನಗದೀಕರಣ ಮೌಲ್ಯಗಳಲ್ಲಿ ನಿರ್ಧರಣೆ ಮಾಡಿರುವ ಅನುಪಯುಕ್ತ ಮತ್ತು ಉಪ ಉತ್ಪನ್ನಗಳನ್ನು ಹೊರತುಪಡಿಸಿ ಉಳಿದವುಗಳನ್ನು ಕಡಿಮೆ ಬೆಲೆಗೆ ಮೌಲ್ಯ ಮಾಡಲಾಗಿರುತ್ತದೆ. ನಿವ್ವಳ ನಗದೀಕರಣದ ಮೌಲ್ಯವು ಸಾಮಾನ್ಯ ವ್ಯವಹಾರದ ಸಮಯದಲ್ಲಿ ಅಂದಾಜು ಮಾಡಿದ ಮಾರಾಟ ಬೆಲೆ ಆಗಿರುತ್ತದೆ. ಪೂರ್ಣಗೊಳಿಸುವಿಕೆಯ ಅಂದಾಜು ಮೌಲ್ಯ ಮತ್ತು ಮಾರಾಟ ಮಾಡಲು ಅಗತ್ಯವಿರುವ ಅಂದಾಜು ಬೆಲೆಯನ್ನು ಕಳೆಯಲಾಗಿದೆ.

**ತಪಶೀಲು ಸರಕುಗಳನ್ನು ಈ ಕೆಳಕಂಡಂತೆ ಮೌಲ್ಯ ನಿರ್ಣಯ ಮಾಡಿದೆ:**

(i) **ಕಚ್ಚಾ ಸಾಮಗ್ರಿಗಳು:** ಕಚ್ಚಾ ಸಾಮಗ್ರಿಗಳ ವೆಚ್ಚವು ಖರೀದಿ ಬೆಲೆ ಮತ್ತು ಸರಕುಗಳನ್ನು ಹಾಲಿ ಸ್ಥಳಕ್ಕೆ ಮತ್ತು ಹಂತಕ್ಕೆ ಸಾಗಿಸಲು ಉಂಟಾದ ವೆಚ್ಚಗಳನ್ನು ಒಳಗೊಂಡಿರುತ್ತದೆ. ಬೆಲೆಯನ್ನು ಕಾಗದದ ವಿಭಾಗದಲ್ಲಿ ಸರಾಸರಿ ತೂಕದ ಆಧಾರದ ಮೇಲೆ ಮತ್ತು ಪಾನೀಯ/ಔಷಧಿಗಳ ಸಂಬಂಧದಲ್ಲಿ ಮೊದಲ ಆಗಮನ ಮೊದಲ ನಿರ್ಗಮನ ಆಧಾರದಲ್ಲಿ (ಎಫ್‌ಐಎಫ್‌ಒ) ಮಾಡಲಾಗಿದೆ.

(ii) **ಸಿದ್ಧಪಡಿಸಿದ ಸರಕುಗಳು ಮತ್ತು ಪ್ರಗತಿಯಲ್ಲಿರುವ ಕಾರ್ಯಗಳು:** ವೆಚ್ಚವು ಸಾಮಗ್ರಿಗಳ ನೇರ ಬೆಲೆ ಮತ್ತು ಕಾರ್ಮಿಕ ವೆಚ್ಚ ಮತ್ತು ಸಾಮಾನ್ಯ ಕಾರ್ಯಾಚರಣೆ ಆಧಾರದಲ್ಲಿ ಅಂದರೆ ತರಲು

ಉಂಟಾಗುವ ವೆಚ್ಚ ಹೊರತುಪಡಿಸಿ ಅವುಗಳ ಮೇಲಿನ ತಯಾರಿಕಾ ವೆಚ್ಚ ಒಳಗೊಂಡಿರುತ್ತದೆ. ಸರಾಸರಿ ತೂಕದ ಮೇಲೆ ಬೆಲೆ ನಿರ್ಧರಣೆ ಮಾಡಲಾಗುತ್ತದೆ. ಕಚ್ಚಾ ಸಾಮಗ್ರಿಗಳು, ಗ್ರಾಹಕ ವಸ್ತುಗಳನ್ನು ಮತ್ತು ಪರಿವರ್ತನಾಗಾರರಿಂದ ನೋಟ್ ಪುಸ್ತಕಗಳನ್ನು ಸ್ವೀಕರಿಸುವಾಗ ಸಿದ್ಧಪಡಿಸಿದ ಸರಕು ಎಂದು ಪರಿಗಣಿಸಲಾಗುತ್ತದೆ.

(iii) ಮದ್ಯದ ದಾಸ್ತಾನಿನ ಮೌಲ್ಯಮಾಪನಕ್ಕಾಗಿ ಸಾಗಾಣಿಕೆ ಆಗಮನ ಸರಕನ್ನು ಪರಿಗಣಿಸಿರುವುದಿಲ್ಲ.

(iv) ಅನುಪಯುಕ್ತ ಸರಕುಗಳು, ನಿಧಾನಗತಿಯ ಮತ್ತು ದೋಷರೂಪಿತ ಸರಕುಗಳನ್ನು ನಿವ್ವಳ ವಾಸ್ತವೀಕರಣದ ಮೌಲ್ಯಕ್ಕೆ ದಾಖಲಿಸಿದೆ.

**ಜೆ) ಸ್ವತ್ತು , ಸ್ಥಾವರ ಮತ್ತು ಉಪಕರಣ(ಪಿಪಿಇ):**

**ಗುರುತಿಸುವಿಕೆ ಮತ್ತು ಪ್ರಾರಂಭಿಕ ಮಾಪನ**

ಸ್ವತ್ತುಗಳು, ಸ್ಥಾವರ ಮತ್ತು ಉಪಕರಣಗಳನ್ನು ಅವುಗಳ ಸ್ವಾಧೀನ ವೆಚ್ಚದಲ್ಲಿ ತಿಳಿಸಲಾಗಿದೆ. ಭಾರತೀಯ ಲೆಕ್ಕ ನಿರ್ವಹಣಾ ಗುಣಮಟ್ಟಗಳಿಗೆ ವರ್ಗಾವಣೆಗೊಂಡ ಅಂದರೆ ದಿನಾಂಕ:01.04.2016ರಂದು ಕಂಪನಿ ತನ್ನ ಎಲ್ಲ ಸ್ವತ್ತು, ಸ್ಥಾವರ ಮತ್ತು ಉಪಕರಣಗಳನ್ನು ಹಿಂದಿನ GAAP ಹೊಂದಿರುವ ಮೌಲ್ಯ (ಭಾವಿತ ವೆಚ್ಚ)ದಲ್ಲಿ ಅಳೆಯಲು ಆಯ್ಕೆ ಮಾಡಿಕೊಂಡಿದೆ. ಅದರಂತೆ ಬೆಲೆಯು ಖರೀದಿ ಬೆಲೆ, ಬಂಡವಾಳೀಕರಣದ ಅರ್ಹತೆ ಪೂರೈಸಿದ್ದಲ್ಲಿ ಸಾಲದ ವೆಚ್ಚ, ಸ್ಥಗಿತ ಅಥವಾ ಮುಚ್ಚುವುದಕ್ಕಾಗಿ ತಗಲಬಹುದಾದ ಯಾವುದೇ ನಿರೀಕ್ಷಿತ ವೆಚ್ಚ ಮತ್ತು ಉದ್ದೇಶಿತ ಬಳಕೆಗಾಗಿ ಸ್ವತ್ತನ್ನು ಕಾರ್ಯ ಸ್ಥಿತಿಗೆ ತರಲು ಉಂಟಾಗುವ ನೇರ ಅನ್ವಯಿಕ ವೆಚ್ಚಗಳು ಒಳಗೊಂಡಿರುತ್ತವೆ. ಯಾವುದೇ ವ್ಯಾಪಾರಿ ರಿಯಾಯಿತಿ ಮತ್ತು ರಿಬೇಟ್‌ಗಳನ್ನು ಖರೀದಿ ಬೆಲೆಗೆ ಬರಲು ಕಡಿತಗೊಳಿಸಲಾಗುತ್ತದೆ.

**ಅನಂತರದ ಮಾಪನ**

ಅನಂತರದ ವೆಚ್ಚಗಳು ಸ್ವತ್ತು ಹೊಂದಿರುವ ಮೊತ್ತ ಅಥವಾ ಪ್ರತ್ಯೇಕ ಸ್ವತ್ತು ಎಂದು ಗುರುತಿಸಿರುವುದು ಇವುಗಳಲ್ಲಿ ಯಾವುದು ಸೂಕ್ತವೋ ಅದು ಎಂದು ಪರಿಗಣಿಸಿ ಸ್ವತ್ತಿನಿಂದ ಕಂಪನಿಗೆ ಬರಬಹುದಾದ ಭವಿಷ್ಯದ ಹಣಕಾಸು ಪ್ರಯೋಜನಗಳಿದ್ದಲ್ಲಿ ಮಾತ್ರ ಸೇರಿದ ಬಾಬ್ತುಗಳನ್ನು ಒಳಗೊಂಡಿರುತ್ತವೆ. ಇತರ ಎಲ್ಲ ದುರಸ್ತಿ ಮತ್ತು ನಿರ್ವಹಣ ವೆಚ್ಚಗಳನ್ನು ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಮಾಡಿದ ವೆಚ್ಚವೆಂದು ಪರಿಗಣಿಸಲಾಗಿದೆ.

**ಸವಕಳಿ ಮತ್ತು ಉಪಯುಕ್ತ ಜೀವಿತಾವಧಿ**

ಸ್ವತ್ತು , ಸ್ಥಾವರ ಮತ್ತು ಉಪಕರಣಗಳ ಸವಕಳಿ/ಅಮಾರ್ಟೈಜೇಷನ್ ಅನ್ನು ಕಂಪನಿಗಳ ಕಾಯ್ದೆ 2013ರ ಪರಿಚ್ಛೇದ-II ರಲ್ಲಿ ನಿಗದಿಪಡಿಸಿರುವ ಉಪಯುಕ್ತತೆ ಅವಧಿಯ ಅನುಸಾರ ನೇರ ಮಾರ್ಗದ ವಿಧಾನದಲ್ಲಿ ತಿಳಿಸಿದೆ. ಕಂಪನಿಗಳ ಕಾಯ್ದೆ, 2013ರ ಪರಿಚ್ಛೇದ-II ರಲ್ಲಿ ನಿಗದಿಪಡಿಸಿರುವ ಸೂಚನಾತ್ಮಕ ಉಪಯುಕ್ತತೆ ಜೀವಿತಾವಧಿ ಅನ್ವಯ ಆಸ್ತಿಯ ಉಪಯುಕ್ತತೆ ಜೀವಿತಾವಧಿಯನ್ನು ಆಡಳಿತ ಮಂಡಳಿ ಅಂದಾಜು ಮಾಡುವುದು. ಉಳಿಕೆ ಮೌಲ್ಯಗಳು, ಉಪಯುಕ್ತತೆ ಜೀವಿತಾವಧಿ ಮತ್ತು ಸವಕಳಿ ಮಾಡುವ ವಿಧಾನವನ್ನು ಪ್ರತಿ ಹಣಕಾಸಿನ ವರ್ಷದ ಕೊನೆಯಲ್ಲಿ ಪರಿಶೀಲಿಸಿದೆ ಮತ್ತು ಸೂಕ್ತವಾಗಿದ್ದಲ್ಲಿ ಅನುಗುಣವಾಗಿ ಹೊಂದಾಣಿಕೆ ಮಾಡಿದೆ.

| ವಿವರಗಳು | ಜೀವಿತಾವಧಿ-ವರ್ಷಗಳಲ್ಲಿ |
|---|---|
| ಕಟ್ಟಡ | 60 |
| ಅಗ್ನಿಶಾಮಕ ಉಪಕರಣ | 10 |
| ವಿದ್ಯುತ್ ಉಪಕರಣ | 10 |
| ಪೀಠೋಪಕರಣ ಮತ್ತು ಅಳವಡಿಕೆಗಳು | 10 |
| ವಾಹನಗಳು | 8 |
| ಪೀಠೋಪಕರಣ ಮತ್ತು ಅಳವಡಿಕೆಗಳು-ಮದ್ಯ | 5 |
| ನಿರ್ವಹಣೆ ಉಪಕರಣ | 5 |
| ತೂಕದ ಯಂತ್ರಗಳು | 5 |
| ಕಚೇರಿ ಉಪಕರಣ | 5 |
| ಕಂಪ್ಯೂಟರ್‌ಗಳು | 3 |
| ಗುತ್ತಿಗೆದಾರಿಕೆ ಆಸ್ತಿಗಳು | ಪ್ರಾಥಮಿಕ ಗುತ್ತಿಗೆ ಅವಧಿ ಯಲ್ಲಿ-ಜಮೀನಿಗೆ ಹೊರತಾಗಿ |

ಸ್ಥಿತಿ ವಿವರಣಾ ಪಟ್ಟಿಯ ದಿನಾಂಕದಲ್ಲಿ ಬಳಕೆಗೆ ಸಿದ್ಧವಾಗಿರದ ಆಸ್ತಿಗಳ ಬೆಲೆಯನ್ನು ಪ್ರಗತಿಯಲ್ಲಿರುವ ಬಂಡವಾಳ ಕೆಲಸದ ಅಡಿಯಲ್ಲಿ ತಿಳಿಸಿದೆ.

ವರ್ಷದ ಅವಧಿಯಲ್ಲಿ ಸೇರ್ಪಡೆ ಮಾಡಿದ/ವಿಲೇವಾರಿ ಮಾಡಿದ/ವಿಸರ್ಜನೆ ಮಾಡಿದ ಸ್ಥಿರಾಸ್ತಿಗಳ ಸವಕಳಿಯನ್ನು ಸೇರ್ಪಡೆ ಮಾಡಿದ/ವಿಲೇವಾರಿ ಮಾಡಿದ/ವಿಸರ್ಜಿಸಿದ ದಿನಾಂಕವನ್ನು ಗಣನೆಗೆ ತೆಗೆದುಕೊಂಡು ದಮಾಷ ಆಧಾರದ ಮೇಲೆ ತಿಳಿಸಲಾಗಿದೆ.

**ಅಮಾನ್ಯತೆ**

ಸ್ವತ್ತು , ಸ್ಥಾವರ ಮತ್ತು ಉಪಕರಣಗಳ ಯಾವುದೇ ಬಾಬ್ತು ಅದರ ಮಹತ್ತರ ಭಾಗವು ಆರಂಭದಲ್ಲಿ ಮಾನ್ಯ ಮಾಡಿದ್ದನ್ನು ಅದರ ವಿಲೇವಾರಿ, ಅಥವಾ ಅದರ ಬಳಕೆಯಿಂದ ಅಥವಾ ವಿಲೇವಾರಿಯಿಂದ ಮುಂದೆ ಯಾವುದೇ ಆರ್ಥಿಕ ಲಾಭ ಇಲ್ಲ ಎಂದು ಪರಿಗಣಿಸಿದಾಗ ಅದನ್ನು ಅಮಾನ್ಯಗೊಂಡ ಬಾಬ್ತು ಎಂದು ಪರಿಗಣಿಸಲಾಗುವುದು. ಸ್ವತ್ತಿನ ಅಮಾನ್ಯೀಕರಣದಿಂದ ಉಂಟಾಗುವ ಯಾವುದೇ ಲಾಭ ಅಥವಾ ನಷ್ಟವನ್ನು (ಇದನ್ನು ನಿವ್ವಳ ವಿಲೇವಾರಿಯಿಂದ ಬರುವ ಮೊತ್ತ ಮತ್ತು ಸ್ವತ್ತು ಹೊಂದಿರುವ ಮೊತ್ತದ ನಡುವಿನ ವ್ಯತ್ಯಾಸದ ಮೂಲಕ ಲೆಕ್ಕ ಹಾಕಲಾಗುವುದು) ಸ್ವತ್ತು ಅಮಾನ್ಯಗೊಂಡಾಗ ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಸೇರಿಸಲಾಗುತ್ತದೆ.

**ಕೆ) ಅಗೋಚರಿತ ಆಸ್ತಿಗಳು: ಮಾನ್ಯತೆ ಮತ್ತು ಆರಂಭದ ಮಾಪನ**

ಅಗೋಚರಿತ ಆಸ್ತಿ (ಸಾಫ್ಟ್‌ವೇರ್)ಗಳನ್ನು ಅವುಗಳ ಸ್ವಾಧೀನತೆಯ ವೆಚ್ಚದ ಬೆಲೆಯಲ್ಲಿ ತಿಳಿಸಲಾಗಿದೆ. ಭಾರತೀಯ ಲೆಕ್ಕ ನಿರ್ವಹಣಾ

ಗುಣಮಟ್ಟಗಳಿಗೆ ವರ್ಗಾವಣೆಯಾದ ಮೇಲೆ ಅಂದರೆ ದಿನಾಂಕ:01.04.2016ರಂದು ಕಂಪನಿ ಮಾಪನಕ್ಕೆ ಹಿಂದಿನ GAAP ಹೊಂದಿದ ಮೌಲ್ಯ (ಭಾವಿತ ವೆಚ್ಚ) ವಿಧಾನವನ್ನು ಆಯ್ಕೆ ಮಾಡಿಕೊಂಡಿದೆ. ವೆಚ್ಚವು ಖರೀದಿ ಬೆಲೆ, ಬಂಡವಾಳೀಕರಣ ಮಾನದಂಡವನ್ನು ಪೂರೈಸಿದ್ದಲ್ಲಿ ಸಾಲದ ವೆಚ್ಚ ಮತ್ತು ನೇರವಾಗಿ ಅನ್ವಯಿಸಬಹುದಾದ ಅಥವಾ ಕಾರಣೀಭೂತವಾಗಬಹುದಾದ ವೆಚ್ಚಗಳಾದ ಅಂದರೆ ಸ್ವತ್ತನ್ನು ಉದ್ದೇಶಿತ ಬಳಕೆಗಾಗಿ ಕಾರ್ಯನಿರ್ವಹಿಸುವ ಸ್ಥಿತಿಗೆ ತರಲು ತಗಲುವ ವೆಚ್ಚಗಳನ್ನು ಒಳಗೊಂಡಿರುತ್ತದೆ. ಯಾವುದೇ ವ್ಯಾಪಾರಿ ಕಡಿತ, ರಿಯಾಯಿತಿಗಳನ್ನು ಕಡಿತಗೊಳಿಸಿ ಖರೀದಿ ಬೆಲೆಯನ್ನು ಪರಿಗಣಿಸಿದೆ.

**ತದನಂತರದ ಮಾಪನ (ಅಮಾರ್ಟೈಜೇಷನ್):**

ಬಂಡವಾಳೀಕರಣಗೊಂಡ ತಂತ್ರಾಂಶಗಳ ವೆಚ್ಚವನ್ನು ಅವುಗಳನ್ನು ಸ್ವಾಧೀನಗೊಳಿಸಿಕೊಂಡ ದಿನಾಂಕದಿಂದ ನೇರ ಮಾರ್ಗದ ವಿಧಾನದಿಂದ 6 ವರ್ಷಗಳ ಅವಧಿಯಲ್ಲಿ ಅಮಾರ್ಟೈಜೇಷನ್ ಮಾಡಲಾಗಿದೆ.

ಅಗೋಚರ ಆಸ್ತಿಯ ಅಮಾನ್ಯತೆಯಿಂದ ಉಂಟಾಗುವ ಲಾಭ ಅಥವಾ ನಷ್ಟಗಳನ್ನು ಸದರಿ ಆಸ್ತಿಯ ಹೊಂದಿರುವ ಮೊತ್ತ ಮತ್ತು ವಿಲೇವಾರಿಯಿಂದ ಲಭ್ಯವಾಗುವ ನಿವ್ವಳ ಮೊತ್ತಗಳ ನಡುವಿನ ವ್ಯತ್ಯಾಸದ ಮೂಲಕ ಮಾಪನ ಮಾಡಲಾಗುವುದು ಮತ್ತು ಆಸ್ತಿಯ ಅಮಾನ್ಯಗೊಳಿಸಿದಾಗ ಅದನ್ನು ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಗುರುತಿಸಲಾಗುವುದು.

ಅಗೋಚರಿತ ಆಸ್ತಿಗಳ ಉಳಿಕೆ ಮೌಲ್ಯ, ಉಪಯುಕ್ತ ಜೀವಿತಾವಧಿ ಮತ್ತು ಅಮೌಲ್ಯೀಕರಣ (ಅಮಾರ್ಟೈಜೇಷನ್) ವಿಧಾನಗಳನ್ನು ಪ್ರತಿ ವರದಿ ಮಾಡುವ ದಿನಾಂಕದ ಕೊನೆಯಲ್ಲಿ ಪರಿಶೀಲಿಸಲಾಗುತ್ತದೆ ಮತ್ತು ಸೂಕ್ತವೆನಿಸಿದಲ್ಲಿ ಮುಂದಿನ ಅವಧಿಗೆ ಹೊಂದಾಣಿಕೆ ಮಾಡಲಾಗುತ್ತದೆ.

**ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ**

ಪ್ರಗತಿಯಲ್ಲಿರುವ ಬಂಡವಾಳ ಹೂಡಿಕೆ ಕಾಮಗಾರಿಯನ್ನು ನಿರ್ಮಾಣದ ಅವಧಿಯಲ್ಲಿ ಮಾಡಿದ ವೆಚ್ಚ, ಅರ್ಹತಾ ಆಸ್ತಿಗಳ ಸ್ವಾಧೀನಕ್ಕಾಗಿ ತರಲಾದ ಸಾಲದ ಮೇಲಿನ ಬಡ್ಡಿ ಮತ್ತು ಸ್ವತ್ತಿನ ಬಳಕೆಯ ದಿನಾಂಕವನ್ನು ಮುಂದಿನ ಅವಧಿಯಲ್ಲಿ ಯೋಜನಾ ಅನುಷ್ಠಾನ ಸಂಬಂಧಿಸಿದ ಕಾರ್ಯಗಳಿಗಾಗಿ ಉಂಟಾದ ವೆಚ್ಚಗಳಲ್ಲಿ ತಿಳಿಸಲಾಗುತ್ತದೆ.

ಪ್ರತಿ ಸ್ಥಿತಿ ವಿವರಣಾ ಪಟ್ಟಿಯ ದಿನಾಂಕಕ್ಕೆ ಕಾಣಿಸಿಕೊಂಡ ಸ್ವತ್ತು, ಸ್ಥಾವರ ಮತ್ತು ಉಪಕರಣ (ಪಿಪಿಇ)ಗಳ ಖರೀದಿ/ಸ್ವಾಧೀನ ಪ್ರಕ್ರಿಯೆಗಳಿಗಾಗಿ ನೀಡಲಾದ ಬಂಡವಾಳ ಮುಂಗಡಗಳನ್ನು ಇತರ ಚಾಲ್ತಿಯೇತರ ಆಸ್ತಿಗಳೆಂದು ಪ್ರತ್ಯೇಕವಾಗಿ ನಮೂದಿಸಲಾಗುವುದು.

**ಹೂಡಿಕೆ ಆಸ್ತಿ**

ಹೂಡಿಕೆ ಆಸ್ತಿಗಳು, ಅಂದರೆ ಬಾಡಿಗೆ ಗಳಿಸಲು ಹೊಂದಿರುವ ಆಸ್ತಿಗಳು ಮತ್ತು ಅಥವಾ ಬಂಡವಾಳ ವೃದ್ಧಿಗಾಗಿ (ಆ ಉದ್ದೇಶಕ್ಕಾಗಿ ನಿರ್ಮಾಣ ಹಂತದಲ್ಲಿರುವ ಆಸ್ತಿಯೂ ಸೇರಿದಂತೆ) ಇರುವ ಆಸ್ತಿಗಳು. ಹೂಡಿಕೆ ಆಸ್ತಿಗಳನ್ನು ಆರಂಭದಲ್ಲಿ ವರ್ಗಾವಣೆಗಾಗಿ ಉಂಟಾದ ವೆಚ್ಚವೂ ಸೇರಿದಂತೆ ಒಟ್ಟು ವೆಚ್ಚದಲ್ಲಿ ಲೆಕ್ಕ ಹಾಕಲಾಗುವುದು. ಕಂಪನಿಯ ಎಲ್ಲ ಆಸ್ತಿ ಹಿತಾಸಕ್ತಿಗಳನ್ನು ಬಾಡಿಗೆ ಗಳಿಸಲು ಕಾರ್ಯಾಚರಣೆಯಲ್ಲಿರುವ ಗುತ್ತಿಗೆಗಳಡಿ ಅಥವಾ ಬಂಡವಾಳ ವೃದ್ಧಿ ಉದ್ದೇಶಕ್ಕಾಗಿ ಹೊಂದಿರುವುವುಗಳನ್ನು ಹೂಡಿಕೆ ಆಸ್ತಿಗಳೆಂದು ಪರಿಗಣಿತವಾಗುವುವು. ಆರಂಭದ ಮಾನ್ಯತೆಯ ನಂತರ ಕಂಪನಿ ಹೂಡಿಕೆ ಆಸ್ತಿಯನ್ನು ತಗುಲಿದ ವೆಚ್ಚದಲ್ಲಿ ಮಾಪನ ಮಾಡುವುದು.

ಹೂಡಿಕೆ ಆಸ್ತಿಗಳನ್ನು ಅವುಗಳ ವಿಲೇವಾರಿ ಮೇರೆಗೆ ಅಥವಾ ಶಾಶ್ವತವಾಗಿ ಹೂಡಿಕೆ ಆಸ್ತಿಗಳನ್ನು ಬಳಕೆಯಿಂದ ಹಿಂಪಡೆದಾಗ ಮತ್ತು ವಿಲೇವಾರಿಯ ನಂತರ ಮುಂದೆ ಅದರಿಂದ ಯಾವುದೇ ಆರ್ಥಿಕ ಲಾಭ ಇಲ್ಲವೆಂದಾಗ ಅಮಾನ್ಯ ಮಾಡಲಾಗುತ್ತದೆ. ಅಮಾನ್ಯಗೊಂಡ ಆಸ್ತಿಯಿಂದ ಯಾವುದೇ ಲಾಭ ಅಥವಾ ನಷ್ಟಗಳನ್ನು (ಆಸ್ತಿ ಹೊಂದಿರುವ ಮೌಲ್ಯ ಮತ್ತು ಅದರ ವಿಲೇವಾರಿಯಿಂದ ಬಂದ ಮೊತ್ತಗಳ ನಡುವಿನ ವ್ಯತ್ಯಾಸದ ಮೂಲಕ ಲೆಕ್ಕ ಹಾಕಲಾಗುವುದು) ಆಸ್ತಿಯ ಅಮಾನ್ಯಗೊಳಿಸಿದ ವರ್ಷದ ಅವಧಿಗೆ ಸಂಬಂಧಿಸಿದ ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಸೇರಿಸಲಾಗುತ್ತದೆ.

ಹೂಡಿಕೆ ಆಸ್ತಿಗಳನ್ನು ಅವುಗಳು ಸೇರಿದ ಆಸ್ತಿಯ ವರ್ಗ ಮತ್ತು ಆ ವರ್ಗದ ಆಸ್ತಿಗಳಿಗೆ ಗೊತ್ತುಪಡಿಸಿದ ಜೀವಿತಾವಧಿಯನುಸಾರ ಸವಕಳಿಗೊಳಿಸಲಾಗುತ್ತದೆ.

**ಎಲ್) ಸಾಲದ ವೆಚ್ಚಗಳು:**

ಸಾಲದ ವೆಚ್ಚಗಳನ್ನು ನೇರವಾಗಿ ಅರ್ಹತಾ ಆಸ್ತಿಗಳ ಸ್ವಾಧೀನ, ನಿರ್ಮಾಣ ಅಥವಾ ಉತ್ಪಾದನಾ ಕಾರ್ಯಗಳಿಗೆ ಅನ್ವಯಿಸಲಾಗುವುದು. ಈ ಆಸ್ತಿಗಳನ್ನು ಉದ್ದೇಶಿತ ಉಪಯೋಗಕ್ಕೆ ಸಿದ್ಧಪಡಿಸಲು ಗಣನೀಯ ಸಮಯ ತೆಗೆದುಕೊಳ್ಳುತ್ತವೆ. ಉದ್ದೇಶಿತ ಉಪಯೋಗಕ್ಕೆ ಸಿದ್ಧವಾಗುವವರೆಗೆ ಆ ವೆಚ್ಚಗಳನ್ನು ಆಸ್ತಿಯ ಬೆಲೆ ಅಥವಾ ವೆಚ್ಚಕ್ಕೆ ಸೇರಿಸಲಾಗುವುದು. ಇನ್ನುಳಿದ ಎಲ್ಲ ಸಾಲದ ವೆಚ್ಚಗಳನ್ನು ವೆಚ್ಚ ಮಾಡಲಾದ ವರ್ಷದ ಅವಧಿಗೆ ಸಂಬಂಧಿಸಿದ ಲಾಭ ಮತ್ತು ನಷ್ಟದ ಹೇಳಿಕೆಗಳಲ್ಲಿ ಮಾನ್ಯ ಮಾಡಲಾಗುತ್ತದೆ.

ಸಾಲಗಳನ್ನು ಆರಂಭದಲ್ಲಿ ನ್ಯಾಯೋಚಿತ ಮೌಲ್ಯದಲ್ಲಿ; ನಿವ್ವಳ ವರ್ಗಾವಣೆಗೆ ಭರಿಸಿದ ನಿವ್ವಳ ವೆಚ್ಚದಲ್ಲಿ ಮಾನ್ಯ ಮಾಡಲಾಗುತ್ತದೆ. ತದನಂತರ ಸಾಲಗಳನ್ನು ಅಮಾನ್ಯೀಕರಣ ವೆಚ್ಚದಲ್ಲಿ ಪರಿಗಣಿಸಲಾಗುತ್ತದೆ. ಮೊತ್ತಗಳಲ್ಲಿ ಯಾವುದೇ ವ್ಯತ್ಯಾಸ ಅಂದರೆ (ನಿವ್ವಳ ವರ್ಗಾವಣೆ ವೆಚ್ಚ) ಮತ್ತು ಮರು ಗಳಿಕೆ ಮೊತ್ತಗಳ ನಡುವೆ ಇರುವ ವ್ಯತ್ಯಾಸವನ್ನು ಸಾಲದ ಅವಧಿಯ ಲಾಭ ಅಥವಾ ನಷ್ಟಗಳಲ್ಲಿ ಜಾರಿಯಲ್ಲಿರುವ ಬಡ್ಡಿ ವಿಧಾನ ಆಧರಿಸಿ ಪರಿಗಣಿಸಲಾಗುವುದು.

ಕಂಪನಿ ಸಾಲದ ವೆಚ್ಚದ ಮೊತ್ತವನ್ನು ಬಂಡವಾಳೀಕರಣಕ್ಕೆ ಅರ್ಹವೆಂದು ಗುರುತಿಸುವ ಮೊತ್ತವನ್ನು ಸಾಲ ತರುವುದಕ್ಕಾಗಿ ಭರಿಸಲಾದ ವಾಸ್ತವ ಸಾಲದ ವೆಚ್ಚಗಳೆಂದು ನಿರ್ಧರಿಸುತ್ತದೆ. ಇದರಲ್ಲಿ ಯಾವುದಾದರೂ ಬಡ್ಡಿ ಆದಾಯ ಇದ್ದಲ್ಲಿ ಅಂದರೆ ಒಂದು ನಿರ್ದಿಷ್ಟ ಸಾಲವನ್ನು ಅದರ ಉದ್ದೇಶಿತ ಬಳಕೆಯು ಬಾಕಿಯಿದ್ದು, ತಾತ್ಕಾಲಿಕವಾಗಿ ಹೂಡಿಕೆ ಮಾಡುವುದರಿಂದ ಬರುವ ಬಡ್ಡಿ ಮೊತ್ತವನ್ನು ಕಡಿತಗೊಳಿಸಲಾಗುತ್ತದೆ. ತಾತ್ಕಾಲಿಕ ಹೂಡಿಕೆಗಾಗಿ ನಿಧಿ ಪಡೆಯುವ ಸಂಸ್ಥೆಯು ನಿರ್ದಿಷ್ಟವಾಗಿ ಅರ್ಹ ಆಸ್ತಿಯನ್ನು ಪಡೆಯುವ ಉದ್ದೇಶಕ್ಕೆ ಪಡೆಯಬೇಕು. ಒಂದು ವೇಳೆ ಕಂಪನಿ ಸಾಮಾನ್ಯವಾಗಿ ಸಾಲ ತಂದಲ್ಲಿ ಮತ್ತು ಅದನ್ನು ಸೂಕ್ತ ಆಸ್ತಿ ಹೊಂದುವುದಕ್ಕಾಗಿ ಉಪಯೋಗಿಸಿಕೊಂಡಲ್ಲಿ ಅಂತಹ ಸಾಲ ವೆಚ್ಚಗಳು ಬಂಡವಾಳೀಕರಣಕ್ಕೆ ಅರ್ಹವಾಗಿದ್ದು ಅದನ್ನು ಆ ಆಸ್ತಿಯ ವೆಚ್ಚಕ್ಕೆ ಬಂಡವಾಳೀಕರಣ ದರ ಅನ್ವಯಿಸಿ ನಿರ್ಧರಣೆ ಮಾಡಲಾಗುವುದು.

ಕಂಪನಿ ಅರ್ಹವಾದ ಆಸ್ತಿಯ ಅಭಿವೃದ್ಧಿಯನ್ನು ವಿಸ್ತರಣೆಯಾದ ಅವಧಿಯಲ್ಲಿ ಅಮಾನತ್ತುಗೊಳಿಸಿದ್ದಲ್ಲಿ ಆ ಅವಧಿಗೆ ಸಂಬಂಧಿಸಿದಂತೆ ಬಂಡವಾಳೀಕರಣದ ಸಾಲದ ವೆಚ್ಚಗಳನ್ನು ಅಮಾನತ್ತುಗೊಳಿಸುತ್ತದೆ.

### ಎಂ) ನಗದು ಮತ್ತು ನಗದು ಸಮಾನಗಳು:

ಸ್ಥಿತಿ ವಿವರಣಾ ಪಟ್ಟಿಯಲ್ಲಿನ ನಗದು ಮತ್ತು ನಗದು ಸಮಾನಗಳು, ಬ್ಯಾಂಕ್‌ಗಳಲ್ಲಿನ ನಗದು, ಕೈಯಲ್ಲಿರುವ ನಗದು ಮತ್ತು ಮೂಲತಃ 3 ತಿಂಗಳು ಅಥವಾ ಕಡಿಮೆ ಪಕ್ವತೆ ಅವಧಿಯ ಅಲ್ಪಾವಧಿ ಠೇವಣಿಗಳು (ಈ ಠೇವಣಿಗಳು ಅವುಗಳ ಮೌಲ್ಯದಲ್ಲಿ ಯಾವುದೇ ಮಹತ್ತರ ಬದಲಾವಣೆಯಾಗದ ಅಪಾಯವಿಲ್ಲದಿರುವಂತೆ)ಗಳನ್ನು ಒಳಗೊಂಡಿರುತ್ತವೆ.

### ಎನ್) ಗುತ್ತಿಗೆಗಳು:

ಗುತ್ತಿಗೆಗಳಲ್ಲಿ ಗುತ್ತಿಗೆ ನೀಡುವವರು ಪರಿಣಾಮಕಾರಿಯಾಗಿ ಎಲ್ಲ ಬಗೆಯ ಗಣನೀಯ ಅಪಾಯಗಳು ಮತ್ತು ಗುತ್ತಿಗೆ ನೀಡಿದ ಆಸ್ತಿಯ ಮಾಲೀಕತ್ವವನ್ನು ಹೊಂದಿರುತ್ತಾರೆಯೊ, ಅಂತಹ ಆಸ್ತಿಗಳನ್ನು ಕಾರ್ಯಾಚರಣೆಯಲ್ಲಿರುವ ಆಸ್ತಿಗಳೆಂದು ವರ್ಗೀಕರಣ ಮಾಡಲಾಗಿದೆ.

#### ಗುತ್ತಿಗೆ ಪಡೆಯುವವರಾಗಿ :

#### ಹಣಕಾಸಿನ ಗುತ್ತಿಗೆ:

ಹಣಕಾಸಿನ ಗುತ್ತಿಗೆಯಡಿಯಲ್ಲಿನ ಆಸ್ತಿಗಳನ್ನು ನ್ಯಾಯೋಚಿತ ಮೌಲ್ಯಕ್ಕಿಂತ ಕಡಿಮೆ ಮೌಲ್ಯದಲ್ಲಿ ಅಥವಾ ಗುತ್ತಿಗೆ ಅವಧಿಯ ಪ್ರಾರಂಭದಲ್ಲಿದ್ದ ಕನಿಷ್ಠ ಗುತ್ತಿಗೆ ಪಾವತಿಗಳ ಪ್ರಸಕ್ತದ ಮೌಲ್ಯದಲ್ಲಿ ಬಂಡವಾಳೀಕರಿಸಲಾಗಿದೆ ಮತ್ತು ತತ್ಸಮಾನ ಅವಧಿಗೆ ಹೊಣೆಗಾರಿಕೆ ಸೃಷ್ಟಿಸಲಾಗಿದೆ. ಗುತ್ತಿಗೆ ಅವಧಿ ಕೊನೆಯ ವೇಳೆಗೆ ಕಂಪನಿಯು ಅದರ ಮಾಲೀಕತ್ವ ಪಡೆಯುವುದು ಎಂಬ ಸೂಕ್ತವಾದ ನಿರ್ಧರಣೆ ಇಲ್ಲದಿದ್ದರೆ, ಆಗ ಬಂಡವಾಳೀಕರಿಸಿದ ಗುತ್ತಿಗೆ ಆಸ್ತಿಗಳನ್ನು ಅವುಗಳ ಅಂದಾಜು ಮಾಡಲಾದ ಉಪಯುಕ್ತತೆ ಜೀವಿತಾವಧಿಯಲ್ಲಿ ಕಡಿಮೆಯಾದ ಅವಧಿಯಲ್ಲಿ ಅಥವಾ ಗುತ್ತಿಗೆ ಅವಧಿಯಲ್ಲಿ ಸವಕಳಿ ಮಾಡಿದೆ. ಇಂತಹ ಗುತ್ತಿಗೆಗಳ ಅನ್ವಯ ಗುತ್ತಿಗೆ ಪಾವತಿಗಳನ್ನು ಹಣಕಾಸಿನ ಶುಲ್ಕಗಳು ಮತ್ತು ಗಳಿಕೆಯ ಸೂಚಿತ ದರದ ಆಧಾರದ ಮೇಲಿನ ಗುತ್ತಿಗೆ ಹೊಣೆಗಾರಿಕೆಯ ಕಡಿಮೆ ಮಾಡಿದರ ನಡುವೆ ವಿಭಾಗ ಮಾಡಿದೆ. ಹಣಕಾಸಿನ ಶುಲ್ಕಗಳನ್ನು ಲಾಭ ಮತ್ತು ನಷ್ಟದ ವಿವರಕ್ಕೆ ಸೇರಿಸಿದೆ.

#### ಕಾರ್ಯಾಚರಣೆ ಗುತ್ತಿಗೆ:

ಹಣದುಬ್ಬರದ ವೆಚ್ಚ ಹೆಚ್ಚಳವಾಗುವುದೆಂದು ಗುತ್ತಿಗೆದಾರರು ನಿರೀಕ್ಷಿಸಿದಾಗ, ಪರಿಹಾರ ನೀಡಲು ನಿರೀಕ್ಷಿಸಿದ ಸಾಮಾನ್ಯ ಹಣದುಬ್ಬರದ ಅನುಸಾರ ಪಾವತಿಯನ್ನು ಹೆಚ್ಚಿಸಲು ಪಾವತಿಯ ಸ್ವರೂಪವನ್ನು ರೂಪಿಸಿರದ ಹೊರತು, ಕಾರ್ಯಾಚರಣೆ ಗುತ್ತಿಗೆ ಅಡಿಯಲ್ಲಿ ಮಾಡಿದ ಪಾವತಿಗಳನ್ನು (ಗುತ್ತಿಗೆ ನೀಡಿಕೆದಾರರಿಂದ ಯಾವುದೇ ಪ್ರೋತ್ಸಾಹಕ ಧನ ಪಡೆದಿದ್ದರೆ ಅದರ ನಿವ್ವಳ) ಗುತ್ತಿಗೆ ಅವಧಿಯಲ್ಲಿ ನೇರ ಮಾರ್ಗದ ಆಧಾರದ ಮೇಲೆ ಲಾಭ ಅಥವಾ ನಷ್ಟಕ್ಕೆ ವಿಧಿಸಲಾಗಿದೆ.

#### ಗುತ್ತಿಗೆ ನೀಡಿಕೆದಾರರಾಗಿ:

ಕಂಪನಿಯು ಸಾಮಾನ್ಯವಾಗಿ ಕಾರ್ಯಾಚರಣೆ ಗುತ್ತಿಗೆಗಳನ್ನು ಮಾಡಿಕೊಳ್ಳುವುದು. ಇದರಲ್ಲಿ ಬರುವ ಬಾಡಿಗೆ ಆದಾಯವನ್ನು ಸಂಬಂಧಿಸಿದ ಗುತ್ತಿಗೆಯ ಅವಧಿಯಲ್ಲಿ ನೇರ ಮಾರ್ಗದ ಆಧಾರದ ಮೇಲೆ ಮಾನ್ಯ ಮಾಡಿದೆ.

### ಓ) ನೌಕರರ ಸೌಲಭ್ಯಗಳು:

#### ನಿರೂಪಿತ ವಂತಿಗೆ ಯೋಜನೆ:

ಕಂಪನಿಯ ನಿರೂಪಿತ ವಂತಿಗೆ ಯೋಜನೆಗಳು–ನೌಕರರ ಭವಿಷ್ಯನಿಧಿ (ನೌಕರರ ಭವಿಷ್ಯನಿಧಿ ಮತ್ತು ವಿವಿಧ ಉಪಬಂಧಗಳ ಕಾಯ್ದೆ, 1952ರ ವ್ಯವಸ್ಥೆಯ ಅನ್ವಯ) ಮತ್ತು ಇಎಸ್‌ಐ (ಕಾರ್ಮಿಕರ ರಾಜ್ಯ ವಿಮಾ ಕಾಯ್ದೆ, 1948ರ ಉಪಬಂಧಗಳ ಅನ್ವಯ) ಆಗಿರುತ್ತವೆ. ಇವುಗಳಿಗೆ ಕಂಪನಿಯು ವಂತಿಗೆಗಳನ್ನು ನೀಡುವುದರ ಹೊರತಾಗಿ ಯಾವುದೇ ಹೆಚ್ಚಿನ ಹೊಣೆಗಾರಿಕೆಗಳನ್ನು ಹೊಂದಿರುವುದಿಲ್ಲ. ಭವಿಷ್ಯನಿಧಿ, ಇಎಸ್‌ಐಗೆ ಮತ್ತು ನಿವೃತ್ತಿ ಯೋಜನೆಗೆ ಕಂಪನಿಯ ವಂತಿಗೆಯನ್ನು ನಿಗದಿಪಡಿಸಿದ ದರಗಳಲ್ಲಿ ಪಾವತಿ ಮಾಡಿದೆ ಮತ್ತು ಅದನ್ನು ಲಾಭ ಮತ್ತು ನಷ್ಟದ ವಿವರಗಳಲ್ಲಿ ತಿಳಿಸಿದೆ. ನಿವೃತ್ತಿಗೆ ಸಂಬಂಧಿಸಿದ ಆಸ್ತಿಯನ್ನು ಟ್ರಸ್ಟ್ ಒಂದು ನಿರ್ವಹಿಸುತ್ತಿದ್ದು ಅದು ಭಾರತೀಯ ಜೀವ ವಿಮಾ ನಿಗಮದಲ್ಲಿ ಹೂಡಿಕೆ ಮಾಡುತ್ತಿದೆ.

#### ಮರಣ ಪರಿಹಾರ ನಿಧಿ:

ಮರಣ ಪರಿಹಾರ ನಿಧಿಯ ಬಗ್ಗೆ ಕಂಪನಿ ಹೊಂದಿರುವ ಹೊಣೆಗಾರಿಕೆಯನ್ನು ವರದಿಗಾರಿಕೆ ದಿನಾಂಕದಲ್ಲಿದ್ದಂತೆ ವಿಮಾಗಣನ ಮೌಲ್ಯ ಮಾಪನದ ಆಧಾರದ ಮೇಲೆ ಲೆಕ್ಕ ಮಾಡಲಾಗಿದೆ.

### ನಿರೂಪಿತ ಸೌಲಭ್ಯ ಯೋಜನೆ:

ಕಂಪನಿಯು ಗ್ರ್ಯಾಚ್ಯುಟಿ ಕಾಯ್ದೆ 1972ರನ್ವಯ ಗ್ರ್ಯಾಚ್ಯುಟಿ ಪಾವತಿಗಾಗಿ ನಿರೂಪಿತ ಸೌಲಭ್ಯ ಯೋಜನೆಯನ್ನು ಹೊಂದಿದೆ. ಗ್ರ್ಯಾಚ್ಯುಟಿ ಯೋಜನೆಯು ನೌಕರರ ನಿವೃತ್ತಿಗೆ ನಿಗದಿಯಾಗಿರುವ ವಯೋಮಾನದ ಸೇವಾ ಅವಧಿಯಲ್ಲಿ 5 ವರ್ಷ ಅಥವಾ ಹೆಚ್ಚು ವರ್ಷ ಸೇವೆ ಸಲ್ಲಿಸಿರುವ ನೌಕರರಿಗೆ ಒಟ್ಟಾಗಿ ಹಣಕಾಸು ಪಾವತಿ ಸೌಲಭ್ಯ ಒದಗಿಸುತ್ತದೆ. ಅಂಗವಿಕಲತೆ ಅಥವಾ ಸೇವೆಯಿಂದ ವಜಾ ಆದಲ್ಲಿ ಅಂತಹ ಸಿಬ್ಬಂದಿಯವರಿಗೆ ಅವರು ಕಂಪನಿಯೊಂದಿಗೆ ಅದುವರೆಗೂ ಸೇವೆ ಸಲ್ಲಿಸಿದ ವರ್ಷಗಳು ಮತ್ತು ಸಂಬಂಧಪಟ್ಟ ಸಿಬ್ಬಂದಿಯವರು ಪಡೆದು ಕೊನೆಯ ತಿಂಗಳ ವೇತನ ಅಂಶಗಳನ್ನು ಪರಿಗಣಿಸಿ ಗ್ರ್ಯಾಚ್ಯುಟಿಯನ್ನು ಪಾವತಿ ಮಾಡಲಾಗುತ್ತದೆ. ಭಾರತೀಯ ಜೀವ ನಿಗಮ ನಿರ್ವಹಿಸುತ್ತಿರುವ ನೌಕರರ ನಿವೃತ್ತಿ ನಿಧಿ ಟ್ರಸ್ಟ್‌ಗೆ ಕಂಪನಿ ವಂತಿಗೆ ನೀಡುತ್ತದೆ.

ಕಂಪನಿಯ ಋಣಭಾರವನ್ನು (ಯೋಜಿತ ಘಟಕ ಸಾಲ ವಿಧಾನವನ್ನು ಬಳಸಿ) ಪ್ರತಿ ವರದಿ ಅವಧಿಯ ಕೊನೆಯಲ್ಲಿ ವಿಮಾಗಣನ ಮೌಲ್ಯಮಾಪನದಿಂದ ನಿರ್ಧರಣೆ ಮಾಡಲಾಗುತ್ತಿದೆ. ನಿರೂಪಿತ ಸೌಲಭ್ಯ ಬಾಧ್ಯತೆಯ ಪ್ರಸಕ್ತ ಮೌಲ್ಯವನ್ನು ಭವಿಷ್ಯದ ಅಂದಾಜು ನಗದು ಚಲಾವಣೆಯನ್ನು ಸಂಬಂಧಿತ ಬಾಧ್ಯತೆಯ ಅಂದಾಜು ಅವಧಿಯನ್ನು ಹೊಂದಿರುವ ಸರ್ಕಾರದ ಬಾಂಡುಗಳಿಂದ ವರದಿಯ ವರ್ಷದ ಕೊನೆಯಲ್ಲಿ ಲಭ್ಯವಾಗುವ ಮಾರುಕಟ್ಟೆ ಫಲಿತಾಂಶಗಳಿಗೆ ಸಂಬಂಧಿಸಿ ಕಡಿತಗೊಳಿಸುವ ಮೂಲಕ ನಿರ್ಧರಣೆ ಮಾಡಲಾಗುತ್ತದೆ. ನಿವ್ವಳ ಬಡ್ಡಿ ವೆಚ್ಚವನ್ನು ನಿರೂಪಿತ ಸೌಲಭ್ಯ ಬಾಧ್ಯತೆಯನ್ನು ನಿವ್ವಳ ಬಾಕಿ ಮತ್ತು ಯಾವುದಾದರೂ ಯೋಜನೆ ಆಸ್ತಿಗಳಿದ್ದಲ್ಲಿ ಅವುಗಳ ನ್ಯಾಯೋಚಿತ ಮೌಲ್ಯಗಳಿಗೆ ಕಡಿತ ದರ (ಸೋಡಿ) ಅನ್ವಯಿಸಿ ಲೆಕ್ಕ ಹಾಕಲಾಗುತ್ತಿದೆ.

ಈ ವೆಚ್ಚವನ್ನು ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ನೌಕರರ ಸೌಲಭ್ಯ ವೆಚ್ಚದಲ್ಲಿ ಸೇರಿಸಲಾಗುತ್ತದೆ.

ಗ್ರ್ಯಾಚ್ಯುಟಿ ಯೋಜನೆಯ ಸಂಬಂಧಿತ ಸ್ಥಿತಿ ವಿವರಣಾ ಪಟ್ಟಿಯಲ್ಲಿ ಗುರುತಿಸಲಾದ ಬಾಧ್ಯತೆ ಅಥವಾ ಆಸ್ತಿಯು ವರದಿ ಅವಧಿಯ ಕೊನೆಯಲ್ಲಿ ಯಾವುದಾದರೂ ಯೋಜನಾ ಆಸ್ತಿಗಳಿದ್ದಲ್ಲಿ ಅವುಗಳ ನ್ಯಾಯೋಚಿತ ಮೌಲ್ಯವನ್ನು ಕಳೆದು ಉಂಟಾಗುವ ಮೌಲ್ಯವೇ ನಿರೂಪಿತ ಸೌಲಭ್ಯ ಬಾಧ್ಯತೆಯ ಪ್ರಸಕ್ತ ಮೌಲ್ಯವಾಗುತ್ತದೆ.

ವಿಮಾಗಣನಾ ಅಂದಾಜುಗಳಲ್ಲಿ ಅನುಭವ, ಹೊಂದಾಣಿಕೆ ಮತ್ತು ಮಾರ್ಪಾಟುಗಳಿಂದ ಉಂಟಾಗುವ ಲಾಭ ಮತ್ತು ನಷ್ಟಗಳ ಮರು ಮಾಪನವನ್ನು ಅವುಗಳು ಉದ್ಭವಿಸುವ ಅವಧಿಯಲ್ಲಿ ಮಾನ್ಯ ಮಾಡಲಾಗುತ್ತದೆ. ಇದನ್ನು ನೇರವಾಗಿ ಇತರ ಸಮಗ್ರ ಆದಾಯದಲ್ಲಿ ಮತ್ತು ಲಾಭ ಅಥವಾ ನಷ್ಟದಲ್ಲಿ ಎಂದಿಗೂ ಮರು ವರ್ಗೀಕರಣ ಮಾಡುವುದಿಲ್ಲ. ನಿರೂಪಿತ ಸೌಲಭ್ಯ ಬಾಧ್ಯತೆಯ ಪ್ರಸಕ್ತ ಮೌಲ್ಯದಲ್ಲಿ ಯೋಜನಾ ತಿದ್ದುಪಡಿ ಅಥವಾ ಸ್ಥಗಿತತೆಯಿಂದ ಉಂಟಾಗುವ ಬದಲಾವಣೆಯನ್ನು ತಕ್ಷಣವೇ ಲಾಭ ಮತ್ತು ನಷ್ಟ ಹೇಳಿಕೆಯಲ್ಲಿ ಹಿಂದಿನ ಸೇವಾ ವೆಚ್ಚವೆಂದು ಮಾನ್ಯಮಾಡಲಾಗುತ್ತದೆ.

### ಪಿ) ಗಳಿಕೆ ರಜೆಗಳು:

ಕಂಪನಿಯ ನೀತಿನಿಯಮಾನುಸಾರ ನೌಕರರು ಉಪಯೋಗಿಸದೇ ಜಮೆಯಾಗುವ ರಜೆಗಳನ್ನು ಮುಂದಿನ ಸೇವಾ ಅವಧಿಗೆ ಮುಂದುವರಿಸಿಕೊಂಡು ಹೋಗಬಹುದು ಮತ್ತು ಬಳಸಿಕೊಳ್ಳಬಹುದು ಅಥವಾ ನಗದು ಪರಿಹಾರ ಪಡೆದುಕೊಳ್ಳಬಹುದಾಗಿದೆ. ಪರಿಹಾರಿತ ಗೈರುಹಾಜರಿಯು ನೌಕರರು ಸೇವೆ ಸಲ್ಲಿಸುವ ಅವಧಿಯ ಕೊನೆಯಾದ ನಂತರ 12 ತಿಂಗಳೊಳಗಾಗಿ ಬಾಕಿ ಇರುತ್ತವೆ. ಆ ಸೌಲಭ್ಯವನ್ನು ಪ್ರಸಕ್ತ ನೌಕರರ ಸೌಲಭ್ಯ ಎಂದು ವರ್ಗೀಕರಣ ಮಾಡಲಾಗುವುದು. ಕಂಪನಿ ಆ ತೆರನಾದ ಪರಿಹಾರಿತ ಗೈರುಹಾಜರಿಯನ್ನು ನೌಕರರು ಸೇವೆ ಸಲ್ಲಿಸುವ ವರ್ಷದಲ್ಲಿ ತನ್ನ ಬಾಧ್ಯತೆಯೆಂದು ಪರಿಗಣಿಸುತ್ತದೆ. ಅದು ನೌಕರರ ಹಕ್ಕನ್ನು ವೃದ್ಧಿಸುತ್ತದೆ. ಇದರೊಡಗಿನ ಸದರಿ ಬಾಧ್ಯತೆಯನ್ನು ಸಂಗ್ರಹಿತ ಪರಿಹಾರಿತ ಗೈರುಹಾಜರಿಗಳ ನಿರೀಕ್ಷಿತ ವೆಚ್ಚ ಬಳಕೆಯಾಗದ ರಜಾ ಹಕ್ಕಿನ ಪರಿಣಾಮವಾಗಿ ಹೆಚ್ಚುವರಿ ಮೊತ್ತವಾಗಿ ಪಾವತಿ ಮಾಡಬೇಕಾಗಿದೆ ಎಂದು ವರದಿಯ ಅವಧಿಯಂದಿನಂತೆ ಲೆಕ್ಕಕ್ಕೆ ತೆಗೆದುಕೊಳ್ಳಲಾಗುತ್ತದೆ. ಕಂಪನಿಯ ಋಣಭಾರವನ್ನು ವಿಮಾಗಣವಾಗಿ (ಯೋಜಿತ ಘಟಕ ಸಾಲ ವಿಧಾನ ಬಳಸಿ) ಪ್ರತಿ ವರದಿ ಮಾಡುವ ಅವಧಿಯ ಕೊನೆಯಲ್ಲಿ ನಿರ್ಧರಣೆ ಮಾಡಲಾಗಿದೆ.

### ನೌಕರರ ಇತರ ಅಲ್ಪಾವಧಿ ಸೌಲಭ್ಯಗಳು:

ಸೇವೆ ಸಲ್ಲಿಸಿದ ಹನ್ನೆರಡು ತಿಂಗಳುಗಳ ಒಳಗೆ ಸಮಗ್ರವಾಗಿ ನೀಡಬೇಕಾಗಿ ಬರುವ ಎಲ್ಲಾ ನೌಕರರ ಸೌಲಭ್ಯಗಳನ್ನು ಅಲ್ಪಾವಧಿ ನೌಕರರ ಸೌಲಭ್ಯಗಳು ಎಂಬುದಾಗಿ ವರ್ಗೀಕರಿಸಲಾಗಿದೆ. ಸಂಬಳಗಳು, ವೇತನಗಳು, ಅಂದಾಜು ಮಾಡಲಾದ ಬೋನಸ್, ಎಕ್ಸ್-ಗ್ರೇಷಿಯಾ ಮತ್ತು ಅಲ್ಪಾವಧಿ ಪರಿಹಾರಿತ ಗೈರುಹಾಜರಿಗಳಂತಹ ಸೌಲಭ್ಯಗಳನ್ನು, ಸಂಬಂಧಿಸಿದ ನೌಕರನು ಸಲ್ಲಿಸಿದ ಸಂಬಂಧಪಟ್ಟ ಸೇವೆಯ ಅವಧಿಯಲ್ಲಿ ಗುರುತಿಸಿದೆ.

ಅಲ್ಪಾವಧಿ ನೌಕರರ ಸೌಲಭ್ಯಗಳು ಕಾರ್ಯನಿರ್ವಹಣಾ ಬೋನಸ್ ಸೇರಿದಂತೆ ನೌಕರರ ವೆಚ್ಚಗಳೆಂದು ನೌಕರರು ಸಲ್ಲಿಸುವ ಸೇವಾ ಅವಧಿಗೆ ಪಾವತಿ ಮಾಡಿದ ಅಥವಾ ಮಾಡಬೇಕಾದ ಮೊತ್ತದ ಆಧಾರದಲ್ಲಿ ಲಾಭ ಮತ್ತು ನಷ್ಟದ ಹೇಳಿಕೆಯ ಪಟ್ಟಿಯಲ್ಲಿ ಮಾನ್ಯ ಮಾಡಲಾಗುತ್ತದೆ.

### ತೆರಿಗೆ ವೆಚ್ಚಗಳು:

#### ಆದಾಯ ತೆರಿಗೆಗಳು

ಆದಾಯ ತೆರಿಗೆ ವೆಚ್ಚಗಳು ಚಾಲ್ತಿಯಲ್ಲಿ ಪಾವತಿ ಮಾಡಬೇಕಾದ ತೆರಿಗೆ ಮತ್ತು ಮುಂದೂಡಿದ ತೆರಿಗೆಗಳ ಒಟ್ಟು ಮೊತ್ತವಾಗಿವೆ.

### ಚಾಲ್ತಿ ತೆರಿಗೆ

ಚಾಲ್ತಿ ತೆರಿಗೆಯು ಆದಾಯ ತೆರಿಗೆ ಕಾಯ್ದೆ 1961ರ ಉಪಬಂಧಗಳನುಸಾರ ಮತ್ತು ಅನ್ವಯಿತ ತೆರಿಗೆ ದರಗಳನುಸಾರ ಆ ವರ್ಷದ ತೆರಿಗೆ ವಿಧಿಸಬಹುದಾದ ಲಾಭದ ಮೊತ್ತ ಆಧರಿಸಿ ನಿರ್ಧರಣೆ ಮಾಡಿರುವ ಪಾವತಿ ಮಾಡಬೇಕಾದ ತೆರಿಗೆ ಮೊತ್ತವಾಗಿರುತ್ತದೆ. ಅಂತೆಯೇ ಇತರ ದೇಶಗಳಲ್ಲಿ ಗ್ರೂಪ್ ಕಾರ್ಯನಿರ್ವಹಿಸಿ ಅಲ್ಲಿ ತೆರಿಗೆ ವಿಧಿಸಬಹುದಾದ ಆದಾಯ ಗಳಿಸಿದಲ್ಲಿ ಆದೇಶದಲ್ಲಿ ಅನ್ವಯಿಸುವ ತೆರಿಗೆ ಕಾನೂನುಗಳನುಸಾರ ಚಾಲ್ತಿ ತೆರಿಗೆ ಪಾವತಿ ಮಾಡಬೇಕಾಗುವುದು.

ಕಂಪನಿ ಚಾಲ್ತಿ ತೆರಿಗೆ ಆಸ್ತಿ ಮತ್ತು ಚಾಲ್ತಿ ತೆರಿಗೆ ಋಣ ಬಾಧ್ಯತೆಗಳನ್ನು ನಿರುಕ್ತಿಗೊಳಿಸಿದೆ. ಇಲ್ಲಿ ಕಂಪನಿ ಕಾನೂನಾತ್ಮಕವಾಗಿ ಪರಿಗಣಿತ ಮೊತ್ತಗಳನ್ನು ಚಾಲನೆಗೊಳಪಡಿಸಿ ಜಾರಿಗೊಳಿಸುವ ಹಕ್ಕು ಹೊಂದಿದೆ ಮತ್ತು ಅದು ನಿವ್ವಳ ಆಧರಿತದಲ್ಲಿ ಇತ್ಯರ್ಥಪಡಿಸುವ ಅಥವಾ ಏಕಕಾಲಕ್ಕೆ ಆಸ್ತಿಯನ್ನು ಹೊಂದಲು ಮತ್ತು ಋಣಬಾಧ್ಯತೆಯನ್ನು ಇತ್ಯರ್ಥಗೊಳಿಸಲು ಉದ್ದೇಶಿಸುತ್ತದೆ.

### ಮುಂದೂಡಿತ ತೆರಿಗೆ:

ಮುಂದೂಡಿದ ತೆರಿಗೆಗಳನ್ನು ಆಸ್ತಿಗಳ ವಾಹಕ ಮೊತ್ತಗಳು ಮತ್ತು ಋಣಬಾಧ್ಯತೆಗಳ ನಡುವಿನ ತಾತ್ಕಾಲಿಕ ವ್ಯತ್ಯಾಸಗಳೆಂದು ಹಣಕಾಸು ಹೇಳಿಕೆಗಳಲ್ಲಿ ಮತ್ತು ತೆರಿಗೆ ವಿಧಿಸಬಹುದಾದ ಲಾಭದ ಗಣನೆಯಲ್ಲಿ ಉಪಯೋಗಿಸುವ ಸಮನ್ವಯಿಕ ತೆರಿಗೆ ಆಧಾರಗಳಲ್ಲಿ ಮಾನ್ಯ ಮಾಡಲಾಗುತ್ತದೆ. ಮುಂದೂಡಿದ ತೆರಿಗೆ ಬಾಧ್ಯತೆಗಳನ್ನು ಸಾಮಾನ್ಯವಾಗಿ ಎಲ್ಲ ತೆರಿಗೆ ವಿಧಿಸಬಹುದಾದ ತಾತ್ಕಾಲಿಕ ವ್ಯತ್ಯಾಸಗಳೆಂದು ಗುರುತಿಸಲಾಗುತ್ತದೆ. ಮುಂದೂಡಿದ ತೆರಿಗೆ ಆಸ್ತಿಗಳನ್ನು ಸಾಮಾನ್ಯವಾಗಿ ಎಲ್ಲಾ ಕಡಿತಗೊಳಿಸಬಹುದಾದ ತಾತ್ಕಾಲಿಕ ವ್ಯತ್ಯಾಸಗಳಿಗಾಗಿ ತೆರಿಗೆ ವಿಧಿಸಬಹುದಾದ ಲಾಭಗಳು ಲಭ್ಯವಾಗಲಿದ್ದು ಅವುಗಳಿಗೆ ಪ್ರತಿಯಾಗಿ ಆ ಕಡಿತಗೊಳಿಸಬಹುದಾದ ತಾತ್ಕಾಲಿಕ ವ್ಯತ್ಯಾಸಗಳನ್ನು ಬಳಸಿಕೊಳ್ಳಲು ಸಾಧ್ಯ ಎಂದು ಮಾನ್ಯ ಮಾಡಲಾಗುತ್ತದೆ.

ಮುಂದೂಡಿದ ತೆರಿಗೆ ಆಸ್ತಿಗಳ ವಾಹಕ ಮೊತ್ತವನ್ನು ವರದಿ ಮಾಡುವ ಪ್ರತಿ ಅವಧಿಯ ಕೊನೆಯಲ್ಲಿ ಪರಿಶೀಲಿಸಲಾಗುತ್ತದೆ ಮತ್ತು ಮುಂದೆ ಅದು ಉಂಟಾಗಬಹುದೆಂದು ಊಹಿಸುವುದಕ್ಕಿಲ್ಲ ಎನ್ನುವ ಮಟ್ಟಿಗೆ ಕಡಿತಗೊಳಿಸಲಾಗುತ್ತದೆ. ಏಕೆಂದರೆ ಸಾಕಷ್ಟು ತೆರಿಗೆ ವಿಧಿಸಬಹುದಾದ ಲಾಭವು ಲಭ್ಯವಿದ್ದು ಪೂರ್ಣ ತೆರಿಗೆ ಕಡಿತಕ್ಕೆ ಅವಕಾಶ ಅಥವಾ ವಸೂಲಿ ಮಾಡಬೇಕಾದ ಆಸ್ತಿಯ ಭಾಗ ಲಭ್ಯವಿರುತ್ತದೆ.

ಕನಿಷ್ಠಪರ್ಯಾಯತೆರಿಗೆ(MAT)ಯನ್ನುತೆರಿಗೆಕಾನೂನುಗಳಾನುಸಾರ ಪಾವತಿ ಮಾಡಲಾಗುತ್ತದೆ.ಇದು ಮುಂದಿನ ತೆರಿಗೆ ಬಾಧ್ಯತೆಗಳಿಗೆ ಹೊಂದಾಣಿಕೆ ರೂಪದಲ್ಲಿ ಭವಿಷ್ಯದ ಹಣಕಾಸು ಸೌಲಭ್ಯಗಳನ್ನು ನೀಡುತ್ತದೆ. ಅದನ್ನು ಕಂಪನಿ ಸಾಮಾನ್ಯ ರೀತಿಯಲ್ಲಿ ತೆರಿಗೆ ಪಾವತಿ ಮಾಡುತ್ತದೆ ಎಂದು ಖಚಿತವಾಗುವ ಸಾಕ್ಷ್ಯಾಧಾರಗಳಿದ್ದಲ್ಲಿ ಆಸ್ತಿ ಎಂದು ಪರಿಗಣಿಸಲಾಗುತ್ತದೆ. ಅದರನುಸಾರ ಕನಿಷ್ಠ ಪರ್ಯಾಯ ತೆರಿಗೆಯನ್ನು ಬಾಕಿ ಶಿಲ್ಕು ಪಟ್ಟಿಯಲ್ಲಿ ಮುಂದೂಡಿದ ತೆರಿಗೆ ಆಸ್ತಿ ಎಂದು ಅದು ಭವಿಷ್ಯದ ಹಣಕಾಸು ಸೌಲಭ್ಯ ಕಂಪನಿಗೆ ತರುವ ಹೇರಳ ಸಾಧ್ಯತೆಗಳು ಇವೆ ಎಂದಾಗ ಪರಿಗಣಿಸಲಾಗುತ್ತದೆ.

ಮುಂದೂಡಿದ ತೆರಿಗೆ ಆಸ್ತಿಗಳು ಮತ್ತು ಬಾಧ್ಯತೆಗಳನ್ನು ಬಾಧ್ಯತೆಗಳು ಇತ್ಯರ್ಥಗೊಳಿಸಲಾದ ಅವಧಿಯಲ್ಲಿ ಅನ್ವಯವಾಗಬಹುದೆಂದು ನಿರೀಕ್ಷಿಸಿದ ತೆರಿಗೆ ದರಗಳಲ್ಲಿ ಅಥವಾ ಆಸ್ತಿಯ ನಗದೀಕರಣದ ಅಥವಾ ಹಾಲಿ ಇರುವ ತೆರಿಗೆದರ (ತೆರಿಗೆ ಕಾನೂನುಗಳು) ಅಥವಾ ತದನಂತರ ವರದಿ ಅವಧಿಯ ಕೊನೆಯಲ್ಲಿ ರೂಪಿಸುವ ಕಾನೂನುಗಳನ್ನು ಆಧರಿಸಿ ಮಾಪನ ಮಾಡಲಾಗುತ್ತದೆ.

ಮುಂದೂಡಿದ ತೆರಿಗೆ ಆಸ್ತಿಗಳು ಮತ್ತು ಮುಂದೂಡಿದ ತೆರಿಗೆ ಬಾಧ್ಯತೆಗಳು ಒಂದು ವೇಳೆ ಚಾಲ್ತಿ ತೆರಿಗೆ ಬಾಧ್ಯತೆಗಳಿಗೆ ಪ್ರತಿಯಾಗಿ ಚಾಲ್ತಿ ತೆರಿಗೆ ಆಸ್ತಿಗಳನ್ನು ರೂಪಿಸಲು ಕಾನೂನಾತ್ಮಕ ಹಕ್ಕು ಅಸ್ತಿತ್ವದಲ್ಲಿದ್ದಲ್ಲಿ ಮತ್ತು ಮುಂದೂಡಿದ ತೆರಿಗೆಗಳು. ಅದೇ ತೆರಿಗೆ ವಿಧಿಸಬಹುದಾದ ಸಂಸ್ಥೆ ಮತ್ತು ಅದೇ ತೆರಿಗೆ ಪ್ರಾಧಿಕಾರಕ್ಕೆ ಸಂಬಂಧಿಸಿದಲ್ಲಿ ನಿರುಕ್ತಿಗೊಳ್ಳುತ್ತವೆ.

### ಒಂದು ಅವಧಿಯ ಚಾಲ್ತಿ ಮತ್ತು ಮುಂದೂಡಿದ ತೆರಿಗೆ:

ಚಾಲ್ತಿ ಮತ್ತು ಮುಂದೂಡಿದ ತೆರಿಗೆಯನ್ನು ಇತರ ಸಮಗ್ರ ಆದಾಯ ಅಥವಾ ನೇರವಾಗಿ ಈಕ್ವಿಟಿಯಲ್ಲಿ ಬರುವ ಬಾಬ್ತುಗಳಿಗೆ ಸಂಬಂಧಿಸಿದಂತಹ ಪ್ರಕರಣದಲ್ಲಿ ಚಾಲ್ತಿ ಮತ್ತು ಮುಂದೂಡಿದ ತೆರಿಗೆಗಳನ್ನು ಸಹ ಕ್ರಮವಾಗಿ ಇತರ ಸಮಗ್ರ ಆದಾಯ ಅಥವಾ ನೇರವಾಗಿ ಈಕ್ವಿಟಿಯಲ್ಲಿ ಮಾನ್ಯ ಮಾಡಿರುವುದನ್ನು ಹೊರತುಪಡಿಸಿ ಕಂಪನಿಯ ಲಾಭ ಅಥವಾ ನಷ್ಟದಲ್ಲಿ ಮಾನ್ಯ ಮಾಡಲಾಗುತ್ತದೆ.

### ಕ್ಯೂ) ಪ್ರತಿ ಷೇರಿನ ಗಳಿಕೆಗಳು:

ಷೇರು ಒಂದರ ಮೂಲ ಗಳಿಕೆಗಳನ್ನು , ಈಕ್ವಿಟಿ ಷೇರುದಾರರುಗಳಿಗೆ ಅನ್ವಯಿಸಬಹುದಾದ ಅವಧಿಗೆ ನಿವ್ವಳ ಲಾಭ ಅಥವಾ ನಷ್ಟವನ್ನು, (ಕಾರಣವಾಗಬಹುದಾದತೆರಿಗೆಕಡಿತದನಂತರ) ಆ ಅವಧಿಯಲ್ಲಿ ಬಾಕಿ ಉಳಿದಿರುವ ಈಕ್ವಿಟಿ ಷೇರುಗಳ ಪರಿಗಣಿತ ಸರಾಸರಿ ಸಂಖ್ಯೆಯಿಂದ ಭಾಗಿಸಿ ಲೆಕ್ಕಾಚಾರ ಮಾಡಲಾಗಿದೆ. ಈ ಅವಧಿಯಲ್ಲಿ ಬಾಕಿ ಉಳಿದಿರುವ ಈಕ್ವಿಟಿ ಷೇರುಗಳ ಪರಿಗಣಿತ ಸರಾಸರಿ ಸಂಖ್ಯೆಯನ್ನು ಸಂಬಂಧಿಸಿತ ಸಂಪನ್ಮೂಲಗಳಲ್ಲಿ ಯಾವುದೇ ಬದಲಾವಣೆಯಿಲ್ಲದೆ ಬದಲಾಯಿಸಿದ ಪೋಟೆನ್ಸಿಯಲ್ ಷೇರುಗಳ ಪರಿವರ್ತನೆಯನ್ನು ಹೊರತುಪಡಿಸಿ ಬೋನಸ್ ನೀಡಿಕೆಗೆ; ಹೊಂದಾಣಿಕೆ ಮಾಡಲಾಗಿದೆ. ಷೇರು ಒಂದರ ಕ್ಷೀಣಿಸಿದ ಗಳಿಕೆಗಳನ್ನು ಲೆಕ್ಕಾಚಾರ ಮಾಡುವ ಉದ್ದೇಶಕ್ಕಾಗಿ, ಈಕ್ವಿಟಿ ಷೇರುದಾರರುಗಳಿಗೆ ಅನ್ವಯಿಸಬಹುದಾದ ಅವಧಿಯ ನಿವ್ವಳ ಲಾಭ ಅಥವಾ ನಷ್ಟವನ್ನು ಮತ್ತು ಈ ಅವಧಿಯಲ್ಲಿ ಬಾಕಿಯಿರುವ ಷೇರುಗಳ ಪರಿಗಣಿತ ಸರಾಸರಿ ಸಂಖ್ಯೆಯನ್ನು ಎಲ್ಲಾ

ಕ್ಷೀಣಿಸುವ ಪ್ರಚ್ಛನ್ನ (ಪೊಟೆನಿಷಿಯಲ್) ಈಕ್ವಿಟಿ ಷೇರುಗಳಿಗೆ ಕೆಳಕಂಡ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಹೊಂದಾಣಿಕೆ ಮಾಡಿದೆ. ಪ್ರತಿ ಷೇರಿನ ಕ್ಷೀಣಿಸಿದ ಗಳಿಕೆಯು ಪ್ರತಿ ಷೇರಿನ ಮೂಲ ಗಳಿಕೆಯ ನಿರ್ಧಾರಣೆಗೆ ಬಳಸಿದ ಸಂಖ್ಯೆಗೆ ಹೊರಗಿನವುಗಳನ್ನು ಪರಿಗಣಿಸಲು ಹೊಂದಾಣಿಕೆಯಾಗುತ್ತದೆ.

(i) ಕ್ಷೀಣಿಸಿದ ಈಕ್ವಿಟಿ ಷೇರುಗಳ ಮೌಲ್ಯದೊಂದಿಗೆ ಬಡ್ಡಿ ಮತ್ತು ಇತರ ಹಣಕಾಸು ವೆಚ್ಚಗಳ ಸಂಯೋಜನೆಗಳ ಆದಾಯ ತೆರಿಗೆಯ ನಂತರದ ಪರಿಣಾಮ ಮತ್ತು

(ii) ಎಲ್ಲಾ ಕ್ಷೀಣಿಸಿದ ಈಕ್ವಿಟಿ ಷೇರುಗಳ ಮೌಲ್ಯದ ಪರಿವರ್ತನೆಯನ್ನು ಊಹಿಸಿ ಮಾಪನ ಮಾಡಿದ ಸರಾಸರಿ ಬಾಕಿ ಇರಬಹುದಾದ ಹೆಚ್ಚುವರಿ ಈಕ್ವಿಟಿ ಷೇರುಗಳು

### ಆರ್) ಉಪಬಂಧಗಳು, ಸಂಭಾವ್ಯ ಬಾಧ್ಯತೆಗಳು ಮತ್ತು ಸಂಭಾವ್ಯ ಆಸ್ತಿಗಳು:

ಕಂಪನಿ ಹಿಂದಿನ ಘಟನಾವಳಿಗಳ ಪರಿಣಾಮವಾಗಿ ಪುಸ್ತಕದಲ್ಲಿ ಪೂರೈಸಬೇಕಾಗಿರುವ ಬಾಧ್ಯತೆಯನ್ನು (ಕಾನೂನಾತ್ಮಕ ಅಥವಾ ರಚನಾತ್ಮಕ) ಹೊಂದಿದ್ದಲ್ಲಿ ಆಗ ಅದಕ್ಕಾಗಿ ಅವಕಾಶಗಳನ್ನು ಅಥವಾ ಉಪಬಂಧಗಳಿಗೆ ಮಾನ್ಯ ಮಾಡಲಾಗಿದೆ. ಆ ರೀತಿಯ ಬಾಧ್ಯತೆಗಳನ್ನು ಇತ್ಯರ್ಥಪಡಿಸಲು ಸಂಪನ್ಮೂಲಗಳ ರವಾನೆಯ ಅಗತ್ಯವಿದ್ದು, ಈ ಬಗ್ಗೆ ವಿಶ್ವಾಸನೀಯವಾಗಿ ಅಂದಾಜು ಮಾಡಬಹುದಾಗಿದೆ.

ಬಾಕಿ ಶಿಲ್ಕು ಪಟ್ಟಿಯ ದಿನಾಂಕದಂದಿನಂತೆ ಪ್ರಸಕ್ತ ಹೊಣೆಗಾರಿಕೆ ಅಥವಾ ಬಾಧ್ಯತೆಯನ್ನು ಇತ್ಯರ್ಥಪಡಿಸಲು ಅಗತ್ಯವೆಂದು ಪರಿಗಣಿಸಿರುವ ಮೊತ್ತವು ಅತ್ಯುತ್ತಮ ಅಂದಾಜು ಮೊತ್ತ ಎಂದು ಬಾಧ್ಯತೆಯನ್ನು ಆವರಿಸಿಕೊಂಡಿರುವ ಅಪಾಯ ಮತ್ತು ಅನಿಶ್ಚಿತತೆಗಳನ್ನು ಗಣನೆಗೆ ತೆಗೆದುಕೊಂಡು ಮಾನ್ಯ ಮಾಡಲಾಗಿದೆ. ಪ್ರಸಕ್ತ ಬಾಧ್ಯತೆಯನ್ನು ಇತ್ಯರ್ಥಪಡಿಸಲು ನಗದು ಚಲಾವಣೆಯನ್ನು ಬಳಸಿ ಅಂದಾಜಿಸಿದ ಮುನ್ನೇರ್ಪಾಡುಗಳನ್ನು ಮಾಪನ ಮಾಡಿದಾಗ ಅದರ ವಾಹಕ ಮೊತ್ತವು ಆ ನಗದು ಚಲಾವಣೆಯ ಪ್ರಸಕ್ತ ಮೌಲ್ಯವಾಗಿರುತ್ತದೆ. (ಯಾವಾಗ ಹಣದ ಸಮಯ ಮೌಲ್ಯದ ಪರಿಣಾಮ ವಸ್ತುವಾಗಿರುವುದು).

ಒಂದು ವೇಳೆ ಹಣದ ಸಮಯ ಮೌಲ್ಯದ ಪರಿಣಾಮ ವಸ್ತುವಾಗಿದ್ದಲ್ಲಿ ಮುನ್ನೇರ್ಪಾಡುಗಳನ್ನು ಮುಂದಿನ ನಿರೀಕ್ಷಿತ ನಗದು ಚಲಾವಣೆಯನ್ನು ತೆರಿಗೆ ಪೂರ್ವ ದರದಲ್ಲಿ ಕಡಿತಗೊಳಿಸುವ ಮೂಲಕ ನಿರ್ಧರಣೆ ಮಾಡಲಾಗುತ್ತದೆ. ಇದು ಹಣದ ಸಮಯ ಮೌಲ್ಯದ ಮಾರುಕಟ್ಟೆ ಅಂದಾಜುಗಳನ್ನು ಮತ್ತು ಬಾಧ್ಯತೆಗೆ ನಿರ್ದಿಷ್ಟವಾದ ಅಪಾಯಗಳನ್ನು ಬಿಂಬಿಸುತ್ತದೆ. ಕಾಲಾವಧಿಯ ಕಾರಣದಿಂದಾಗಿ ಮುನ್ನೇರ್ಪಾಡುಗಳ ಹೆಚ್ಚಳವನ್ನು ಬಡ್ಡಿ ವೆಚ್ಚವೆಂದು ಮಾನ್ಯ ಮಾಡಲಾಗಿದೆ.

ಗುರುತರ ಜವಾಬ್ದಾರಿಯುಳ್ಳ ಗುತ್ತಿಗೆಗಳಡಿ ಉಂಟಾಗುವ ಪ್ರಸಕ್ತ ಬಾಧ್ಯತೆಗಳನ್ನು ಮುನ್ನೇರ್ಪಾಡುಗಳೆಂದು ಮಾನ್ಯ ಮಾಡಲಾಗಿದೆ ಮತ್ತು ಮಾಪನ ಮಾಡಲಾಗಿದೆ.. ಒಂದು ಗುರುತರ ಗುತ್ತಿಗೆಯನ್ನು ಒಂದು ಗುತ್ತಿಗೆಯಡಿ ಇರುವ ಬಾಧ್ಯತೆಗಳನ್ನು ಪೂರೈಸಲು ತಡೆಯಲಸಾಧ್ಯವಾದ ವೆಚ್ಚದ ಮೊತ್ತವು ಆ ಗುತ್ತಿಗೆಯಿಂದ ಬರಬಹುದೆಂದು ನಿರೀಕ್ಷಿಸಲಾದ ಹಣಕಾಸು ಲಾಭಕ್ಕಿಂತ ಹೆಚ್ಚಾಗಿದ್ದಲ್ಲಿ ಅಂತಹ ಗುತ್ತಿಗೆಯನ್ನು ಗುರುತರ ಜವಾಬ್ದಾರಿಗಳ ಗುತ್ತಿಗೆ ಎಂದು ಪರಿಗಣಿಸಲಾಗುತ್ತದೆ.

ಸ್ಥಗಿತಗೊಳಿಸುವ ವೆಚ್ಚಗಳನ್ನು ಬಾಧ್ಯತೆಯ ಇತ್ಯರ್ಥವಾಗಿ ವೆಚ್ಚದ ಅತ್ಯುತ್ತಮ ಅಂದಾಜು ಎಂದು ಪರಿಗಣಿಸಲಾಗುವುದು ಅಥವಾ ಬಾಧ್ಯತೆಯನ್ನು ಮೂರನೇ ವ್ಯಕ್ತಿಗೆ ವರ್ಗಾಯಿಸುವುದು. ಬಾಧ್ಯತೆಗಳ ಸ್ಥಗಿತಗೊಳಿಸುವ ಮುನ್ನೇರ್ಪಾಡುಗಳನ್ನು ವ್ಯವಸ್ಥೆಯ ಆರಂಭದಲ್ಲೇ ಗುರುತಿಸಬೇಕಾಗುತ್ತದೆ. ವ್ಯವಸ್ಥೆಗಳ ಕೊನೆಯಲ್ಲಿ ಭರಿಸಬೇಕಾದ ಅಂದಾಜು ವೆಚ್ಚಗಳನ್ನು ಮರಳಿ ಪಡೆಯುವ ಮಾರುಕಟ್ಟೆ ದರ ಬಳಸಿ ಅದರ ಪ್ರಸಕ್ತ ಮೌಲ್ಯಕ್ಕೆ ಕಡಿತಗೊಳಿಸಲಾಗಿದೆ.

ಕೆಲವು ಅಥವಾ ಎಲ್ಲ ಹಣಕಾಸು ಲಾಭಗಳನ್ನು ಸೌಲಭ್ಯಗಳನ್ನು ಇತ್ಯರ್ಥಗೊಳಿಸಬೇಕಾದಲ್ಲಿ ಮೂರನೇ ವ್ಯಕ್ತಿ ಸಂಸ್ಥೆಯಿಂದ ಮರು ವಸೂಲಿ ಮಾಡುವ ಅವಕಾಶವನ್ನು ನಿರೀಕ್ಷಿಸಲಾಗುತ್ತದೆ. ಹಾಗೆ ಪಡೆಯಬಹುದಾದ ಮೊತ್ತವು ಒಂದು ವೇಳೆ ಮರು ಭರಿಸುವಿಕೆಯ ಮೊತ್ತವು ಪಡೆಯಲಾಗುವುದು. ಬಹುತೇಕ ಖಚಿತವಾಗಿದ್ದಲ್ಲಿ ಆಸ್ತಿ ಎಂದು ಮಾನ್ಯ ಮಾಡಲಾಗಿದೆ. ಮರು ಮತ್ತು ಆ ಪಡೆಯಬಹುದಾದ ಮೊತ್ತವು ವಿಶ್ವಾಸನೀಯವಾಗಿ ಮಾಪನ ಮಾಡಲಾಗಿದೆ.

### ಸಂಭಾವ್ಯ ಬಾಧ್ಯತೆಗಳನ್ನು ಕೆಳಕಂಡ ಪ್ರಕರಣ ಸನ್ನಿವೇಶಗಳಿದ್ದಲ್ಲಿ ಬಹಿರಂಗಪಡಿಸಲಾಗಿದೆ:

(i) ಪ್ರಸಕ್ತ ಬಾಧ್ಯತೆಯು ಹಿಂದಿನ ಘಟನಾವಳಿಯಿಂದ ಉಂಟಾಗಿರುತ್ತದೆ. ಆ ಬಾಧ್ಯತೆಯನ್ನು ಇತ್ಯರ್ಥಪಡಿಸಲು ಸಂಪನ್ಮೂಲಗಳ ರವಾನೆಯು (ಹೊರ ಹರಿವಿಕೆ) ಅಗತ್ಯತೆ ಕಂಡು ಬರುವ ಸಾಧ್ಯತೆಗಳು ಇಲ್ಲದಿರುವಾಗ

(ii) ಪ್ರಸಕ್ತ ಬಾಧ್ಯತೆಯು ಹಿಂದಿನ ಘಟನೆಯಿಂದ ಉಂಟಾಗಿದ್ದು ಬಾಧ್ಯತೆಯ ವಿಶ್ವಸನೀಯ ಅಂದಾಜು ಮಾಡಲು ಸಾಧ್ಯವಾಗದಿದ್ದಾಗ ಮತ್ತು

(iii) ಹಿಂದಿನ ಘಟನಾವಳಿಗಳಿಂದ ಉಂಟಾಗಬಹುದಾದ ಬಾಧ್ಯತೆಗಳಲ್ಲಿ ಸಂಪನ್ಮೂಲಗಳ ರವಾನೆ (ಹೊರಹರಿವಿಕೆ) ಸಾಧ್ಯತೆಗಳು ಕ್ಷೀಣವಾಗಿಲ್ಲದಿದ್ದಲ್ಲಿ;

ಸಂಭಾವ್ಯ ಆಸ್ತಿಗಳನ್ನು ಆರ್ಥಿಕ ಲಾಭಗಳ ಒಳಹರಿವಿಕೆಯ ಸಾಧ್ಯತೆಗಳಿದ್ದಾಗ ಲೆಕ್ಕ ನಿರ್ವಹಣಾ ವಿಭಾಗಕ್ಕೆ ಟಿಪ್ಪಣಿಗಳ ಮೂಲಕ ಹಣಕಾಸು ಹೇಳಿಕೆಗಳಲ್ಲಿ ತೋರಿಸಲಾಗುತ್ತದೆ.

ಪ್ರತಿ ಬಾಕಿ ಶಿಲ್ಕು ಪಟ್ಟಿಯ ದಿನಾಂಕದಂದು ಮುನ್ನೇರ್ಪಾಡುಗಳು, ಸಂಭಾವ್ಯ ಬಾಧ್ಯತೆಗಳು ಮತ್ತು ಸಂಭಾವ್ಯ ಆಸ್ತಿಗಳ ಕುರಿತು ಪರಿಶೀಲಿಸಲಾಗಿದೆ.

ಎಸ್) ಹಣಕಾಸು ಸಾಧನಗಳು

**ಹಣಕಾಸು ಆಸ್ತಿಗಳು:**

**ಆರಂಭಿಕ ಮಾನ್ಯತೆ ಮತ್ತು ಮಾಪನ:**

ಎಲ್ಲ ಆರ್ಥಿಕ ಹಣಕಾಸು ಆಸ್ತಿಗಳನ್ನು ಆರಂಭದಲ್ಲಿ ನ್ಯಾಯೋಚಿತ ಮೌಲ್ಯದಲ್ಲಿ ಮಾನ್ಯ ಮಾಡಲಾಗಿದೆ ಮತ್ತು ಆ ಹಣಕಾಸು ಆಸ್ತಿಯ ಸ್ವಾಧೀನಕ್ಕೆ ಸಂಬಂಧಿಸಿದ ವೆಚ್ಚವನ್ನು ಹಣ ಹೊಂದಾಣಿಕೆ ಮಾಡಲಾಗಿದೆ.

**ತದನಂತರ ಮಾಪನ**

**ಋಣ ಸಾಧನಗಳು**

**ಋಣಸಾಧನಗಳು ಅಪಮೌಲ್ಯಗೊಳಿಸಿದ ವೆಚ್ಚದಲ್ಲಿ:**

ಒಂದು ಋಣ ಸಾಧನವನ್ನು ವ್ಯವಹಾರದ ಮಾದರಿಯ ವ್ಯಾಪ್ತಿಯಲ್ಲಿ ಅಂದರೆ ಗುತ್ತಿಗೆಗಾರಿಕೆಯ ನಗದು ಹರಿವಿಕೆಯ ಸಂಗ್ರಹಣೆಗಾಗಿ ಆಸ್ತಿಯ ಹೊಂದುವ ಉದ್ದೇಶಕ್ಕಾಗಿ ಆಸ್ತಿಯನ್ನು ಹಿಡಿದಿಟ್ಟದ್ದಲ್ಲಿ ಅದನ್ನು ತದನಂತರ ಮಾಪನ ಮಾಡಲಾಗುತ್ತದೆ ಮತ್ತು ಗುತ್ತಿಗೆಗಾರಿಕೆಯ ಹಣಕಾಸು ಆಸ್ತಿಯ ಷರತ್ತುಗಳು ನಿರ್ದಿಷ್ಟ ದಿನಾಂಕಗಳಂದು ನಗದು ಹರಿವಿಕೆಗೆ ಅವಕಾಶ ಒದಗಿಸುತ್ತದೆ. ಅವುಗಳು ಇಡಿಯಾಗಿ ಬಾಕಿ ಇರುವ ಅಸಲು ಮೊತ್ತದ ಮೇಲೆ ಅಸಲು ಮತ್ತು ಬಡ್ಡಿ ಮೊತ್ತದ ಪಾವತಿಯಾಗಿರುತ್ತವೆ.

ಆರಂಭದ ಮಾಪನದ ನಂತರ ಅಂತಹ ಹಣಕಾಸು ಆಸ್ತಿಗಳನ್ನು, ಪರಿಣಾಮಕಾರಿ ಬಡ್ಡಿ ದರವನ್ನು ಉಪಯೋಗಿಸಿಕೊಂಡು ಅಪಮೌಲ್ಯೀಕರಣ ವೆಚ್ಚ ವಿಧಾನದಲ್ಲಿ ಮಾಪನ ಮಾಡಲಾಗಿದೆ. ಅಪಮೌಲ್ಯೀಕರಣ ವೆಚ್ಚವನ್ನು ಪರಿಣಾಮಕಾರಿ ಬಡ್ಡಿ ದರದ ಅವಿಭಾಜ್ಯ ಭಾಗಗಳಾದ ಯಾವುದೇ ಸೋಡಿ, ಸ್ವಾಧೀನದ ಮೇಲೆ ಪ್ರೀಮಿಯಂ ಮತ್ತು ಶುಲ್ಕಗಳು ಅಥವಾ ವೆಚ್ಚಗಳನ್ನು ಗಣನೆಗೆ ತೆಗೆದುಕೊಂಡು ಲೆಕ್ಕ ಹಾಕಲಾಗಿದೆ. ಪರಿಣಾಮಕಾರಿ ಬಡ್ಡಿ ದರದ ಅಪಮೌಲ್ಯೀಕರಣವು ಲಾಭ ಅಥವಾ ನಷ್ಟದ ಹಣಕಾಸು ಆದಾಯದಲ್ಲಿ ಒಳಗೊಂಡಿದೆ. ನಿಶ್ಚಲತೆಯಿಂದ ಉಂಟಾದ ನಷ್ಟವನ್ನು ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಮಾನ್ಯ ಮಾಡಲಾಗಿದೆ.

**ಋಣಸಾಧನಗಳನ್ನು ಇತರ ಸಮಗ್ರ ಆದಾಯದ ಮುಖಾಂತರ ನ್ಯಾಯೋಚಿತ ಮೌಲ್ಯದಲ್ಲಿ:**

ಒಂದು ಋಣ ಸಾಧನವನ್ನು ತದನಂತರದಲ್ಲಿ ಒಂದು ವೇಳೆ ಅದನ್ನು ವ್ಯವಹಾರದ ಮಾದರಿ ವ್ಯಾಪ್ತಿಯಲ್ಲಿ ಹಿಡಿದಿಟ್ಟದಲ್ಲಿ ಅದನ್ನು ಇತರ ಸಮಗ್ರ ಆದಾಯದ ಮುಖಾಂತರ ನ್ಯಾಯೋಚಿತ ಮೌಲ್ಯದಲ್ಲಿ ಮಾಪನ ಮಾಡಲಾಗಿದೆ. ಇದರ ಉದ್ದೇಶವಾದ ಗುತ್ತಿಗೆಗಾರಿಕೆಯ ನಗದು ಚಲಾವಣೆ ಮತ್ತು ಹಣಕಾಸು ಆಸ್ತಿಗಳ ಮಾರಾಟ ಎರಡನ್ನು ಸಾಧಿಸಲಾಗಿದೆ ಮತ್ತು ಆಸ್ತಿಯ ಗುತ್ತಿಗೆಗಾರಿಕೆಯ ಷರತ್ತುಗಳು ನಿರ್ದಿಷ್ಟ ದಿನಾಂಕಗಳಂದು ನಗದು ಚಲಾವಣೆಗೆ ಅವಕಾಶ ಒದಗಿಸುತ್ತವೆ. ಅವುಗಳು ಸಂಪೂರ್ಣವಾಗಿ ಬಾಕಿ ಇರುವ ಅಸಲು ಮೊತ್ತದ ಮೇಲಿನ ಅಸಲು ಮತ್ತು ಬಡ್ಡಿ ಮೊತ್ತದ ಪಾವತಿಯಾಗಿರುತ್ತಾರೆ. ನ್ಯಾಯೋಚಿತ ಮೌಲ್ಯ ಚಲನವಲನಗಳನ್ನು ಇತರ ಸಮಗ್ರ ಆದಾಯದಲ್ಲಿ ಮಾನ್ಯ ಮಾಡಲಾಗಿದೆ.

**ಋಣಸಾಧನಗಳು ಲಾಭ ಮತ್ತು ನಷ್ಟದ ಮುಖಾಂತರ ನ್ಯಾಯೋಚಿತ ಮೌಲ್ಯದಲ್ಲಿ: (FVTPL)**

ಎಫ್‌ವಿಟಿಪಿಎಲ್ ಋಣಸಾಧನೆಗಳಿಗೆ ಒಂದು ಉಳಿಕೆ ಪ್ರವರ್ಗವಾಗಿರುತ್ತದೆ. ಯಾವುದೇ ಋಣಸಾಧನವು ಅಪಮೌಲ್ಯೀಕರಣದ ವೆಚ್ಚ ಅಥವಾ ಎಫ್‌ವಿಓಸಿಐ(ಇತರ ಸಮಗ್ರ ಆದಾಯದ ಮುಖಾಂತರ ನ್ಯಾಯೋಚಿತ ಮೌಲ್ಯ) ರೂಪದಲ್ಲಿ ಪ್ರವರ್ಗೀಕರಣ ಮಾಡಲು ಬೇಕಾದ ಅರ್ಹತೆಗಳನ್ನು ಪೂರೈಸದಿದ್ದಲ್ಲಿ ಅದನ್ನು ಎಫ್‌ವಿಟಿಪಿಎಲ್ ಎಂದು ವರ್ಗೀಕರಣ ಮಾಡಲಾಗಿರುತ್ತದೆ. ಎಫ್‌ವಿಟಿಪಿಎಲ್ ವ್ಯಾಪ್ತಿಗೆ ಒಳಪಟ್ಟ ಎಲ್ಲ ಋಣಸಾಧನಗಳನ್ನು ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಗುರುತಿಸಲಾದ ಎಲ್ಲ ಮಾರ್ಪಾಡುಗಳೊಂದಿಗೆ ನ್ಯಾಯೋಚಿತ ಮೌಲ್ಯದಲ್ಲಿ ಮಾಪನ ಮಾಡಲಾಗಿದೆ.

**ಈಕ್ವಿಟಿ ಹೂಡಿಕೆಗಳು:**

ಭಾರತೀಯ ಲೆಕ್ಕ ನಿರ್ವಹಣಾ ಗುಣಮಟ್ಟಗಳು 109 ವ್ಯಾಪ್ತಿಯಲ್ಲಿ ಎಲ್ಲ ಈಕ್ವಿಟಿ ಹೂಡಿಕೆಗಳು ಹಣಕಾಸು ಸಾಧನಗಳನ್ನು ನ್ಯಾಯೋಚಿತ ಮೌಲ್ಯದಲ್ಲಿ ಮಾಪನ ಮಾಡಲಾಗಿದೆ. ವಾಣಿಜ್ಯೋದ್ದೇಶಕ್ಕಾಗಿ ಮತ್ತು ಸಂಭಾವ್ಯ ಪರಿಗಣನೆಗೊಳಗಾಗಿ ಹೊಂದಿರುವ ಈಕ್ವಿಟಿ ಸಾಧನಗಳನ್ನು ವ್ಯವಹಾರ ಸಹಪಾಲುದಾರಿನಲ್ಲಿ ಸ್ವಾಧೀನಕಾರರಿಂದ ಮಾನ್ಯ ಮಾಡಲಾಗಿದೆ. ಇದಕ್ಕೆ ಭಾರತೀಯ ಲೆಕ್ಕ ನಿರ್ವಹಣಾ ಗುಣಮಟ್ಟಗಳು 103 ವ್ಯವಹಾರ ಸಹ ಪಾಲುದಾರಿಕೆಯು (Business Conbination) ಅನ್ವಯಿಸುತ್ತದೆ. ಇವುಗಳನ್ನು ಎಫ್‌ವಿಟಿಪಿಎಲ್‌ಗೆ ವರ್ಗೀಕರಣ ಮಾಡಲಾಗಿದೆ. ಎಲ್ಲ ಇತರ ಈಕ್ವಿಟಿ ಸಾಧನಗಳನ್ನು ಕಂಪನಿ ಇತರ ಸಮಗ್ರ ಆದಾಯದಲ್ಲಿ ಪ್ರಸ್ತುತಪಡಿಸಲು ಕಂಪನಿ ರದ್ದುಪಡಿಸಲಾಗದ ಆಯ್ಕೆಯನ್ನು ನ್ಯಾಯೋಚಿತ ಮೌಲ್ಯದಲ್ಲಿ ತದನಂತರದ ಬದಲಾವಣೆಗಳೊಂದಿಗೆ ಮಾಡಿಕೊಳ್ಳಬಹುದಾಗಿದೆ. ಗ್ರೂಪ್ ಈ ರೀತಿಯ ಆಯ್ಕೆಯನ್ನು ಸಾಧನ ನಂತರ ಸಾಧನ ಆಧಾರದಲ್ಲಿ ಮಾಡಿಕೊಳ್ಳುತ್ತದೆ. ಈ ವರ್ಗೀಕರಣವು ಆರಂಭದ ಮಾನ್ಯತೆಯ ಮೇರೆಗೆ ಮಾಡಿಕೊಂಡಿದೆ ಮತ್ತು ರದ್ದುಪಡಿಸಲಾಗದಂತಿದೆ.

ಕಂಪನಿ ಒಂದು ವೇಳೆ ಒಂದು ಈಕ್ವಿಟಿ ಸಾಧನವನ್ನು ಎಫ್‌ವಿಓಸಿಐಗೆ ವರ್ಗೀಕರಣ ಮಾಡಲು ತೀರ್ಮಾನಿಸಿದಲ್ಲಿ ಆಗ ಸಾಧನದ ಎಲ್ಲ ನ್ಯಾಯೋಚಿತ ಮೌಲ್ಯಗಳು ಮಾರ್ಪಾಡುತ್ತವೆ. ಇದು ಲಾಭಾಂಶ, ದುರ್ಬಲತೆಯ ಲಾಭಗಳು ಅಥವಾ ನಷ್ಟಗಳನ್ನು ಹೊರತಾಗಿಸಿದೆ. ಮತ್ತು ವಿದೇಶಿ ವಿನಿಮಯದ ಲಾಭಗಳು ಮತ್ತು ನಷ್ಟಗಳನ್ನು ಇತರ ಸಮಗ್ರ ಆದಾಯದಲ್ಲಿ ಮಾನ್ಯ ಮಾಡಲಾಗಿದೆ. ಇತರ ಸಮಗ್ರ ಆದಾಯ ಮೊತ್ತಗಳು, ಹೂಡಿಕೆ ಮಾರಾಟದ ಮೇಲಿನ ಮೊತ್ತವೂ ಸಹ ಲಾಭ ಮತ್ತು ನಷ್ಟದ ಹೇಳಿಕೆಗೆ ಮರು ಬಳಕೆ ಮಾಡಲಾಗುವುದಿಲ್ಲ.

ಎಫ್‌ವಿಟಿಪಿಎಲ್ ಪ್ರವರ್ಗದಲ್ಲಿ ಸೇರಿಸಲ್ಪಟ್ಟ ಈಕ್ವಿಟಿ ಸಾಧನಗಳನ್ನು ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಮಾನ್ಯ ಮಾಡಲಾಗಿರುವ ಎಲ್ಲ ಬದಲಾವಣೆಗಳೊಂದಿಗೆ ನ್ಯಾಯೋಚಿತ ಮೌಲ್ಯದಲ್ಲಿ ಮಾಪನ ಮಾಡಲಾಗಿದೆ.

**ಹಣಕಾಸು ಆಸ್ತಿಗಳ ಅಮಾನ್ಯತೆ:**

ಒಂದು ಹಣಕಾಸು ಆಸ್ತಿಯನ್ನು ಆ ಆಸ್ತಿಯಿಂದ ಪಡೆಯಬೇಕಾದ ನಗದು ಚಲಾವಣೆ (ಹರಿವಿಕೆ) ಹಕ್ಕುಗಳು ಸ್ಥಗಿತಗೊಂಡಾಗ ಅಥವಾ ಕಂಪನಿ ಆಸ್ತಿಯಿಂದ ಬರಬೇಕಾಗಿರುವ ನಗದು ಹರಿವಿಕೆ ಸ್ವೀಕರಿಸುವ ತನ್ನ ಹಕ್ಕುಗಳನ್ನು ವರ್ಗಾವಣೆ ಮಾಡಿದಾಗ ಪ್ರಧಾನವಾಗಿ ಅಮಾನ್ಯ ಮಾಡಲಾಗುತ್ತದೆ. ಒಂದು ವೇಳೆ ಕಂಪನಿ ಆಸ್ತಿಯ ಮಾಲೀಕತ್ವವನ್ನು ವರ್ಗಾವಣೆಯೂ ಮಾಡದೇ ಅಥವಾ ಮಾಲೀಕತ್ವದ ಗಣನೀಯ ಅಪಾಯ ಮತ್ತು ಅನುಕೂಲತೆಗಳನ್ನು ಉಳಿಸಿಕೊಳ್ಳದೇ ಮತ್ತು ವರ್ಗಾವಣೆಯಾದ ಆಸ್ತಿಯ ಮೇಲೆ ನಿಯಂತ್ರಣ ಮುಂದುವರಿಸಿದಲ್ಲಿ, ಕಂಪನಿ ಆಸ್ತಿಯ ಮೇಲೆ ತನಗಿರುವ ಆಸಕ್ತಿಯನ್ನು ಮತ್ತು ಅದು ಪಾವತಿ ಮಾಡಬೇಕಾಗಿರುವ ಮೊತ್ತಗಳ ಋಣಬಾಧ್ಯತೆಯನ್ನು ಮಾನ್ಯ ಮಾಡುತ್ತದೆ ಎಂದರ್ಥ.

ಒಂದು ವೇಳೆ ಕಂಪನಿ ವರ್ಗಾವಣೆಯಾದ ಹಣಕಾಸು ಆಸ್ತಿಯ ಎಲ್ಲ ಗಣನೀಯ ಅಪಾಯಗಳು ಮತ್ತು ಅನುಕೂಲಗಳನ್ನು ಉಳಿಸಿಕೊಳ್ಳುತ್ತಿದ್ದಲ್ಲಿ ಕಂಪನಿ ಸದರಿ ಹಣಕಾಸು ಆಸ್ತಿಯ ಮಾನ್ಯತೆಯನ್ನು ಮುಂದುವರಿಸಿದೆ ಮತ್ತು ಸ್ವೀಕರಿಸಿದ ಮೊತ್ತಕ್ಕೆ ಉಪ ಅಡಮಾನದ ಸಾಲಗಳಿಗೂ ಮಾನ್ಯ ಮಾಡುತ್ತದೆ ಎಂದರ್ಥ.

ಒಂದು ಹಣಕಾಸು ಆಸ್ತಿಯ ಅದರ ಪೂರ್ಣ ಪ್ರಮಾಣದಲ್ಲಿ ಅಥವಾ ಇಡಿಯಾಗಿ ಅಮಾನ್ಯತೆಯ ಮೇರೆಗೆ ಆಸ್ತಿಯ ವಾಹಕ ಮೊತ್ತ ಮತ್ತು ಸ್ವೀಕರಿಸಿದ ಪರಿಗಣಿತ ಮೊತ್ತ ಮತ್ತು ಸ್ವೀಕರಿಸಬಹುದಾದ ಮೊತ್ತ ನಡುವೆ ವ್ಯತ್ಯಾಸ ಹಾಗೂ ಸಮಗ್ರ ಆದಾಯದಲ್ಲಿ ಗುರುತಿಸಲಾದ ಸಂಚಿತ ಲಾಭ ಅಥವಾ ನಷ್ಟ ಹಾಗೂ ಈಕ್ವಿಟಿಯಲ್ಲಿ ಸಂಚಯಗೊಂಡ ಮೊತ್ತಗಳನ್ನು ಲಾಭ ಮತ್ತು ನಷ್ಟದಲ್ಲಿ ಮಾನ್ಯ ಮಾಡಲಾಗಿದೆ.

**ಟಿ) ಹಣಕಾಸು ಹೊಣೆಗಾರಿಕೆಗಳು**

ಆರಂಭದ ಮಾನ್ಯತೆ; ಎಲ್ಲ ಹಣಕಾಸು ಹೊಣೆಗಾರಿಕೆಗಳನ್ನು ಆರಂಭದಲ್ಲಿ ನ್ಯಾಯೋಚಿತ ಮೌಲ್ಯದಲ್ಲಿ ಮಾನ್ಯ ಮಾಡಲಾಗಿದೆ ಮತ್ತು ಹಣಕಾಸು ಹೊಣೆಗಾರಿಕೆಗಳ ಸ್ವಾಧೀನ ಪ್ರಕ್ರಿಯೆಯಲ್ಲಿ ಉಂಟಾದ ವ್ಯವಹಾರಿಕ ವೆಚ್ಚಗಳನ್ನು ಸಹ ಹೊಂದಾಣಿಕೆ ಮಾಡಲಾಗಿದೆ. ಈ ಹೊಣೆಗಾರಿಕೆಗಳನ್ನು ಅಪಮೌಲ್ಯೀಕರಣಗೊಂಡ ವೆಚ್ಚಗಳೆಂದು ವರ್ಗೀಕರಿಸಲಾಗಿದೆ.

**ತದನಂತರದ ಮಾಪನ:**

ಈ ಹೊಣೆಗಾರಿಕೆ ಅಥವಾ ಬಾಧ್ಯತೆಗಳು, ಸಾಲಗಳು ಮತ್ತು ಠೇವಣಿಗಳನ್ನು ಒಳಗೊಂಡಿವೆ. ಆರಂಭದ ಮಾನ್ಯತೆ ನಂತರ ಈ ಬಾಧ್ಯತೆಗಳನ್ನು ಪರಿಣಾಮಕಾರಿ ಬಡ್ಡಿ ದರ ಉಪಯೋಗಿಸಿಕೊಂಡು ಅಪಮೌಲ್ಯೀಕರಣಗೊಂಡ ಮೊತ್ತಕ್ಕೆ ಮಾನ್ಯ ಮಾಡಲಾಗಿದೆ.

**ಹಣಕಾಸು ಋಣಭಾರದ ಅಮಾನ್ಯತೆ:**

ಒಂದು ಹಣಕಾಸು ಋಣ ಬಾಧ್ಯತೆಯನ್ನು ಋಣಭಾರ ಬಾಧ್ಯತೆಯಡಿ ಹೊಣೆಗಾರಿಕೆಯನ್ನು ಬಿಡುಗಡೆಗೊಳಿಸಿದಲ್ಲಿ ಅಥವಾ ರದ್ದುಪಡಿಸಿದಲ್ಲಿ ಅಥವಾ ಅವಧಿ ಮುಗಿದಿದ್ದಲ್ಲಿ ಅಮಾನ್ಯತೆ ಮಾಡಲಾಗುತ್ತದೆ. ಹಾಲಿ ಹಣಕಾಸು ಋಣಬಾಧ್ಯತೆಯನ್ನು ಬದಲಿಸಿ ಅದೇ ಸಾಲಿನಿಂದ ಗಣನೀಯವಾದ ಬೇರೆ ಷರತ್ತುಗಳೊಂದಿಗೆ ಅಥವಾ ಹಾಲಿ ಬಾಧ್ಯತೆಯ ಷರತ್ತುಗಳಲ್ಲಿ ಸಾಕಷ್ಟು ಮಾರ್ಪಾಟುಗಳೊಂದಿಗೆ ಮತ್ತೊಂದು ಹಣಕಾಸು ಋಣಬಾಧ್ಯತೆ ಉಂಟು ಮಾಡಿದಾಗ ಅಂತಹ ವಿನಿಮಯ ಅಥವಾ ಮಾರ್ಪಾಟು, ಮೂಲ ಋಣಬಾಧ್ಯತೆಯ ಅಮಾನ್ಯತೆ ಎಂದು ಪರಿಗಣಿಸಲಾಗುತ್ತದೆ ಮತ್ತು ಹೊಸ ಬಾಧ್ಯತೆಯ ಮಾನ್ಯತೆಯಾಗಿರುತ್ತದೆ.

ಈ ಎರಡು ಬಗೆಯ ಋಣಬಾಧ್ಯತೆಗಳ ವಾಹಕ ಮೊತ್ತಗಳ ನಡುವಿನ ವ್ಯತ್ಯಾಸವನ್ನು ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಮಾನ್ಯ ಮಾಡಲಾಗಿದೆ.

**ಹಣಕಾಸು ಸಾಧನಗಳನ್ನು ಸ್ಥಗಿತಗೊಳಿಸುವಿಕೆ:**

ಹಣಕಾಸು ಆಸ್ತಿಗಳು ಮತ್ತು ಹಣಕಾಸು ಋಣಬಾಧ್ಯತೆಗಳನ್ನು ಒಂದು ವೇಳೆ ಮಾನ್ಯ ಮಾಡಿದ ಮೊತ್ತಗಳನ್ನು ಸ್ಥಗಿತಗೊಳಿಸಲು ಪ್ರಸ್ತುತ ಜಾರಿಗೊಳಿಸಬಹುದಾದ ಕಾನೂನಾತ್ಮಕ ಹಕ್ಕು ಹೊಂದಿದ್ದಲ್ಲಿ ಮತ್ತು ನಿವ್ವಳ ಆಧಾರದಲ್ಲಿ ಏಕಕಾಲಕ್ಕೆ ಆಸ್ತಿಯ ಸಾಕಾರಕ್ಕೆ ಮತ್ತು ಋಣಬಾಧ್ಯತೆಗಳ ಇತ್ಯರ್ಥದ ಉದ್ದೇಶ ಹೊಂದಿದ್ದಲ್ಲಿ ಸ್ಥಗಿತಗೊಳಿಸಲಾಗುತ್ತದೆ.

**ಯು) ಹಣಕಾಸು ಭರವಸೆ ಗುತ್ತಿಗೆಗಳು:**

ಕಂಪನಿಯಿಂದ ಹೊರಡಿಸಲಾದ ಹಣಕಾಸು ಭರವಸೆ ಗುತ್ತಿಗೆಗಳು ಎಂದರೆ ಋಣ ಸಾಧನದ ಷರತ್ತುಗಳನುಸಾರ ನಿಗದಿತ ಸಮಯಕ್ಕೆ ನಿರ್ದಿಷ್ಟಪಡಿಸಿದ ಋಣಗಾರ ಹಣ ಸಂದಾಯ ಮಾಡಲು ವಿಫಲವಾದಾಗ ಅದರಿಂದುಂಟಾಗುವ ಹಾನಿಯನ್ನು ತುಂಬಲು ಧಾರಕನಿಗೆ ಮರು ಪಾವತಿ ಮಾಡಬೇಕಾಗಿರುವ ಕುರಿತು ಮಾಡಿಕೊಂಡ ಗುತ್ತಿಗೆಗಳಾಗಿವೆ.

ಹಣಕಾಸು ಭರವಸೆಯ ಗುತ್ತಿಗೆಗಳನ್ನು ಆರಂಭದಲ್ಲಿ ನ್ಯಾಯೋಚಿತ ಮೌಲ್ಯಕ್ಕನುಗುಣವಾಗಿ ಋಣಬಾಧ್ಯತೆ ಎಂದು ಮಾನ್ಯ ಮಾಡಲಾಗಿದೆ. ವ್ಯವಹಾರಿಕ ವೆಚ್ಚಗಳಿಗೆ ಹೊಂದಾಣಿಕೆ ಮಾಡಲಾಗಿದೆ. ಇವುಗಳನ್ನು ಭರವಸೆ (ಗ್ಯಾರಂಟಿ) ಪತ್ರ ಹೊರಡಿಸಿದ್ದ ನೇರ ಕಾರಣದಿಂದಾಗಿ ಮಾಡಲಾಗಿದೆ. ತದನಂತರ ಋಣಬಾಧ್ಯತೆಯನ್ನು ಭಾರತೀಯ ಲೆಕ್ಕ ನಿರ್ವಹಣಾ ಗುಣಮಟ್ಟಗಳು 109 ನಿಶ್ಚಲತೆ ಅಗತ್ಯಗಳನುಸಾರ ನಿರ್ಧಾರಣೆ ಮಾಡಿರುವಂತೆ ಹಾನಿ ಭತ್ಯೆಗಳ ಮೊತ್ತಕ್ಕಿಂತಲೂ ಹೆಚ್ಚಿನ ಮೊತ್ತದಲ್ಲಿ ಮಾಪನ ಮಾಡಲಾಗಿದೆ ಮತ್ತು ಮಾನ್ಯ ಮಾಡಿದ ಮೊತ್ತದಲ್ಲಿ ಸಂಚಿತ ಅಪಮೌಲ್ಯೀಕರಣ ವಜಾ ಮಾಡಿದೆ.

**ಸಾಲಗಳು ಮತ್ತು ಸಾಲ ಪಡೆಯುವಿಕೆ:**

ಆರಂಭದ ಮಾನ್ಯತೆಯ ನಂತರ ಬಡ್ಡಿ ಹೊಂದಿರುವ ಸಾಲಗಳು ಮತ್ತು ಸಾಲ ಪಡೆಯುವಿಕೆಗಳನ್ನು ಪರಿಣಾಮಕಾರಿ ಬಡ್ಡಿ ದರ ವಿಧಾನ ಅನ್ವಯಿಸಿ ಅಪಮೌಲ್ಯೀಕರಣ ವೆಚ್ಚದಲ್ಲಿ ಮಾಪನ ಮಾಡಲಾಗಿದೆ. (ಇನ್ನು ಮುಂದೆ ಇದನ್ನು ಇಐಆರ್ ಎಂದು ಉಲ್ಲೇಖಿಸಲಾಗುವುದು) ಲಾಭಗಳು ಮತ್ತು ನಷ್ಟಗಳನ್ನು ಇಐಆರ್ ಅಪಮೌಲ್ಯೀಕರಣ ವಿಧಾನದಿಂದ ಋಣಬಾಧ್ಯತೆಗಳನ್ನು ಸಹ ಅಮಾನ್ಯಗೊಳಿಸುವುದರೊಂದಿಗೆ ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಮಾನ್ಯ ಮಾಡಲಾಗಿದೆ.

ಹಣಕಾಸು ಋಣಬಾಧ್ಯತೆಗಳು ಲಾಭ ಅಥವಾ ನಷ್ಟದ ಮೂಲಕ ನ್ಯಾಯೋಚಿತ ಮೌಲ್ಯ ಹೊಂದಿದ್ದು, ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಮಾನ್ಯ ಮಾಡಲಾದ ನ್ಯಾಯೋಚಿತ ಮೌಲ್ಯದಲ್ಲಿನ ಬದಲಾವಣೆಗಳೊಂದಿಗೆ ನ್ಯಾಯೋಚಿತ ಮೌಲ್ಯದಲ್ಲಿ ಮಾಪನ ಮಾಡಲಾಗಿದೆ. ಎಫ್‌ವಿಟಿಪಿಎಲ್ ಎಂದು ಗೊತ್ತುಪಡಿಸಿರುವ ಋಣಬಾಧ್ಯತೆಗಳಿಗೆ, ಸ್ವಂತ ಸಾಲದ ಅಪಾಯಗಳಲ್ಲಿನ ಬದಲಾವಣೆಗಳ ಮುಂದೆ ನ್ಯಾಯೋಚಿತ ಮೌಲ್ಯದ ಲಾಭ/ನಷ್ಟಗಳನ್ನು ಇತರ ಸಮಗ್ರ ಆದಾಯದಲ್ಲಿ ಮಾನ್ಯ ಮಾಡಲಾಗಿದೆ. ಈ ಲಾಭ/ನಷ್ಟಗಳನ್ನು ನಂತರ ಲಾಭ ಮತ್ತು ನಷ್ಟದ ಹೇಳಿಕೆಗೆ ವರ್ಗಾವಣೆ ಮಾಡಿರುವುದಿಲ್ಲ. ಆದಾಗ್ಯೂ ಕಂಪನಿ ಈಕ್ವಿಟಿಯ ವ್ಯಾಪ್ತಿಯಲ್ಲಿ ಸಂಚಿತ ಲಾಭ ನಷ್ಟವನ್ನು ವರ್ಗಾಯಿಸಬಹುದಾಗಿದೆ. ಅಂತಹ ಋಣಬಾಧ್ಯತೆಗಳ ನ್ಯಾಯೋಚಿತ ಮೌಲ್ಯಗಳಲ್ಲಿನ ಇತರ ಎಲ್ಲ ಮಾರ್ಪಾಟುಗಳನ್ನು ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಮಾನ್ಯ ಮಾಡಲಾಗಿದೆ.

**ವಿ) ಹಣಕಾಸು ಆಸ್ತಿಗಳ ನಿಶ್ಚಲತೆ:**

ಕಂಪನಿ ಹಣಕಾಸು ಆಸ್ತಿಗಳಿಗೆ ನಿರೀಕ್ಷಿತ ಸಾಲ ನಷ್ಟ(ಇಸಿಎಲ್) ಮಾದರಿ ಬಳಸಿ ನಷ್ಟ ಪರಿಹಾರ ಭತ್ಯೆಗಳನ್ನು ಮಾನ್ಯ ಮಾಡುತ್ತದೆ. ಈ ಆಸ್ತಿಗಳನ್ನು ಲಾಭ ಅಥವಾ ನಷ್ಟದ ಮುಖಾಂತರ ನ್ಯಾಯೋಚಿತ ಮೌಲ್ಯೀಕರಣ ಮಾಡಿರುವುದಿಲ್ಲ. ಮಹತ್ತರವಾದ ಹಣಕಾಸು ಅಂಶವನ್ನು ಒಳಗೊಂಡಿರದ ವ್ಯಾಪಾರದಿಂದ ಬರಬಹುದಾದ ನಷ್ಟ ಪರಿಹಾರ/ಭತ್ಯೆಗಳನ್ನು ನಿರೀಕ್ಷಿತ ಸಾಲ ನಷ್ಟದ ಜೀವಿತಾವಧಿಗೆ ಸಮನಾದ ಮೊತ್ತಕ್ಕೆ ಮಾಪನ ಮಾಡಲಾಗಿದೆ. ಇತರ ಎಲ್ಲ ಹಣಕಾಸು ಆಸ್ತಿಗಳಿಗೆ ನಿರೀಕ್ಷಿತ ಸಾಲ ನಷ್ಟವನ್ನು 12ತಿಂಗಳಿಗೆ ಇಸಿಎಲ್‌ಗೆ ಸಮನಾಗಿರುವಂತೆ ಮಾಪನ ಮಾಡಿದೆ. ಒಂದು ವೇಳೆ ಸಾಲದ ಅಪಾಯದಲ್ಲಿ ಆರಂಭದಲ್ಲಿ ಗುರುತಿಸಿದ್ದಕ್ಕಿಂತ ಮಹತ್ತರವಾದ ಏರಿಕೆ ಕಂಡುಬಂದಲ್ಲಿ ಆಗ ಅಂತಹ ಪ್ರಕರಣಗಳನ್ನು ಜೀವಿತಾವಧಿ ಇಸಿಎಲ್ ನಂತೆ ಮಾಪನ ಮಾಡಲಾಗಿದೆ. ನಿರೀಕ್ಷಿತ ಸಾಲ ನಷ್ಟದ ಮೊತ್ತವು (ಅಥವಾ ಪ್ರತಿಲೋಮ) ವರದಿ ಮಾಡುವ ದಿನಾಂಕದಂದಿನಂತೆ ನಷ್ಟ ಪರಿಹಾರ/ಭತ್ಯೆಗಳು ಹೊಂದಾಣಿಕೆಗಾಗಿ ಅಗತ್ಯವಿದ್ದು, ಮಾನ್ಯ ಮಾಡಬೇಕಾಗಿರುವ ಮೊತ್ತವನ್ನು ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ನಿಶ್ಚಲತೆಯ ಲಾಭ ಅಥವಾ ನಷ್ಟ ಎಂದು ಮಾನ್ಯ ಮಾಡಲಾಗಿದೆ.

